ತುಳು ಸಿನಿಮಾ

ಒಂದು ಅಧ್ಯಯನ

ಅರವಿಂದ ಬಿಜೈ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ತುಳು ಭವನ, ಉರ್ವಸ್ಟೋರ್, ಮಂಗಳೂರು - 6

ತುಳು ಸಿನಿಮಾ
ಒಂದು ಅಧ್ಯಯ

ತುಳು ಸಿನಿಮಾ

ಒಂದು ಅಧ್ಯಯನ

ಅರವಿಂದ ಬಿಜೈ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ತುಳು ಭವನ, ಉರ್ವಸ್ಟೋರ್, ಮಂಗಳೂರು – 6

TULU CINEMA ONDU ADYAYANA

A Research Study Compiled by Aravind Bejai
Bejai New Road, 4th Cross end Mangalore 575004
Mob : 9650299435, Email : bejaiaru@gmail.com

Chief Editor	:	**M. Janaki Brahmavara** President Karnataka Tulu Sahithya Academy
Publisher	:	**Chandrahasa Rai B** Registrar Karnataka Tulu Sahithya Academy
Published by	:	**Karnataka Tulu Sahithya Academy** Tulu Bhavana, Urvastore, Post: Ashoka Nagar Mangaluru - 575006 Tel: 0824-2459389 email: tulu.academy@yahoo.co.in
©	:	Karnataka Tulu Sahithya Academy
First Edition	:	2016
No. of Copies	:	300
Pages	:	112
Price	:	100/-
Design & Printed at	:	**Pavan Graphics Industries** First Floor, N.D. Complex, Opp.Gokarnanatheshwara Temple, Alake Kudroli, Mangalore. Ph. : 9242885743

ಅಧ್ಯಕ್ಷರ ಮಾತು

ತುಳುನಾಡು, ತುಳುನುಡಿ, ಮತ್ತು ತುಳುವರು ಕೃಷಿ ಆಧಾರಿತ ಬದುಕಿನಲ್ಲಿ ರೂಢಿಸಿಕೊಂಡ ಸಂಸ್ಕೃತಿಯ ಬಗೆಗಿನ ಅಧ್ಯಯನಕ್ಕೆ ಬಹಳಷ್ಟು ಅವಕಾಶವಿದೆ. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಈ ತರಹದ ಅಧ್ಯಯನಕ್ಕೆ ಮಹತ್ವ ನೀಡಿ, ತನ್ನ ಕ್ರಿಯಾಯೋಜನೆಯಲ್ಲಿ ಫೆಲೋಶಿಪ್ ಅಧ್ಯಯನ ಯೋಜನೆಯನ್ನೂ ಅಳವಡಿಸಿಕೊಂಡಿತು. ಸರಕಾರದ ಅನುದಾನವನ್ನು ಬಳಸಿಕೊಂಡು ಅರ್ಹ ವಿದ್ವಾಂಸರನ್ನು ಮುಖತ: ಸಂದರ್ಶನದ ಮೂಲಕ ಆಯ್ಕೆ ಮಾಡಿ, ಫೆಲೋಶಿಪ್ ನೀಡಿ, ಈ ಅಧ್ಯಯನಾತ್ಮಕ ಕೆಲಸದಲ್ಲಿ ತೊಡಗಿಸಿತು. 2012ನೇ ಇಸವಿಯಿಂದಲೇ ಆರಂಭಗೊಂಡ ಈ ಫೆಲೋಶಿಪ್ ಆಧಾರಿತ ಅಧ್ಯಯನ ಮುಂದುವರಿಯುತ್ತಾ ಬರುತಿದ್ದು, ಈಗಾಗಲೇ ಸಿದ್ಧಗೊಂಡ ಬರಹಗಳು ಇದೀಗ ಪ್ರಕಟಗೊಳ್ಳುತ್ತಿವೆ.

2012-2013ನೇ ಸಾಲಿನ ಫೆಲೋಶಿಪ್ ಪಡೆದು ಅಧ್ಯಯನಕ್ಕೆ ನಿಯುಕ್ತರಾದ ಶ್ರೀ ಅರವಿಂದ ಬಿಜೈಯವರು 'ತುಳು ಸಿನಿಮಾ ಒಂದು ಅಧ್ಯಯನ' ಎಂಬ ವಿಷಯದಲ್ಲಿ ಡಾ. ಗಣೇಶ ಅಮೀನ್ ಸಂಕಮಾರ್‌ರವರ ಮಾರ್ಗದರ್ಶನದಲ್ಲಿ ನಡೆಸಿದ ಅಧ್ಯಯನ ವಿಚಾರಗಳನ್ನು ಕೃತಿರೂಪದಲ್ಲಿ ಅಕಾಡೆಮಿಗೆ ಸಲ್ಲಿಸಿರುತ್ತಾರೆ. ತುಳುವಿನಲ್ಲಿ ನಾಟಕ ಪ್ರಕಾರವು ತುಂಬ ಜನಪ್ರಿಯವಾಗಿದ್ದು ತುಳು ಭಾಷೆಯ ಉಳಿವು ಮತ್ತು ಬೆಳವಣಿಗೆಗೆ ವಿಶೇಷ ಕೊಡುಗೆಯನ್ನಿತ್ತಿದೆ. ತುಳು ಸಿನಿಮಾ ಆರಂಭವಾದುದೇ 1971ರ ಅವಧಿಯಲ್ಲಿ. ತುಳು ನಾಟಕರಂಗದಲ್ಲಿ ಮುಂಚೂಣಿಯಲ್ಲಿದ್ದವರೇ ತುಳು ಸಿನಿಮಾ ರಂಗದಲ್ಲಿ ತೊಡಗಿಸಿಕೊಂಡು, ತುಳು ನಾಟಕ ಆಧಾರಿತ ಚಿತ್ರಕಥೆಗಳನ್ನೇ ಸಿನಿಮಾದಲ್ಲಿ ಮೂಡಿಸಿದರು. ಆರಂಭದ ವರ್ಷಗಳಲ್ಲಿ ತುಳು ಸಿನಿಮಾ ರಂಗ ತ್ವರಿತಗತಿಯಲ್ಲಿ ಯಶಸ್ಸು ಕಾಣಲಿಲ್ಲ. ಆದರೆ ಇತ್ತೀಚಿನ ವರ್ಷಗಳಲ್ಲಿ ಬಹುಸಂಖ್ಯೆಯ ಸಿನಿಮಾಗಳು ಬಿಡುಗಡೆಗೊಳ್ಳುತ್ತಾ ಯಶಸ್ಸಿನ ಹಾದಿಯಲ್ಲಿ ಮುನ್ನಡೆಯುತ್ತಿವೆ. ಹೊಸ ಪ್ರಯೋಗಗಳಿಗೂ ಮುಂದಾಗುತ್ತಿವೆ. ತುಳು ಸಿನಿಮಾ ಕ್ಷೇತ್ರದ ಏಳು-ಬೀಳು ಮುನ್ನಡೆಗಳನ್ನು ತಿಳಿದು ದಾಖಲಿಸುವ ಪ್ರಯತ್ನ ಮಾಡಿದ ಅರವಿಂದ ಬಿಜೈಯವರನ್ನು ಅಕಾಡೆಮಿ ಅಭಿನಂದಿಸುತ್ತಿದೆ. ಮಾರ್ಗದರ್ಶನ ಮಾಡಿದ ಡಾ. ಗಣೇಶ ಅಮೀನ್ ಸಂಕಮಾರ್‌ರವರಿಗೆ ಶುಭವನ್ನು ಹಾರೈಸುತ್ತಿದೆ. ಮತ್ತು ಮುದ್ರಣದಲ್ಲಿ ಸಹಕರಿಸಿದ 'ಪವನ್ ಗ್ರಾಫಿಕ್ಸ್'ನ ಪ್ರಸನ್ನ ಮತ್ತು ಬಳಗದವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಿದೆ.

ಎಮ್. ಜಾನಕಿ ಬ್ರಹ್ಮಾವರ
ಅಧ್ಯಕ್ಷರು
ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

14-10-2016

ಲೇಖಕರ ಮಾತು

ಇಂದು 'ತುಳು ಸಿನಿಮಾ'ವು ತುಳು ಭಾಷೆ, ಸಂಸ್ಕೃತಿಯ ಪರಿಣಾಮಕಾರಿ ಅಭಿವ್ಯಕ್ತ ಮಾಧ್ಯಮವಾಗುತ್ತಿದೆ. ಶ್ರೀಮಂತವಾದ ಜನಪದ ಪರಂಪರೆ ಹಾಗೂ ರಂಗಭೂಮಿಯ ಆಸರೆಯೊಂದಿಗೆ ಭಾರತೀಯ ಚಲನ ಚಿತ್ರರಂಗದಲ್ಲಿ 70ರ ದಶಕದಲ್ಲಿ ತುಳು ಚಿತ್ರರಂಗವು ತನ್ನ ಪುಟ್ಟ ಹೆಜ್ಜೆಯನ್ನಿಟ್ಟಿತು. ಪ್ರಾದೇಶಿಕ ಎಂಬ ಮಿತಿಯೊಳಗೆ ಹುಟ್ಟಿ ಬೆಳೆದರೂ 'ತುಳು ಸಿನಿಮಾ' ಇಂದು ವಿಶಿಷ್ಟ ಸ್ಥಾನಮಾನವನ್ನು ಪಡೆದು ಕಡಲಾಚೆಗೂ ದಾಟಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಮಾತ್ರವಲ್ಲ, ತನ್ನದೇ ಆದ 'ಪ್ರೇಕ್ಷಕ ಸಮೂಹ'ವನ್ನು ಸೃಷ್ಟಿಸಿಕೊಂಡು ಯಶಸ್ಸಿನತ್ತ ಹೆಜ್ಜೆ ಹಾಕುತ್ತಿದೆ.

ತುಳು ಚಿತ್ರರಂಗದ ಇಲ್ಲಿಯವರೆಗಿನ ಬೆಳವಣಿಗೆಯನ್ನು ಕಂಡಾಗ ತುಳು ಭಾಷಾಭಿಮಾನ ಇದರ ಹಿಂದೆ ಬಹಳಷ್ಟು ಪ್ರಮುಖ ಪಾತ್ರವಹಿಸಿವೆ ಎಂದು ತಿಳಿಯುತ್ತದೆ. ಈ ಅಧ್ಯಯನದಲ್ಲಿ ದಾಖಲಿಸಿದಂತಹ ವಿಚಾರಗಳನ್ನು ನಾನೇ ಮತ್ತೆ ಮತ್ತೆ ಓದಿದ್ದೇನೆ ಹಾಗೂ ತಿಳಿದವರೊಂದಿಗೆ ಚರ್ಚಿಸಿ ನಿಖರವಾದ ಮಾಹಿತಿಗಳನ್ನು ನೀಡಲು ಪ್ರಯತ್ನಿಸಿದ್ದೇನೆ.

ಇಂತಹ ಒಂದು ಅಧ್ಯಯನಕ್ಕೆ ಅವಕಾಶವನ್ನು ಒದಗಿಸಿದಂತಹ ತುಳು ಸಾಹಿತ್ಯ ಅಕಾಡೆಮಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಜೊತೆಗೆ ನನ್ನ ಈ ಅಧ್ಯಯನಕ್ಕೆ ಸೂಕ್ತ ಮಾರ್ಗದರ್ಶನ ನೀಡಿದಂತಹ ಡಾ. ಗಣೇಶ್‌ಅಮೀನ್ ಸಂಕಮಾರ್ ಅವರನ್ನು, ಸಹಕಾರವಿತ್ತ ಹಿರಿಯ ರಂಗಕರ್ಮಿಯಾದ ಶ್ರೀ ವಿ.ಜಿ. ಪಾಲ್, ಆತ್ಮೀಯ ಗೆಳೆಯರಾದ ಶ್ರೀ ನಿತಿನ್ ಕುಮಾರ್ ಹಾಗೂ ನನ್ನ ಶ್ರೀಮತಿ ಸುನೀತ ಅವರನ್ನು ಕೃತಜ್ಞತೆಯಿಂದ ನೆನೆಯುತ್ತಿದ್ದೇನೆ.

ಅರವಿಂದ ಬಿಜೈ

15–11–2016

ಅಧ್ಯಾಯಗಳು

- ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ
- ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳು
- ತುಳು ಸಿನಿಮಾ ನಡೆದು ಬಂದ ದಾರಿ
- ತುಳು ನಾಟಕಗಳೇ ಹೆಚ್ಚಾಗಿ ತುಳು ಸಿನಿಮಾಗಳಾಗಿ ರೂಪುಗೊಂಡದ್ದು
- ತುಳು ಸಿನಿಮಾದ ಮೇಲೆ ಕನ್ನಡದ ಚಿತ್ರದ ಪ್ರಭಾವ
- ಕಾದಂಬರಿ ಆಧಾರಿತ ತುಳು ಸಿನಿಮಾ
- ತುಳುನಾಡಿನ ಮಣ್ಣಿನ ಪರಂಪರೆಯನ್ನು ಬಿಂಬಿಸಿದ ಸಿನಿಮಾಗಳು
- ತುಳು ಸಿನಿಮಾದಲ್ಲಿ ಬಳಕೆಗೊಂಡ ಸಾಹಿತ್ಯ
- ತುಳು ಸಿನಿಮಾದಲ್ಲಿ ಪಾತ್ರವಹಿಸಿದ ಸ್ಥಳೀಯ ಹಾಗೂ ಪರಭಾಷಾ ಕಲಾವಿದರು
- ಕನ್ನಡ ಹಾಗೂ ಪರಭಾಷಾ ಚಿತ್ರಗಳಿಂದ 'ಡಬ್ಬಿಂಗ್' ಆದ ತುಳು ಸಿನಿಮಾ
- ತುಳು ಸಿನಿಮಾ ರಂಗದಲ್ಲಿ ಆರೂರು ಪಟ್ಟಾಭಿಯವರ ಪಾತ್ರ
- ತುಳು ಸಿನಿಮಾ ರಂಗದಲ್ಲಿ ಕೆ.ಎನ್. ಟೇಲರ್‌ಅವರ ಪಾತ್ರ
- ತೆರೆ ಕಾಣದ ಹಾಗೂ ಅಪೂರ್ಣಗೊಂಡಂತಹ ತುಳು ಸಿನಿಮಾಗಳು
- ತೆರೆ ಕಂಡರೂ ಯಶಸ್ಸನ್ನು ಕಾಣದ ತುಳು ಸಿನಿಮಾಗಳು
- ರಾಜ್ಯ, ರಾಷ್ಟ್ರ ಪ್ರಶಸ್ತಿ ಪಡೆದ ತುಳು ಸಿನಿಮಾಗಳು
- ತುಳು ಸಿನಿಮಾ ಸಾಧಕರ ಸಂದರ್ಶನ
- ಪ್ರಸ್ತುತ ಸಂದರ್ಭದಲ್ಲಿ ತುಳು ಸಿನಿಮಾದ ಸ್ಥಿತಿ–ಗತಿ
- ಉಪಸಂಹಾರ
- ಪರಾಮರ್ಶಿತ ಗ್ರಂಥಗಳು

ಪ್ರಸ್ತಾವನೆ

ಆಧುನಿಕ ತಂತ್ರಜ್ಞಾನ ಮಾಧ್ಯಮಗಳಲ್ಲಿ ಸಿನಿಮಾ ತನ್ನದೇ ಆದ ಸ್ಥಾನಮಾನವನ್ನು ಹೊಂದಿದೆ. ಜಗತ್ತಿನ ಅತ್ಯಂತ ಜನಪ್ರಿಯ ಕಲಾ ಮಾಧ್ಯಮಗಳಲ್ಲಿ 'ಸಿನಿಮಾ' ಕೂಡಾ ಒಂದು. ನೃತ್ಯ, ಸಂಗೀತ, ಅಭಿನಯ, ಕಥೆ ಹೀಗೆ ಕಲೆಯ ಹಲವು ಪರಿಕರಗಳನ್ನು ಒಳಗೊಂಡಿರುವುದರಿಂದ ಇದನ್ನು 'ಸಂಕೀರ್ಣ ಮಾಧ್ಯಮ'ವೆಂದು ಪರಿಗಣಿಸಬಹುದಾಗಿದೆ. 'ಸಿನಿಮಾ'ವು ಕೇವಲ ಮನರಂಜನೆ ನೀಡುವುದು ಮಾತ್ರವಲ್ಲ, ನಮ್ಮ ಕಣ್ಣ ಮುಂದಿನ ಸಮಾಜವನ್ನು ಕಟ್ಟುವ, ವಿಶ್ಲೇಷಿಸುವ ಹಾಗೂ ವಿಮರ್ಶಿಸುವ ಮಹತ್ವದ ಕಾರ್ಯವನ್ನು ಕೈಗೊಳ್ಳುತ್ತಿದೆ. ಹಾಗಾಗಿ ಸಿನಿಮಾ ಜಗತ್ತಿನಲ್ಲಿ ಪ್ರಾದೇಶಿಕವಾಗಿ ಹುಟ್ಟಿ ಬೆಳೆದರೂ ತನ್ನದೇ ಆದ ಅಸ್ತಿತ್ವವನ್ನು ಕಂಡುಕೊಂಡು ಜನಮನ್ನಣೆ ಗಳಿಸುತ್ತಿರುವ 'ತುಳು ಸಿನಿಮಾ'ದ ಬಗ್ಗೆ ಒಂದು ಸಮಗ್ರ ಅಧ್ಯಯನ ಈ ನಿಟ್ಟಿನಲ್ಲಿ ಬಹಳ ಮುಖ್ಯವಾಗಿದೆ.

'ಸಿನಿಮಾ'ವು ಯಂತ್ರಯುಗದ ಮಗು ಎಂದರೆ ತಪ್ಪಾಗಲಾರದು. ಆದರೆ ಈಗ ಅದೊಂದು ಸ್ವತಂತ್ರ ಕಲೆ. ಈ ಕಲೆಗೆ ಹಸಿವಿನ ಮುಖವೂ ಒಂದಿದೆ ಎಂಬುವುದನ್ನು ಕೂಡಾ ನಾವು ತಿಳಿಯಬೇಕು. ಜೀವನೋಪಾಯಕ್ಕಾಗಿ ಸಾಂಪ್ರದಾಯಿಕ ನೆಲೆಗಳನ್ನು ಮೀರಿ ಬಣ್ಣ ಹಚ್ಚುವ ಅನಿವಾರ್ಯತೆ ಒದಗಿ ಬಂದ ಹಿನ್ನಲೆಯಲ್ಲಿ ಕಲಾವಿದರ ಜಗತ್ತೊಂದು ಹುಟ್ಟಿಕೊಂಡಿತು. ಆ ಕಾಲದಲ್ಲಿ ಮೆರೆಯುತ್ತಿದ್ದ ನಾಟಕರಂಗವೂ 'ಸಿನಿಮಾ' ಜಗತ್ತಿಗೆ ಪ್ರಬಲ ಪ್ರತಿಸ್ಪರ್ಧಿಯಾಯಿತು. ಜೊತೆಗೆ ಪ್ರೇರಣೆಯೂ ಆಯಿತೆಂಬುವುದನ್ನು ನಾವು ಮರೆಯುವಂತಿಲ್ಲ. ಆರಂಭದಲ್ಲಿ ಭಾರತದ ಮುಂಬಯಿ, ಕಲ್ಕತ್ತ, ಮದ್ರಾಸ್ 'ಸಿನಿಮಾ' ತಯಾರಿಕೆಯ ಕೇಂದ್ರಗಳಾಗಿದ್ದುವು. ಮುಂದೆ ವಿಜ್ಞಾನ, ತಂತ್ರಜ್ಞಾನ ಪ್ರಗತಿಯಾಗುತ್ತಾ ಬಂದಂತೆ 'ಸಿನಿಮಾ' ಎನ್ನುವ ಹೊಸ ದೃಶ್ಯಮಾಧ್ಯಮವು ಹೊಸ ಆಯಾಮದತ್ತ ಹೆಜ್ಜೆ ಇಟ್ಟಿತು. ಮೊದಲಿಗೆ ಮೂಕ ಚಿತ್ರಗಳಾಗಿ ತೆರೆಕಾಣುತ್ತಿದ್ದ ಚಿತ್ರಗಳು ಕ್ರಮೇಣ ವಾಕ್ ಚಿತ್ರಗಳಾಗಿ ನಂತರದಲ್ಲಿ ವರ್ಣಮಯ ಚಿತ್ರಗಳಾದವು. ಹಿಂದೆ ಚಿತ್ರಕಲೆ ಮಾಡುತ್ತಿದ್ದ ಕೆಲಸವನ್ನು ಈಗ ಚಲನಚಿತ್ರದ ಮೂಲಕ ಕ್ಯಾಮರಾ ಮಾಡಲು ಹೊರಟಿತು.

1895 ಡಿಸೆಂಬರ್ 28ರಂದು ಈ 'ಸಿನಿಮಾ' ಎಂಬ ಮಾಯೆಯನ್ನು ಹುಟ್ಟು ಹಾಕಿದ್ದು ಫ್ರಾನ್ಸ್‌ನ ಲುಮಿಯೇರ್ ಸಹೋದರರು. 'ಸಿಂಡ್ರೆಲ್ಲಾ' (1899) ಫ್ರಾನ್ಸಿನಲ್ಲಿ ತಯಾರಾದ ಪ್ರಥಮ ಕಲಾ ಚಿತ್ರ. 4 ವರ್ಷಗಳ ಬಳಿಕ ಅಮೇರಿಕಾದಲ್ಲಿ ತಯಾರಾದ 'ದಿ ಗ್ರೇಟ್ ಟ್ರೈನ್ ರಾಬರಿ' ಕಥೆ ಹೇಳಲು ಸಿನಿಮಾ ಎಷ್ಟು ಒಳ್ಳೆಯ ಮಾಧ್ಯಮ ಎನ್ನುವುದನ್ನು ತೋರಿಸಿ ಕೊಟ್ಟಿತು. 1915ರಲ್ಲಿ ಅಮೇರಿಕಾದ ಚಲನಚಿತ್ರ ನಿರ್ಮಾಪಕ ಡೇವಿಡ್ ವಾರ್ಕ್ ಗ್ರಿಫಿತ್ (ದಿ ಬರ್ತ್ ಆಫ್ ಎ ನೇಷನ್) ಎಂಬ ಮೂರು ಗಂಟೆಗಳ ಚಿತ್ರವನ್ನು ತಯಾರಿಸಿ ಇತಿಹಾಸ ಪುರುಷನಾದ. ಫ್ರಾನ್ಸಿನ ಲುಮಿಯೇರ್ ಸಹೋದರರು 1896 ಜುಲಾಯಿ 7ರಂದು ಭಾರತದಲ್ಲಿ ಮೊದಲ ಬಾರಿಗೆ ಮುಂಬಯಿಯ ವಾಟ್ಸನ್ ಹೋಟೆಲ್‌ನಲ್ಲಿ 'ಎರೈವಲ್ ಆಫ್ ದಿ ಟ್ರೈನ್' ಎಂಬ ಚಿತ್ರವನ್ನು ಪ್ರದರ್ಶಿಸಿದರು. ಇದು ಭಾರತದ ಚಲನಚಿತ್ರ ರಂಗದ ಉಗಮಕ್ಕೆ ಕಾರಣವಾಯಿತೆಂದು ಹೇಳಬಹುದು.

(ಆರ್ದೇಶಿರ್ ಇರಾನಿಯವರ 'ಆಲಮ್ ಆರಾ'ದೊಂದಿಗೆ ಭಾರತೀಯ ಸಿನಿಮಾ ಟಾಕಿಯುಗಕ್ಕೆ ಕಾಲಿಟ್ಟಿತು.) 1912ರ ಸುಮಾರಿಗೆ ಭಾರತದಲ್ಲಿ ಚಲನಚಿತ್ರಗಳ ತಯಾರಿಕೆಯ ಉದ್ಯಮ ಪ್ರಾರಂಭವಾಯಿತು. 1912ರಲ್ಲಿ ದಾದಾಸಾಹೇಬ್ ಪಾಲ್ಕೆ (ದುಂಡಿರಾಜ್ ಗೋವಿಂದ ಪಾಲ್ಕೆ) ಅವರು 'ರಾಜಾ ಹರಿಶ್ಚಂದ್ರ' ಎನ್ನುವ ಚಿತ್ರವನ್ನು ನಿರ್ಮಿಸಿ ಭಾರತೀಯ ಚಲನಚಿತ್ರ ರಂಗದ ಪಿತಾಮಹ ಎಂಬ ಖ್ಯಾತಿಗೆ ಪಾತ್ರರಾದರು. ಇಂದಿಗೂ ಸಿನಿಮಾ ರಂಗದಲ್ಲಿ ಅತ್ಯುತ್ತಮ ಸಾಧನೆಗೈದವರಿಗೆ ಇವರ ಹೆಸರಿನಲ್ಲಿ 'ದಾದಾಸಾಹೇಬ್ ಪಾಲ್ಕೆ' ಪ್ರಶಸ್ತಿಯನ್ನು ನೀಡಲಾಗುತ್ತಿದೆ.

1920ರವರೆಗೆ ಕೇವಲ ಮೂಕಚಿತ್ರಗಳು ಮಾತ್ರ ತಯಾರಾಗುತ್ತಿದ್ದವು. 1920ರ ನಂತರ ಹಾಲಿವುಡ್ ಚಿತ್ರಗಳಿಗೆ ಮಾತು, ಶಬ್ಧಗಳ ಜೋಡಣೆಯಾಗಿ ವಾಕ್‌ಚಿತ್ರಗಳ ತಯಾರಿಕೆ ಆರಂಭವಾಯಿತು. 1928ರಲ್ಲಿ 'ಹರಿಮಾಯಾ' ಎನ್ನುವ ಚಿತ್ರವನ್ನು ನಿರ್ದೇಶಿಸುವ ಮೂಲಕ ಕರ್ನಾಟಕದಲ್ಲಿ ಮೊದಲಿಗೆ ಸಿನಿಮಾ ಮಾಧ್ಯಮವನ್ನು ಬೆಳಕಿಗೆ ತಂದವರು ಗುಬ್ಬಿ ವೀರಣ್ಣರವರು. ಇದು ಪೂರ್ಣ ಪ್ರಮಾಣದ ಚಿತ್ರವಾಗಿರಲಿಲ್ಲ. ಆದರೆ 1931ರಲ್ಲಿ ಪೂರ್ಣ ಪ್ರಮಾಣದ ಮೊದಲ ಮೂಕಚಿತ್ರ 'ವಸಂತಸೇನಾ' ಬಿಡುಗಡೆಯಾಯಿತು. ಈ ಚಿತ್ರವು 'ಮೃಚ್ಛಕಟಿಕ' ಎಂಬ ಸಂಸ್ಕೃತ ನಾಟಕ ಆಧಾರಿತವಾದುದು. ಕನ್ನಡದ ಖ್ಯಾತ ನಾಟಕಕಾರರಾದ ಟಿ.ಪಿ. ಕೈಲಾಸಂ ಹಾಗೂ ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಅಭಿನಯಿಸಿದ್ದು ಈ ಚಿತ್ರದ ಹೆಗ್ಗಳಿಕೆ. 1934ರಲ್ಲಿ 'ಭಕ್ತಧ್ರುವ' ಎನ್ನುವ ಪೂರ್ಣ ಪ್ರಮಾಣದ ಚಿತ್ರ ತಯಾರಾಗಿದ್ದರೂ ಬಿಡುಗಡೆಯ ಭಾಗ್ಯ ಮೊದಲು ಒದಗಿ ಬಂದದ್ದು ವೈ.ವಿ. ರಾವ್ ನಿರ್ದೇಶನದ 'ಸತಿ ಸುಲೋಚನ' ಚಿತ್ರಕ್ಕೆ. ಇದು ಕನ್ನಡದ ಮೊದಲ ವಾಕ್‌ಚಿತ್ರವಾಗಿದೆ.

ಮರಾಠಿ ಛಾಯಾಗ್ರಾಹಕ ಹರಿಶ್ಚಂದ್ರ ಸಖರಾಮ ಬಟವಾಡೇಕರ್ ಅವರು ಮಂಗಳೂರಿನಲ್ಲಿ ಚಿತ್ರವೊಂದರ ಪ್ರದರ್ಶನ ಮಾಡಿದರು. ಇದೇ ನಮ್ಮ ಜಿಲ್ಲೆಯಲ್ಲಿ ನಡೆದ ಮೊದಲ ಚಿತ್ರ ಪ್ರದರ್ಶನವೆಂದು ಸಿನಿಮಾ ರಂಗದ ಇತಿಹಾಸವನ್ನು ಕಂಡಾಗ ತಿಳಿದು ಬರುತ್ತದೆ. ಆದರೂ ಇದರ ಹಿಂದೆಯೇ ಚಿತ್ರ ಪ್ರದರ್ಶನಗಳು ನಮ್ಮ ಜಿಲ್ಲೆಯಲ್ಲಿ ನಡೆದಿವೆ ಎಂಬುವುದು ಕೂಡಾ ತಿಳಿದು ಬರುತ್ತದೆ. ತುಳು ಸಿನಿಮಾವು ಹುಟ್ಟುವ ಮೊದಲೇ ನಮ್ಮ ಜಿಲ್ಲೆಯ ಕಲಾವಿದರು ಆಗಾಗಲೇ ಸಿನಿಮಾ ರಂಗದ ಕಡೆ ಮುಖ ಮಾಡಿದ್ದರು ಎಂಬುವುದಕ್ಕೆ 'ವಸಂತ ಸೇನಾ' ಒಂದು ಉದಾಹರಣೆ. ಆ ಕಾಲದಲ್ಲಿಯೇ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಹಲವು ಕಲಾವಿದರು ಸಿನಿಮಾ ರಂಗದಲ್ಲಿ ಸಾಧನೆ ಮಾಡಿದವರಿದ್ದರು. ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ. ಶಿವರಾಮ ಕಾರಂತರು ಭಾರತೀಯ ಚಿತ್ರರಂಗ ಮತ್ತು ಕನ್ನಡ ಚಿತ್ರರಂಗ ಪ್ರಾರಂಭವಾದಾಗ ಚಿತ್ರ ನಿರ್ಮಾಣದ ಕಡೆಗೆ ಒಲವು ಬೆಳೆಸಿಕೊಂಡವರಲ್ಲಿ ಮೊದಲಿಗರು. 1930ರಲ್ಲಿ 'ಡೊಮಿಂಗೋ' ಮತ್ತು 'ಡೆವಿಲ್ ಲ್ಯಾಂಡ್' ಎನ್ನುವ ಮೂಕಿ ಚಿತ್ರವನ್ನು ನಿರ್ಮಿಸಿದರು. ಈ ಎಲ್ಲಾ ಅಂಶಗಳು ತುಳು ಸಿನಿಮಾ ರಂಗಕ್ಕೆ ಅಡಿಗಲ್ಲಾಯಿತು ಎಂದರೆ ತಪ್ಪಾಗಲಾರದು.

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ನಾಗಮಂಡಲ, ಭೂತಾರಾಧನೆ ಮುಂತಾದ ಧಾರ್ಮಿಕ ಆಚರಣೆಗಳು, ಯಕ್ಷಗಾನ, ತಾಳಮದ್ದಳೆ, ನಾಟಕ, ತುಳು ಸಿನಿಮಾಗಳು, ರಂಗಪ್ರಭೇದಗಳು, ಆಟಿಕಳೆಂಜ, ಮಾದಿರ ಮುಂತಾದ ಜನಪದ ವಿನೋದಗಳು; ಪೊಕ್ಕು ಗೊಬ್ಬುನಿ, ಪಲ್ಲಿ ಪತ್ತುನಿ, ಮುಂತಾದ ಆಟ ಕ್ರೀಡೆಗಳು; ಅಳಿಯ ಕಟ್ಟು ಸಂತಾನ ಮುಂತಾದ ಸಾಮಾಜಿಕ ಸಂಸ್ಥೆಗಳು; ಮೀನುಗಾರಿಕೆ, ವಿಶಿಷ್ಟ ಬೇಸಾಯ, ಬೇಟೆ ಇತ್ಯಾದಿಗಳ ಸಂಪ್ರದಾಯಗಳು– ಹೀಗೆ ಹತ್ತು ಹಲವಾರು ವೈಶಿಷ್ಟ್ಯತೆಗಳಿಂದ ಕೂಡಿದ ತುಳು ಸಂಸ್ಕೃತಿಯ ಸತ್ವ ಈ ಭಾಷೆಯಲ್ಲಿ ಹಾಗೂ ಅದರಲ್ಲಿನ ಸಾಹಿತ್ಯದಲ್ಲಿ ಅಡಕವಾಗಿದೆ. ಈ ಎಲ್ಲಾ ವೈಶಿಷ್ಟ್ಯತೆಗಳು ಕರಾವಳಿ ಪ್ರದೇಶಕ್ಕೆ ಮಾತ್ರ ಸೀಮಿತವಾಗಿದ್ದರೂ ಈ ಜನಾಂಗ ಅಖಿಲ ಕರ್ನಾಟಕ ಸಂಸ್ಕೃತಿಗೂ, ಭಾರತೀಯ ಸಂಸ್ಕೃತಿಯ ಸಮಗ್ರತೆಗೂ ತನ್ನದೇ ಆದ ವಿಶಿಷ್ಟ ಕಾಣಿಕೆಗಳನ್ನು ಕೊಟ್ಟಿರುವುದರಿಂದ ಈ ಮೇಲಿನ ಸಂಗತಿಗಳೆಲ್ಲವೂ ಅಧ್ಯಯನಕ್ಕೆ ಯೋಗ್ಯವಾಗಿದೆ.

ತುಳು ಭಾಷೆಯು ಮರೆಯುತ್ತಿರುವ ಕಾಲದಲ್ಲಿ ಹಳ್ಳಿಯ ಮೂಲೆಮೂಲೆಯಲ್ಲಿ ಒಬ್ಬೊಬ್ಬ ವ್ಯಕ್ತಿ ಮಾಡಿರುವ ಕೆಲಸವೂ ಪ್ರಶಂಸೆಗೆ ಅರ್ಹವಾಗಿದೆ. ಅದಕ್ಕಾಗಿ ಅಂತಹ ಹಲವು ಸಾಧನೆಗಳನ್ನು ಪರಿಚಯಿಸುವ ಸಣ್ಣ ಪ್ರಯತ್ನ ಈ ದಿನಗಳಲ್ಲಿ ಆಗಬೇಕಾಗಿದೆ. ಇಂತಹ ಸಾಧನೆಗಳಲ್ಲಿ ಸಿನಿಮಾರಂಗ ಅತೀ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಸಿನಿಮಾ ರಂಗದಿಂದ ಇಂದು ತುಳು ಭಾಷೆಯು ಪ್ರಚಾರ–ವಿಸ್ತಾರ ಪಡೆಯುತ್ತಿದೆ. ಐತಿಹಾಸಿಕ, ಚಾರಿತ್ರಿಕ ಹಾಗೂ ಸಾಮಾಜಿಕ ಕಥೆಗಳನ್ನೊಳಗೊಂಡ ಸಿನಿಮಾಗಳಿಂದ ತುಳು ಭಾಷೆ, ಸಂಸ್ಕೃತಿ ಅಚ್ಚಳಿಯದಂತೆ ಇಂದಿಗೂ ನಮ್ಮ ಕಣ್ಣ ಮುಂದಿವೆ. ಜನರೆಲ್ಲರ ಸಾಂಸ್ಕೃತಿಕ ಸಂಪನ್ನತೆಗೆ, ಸಾಹಿತ್ಯ ಹಿತಾಸಕ್ತಿಗೆ, ವೈಚಾರಿಕ ನೆಲೆಗೆ, ಧಾರ್ಮಿಕ ಮತ್ತು ಸಾಮಾಜಿಕ ಬದಲಾವಣೆಗೂ ಸಿನಿಮಾ ರಂಗಗಳು ಮಹತ್ವವಾದ ದೇಣಿಗೆಯನ್ನು ನೀಡಿವೆ.

'ತುಳು ಸಿನಿಮಾ' ಎಂಬ ವಿಷಯ ನಿಜಕ್ಕೂ ಆಸಕ್ತಿದಾಯಕವಾದುದು. ಇದರ ಸ್ಥಿತಿ ಇಂದು ಹೇಗಿದೆ? ಹಿಂದೆ ಹೇಗಿತ್ತು? ಎಂದು ತಿಳಿಯಲು ಹೊರಟಾಗ ನಮ್ಮ ಮನಸ್ಸು ಸುಮಾರು 45–50 ವರ್ಷಗಳ ಹಿಂದೆ ಚಲಿಸಬೇಕಾಗುತ್ತದೆ. ಅಂದು ಸಿನಿಮಾವು ಆರಂಭಕ್ಕೆ ಮೂಕವಾಗಿದ್ದಾಗ, ನಾಟಕಗಳು ಊರ್ಜಿತಾವಸ್ಥೆಯಲ್ಲಿದ್ದವು. ಕ್ರಮೇಣ ಮಾತನಾಡುವ ಚಿತ್ರ ಪಟಗಳು ಬಂದಂತೆ ನಾಟಕವು ಹಿಂದುಳಿಯಿತು. ಸುಮಾರು ಮೂರು–ನಾಲ್ಕು ತಾಸು ನಾಟಕ ನೋಡಿ ಮನರಂಜನೆ ಉಂಟು ಮಾಡಿಕೊಳ್ಳುವುದಕ್ಕಿಂತ ಸಿನಿಮಾ ನೋಡಿ ಸುಮಾರು ಎರಡು–ಎರಡೂವರೆ ತಾಸುಗಳಲ್ಲಿ ನವೀನ, ರೋಮಾಂಚನಕಾರಿ ಪ್ರಪಂಚದಲ್ಲಿ ವಿಹರಿಸುವುದು ಹಿತವೆನಿಸುತ್ತಿತ್ತು. ಹಾಗಾದರೆ ಸಿನಿಮಾದಲ್ಲಿ ಏನಿದೆ? ಸಿನಿಮಾದಲ್ಲಿ ನಾವು ಕಾಣುವುದೇನು? ಎಂಬ ಪ್ರಶ್ನೆಯೂ ನಮ್ಮಲ್ಲಿ ಮೂಡುವುದು ಸಹಜ.

ಇತ್ತೀಚೆಗೆ ತುಳು ಸಿನಿಮಾ ಕೇವಲ ಮನರಂಜನೆಯ ಮಾಧ್ಯಮವೆಂದು ತಿಳಿಯಲಾಗಿತ್ತು.

ಆದರೆ ಅದು ಕೇವಲ ಮನರಂಜನೆಯ ಮಾಧ್ಯಮವಾಗದೇ, ಕಲಾತ್ಮಕ ಹಾಗೂ ಸೃಜನಶೀಲತೆಯ ಮುಖವನ್ನು ಒಳಗೊಂಡಿದೆ. ಇಂದು ನಾವು ಹೆಚ್ಚಾಗಿ ನೋಡುವ ತುಳು ಸಿನಿಮಾಗಳು ಪ್ರಯೋಗಶೀಲವಾದದ್ದು. ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಆರ್ಥಿಕ ದೃಷ್ಟಿಕೋನಗಳಿಂದ ತುಳು ಸಿನಿಮಾದ ಬಗ್ಗೆಗಿನ ಅಧ್ಯಯನ ಇಂದು ಅಗತ್ಯವಾಗಿದೆ. ತುಳು ಸಿನಿಮಾದ ಹುಟ್ಟು-ಬೆಳವಣಿಗೆ, ತುಳು ಸಿನಿಮಾದ ಸಾಹಿತ್ಯ, ಈ ಮಣ್ಣಿನ ಪರಂಪರೆ-ಸಂಸ್ಕೃತಿಯನ್ನು ಬಿಂಬಿಸಿದ ತುಳು ಸಿನಿಮಾ ಅಲ್ಲದೆ ಇನ್ನಿತರ ಪ್ರಮುಖ ಅಂಶಗಳ ಬಗ್ಗೆ ಇಲ್ಲಿ ಗಮನ ಹರಿಸಲಾಗಿದೆ.

ತುಳು ಸಿನಿಮಾ ನಡೆದು ಬಂದ ದಾರಿ 45 ವಸಂತಗಳನ್ನು ಪೂರೈಸಿರುವ ತುಳು ಚಿತ್ರರಂಗ ಇಂದು ಯಶಸ್ಸಿನ ದಾಪುಗಾಲಿನತ್ತ ಹೆಜ್ಜೆ ಇಡುತ್ತಿದೆ. 1971ರಿಂದ ಇಲ್ಲಿಯವರೆಗೆ ಅದು ನಡೆದು ಬಂದ ದಾರಿಯ ಕುರಿತಾಗಿ ವಿವರಗಳನ್ನು ದಾಖಲಿಸಲಾಗಿದೆ. ತುಳು ಸಿನಿಮಾದ ಮೇಲೆ ತುಳು ನಾಟಕಗಳ ದಟ್ಟವಾದ ಪ್ರಭಾವವಿದೆ. ತೆರೆ ಕಂಡಂತಹ ತುಳು ಸಿನಿಮಾಗಳನ್ನು ಕಂಡಾಗ ಈ ಅಂಶವೂ ನಮಗೆ ಸ್ಪಷ್ಟವಾಗುತ್ತದೆ. ಹಾಗೆಯೇ ಕನ್ನಡ ಭಾಷೆಯ ಚಿತ್ರರಂಗದ ಪ್ರಭಾವವು ತುಳು ಸಿನಿಮಾ ರಂಗವನ್ನು ಆವರಿಸಿದ್ದ ಕುರಿತಾಗಿಯೂ ಇಲ್ಲಿ ಅಧ್ಯಯನ ಮಾಡಿ ದಾಖಲಿಸಲಾಗಿದೆ.

ಸಿನಿಮಾ ಅಂದ ಮೇಲೆ ಅಲ್ಲಿ ಕಥಾವಸ್ತುವಿರಬೇಕು. ಇದು ಸಿನಿಮಾದ ಮೊದಲ ಆಯ್ಕೆಯೂ ಹೌದು. ಹಾಗಾಗಿ ಕೆಲವೊಮ್ಮೆ ಈಗಾಗಲೇ ಪ್ರಸಿದ್ಧಿ ಪಡೆದ ಕಾದಂಬರಿಗಳ ಕತೆಯನ್ನೇ ಆಯ್ಕೆ ಮಾಡಿದ ದೃಷ್ಟಾಂತಗಳು ತುಳು ಸಿನಿಮಾದಲ್ಲಿದೆ. ಅಂತಹ ಸಿನಿಮಾಗಳ ಕುರಿತಾದ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ. ಸಿನಿಮಾಕ್ಕೆ ಮನರಂಜನೆಯ ಮುಖವಿದ್ದರೂ, ನಾಡು-ನುಡಿ, ಸಂಸ್ಕೃತಿಯ ಕುರಿತಾದ ಮನಸ್ಸಿರಬೇಕು. ತುಳು ಸಿನಿಮಾ ಕೂಡ ಇಂತಹ ಪ್ರಯತ್ನಕ್ಕೆ ತನ್ನನ್ನು ತಾನು ಒಳಪಡಿಸಿಕೊಂಡಿದೆ. ಈ ನೆಲೆಯಲ್ಲಿ ಮೂಡಿ ಬಂದ ತುಳುನಾಡಿನ ಮಣ್ಣಿನ ಪರಂಪರೆಯನ್ನು ಬಿಂಬಿಸಿದ ಪ್ರಾತಿನಿಧಿಕ ಸಿನಿಮಾಗಳ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಸಿನಿಮಾ ಹಾಗೂ ಸಾಹಿತ್ಯದ ನಡುವೆ ಒಂದು ರೀತಿಯ ಸಮನ್ವಯತೆ ಇರಬೇಕು. ಈ ಸಿನಿಮಾ ಅಕ್ಷರಸ್ಥನನ್ನು ಮತ್ತು ಅನಕ್ಷರಸ್ಥನನ್ನು ತಲುಪಬೇಕಾಗುವುದರಿಂದ ಸಿನಿಮಾದಲ್ಲಿ ಭಾಷೆ ಅಥವಾ ಸಾಹಿತ್ಯವನ್ನು ಬಳಸಿದ, ಬಳಸುವ ರೀತಿ ಹಾಗೆಯೇ ತುಳು ಸಿನಿಮಾದಲ್ಲಿ ಬಳಕೆಗೊಂಡ ಸಾಹಿತ್ಯದ ಕುರಿತಾದ ಅಧ್ಯಯನಕ್ಕೆ ಗಮನ ಹರಿಸಲಾಗಿದೆ. ಸಿನಿಮಾದಲ್ಲಿ ಕತೆಗಿರುವಷ್ಟೇ ಮಹತ್ವ ಕಲಾವಿದನಿಗೂ ಇದೆ. ಆತ ತೆರೆಯ ಮೇಲೆ ತನ್ನ ನಟನೆಯ ಮೂಲಕ ಪ್ರೇಕ್ಷಕನನ್ನು ನಗಿಸುತ್ತಾನೆ, ಅಳಿಸುತ್ತಾನೆ ಹಾಗೆಯೇ ಒಂದು ಕ್ಷಣ ಮೈಮರೆಯುವಂತೆ ಮಾಡುತ್ತಾನೆ. ಇಂತಹ ಸ್ಥಳೀಯ ಹಾಗೂ ಪರಭಾಷಾ ಕಲಾವಿದರು ತುಳು ಸಿನಿಮಾದಲ್ಲಿ ಪಾತ್ರವಹಿಸಿದ ಕುರಿತಾಗಿಯೂ ತಿಳಿಸಲಾಗಿದೆ.

'ಡಬ್ಬಿಂಗ್' ಅಥವಾ 'ರಿಮೇಕ್' ಬಗ್ಗೆ ಪರ-ವಿರೋಧದ ಚರ್ಚೆಯ ನಡುವೆಯೂ

ಚಿತ್ರರಂಗದೊಳಗೆ ಅದು ನುಸುಳಿರುವುದು ಅಷ್ಟೇ ಸತ್ಯ. ಕೊಡು-ಕೊಳ್ಳುವಿಕೆಯೇ ಚಲನಶೀಲತೆ ಎನ್ನುವ ನಾವು ಸೃಜನಶೀಲತೆಗೆ ಎಷ್ಟು ಒತ್ತು ನೀಡಿದ್ದೇವೆ ಎಂಬುವುದು ಮುಖ್ಯ. ಈ ನೆಲೆಯಲ್ಲಿ ಕನ್ನಡ ಹಾಗೂ ಪರಭಾಷಾ ಚಿತ್ರಗಳಿಂದ 'ಡಬ್ಬಿಂಗ್' ಆದ ತುಳು ಸಿನಿಮಾಗಳ ಬಗ್ಗೆಯೂ ವಿವರಿಸಲಾಗಿದೆ.

ತುಳು ಸಿನಿಮಾ ರಂಗದ ವ್ಯಾಪ್ತಿಯೂ ಸೀಮಿತವಾದರೂ ಇದರ ಬೆಳವಣಿಗೆಯಲ್ಲಿ ಅನೇಕ ಕಲಾವಿದರು ಪ್ರಮುಖ ಪಾತ್ರವಹಿಸಿದ್ದಾರೆ. ಅದರಲ್ಲಿಯೂ ಹೆಚ್ಚು ತುಳುಚಿತ್ರಗಳನ್ನು ನಿರ್ದೇಶಿಸಿದ ಯಶಸ್ವಿ ನಿರ್ದೇಶಕರಾದ ಆರೂರು ಪಟ್ಟಾಭಿಯವರ ಪಾತ್ರ ಹಾಗೂ 'ತುಳು ಸಿನಿಮಾ ರಂಗದ ಭೀಷ್ಮ' ಎಂದೇ ಖ್ಯಾತನಾಮರಾದ ಕೆ.ಎನ್. ಟೇಲರ್ ಅವರು ತುಳು ಸಿನಿಮಾ ರಂಗಕ್ಕೆ ನೀಡಿದ ಕೊಡುಗೆಯ ಬಗ್ಗೆಯೂ ಅಧ್ಯಯನ ಮಾಡಲಾಗಿದೆ.

"ಹಿಂದೆ ತುಳುವಿನಲ್ಲಿ ಸಿನಿಮಾ ಮಾಡಲು ಯಾರೂ ಮುಂದಾಗುತ್ತಿರಲಿಲ್ಲ" ಎಂಬುವುದು ಕೆ.ಎನ್. ಟೇಲರ್ ಅವರ ಮಾತು. ಆದರೆ ಸಿನಿಮಾ ನಿರ್ಮಾಣಕ್ಕೆ ಮುಂದಾಗಿ ಕೊನೆಗೆ ಅಪೂರ್ಣವಾಗಿ ಉಳಿದಂತಹ ಹಾಗೂ ಸಿನಿಮಾ ಸಿದ್ಧವಾದರೂ ತೆರೆ ಕಾಣದೇ ಉಳಿದಂತಹ ತುಳು ಸಿನಿಮಾಗಳು ಇವೆ. ಇದಕ್ಕೆ ಇರುವ ಕಾರಣಗಳೇನು? ಎಂಬುವುದರ ಬಗ್ಗೆ ಕೂಡ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಎಲ್ಲಾ ಭಾಷಾ ಚಿತ್ರರಂಗದಲ್ಲಿ ಏಳುಬೀಳುಗಳು ಇರುವುದು ಸಹಜ. ಆದರೆ ತುಳು ಚಿತ್ರರಂಗದ ಬೆಳವಣಿಗೆ ಕಂಡಾಗ ಇದಕ್ಕಿಂತ ಭಿನ್ನವಾಗಿದೆ. ಒಮ್ಮೆ ಮೊಲದ ಜಿಗಿತದಂತೆ ಇದ್ದರೆ ಇನ್ನೊಮ್ಮೆ ಆಮೆಯ ನಡಿಗೆ ತರಹ ಸಾಗಿದೆ. ಈಗ ಒಂದು ತಿಂಗಳಲ್ಲಿ ಮೂರು ಸಿನಿಮಾಗಳು ಬಿಡುಗಡೆಯಾದ ಸಂದರ್ಭವನ್ನು ಕಂಡಿದ್ದೇವೆ. ಆದರೆ ಹಿಂದೆ ಮೂರ್‍ನಾಲ್ಕು ವರ್ಷಗಳಲ್ಲಿ ಕೇವಲ ಒಂದೇ ಸಿನಿಮಾ ಬಿಡುಗಡೆಯಾದ ಉದಾಹರಣೆಗಳಿವೆ. ಈ ಕುರಿತಾಗಿಯೂ ಇಲ್ಲಿ ಚರ್ಚಿಸಲಾಗಿದೆ

ಸಿನಿಮಾಗಳ ಲೆಕ್ಕದಲ್ಲಿ ನೂರರ ಗಡಿ ದಾಟದಿದ್ದರೂ ತುಳು ಚಿತ್ರರಂಗದಲ್ಲಿ ಬಂದಂತಹ ಕೆಲವು ಸಿನಿಮಾಗಳು ಜನರನ್ನು ಮೆಚ್ಚಿಸಿದ್ದಲ್ಲದೆ ರಾಜ್ಯ, ರಾಷ್ಟ್ರ ಪ್ರಶಸ್ತಿಯನ್ನು ಪಡೆದಿವೆ. ಪ್ರಶಸ್ತಿ ಪಡೆದ ಸಿನಿಮಾಗಳಲ್ಲಿ ಹೆಚ್ಚಿನವು ರಾಜ್ಯ ಸರಕಾರದಿಂದ ಅತ್ಯುತ್ತಮ ಪ್ರಾದೇಶಿಕ ಭಾಷಾ ಸಿನಿಮಾ ಪ್ರಶಸ್ತಿ ಪಡೆದವುಗಳಾದರೆ, ಕೆಲವು ಸಿನಿಮಾಗಳಿಗೆ ರಾಷ್ಟ್ರ ಪ್ರಶಸ್ತಿಯೂ ದೊರೆತಿವೆ. ಆ ಸಿನಿಮಾಗಳು ಯಾವುವು? ಎಂಬುವುದರ ಬಗ್ಗೆ ಈ ಅಧ್ಯಾಯದಲ್ಲಿ ದಾಖಲಿಸಲಾಗಿದೆ.

ಸಿನಿಮಾ ಕ್ಷೇತ್ರದಲ್ಲಿ ಸಾಧನೆ ಮಾಡಿದಂತಹ, ವಿಶೇಷವಾಗಿ ಸೇವೆ ಸಲ್ಲಿಸಿದಂತಹ ಸಾಧಕರನ್ನು ಹಾಗೂ ಉದಯೋನ್ಮುಖ ಪ್ರತಿಭೆಗಳನ್ನು ಸಂದರ್ಶಿಸಿ ತುಳು ಸಿನಿಮಾದ ಹಿನ್ನೋಟ-ಮುನ್ನೋಟವನ್ನು, ಹಾಗೆಯೇ ಅವರ ಅನುಭವಗಳನ್ನು ಸವಿವರವಾಗಿ ನೀಡಲಾಗಿದೆ. ಪ್ರಸ್ತುತ ಸಂದರ್ಭದಲ್ಲಿ ತುಳು ಸಿನಿಮಾದ ಸ್ಥಿತಿಗತಿ ಹೇಗಿದೆ ಎಂಬುವುದನ್ನು ಕೂಡಾ ಇಲ್ಲಿ ವಿಮರ್ಶಾತ್ಮಕ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

ನನ್ನ ಈ ಅಧ್ಯಯನವೂ 1971ರಿಂದ 2016ರವರೆಗಿನ ತುಳು ಸಿನಿಮಾಗಳನ್ನು ಒಳಗೊಂಡಿದೆ. ಹೆಚ್ಚಿನ ಎಲ್ಲಾ ಸಿನಿಮಾಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದೇನೆ. ಆದರೆ ಕೆಲವು ಸಿನಿಮಾಗಳ ಪ್ರತಿಗಳು ಇಂದಿಗೂ ಲಭ್ಯವಿಲ್ಲದ ಕಾರಣ ಅಲ್ಪ ಪ್ರಮಾಣದ ಮಾಹಿತಿಯ ಕೊರತೆಯು ಎದುರಾಗಿದೆ. ಸಿನಿಮಾವನ್ನು ನೋಡುವ ಹುಚ್ಚು ಸಾಮಾನ್ಯವಾಗಿ ಎಲ್ಲರಲ್ಲಿಯೂ ಇದ್ದ ಹಾಗೆ ನನ್ನನ್ನು ಕೂಡ ಅದು ಬಾಲ್ಯದಿಂದಲೇ ಆವರಿಸಿತ್ತು. ಆದರೆ ಇಂದಿನವರೆಗೂ ಅದು ಕೇವಲ ಮನರಂಜನೆಗೆ ಸೀಮಿತವಾಗಿತ್ತು. ಒಂದು ಸಿನಿಮಾವನ್ನು ಕೃತಿಯ ಹಾಗೆ ಹೇಗೆ ಓದುವುದು ಅಥವಾ ಸಿನಿಮಾವನ್ನು ಸಿನಿಮಾವಾಗಿ ಹೇಗೆ ನೋಡುವುದು ಎಂಬ ವಿಚಾರವೂ ಈ ಅಧ್ಯಯನಕ್ಕೆ ಇಳಿದಾಗ ತಿಳಿಯಿತು. ಜೊತೆಗೆ ತುಳು ಚಿತ್ರರಂಗದ ಒಳನೋಟಗಳನ್ನು ಅರಿತುಕೊಳ್ಳುವ ಪ್ರಯತ್ನವನ್ನು ಇಲ್ಲಿ ಮಾಡಿದ್ದೇನೆ.

ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳು

"ದ್ರಾವಿಡ ಭಾಷಾ ಕುಟುಂಬದಲ್ಲಿ ತುಳು ಚೆನ್ನಾಗಿ ಬೆಳೆದ ಹಾಗೂ ಅತ್ಯಂತ ವೈಜ್ಞಾನಿಕ ಭಾಷೆ" ಎಂದು ಭಾಷಾವಿಜ್ಞಾನಿ ಡಾ. ರಾಬರ್ಟ್ ಕಾಲ್ಡ್‌ವೆಲ್ ಅವರು 'ತೌಲನಿಕ ದ್ರಾವಿಡ ವ್ಯಾಕರಣ'ದಲ್ಲಿ ಹೇಳಿದ್ದಾರೆ. ಸಂಧಿ, ಪಾಡ್ದನ, ಉರಲ್, ಮದಿಪು, ಕತೆ, ಗಾದೆ, ಒಗಟು, ಐತಿಹ್ಯ, ಪುರಾಣ, ನುಡಿಗಟ್ಟು ಹೀಗೆ ಬಹು ಪ್ರಕಾರಗಳ ಮೌಖಿಕ ಸಾಹಿತ್ಯ ತುಳುವಿನಲ್ಲಿ ಶ್ರೀಮಂತವಾಗಿ ಬೆಳೆದಿದೆ. ತುಳುವಿನಲ್ಲಿ ಲಿಖಿತ ಸಾಹಿತ್ಯ ಆರಂಭವಾದದ್ದು 19ನೇ ಶತಮಾನದ ಪೂರ್ವಾರ್ಧದ ಬಳಿಕ. ಹೀಗೆ ಬೆಳೆದು ಬಂದ ತುಳು ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದಾಗ ಯಕ್ಷಗಾನ, ಭೂತಾರಾಧನೆ ಹಾಗೂ ತುಳು ನಾಟಕದ ಕುರಿತಾಗಿ ವಿಸ್ತೃತವಾದ ಅಧ್ಯಯನಗಳು ನಡೆದಿವೆ. ಕ್ರೀಡೆ, ಕಲೆಗಳಿಗೆ ಸಂಬಂಧಿಸಿದಂತೆ ಹಲವಾರು ಸಾಂಸ್ಕೃತಿಕ ವಿವರಗಳು ಕಂಡು ಬರುತ್ತವೆ. ವಿದೇಶಿ ಬರಹಗಳಿಂದ ಕೂಡಾ ಇವುಗಳ ಬಗ್ಗೆ ಉಪಯುಕ್ತ ಮಾಹಿತಿಗಳನ್ನು ಪಡೆಯಬಹುದು. ತುಳು ಸಾಹಿತ್ಯ, ನಾಟಕ, ಜನಪದ ಪ್ರಕಾರಗಳ ಬಗ್ಗೆ ಸಿಗುವ ಮಾಹಿತಿಗಳಿಗೆ ಹೋಲಿಸಿದರೆ ತುಳು ಸಿನಿಮಾದ ವಿವರವಾದ ಮಾಹಿತಿಗಳು, ವಿಮರ್ಶಾತ್ಮಕ ಬರಹಗಳು ಹೆಚ್ಚಾಗಿ ದೊರೆಯುವುದಿಲ್ಲ.

ಇತ್ತೀಚೆಗೆ ಅಂತರ್ಜಾಲಗಳಲ್ಲಿ ತುಳುಚಿತ್ರಗಳ ಬಿಡುಗಡೆ, ತಾರಾಗಣ, ಪ್ರದರ್ಶನಗಳ ಸಂಕ್ಷಿಪ್ತ ಮಾಹಿತಿಗಳು ದೊರಕುತ್ತವೆ. ಆದರೆ ಚಿತ್ರದ ವಿಮರ್ಶೆಯಾಗಲಿ ಅಥವಾ ಚಿತ್ರದ ಒಟ್ಟು ಪರಿಕಲ್ಪನೆಗಳ ಮಾಹಿತಿಯು ಎಲ್ಲಿಯೂ ಲಭ್ಯವಿಲ್ಲ. ಒಂದಿಷ್ಟು ಕಿರು ಲೇಖನಗಳನ್ನು ಬಿಟ್ಟರೆ ಹೆಚ್ಚಿನ ಕೃತಿಗಳು ದೊರಕುವುದಿಲ್ಲ. ಟಿ.ಎ. ಶ್ರೀನಿವಾಸ್ ಅವರ 'ಚಿತ್ರಭಾರತಿ–35' ಮತ್ತು ತಮ್ಮ ಲಕ್ಷ್ಮಣ್ ಅವರ 'ತುಳು ಭಾಷೆಯ ಸುವರ್ಣ ಚಿತ್ರಗಳು' ಎಂಬ ಎರಡು ಕೃತಿಗಳು ತುಳು ಸಿನಿಮಾಗಳ ಚಿತ್ರಕತೆ, ಚಿತ್ರ ಬಿಡುಗಡೆ ಹಾಗೂ ಇನ್ನಿತರ ಮಾಹಿತಿಗಳನ್ನು ತಿಳಿಯಲು ಸಹಾಯಕವಾಗುತ್ತವೆ. ಆದರೂ ತುಳು ಸಿನಿಮಾ ಅಧ್ಯಯನಕ್ಕೆ ಬೇಕಾದ 'ಸಾಹಿತ್ಯ ಸಂಪನ್ಮೂಲ'ದ ಕೊರತೆಯು ಬಹಳಷ್ಟು ಕಾಡುತ್ತದೆ. ತುಳು ಸಿನಿಮಾದ ಕುರಿತಾಗಿ ಇಲ್ಲಿಯುವರೆಗೆ ಎಲ್ಲೂ ಸಮಗ್ರ ಅಧ್ಯಯನಗಳಾಗಿಲ್ಲ. ಈ ಕಾರಣದಿಂದ ತುಳು ಸಿನಿಮಾದ ಬಗ್ಗೆ ಸಮಗ್ರ ಅಧ್ಯಯನ ಕೈಗೊಳ್ಳುವುದು ಹಾಗೂ ಪ್ರಸ್ತುತ ಯಶಸ್ಸಿನತ್ತ ಮುಖ ಮಾಡಿ ನಿಂತಿರುವಂತಹ ಈ ಕ್ಷೇತ್ರದ ಅಧ್ಯಯನ ಇಂದು ಅಗತ್ಯವಿದೆ.

ತುಳು ಸಿನಿಮಾ ನಡೆದು ಬಂದ ದಾರಿ

'ತುಳು ಸಿನಿಮಾ'ದ ಅಧ್ಯಯನಕ್ಕಿಂತ ಮುನ್ನ ಅದರ ಹುಟ್ಟಿಗೆ ಕಾರಣವಾದ ತುಳುನಾಡಿನ ಬಗ್ಗೆ ಗಮನ ಹರಿಸುವುದಾದರೆ, ಐತಿಹಾಸಿಕವಾಗಿ ತುಳುನಾಡಿನ ಜನರ ಜೀವನ ಕೃಷಿ ಮತ್ತು ಮೀನುಗಾರಿಕೆಯ ಮೇಲೆ ಅವಲಂಬಿತವಾಗಿತ್ತು. ಭೌಗೋಳಿಕ ರಚನೆ, ಪ್ರಾಕೃತಿಕ ಸಂಪತ್ತು, ಭೂ–ಶಿಲಾ ರಚನೆ, ಜಲ ಸಮೃದ್ಧಿ, ಹವಾಮಾನದ ವೈಪರಿತ್ಯವನ್ನು ಆಧರಿಸಿ ಆಯಾ ಪ್ರದೇಶಗಳ ಸಂಸ್ಕೃತಿಯು ರೂಪುಗೊಳ್ಳುತ್ತದೆ. ತುಳುನಾಡಿನ ಎತ್ತರವಾದ ಪರ್ವತ ಪ್ರದೇಶ, ವಿಶಾಲವಾದ ಕರಾವಳಿ ಪ್ರದೇಶ, ಫಲವತ್ತಾದ ಭೂಮಿ, ಪ್ರಾಕೃತಿಕ ಸಂಪತ್ತು, ಜಲ ಸಂಪತ್ತು, ಇವೆಲ್ಲವೂ ಇಲ್ಲಿನ ಜನರ ಜೀವನವನ್ನು ವ್ಯವಸ್ಥೆಗೊಳಿಸಿದೆ ಮತ್ತು ತುಳುನಾಡಿನ ಸಂಸ್ಕೃತಿಯ ವೈವಿಧ್ಯಕ್ಕೆ ಕೂಡಾ ಕಾರಣವಾಗಿದೆ.

ಭಾಷಿಕ ಅಥವಾ ಸಾಂಸ್ಕೃತಿಕ ತುಳುನಾಡಿನ ಮೇರೆ ಪಶ್ಚಿಮದಲ್ಲಿ ಅರಬ್ಬೀ ಸಮುದ್ರ, ಪೂರ್ವದಲ್ಲಿ ಸಹ್ಯಾದ್ರಿ ಪರ್ವತ ಶ್ರೇಣಿ, ದಕ್ಷಿಣದಲ್ಲಿ ಚಂದ್ರಗಿರಿ ಹೊಳೆ, ಉತ್ತರದಲ್ಲಿ ಕರ್ನಾಟಕದ ಪಶ್ಚಿಮ ಕರಾವಳಿಯ ಭಟ್ಕಳದವರೆಗೂ ವಿಸ್ತರಿಸಲ್ಪಟ್ಟಿದೆ. ತುಳುಭಾಷೆ ತುಳುನಾಡಿನಲ್ಲಿ ಅತ್ಯಂತ ವ್ಯಾಪಕವಾಗಿ ಮಾತನಾಡುವ ಭಾಷೆಯಾಗಿದೆ (ಸುಮಾರು 70%). ಭಾರತದಲ್ಲಿ ಸುಮಾರು 17 ಲಕ್ಷಕ್ಕೂ ಹೆಚ್ಚು ಜನರು ತುಳು ಮಾತನಾಡುವವರಿದ್ದಾರೆ. ದ್ರಾವಿಡ ಭಾಷೆಯ ತೌಲನಿಕ ವ್ಯಾಕರಣದ ಪಿತಾಮಹ ಎಂದೆನಿಸಿಕೊಂಡಿರುವ ರಾಬರ್ಟ್ ಕಾಲ್ಡ್‌ವೆಲ್ ತನ್ನ 'A Comparative Grammar Of The Dravidians Or South Indian Family Of Languages' ಎಂಬ ಗ್ರಂಥದಲ್ಲಿ ತುಳುವರನ್ನು ದ್ರಾವಿಡರವರ ಸ್ಥಳೀಯ ಭಾಷಿಗರು ಎಂದು ಉಲ್ಲೇಖಿಸಲಾಗಿದೆ.

ತುಳು ಸಂಸ್ಕೃತಿಯ ಅಭಿವ್ಯಕ್ತಿಯು ಸಾಹಿತ್ಯದ ಪ್ರಕಾರಗಳಾದ ಕತೆ, ಕಾದಂಬರಿ, ಕಾವ್ಯ, ಹಾಡುಗಳ ಮೂಲಕ ಆಗುತ್ತಾ ಬಂದಿದೆ. ಪಾಡ್ದನ, ನುಡಿಗಟ್ಟುಗಳು, ಜಾನಪದ ಹಾಡುಗಳು ತುಳುವ ಪರಂಪರೆಯಲ್ಲಿ ತನ್ನದೇ ಆದ ವಿಶೇಷ ಛಾಪು ಮೂಡಿಸಿವೆ. ತುಳು ಸಾಹಿತ್ಯ ರಚನೆಗೆ ಮೂರ್ತ ರೂಪ ದೊರಕಿದ್ದು 1928ರ ಬಳಿಕ. ನಂತರದ ದಶಕಗಳಲ್ಲಿ ತುಳು ಭಾಷೆಯಲ್ಲಿ ಉತ್ತಮ ಕಾವ್ಯ ಕೃತಿಗಳ ರಚನೆಯಾಗಿದೆ. ತುಳು ಜಾನಪದ ಸಾಹಿತ್ಯ, ಸಂಸ್ಕೃತಿ, ಭಾಷಾ ವಿಜ್ಞಾನ, ಸಂಶೋಧನೆ, ನಾಟಕರಂಗ ಹೀಗೆ ತುಳು ಭಾಷೆಯ ಅಭಿವ್ಯಕ್ತಿಗೆ ಹಲವು ರೂಪಗಳಾದವು. ಸುಮಾರು 45 ವರ್ಷಗಳ ಹಿಂದೆಯಷ್ಟೇ 'ಸಿನಿಮಾ' ಎನ್ನುವ ಮಾಧ್ಯಮವು ತುಳು ಭಾಷೆ, ಸಂಸ್ಕೃತಿಯ ಅಭಿವ್ಯಕ್ತಿಗೆ ಕೈಗೆಟುಕಿತು.

1971–80ರ ವರ್ಷವನ್ನು ತುಳು ಸಿನಿಮಾದ 'ಸ್ವರ್ಣಯುಗ' ಎಂದು ಕರೆಯಲಾಗುತ್ತಿದೆ. ಎನ್ನ ತಂಗಡಿ, ದಾರೆದ ಬುಡೆದಿ, ಪಗೆತ ಪುಗೆ, ಬಿಸತ್ತಿ ಬಾಬು, ಕೋಟಿ ಚೆನ್ನಯ, ಕಾಸ್‌ದಾಯೆ ಕಂಡನೆ, ಉಡಲ್ದ ತುಡರ್, ಯಾನ್ ಸನ್ಯಾಸಿ ಆಪೆ, ಬಯ್ಯಮಲ್ಲಿಗೆ, ಏರ್ ಮಲ್ತಿನ ತಪ್ಪು, ಸಾವಿರಡೊರ್ತಿ ಸಾವಿತ್ರಿ, ನ್ಯಾಯೊಗು ಜಿಂದಾಬಾದ್, ತುಳುನಾಡ ಸಿರಿ,

ಸಂಗಮ ಸಾಕ್ಷಿ, ಬೊಳ್ಳಿದೋಟ, ಕರಿಯಣಿ ಕಟ್ಟಂದಿ ಕಂಡನಿ, ನ್ಯಾಯೊಗಾದ್ ಎನ್ನ ಬದ್‌ಕ್ ಒಟ್ಟು 17 ಚಿತ್ರಗಳು ಈ ಅವಧಿಯಲ್ಲಿ ನಿರ್ಮಾಣಗೊಂಡವು ಮತ್ತು ಬಿಡುಗಡೆಯಾದವು. 1972ರಲ್ಲಿ ತಯಾರಾದ 'ಬಿಸತ್ತಿ ಬಾಬು' ರಾಜ್ಯ ಸರಕಾರದ ಉತ್ತಮ 'ತುಳುಚಿತ್ರ' ಪ್ರಶಸ್ತಿಯನ್ನು ಪಡೆದ ಮೊದಲ ಚಿತ್ರವಾಗಿದೆ. ತುಳು ವೇದಿಕೆಯ ಕಲಾವಿದರು, ಸಾಹಿತಿಗಾರರು, ಪ್ರಸಿದ್ಧ ತುಳು ನಾಟಕಗಳನ್ನು ಅಳವಡಿಸಿಕೊಂಡು ನಿರ್ಮಾಣ, ನಿರ್ದೇಶನ, ಸಂಗೀತ, ಕಥೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಮೂಲಕ ತುಳು ಚಿತ್ರರಂಗಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಈ ಅವಧಿಯಲ್ಲಿನ ನಟನೆ, ಕತೆ, ಚಿತ್ರಕಥೆ, ಹಾಡುಗಳು ಬಹಳ ಜನಪ್ರಿಯವಾಗಿವೆ.

1981–90ರ ಅವಧಿಯಲ್ಲಿ ಭಾಗ್ಯವಂತೆದಿ, ಬದ್ಕೆರ ಬುಡ್ಲೆ, ದಾರೆದ ಸೀರೆ, ಪೆಟ್ಟಾಯಿ ಪಿಲಿ, ಬದುಕೊಂಜಿ ಕಬಿತೆ, ಸತ್ಯ ಓಲುಂಡು ಹೀಗೆ ಒಟ್ಟು 6 ಚಿತ್ರಗಳು ಬಿಡುಗಡೆಯಾದವು. ತುಳು ಚಿತ್ರರಂಗ ಪ್ರಾರಂಭವಾಗಿ ಎರಡು ದಶಕಗಳಲ್ಲಿ ಕೇವಲ 23 ಚಿತ್ರಗಳನ್ನು ಮಾತ್ರ ನಿರ್ಮಿಸಲು ಸಾಧ್ಯವಾಯಿತು. ಆದರೆ ಮುಂದಿನ ಇಪ್ಪತ್ತೈದು ವರ್ಷಗಳಲ್ಲಿ ತುಳು ಚಿತ್ರರಂಗಕ್ಕೆ ಕೈ ಹಾಕಿ ಸೋತ ನಿರ್ಮಾಪಕರೇ ಹೆಚ್ಚು.

1991–2000 ಈ ದಶಕ ತುಳು ಚಿತ್ರರಂಗದಲ್ಲಿ 'ಪುನರುಜ್ಜೀವನದ ಅವಧಿ' ಎಂದು ಕರೆಯಲಾಗುತ್ತದೆ. ಈ ಅವಧಿಯಲ್ಲಿ ಒಟ್ಟು 7 ಚಿತ್ರಗಳು ಬಿಡುಗಡೆಯಾದವು. ರಾತ್ರೆ ಪಗೆಲ್, ಬಂಗಾರ್ ಪಟ್ಲೇರ್, ಸಪ್ಟೆಂಬರ್ 8, ಬದ್‌ಕ್‌ದ ಬಿಲೆ, ಮಾರಿಬಲೆ, ಕಾಲ, ಸಂಕಲ್ಪ ಇವು ಈ ಅವಧಿಯಲ್ಲಿ ಬಿಡುಗಡೆಯಾದ ಚಿತ್ರಗಳು.

2001–2010ರ ಅವಧಿಯು ತುಳು ಸಿನಿಮಾ ರಂಗವು ಪ್ರಶಸ್ತಿ ಆಧಾರಿತ ಚಲನಚಿತ್ರಗಳಿಗೆ ಸಾಕ್ಷಿಯಾಯಿತು. ಈ ಅವಧಿಯಲ್ಲಿ ಒಟ್ಟು 9 ಚಿತ್ರಗಳು ಬಿಡುಗಡೆಯಾದವು. ತುಡರ್, ಒಂತೆ ಅಡ್ಜೆಸ್ಟ್ ಮಲ್ಪಿ, ಅಂತರಂಗ, ಕೋಟಿ ಚೆನ್ನಯ, ಕಡಲಮಗೆ, ಸುದ್ದ, ಬದಿ, ಬಿರ್ಸೆ, ಗಗ್ಗರ. ಈ ಅವಧಿಯಲ್ಲಿ ರಾಜ್ಯ ಹಾಗೂ ರಾಷ್ಟ್ರೀಯ ಪುರಸ್ಕಾರಗಳಿಗೆ ಸಿನಿಮಾ ಪಾತ್ರವಾಯಿತು.

2011–2015ರ ಅವಧಿಯು ತುಳು ಚಲನಚಿತ್ರರಂಗಕ್ಕೆ ಭಾರಿ ಯಶಸ್ಸನ್ನು ತಂದು ಕೊಟ್ಟಿದೆ. ಈ ಅವಧಿಯಲ್ಲಿ 25 ಚಿತ್ರಗಳು ಬಿಡುಗಡೆಯಾಗಿವೆ. ಗಗ್ಗರ, ಕಂಚಿಲ್ದ ಬಾಲೆ, ಒರಿಯರ್ದೊರಿ ಅಸಲ್, ಬಂಗಾರ್ದ ಕುರಲ್, ಆಮೆಟ್ ಅಸಲ್ ಈಮೆಟ್ ಕುಸಲ್, ಸೋಂಪ, ತೆಲಿಕೆದ ಬೊಳ್ಳಿ, ರಿಕ್ಷಾ ಡ್ರೈವರ್, ಪಕ್ಕಿಲು ಮೂಜಿ, ಬರ್ಕೆ, ನಿರೆಲ್, ಬ್ರಹ್ಮಶ್ರೀ ನಾರಾಯಣ ಗುರು ಸ್ವಾಮಿ, ರಂಗ್, ಎಕ್ಕಸಕ್ಕ, ಚಾಲಿಪೋಲಿಲು, ಮದಿಮೆ, ಸೂಂಬೆ, ಒರಿಯನ್ ತೂಂಡ ಒರಿಯಗಾಪುಜಿ, ದಂಡ್, ಸೂಪರ್ ಮರ್ಮಯೆ, ಚಂಡಿಕೋರಿ, ರೈಟ್ ಬೊಕ್ಕ ಲೆಫ್ಟ್, ಐಸ್‌ಕ್ರೀಂ, ಏರೆಗ್ಲಾ ಪನೋಡ್ಚಿ, ಧನಿಕ್ಲೆನ ಜೋಕ್ಲು ಇವು ಬಿಡುಗಡೆಯಾಗಿರುವ ಚಿತ್ರಗಳು. 5 ವರ್ಷಗಳಲ್ಲಿ 25 ಚಿತ್ರಗಳು ಬಿಡುಗಡೆಯಾಗಿ ಉತ್ತಮ ಯಶಸ್ಸನ್ನು ಕಂಡಿರುವುದು ತುಳು ಚಿತ್ರರಂಗದ ಮಹತ್ವವಾದ ಬೆಳವಣಿಗೆಯಾಗಿದೆ. ಇನ್ನು 2016ರಲ್ಲಿ ಜೈ ತುಳುನಾಡ್, ರಂಬಾರೊಟ್ಟಿ, ಪವಿತ್ರ, ಕುಡ್ಲ ಕೆಫೆ, ಬೊಳ್ಳಿಲು, ಶಟರ್‌ದುಲಯಿ, ದಬಕ್‌ದಬ ಐಸ, ದೊಂಬರಾಟ, ಬರ್ಸ, ಪನೋಡ ಬೊಡ್ಚ, ಪಿಲಿಬೈಲ್

ಯಮುನಕ್ಕ ಇವು ಇಲ್ಲಿಯವರೆಗೆ ಬಿಡುಗಡೆಯಾದ ಸಿನಿಮಾಗಳು.

ಸುಮಾರು 50 ವರ್ಷಗಳ ಇತಿಹಾಸಕ್ಕೆ ಹತ್ತಿರವಾಗುತ್ತಿರುವ ತುಳು ಚಿತ್ರರಂಗವು ಎಲ್ಲಾ ಚಿತ್ರರಂಗಗಳಂತೆ ಏಳುಬೀಳುಗಳನ್ನು ಕಂಡಿವೆ. ಕೇವಲ ಆರ್ಥಿಕ ಲಾಭವನ್ನೇ ಧ್ಯೇಯವಾಗಿಟ್ಟುಕೊಳ್ಳದೇ ಹಲವಾರು ಕಲಾತ್ಮಕ ಸಿನಿಮಾಗಳಿಗೆ ತುಳು ಸಿನಿಮಾ ಜಗತ್ತು ಇಂದು ತನ್ನನ್ನು ತಾನು ತೆರೆದುಕೊಂಡು ಬೆಳೆಯತ್ತಿದೆ. ಸಂಖ್ಯೆಗಳ ಆಧಾರದಲ್ಲಿ ನೂರರ ಗಡಿ ದಾಟದಿದ್ದರೂ ಚಿತ್ರರಂಗ ತನ್ನನ್ನು ತಾನು ಗುರುತಿಸಿಕೊಳ್ಳುವಂತಹ ಸಾಧನೆ ಮಾಡಿದೆ.

ತುಳು ನಾಟಕಗಳೇ ಹೆಚ್ಚಾಗಿ ತುಳು ಸಿನಿಮಾಗಳಾಗಿ ರೂಪುಗೊಂಡದ್ದು

ತೆರೆ ಕಂಡಂತಹ ತುಳು ಸಿನಿಮಾಗಳನ್ನು ಗಮನಿಸಿದಾಗ ನಮಗೆ ಸ್ಪಷ್ಟವಾಗಿ ಕಾಣುವಂತಹದ್ದು ಪ್ರದರ್ಶನಗೊಂಡ ತುಳು ನಾಟಕಗಳೇ ಹೆಚ್ಚಾಗಿ ತುಳು ಸಿನಿಮಾಗಳಾಗಿ ರೂಪಾಂತರಗೊಂಡದ್ದು. ಸಾಮಾನ್ಯ ಮಾತಿನಲ್ಲಿ ಹೇಳುವುದಾದರೆ ತುಳು ನಾಟಕಗಳ ಜನಪ್ರಿಯತೆ ತುಳು ಸಿನಿಮಾಗಳ ನಿರ್ಮಾಣಕ್ಕೆ ಕಾರಣವಾದ ಪ್ರಮುಖ ಅಂಶಗಳಲ್ಲಿ ಒಂದು ಎಂಬುವುದನ್ನು ನಾವು ಒಪ್ಪಲೇಬೇಕಾಗುತ್ತದೆ.

ತುಳು ಸಿನಿಮಾಗಳ ಕುತೂಹಲಕಾರಿ ವಿದ್ಯಮಾನ ಯಾವುದೆಂದರೆ, ಅವು ತುಳು ನಾಟಕಗಳೊಳಗಿನಿಂದ ಹುಟ್ಟಿದುವು. ಆದರೆ ಈ ತುಳು ನಾಟಕಗಳು ಕನ್ನಡ, ಹಿಂದಿ, ತಮಿಳು ಇನ್ನಿತರ ಭಾಷೆಯ ಸಿನಿಮಾಗಳಿಂದ ಸಾಕಷ್ಟು ಪ್ರೇರಿತಗೊಂಡಿದ್ದವು. ತುಳು ನಾಟಕಗಳ ಜನಪ್ರಿಯತೆಯೇ ತುಳು ಚಿತ್ರಗಳ ನಿರ್ಮಾಣದಲ್ಲಿ ಪ್ರಧಾನ ಪಾತ್ರವಹಿಸಿತು. ಪ್ರಾರಂಭದ ದಿನಗಳಲ್ಲಿ ಎಲ್ಲಾ ಚಿತ್ರರಂಗದ ಮೇಲೆಯೂ ರಂಗಭೂಮಿಯು ಪ್ರಭಾವ ಬೀರಿರುವುದನ್ನು ನಾವು ಈ ಸಂದರ್ಭದಲ್ಲಿ ಗಮನಿಸಬೇಕು.

ಸುಮಾರು ಇಪ್ಪತ್ತನೇ ಶತಮಾನದ ಆರಂಭದಿಂದಲೇ ಇದ್ದ ಕನ್ನಡ ರಂಗಭೂಮಿ ತುಳುವರಿಗೆ ಪರಿಚಯವಾಗಿತ್ತು. ಸ್ಥಳೀಯ ನಾಟಕ ಕಂಪನಿಗಳಂತೆ, ಕರಾವಳಿಗೆ ಬಂದು ಹೋಗುತ್ತಿದ್ದ ಕಂಪೆನಿಗಳೂ ಸೇರಿ, ನಾಟಕ ಪ್ರಕಾರವೊಂದರ ಪರಿಕಲ್ಪನೆಯನ್ನು ಕರಾವಳಿಯ ಮನಸ್ಸಿನಲ್ಲಿ ಮೂಡಿಸಿದ್ದವು. ತುಳು ನಾಟಕ ಬರಹಗಾರರು ಕನ್ನಡ ರಂಗಭೂಮಿಯ ಹತ್ತಿರದ ನಂಟು ಹೊಂದಿದವರೇ ಆಗಿದ್ದರು. ಹೀಗಾಗಿ ತುಳು ನಾಟಕಗಳು ಭಾರತದ ಆರಂಭಿಕ ಸಿನಿಮಾ ಹಾಗೂ ಕಂಪೆನಿ ನಾಟಕಗಳ ಜೊತೆ ಸೇರಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ. ದೃಶ್ಯ ವಿಭಜನೆ, ದೃಶ್ಯ ಗ್ರಹಿಕೆ, ಪಾತ್ರ ಕಲ್ಪನೆ, ಪಾತ್ರಗಳಿಗೆ ಸ್ವಭಾವ ವಿಭಜನೆ, ಹಾಡುಗಳ ಸೇರ್ಪಡೆ, ಕಥಾಹಂದರ, ರಂಗ ಪ್ರಯೋಗಕ್ಕಾಗಿ ಆವರಣದ ವಿವರಗಳಲ್ಲಿ ಕೊಡುವ ವಿವಿಧ ಸಾಧ್ಯತೆಗಳು ಇತ್ಯಾದಿಗಳೆಲ್ಲಾ ತುಳುವರಿಗೆ ಕನ್ನಡ ರಂಗಭೂಮಿಯಿಂದ ಪರಿಚಯವಾಗಿತ್ತು. ತುಳುವಿನ ಹೆಚ್ಚಿನ ನಾಟಕಗಳು ರಂಗ ಪ್ರವೇಶಕ್ಕಾಗಿ ಕಟ್ಟಿದ ಭಾಷಾ ವಿನ್ಯಾಸಗಳಾಗಿದ್ದವೇ ಹೊರತು 'ಸಾಹಿತ್ಯ' ಎಂಬ ಗ್ರಹಿಕೆ ನಾಟಕಕಾರರಿಗೆ ಇಲ್ಲಿ ಮುಖ್ಯವಾಗಿರಲಿಲ್ಲ. ರಂಗ ಪ್ರಯೋಗದ ಕನಸೇ ಜೀವಾಳವಾಗಿತ್ತು.

ಸಿನಿಮಾವು ರಂಗಭೂಮಿಯಿಂದ ಕೆಲವು ಪರಿಕರಗಳನ್ನು ಪಡೆದುಕೊಂಡಿರಬಹುದು. ಆದರೆ ಅದು ರಂಗಭೂಮಿಗಿಂತ ತುಂಬ ಭಿನ್ನವಾದ ಮಾಧ್ಯಮ. ರಂಗಭೂಮಿ ಒಂದು ನಿರ್ದಿಷ್ಟ ಘಟ್ಟವನ್ನು ತಲುಪಿದ್ದ ಸಾಂಸ್ಕೃತಿಕ ಸಂದರ್ಭ ಒಂದರಲ್ಲಿ ಸಿನಿಮಾವು ಜನ್ಮತಾಳಿತು. ಸಹಜವಾಗಿಯೇ ಅದು ರಂಗಭೂಮಿಯನ್ನು ಅನುಕರಿಸಲಾರಂಭಿಸಿತು.

'ಜನಮರ್ಲ್' ತುಳುವಿನ ಮೊದಲ ಮುದ್ರಿತ ನಾಟಕವಾಗಿದೆ. ಉಡುಪಿ ಕಡೆಯಿಂದ ಪ್ರಕಟವಾಗುತ್ತಿದ್ದ 'ನವಯುಗ'ದ ವಿಶೇಷ ಸಂಚಿಕೆಗಳಲ್ಲಿ ತುಳುವಿನ ಆರಂಭಿಕ ಕಿರುನಾಟಕಗಳು ಕಾಣಿಸಿಕೊಳ್ಳುತ್ತವೆ. ತುಳು ನಾಟಕಗಳಲ್ಲಿ ಜಾತಿ ಮುಖ್ಯವಾಗದೇ ಇರುವುದು ಒಂದು ಮಹತ್ತರ ವಿದ್ಯಮಾನ. ಇಲ್ಲಿನ ಮುಖ್ಯ ಪಾತ್ರಗಳು ಹೆಸರಿನಿಂದಲೇ

ಕೂಡಿರುತ್ತವೆಯೇ ಹೊರತು ಜಾತಿಸೂಚಕ ಉಪನಾಮಗಳಿಂದಲ್ಲ. ಈ ತುಳು ನಾಟಕಗಳಲ್ಲಿ ರಂಗಕ್ರಿಯೆಗಿಂತಲೂ, ಕಥೆಗಿಂತಲೂ, ಸಂಭಾಷಣೆಗಳು ಹೆಚ್ಚು ಮನರಂಜನೆಯನ್ನು ನೀಡುತ್ತವೆ. ದುಡಿಮೆಗಾರ ತುಳು ಸಮುದಾಯ 'ಹರಟೆಪ್ರಿಯ'ವಾದ್ದರಿಂದ ತುಳು ನಾಟಕಗಳಲ್ಲಿ ಸಂಭಾಷಣೆಯೇ ಜೀವಾಳ. ಮನೆಮಾತು ರಂಗದ ಮಾತಾಗಿ ಬಂದಾಗ ಬರುವ ಆತ್ಮೀಯತೆ, ದುಡಿಮೆ ಮುಗಿಸಿ ಬಂದ ಶ್ರಮದಿಂದಾಗಿ ವಾಚ್ಯವಾಗಿಯೇ ವಿಚಾರವನ್ನು ಸುಲಭವಾಗಿ ಗ್ರಹಿಸುವ ಮಾನಸಿಕ ಅಗತ್ಯ ಇವುಗಳು ತುಳು ನಾಟಕದ ಸರಳ ರಂಜನೆಗೆ ಕಾರಣವಾಗಿವೆ.

ತುಳು ಭಾಷೆ ನಾಟಕಗಳಿಗೆ ಸೀಮಿತವಾಗಿದ್ದ ಕಾಲ. ಪಂಚದ್ರಾವಿಡ ಭಾಷೆಗಳಲ್ಲಿ ಒಂದಾದ ಶ್ರೀಮಂತ ಹಾಗೂ ಯಾವಾಗಲೂ ಸ್ವತಂತ್ರವಾಗಿಯೇ ಗುರುತಿಸಲ್ಪಡುವ ತುಳು ಭಾಷೆಯನ್ನು ತುಳುವರು ಒಂದು ಮಟ್ಟಿಗೆ ಕಡೆಗಣಿಸಿದ್ದರೂ, ತುಳು ನಾಟಕಗಳಿಗೆ, ರಂಗಭೂಮಿ ಕಲಾವಿದರಿಗೆ ಪ್ರೋತ್ಸಾಹ ಕೊಡುತ್ತಲೇ ಬಂದಿದ್ದರು. "ತುಳು ನಾಟಕ ಆಂಡಲ ಆವು ತುಳು ಪಿಚ್ಚರ್ ಅತ್ತ್" ಅನ್ನೋದು ತುಳುವರಲ್ಲಿ ಒಂದು ಕಾಲದಲ್ಲಿ ಇದ್ದಂತಹ ಅಭಿಪ್ರಾಯ. ಆದರೆ ನೂರಾರು ಪ್ರದರ್ಶನಗಳನ್ನು ಕಂಡಂತಹ ನಾಟಕಗಳನ್ನು ಸಿನಿಮಾಗಳನ್ನಾಗಿ ಮಾಡಿ ಅದೇ ನಾಟಕ ಕಲಾವಿದರ ಅಭಿನಯದಲ್ಲಿ ಅದು ಹೇಗೆ ಕಾಣಿಸಬಹುದು ಎಂಬ ಕುತೂಹಲ, ಅನುಮಾನಗಳ ನಡುವೆ ನಿರ್ಮಾಣವಾದ ಚಲನಚಿತ್ರಗಳು ಭರ್ಜರಿಯಾದ ಯಶಸ್ಸನ್ನು ಗಳಿಸಿತ್ತು. ಆದರೆ ತುಳು ಸಿನಿಮಾಗಳಿಗೆ ಮಾರುಕಟ್ಟೆ ಸೀಮಿತವಾಗಿರುವ ಕಾರಣ ಅವುಗಳ ನಿರ್ಮಾಣ ವೆಚ್ಚವನ್ನು ತಡೆಯಲು ಚಿತ್ರ ನಿರ್ಮಾಪಕರು ಸೋಲುತ್ತಿದ್ದರು.

ಹಳೆಯ ತುಳು ನಾಟಕಕಾರರಿಗೆ ಇದ್ದ ಅನಿವಾರ್ಯ ಅಗತ್ಯತೆಗಳೆಂದರೆ, ನಾಟಕಗಳನ್ನು ಅಕ್ಷರ ರೂಪಕ್ಕಿಳಿಸಿ ಪುಸ್ತಕಗಳಲ್ಲಿ ಬರೆದಿಟ್ಟರೆ ಸಾಲದು, ಅವನ್ನು ಇತರರಿಗೆ ಹೇಳಿಕೊಟ್ಟು, ಆಡಿಸಿ, ರಂಗಕ್ಕೇರಿಸಿ ಅಂತಿಮ ಪರದೆ ಇಳಿಯುವವರೆಗೆ ನಟ-ನಿರ್ದೇಶಕ-ತಂತ್ರಜ್ಞಾನ ಎಲ್ಲವೂ ಆಗಿರಬೇಕಾಗುತ್ತಿತ್ತು. ಇದರಲ್ಲಿ ಹಣದ ಸಂಪಾದನೆಗಿಂತಲೂ 'ಕಲಾಸೇವೆ'ಯೇ ಎಂಬ ತೃಪ್ತಿ ಮುಖ್ಯವಾಗಿತ್ತು. ತುಳುನಾಡಿನಲ್ಲಿ ಸುಪ್ರಸಿದ್ಧ ನಾಟಕಕಾರರಿದ್ದಾರೆ. ಇವರೆಲ್ಲಾ ನಾಟಕಗಳನ್ನು ಬರೆದು ಹಳ್ಳಿಹಳ್ಳಿಯ ಯುವಕರನ್ನು ಬಣ್ಣ ಬಳಿಯುವಂತೆ ಪ್ರೇರೇಪಿಸುತ್ತಿದ್ದರು. ನಾಟಕಕಾರರೇ ಅಪರೂಪಕ್ಕೆ ತಮ್ಮದೇ ಆದ ತಂಡವನ್ನು ಕಟ್ಟಿ ಸಿದ್ಧ ನಾಟಕಗಳನ್ನು ಪ್ರದರ್ಶಿಸುತ್ತಿದ್ದರು.

'ತುಳುನಾಡಿನ ಸಂಸ್ಕೃತಿ' ಹಾಗೂ 'ಪರಂಪರೆಯ ಆರಾಧನೆ' ತುಳು ಸಿನಿಮಾದ ಇನ್ನೊಂದು ವೈಶಿಷ್ಟ್ಯವಾಗಿದೆ. ತುಳು ಭಾಷೆ ತನ್ನ ಅಸ್ತಿತ್ವದ ಹುಡುಕಾಟದಲ್ಲಿ ತನ್ನದೇ ಆದ ಸಾಹಿತ್ಯ ಕಲಾ ಪ್ರಕಾರಗಳನ್ನು ಪ್ರದರ್ಶಿಸಲು ಮುಂದಾದ ದಿನದಿಂದ ತುಳು ರಂಗಭೂಮಿ ಕ್ರಿಯಾತ್ಮಕವಾಗಿ ಕೆಲಸ ಮಾಡುತ್ತಲೇ ಬಂದಿದೆ. ಎಂ.ಕೆ. ಸೀತರಾಮ ಕುಲಾಲ್, ಬಿ.ಕೆ. ಭಂಡಾರಿ, ರಾಮ ಕಿರೋಡಿಯನ್, ಮ್ಯೊದಿನಬ್ಬ, ಸೀತಾರಾಂ ಆಳ್ವ, ಬಿ.ವಿ. ಕಿರೋಡಿಯನ್, ವಿಶ್ವನಾಥ ಭಂಡಾರಿ ಹೀಗೆ ಅನೇಕರು ತುಳು ನಾಟಕ ರಂಗಕ್ಕೆ ನೀಡಿದ ಸೇವೆ ಅಪಾರ.

ತುಳು ನಾಟಕಗಳ ಜನಪ್ರಿಯತೆ ತುಳು ಚಿತ್ರವನ್ನು ನಿರ್ಮಿಸುವುದಕ್ಕೆ ಕಾರಣವಾಯಿತು. 1970ರಲ್ಲಿ ತುಳು ಭಾಷೆಯ ಮೇಲಿನ ಅಭಿಮಾನಕ್ಕಾಗಿ ತುಳು ಚಿತ್ರವೊಂದನ್ನು ನಿರ್ಮಾಣ

ಮಾಡುವ ಯೋಜನೆಗೆ ಮುಂದಾದವರು ಕೊಡಗಿನವರಾದ ಎಸ್.ಆರ್. ರಾಜನ್‌ರವರು. ನಾಟಕಗಳು ಬಹಳ ಜನಪ್ರಿಯತೆಯನ್ನು ಹೊಂದಿದ್ದ ಕಾಲ ಅದು. ಅಂತಹ ಕಾಲಘಟ್ಟದಲ್ಲಿ ಎಸ್.ಆರ್. ರಾಜನ್ ಅವರು 'ಎನ್ನ ತಂಗಡಿ' ಎಂಬ ತುಳು ಚಿತ್ರವನ್ನು ನಿರ್ಮಾಣ ಮಾಡಿದರು. ಈ ಚಿತ್ರಕ್ಕೆ ಆರ್ಥಿಕ ಸಹಾಯವನ್ನಿತ್ತು ಅದನ್ನು ಬಿಡುಗಡೆ ಮಾಡಿದವರು ಚಿತ್ರಭಾರತಿ ಸಂಸ್ಥೆಯ ಟಿ.ಎ. ಶ್ರೀನಿವಾಸ್ ಅವರು. 1971 ಫೆಬ್ರವರಿ 19ರಂದು 'ಜ್ಯೋತಿ' ಚಿತ್ರ ಮಂದಿರದಲ್ಲಿ ಬಿಡುಗಡೆಯಾದ ಈ ಚಿತ್ರವು ಎರಡು ವಾರಗಳ ಕಾಲ ಪ್ರದರ್ಶನವನ್ನು ಕಂಡಿತು. ಚಿತ್ರದ ತಾಂತ್ರಿಕತೆ ಕಳಪೆ ಮಟ್ಟದಲ್ಲಿದ್ದುದರಿಂದ ಹೇಳಿಕೊಳ್ಳುವಷ್ಟು ಯಶಸ್ಸನ್ನೂ ಕಾಣದಿದ್ದರೂ ತುಳುವಿನಲ್ಲೂ ಚಿತ್ರ ನಿರ್ಮಾಣ ಮಾಡಬಹುದು ಎಂಬುವುದನ್ನು ಸಿನಿಮಾ ರಂಗಕ್ಕೆ ತೋರಿಸಿಕೊಟ್ಟವರು ಎಸ್.ಆರ್. ರಾಜನ್ ಎಂಬುವುದು ಗಮನಾರ್ಹ. ಇವರ 'ಎನ್ನ ತಂಗಡಿ' ಚಿತ್ರವು ಇಲ್ಲಿಯವರೆಗಿನ ಎಲ್ಲಾ ತುಳು ಚಿತ್ರಗಳಿಗೆ ಅಡಿಪಾಯವನ್ನು ಹಾಕಿಕೊಡುವುದರ ಮೂಲಕ ತುಳು ಚಿತ್ರರಂಗದ ಸ್ಥಾಪನೆಗೆ ನಾಂದಿಯಾಯಿತು.

70ರ ದಶಕದಲ್ಲಿ ರಂಗಭೂಮಿ ನಾಯಕ ನಟರಾಗಿ ಮೆರೆಯುತ್ತಿದ್ದ ಕೆ.ಎನ್. ಟೇಲರ್ ಅವರು ಸಾಕಷ್ಟು ನಾಟಕಗಳನ್ನು ಮಾಡಿ ರಂಗಭೂಮಿಯಲ್ಲಿ ಯಶಸ್ಸನ್ನು ಕಂಡವರು. ನಟ, ನಿರ್ದೇಶಕ ನಿರ್ಮಾಪಕ, ನಾಟಕಕಾರ, ಪ್ರಕಾಶಕ ಎಲ್ಲವೂ ಆಗಿ ರಂಗಭೂಮಿ, ಸಿನಿಮಾರಂಗದಲ್ಲಿ ತಮ್ಮ ಸಾಧನೆಯನ್ನು ಮೆರೆದಿದ್ದಾರೆ. ಏರ್ ಮಲ್ತಿನ ತಪ್ಪು, ಯಾನ್ ಸನ್ಯಾಸಿ ಆಪೆ, ಕಾಸ್‌ದಾಯೆ ಕಂಡನಿ ಮೊದಲಾದ ಇವರ ನಾಟಕ–ಸಿನಿಮಾಗಳ ಮೇಲಿನ ಒಟ್ಟು ಚಿಂತನೆಗಳನ್ನು ಇಲ್ಲಿ ಕ್ರೋಢೀಕರಿಸಬಹುದು. 'ದಾರೆದ ಬುಡೆದಿ' ಎನ್ನುವ ತಮ್ಮ ಜನಪ್ರಿಯ ನಾಟಕವನ್ನು ಸಿನಿಮಾ ಮಾಡಲು ಮುಂದಾದರು. ತುಳು ಭಾಷೆಯ ಎರಡನೇ ಚಿತ್ರ 'ದಾರೆದ ಬುಡೆದಿ' 1971ರಲ್ಲಿ ಮಂಗಳೂರಿನ ರೂಪವಾಣಿ ಚಿತ್ರಮಂದಿರದಲ್ಲಿ ಬಿಡುಗಡೆಯಾಗಿ ಒಂದೇ ದಿನದಲ್ಲಿ ಐದು ಪ್ರದರ್ಶನಗಳನ್ನು ನೀಡಿದ ದಾಖಲೆಗೆ ಈ ಸಿನಿಮಾವು ಪಾತ್ರವಾಯಿತು.

1972ರಲ್ಲಿ ಆರೂರು ಪಟ್ಟಾಭಿ ಅವರ ನಿರ್ದೇಶನದಲ್ಲಿ ಹಾಗೂ ಎಂ.ವೈ. ಕೋಲಾ ಅವರ ನಿರ್ಮಾಣದಲ್ಲಿ ತೆರೆಕಂಡ ಮತ್ತೊಂದು ಸಿನಿಮಾ ಎಂದರೆ 'ಬಿಸತ್ತಿ ಬಾಬು'. ಇದು ರಮಾನಂದ ಚೂರ್ಯ ಅವರ ನಾಟಕಾಧಾರಿತ ಸಿನಿಮಾವಾಗಿದೆ. ಈ ಚಿತ್ರ ಜ್ಯೋತಿ ಚಿತ್ರಮಂದಿರದಲ್ಲಿ ತೆರೆ ಕಂಡು ಯಶಸ್ವಿ 77 ದಿನಗಳ ಅದ್ಭುತ ಪ್ರದರ್ಶನಗಳನ್ನು ಕಂಡು ದಾಖಲೆ ನಿರ್ಮಿಸಿತು. ಈ ಚಲನಚಿತ್ರ ಕರ್ನಾಟಕ ರಾಜ್ಯ ಸರಕಾರದ ವರ್ಷದ ಮೂರನೇ 'ಅತ್ಯುತ್ತಮ ಚಿತ್ರ' ಎಂಬ ಪ್ರಶಸ್ತಿಯನ್ನು ಪಡೆದುಕೊಂಡ ಮೊದಲ ತುಳು ಚಿತ್ರವಾಗಿದೆ. 1971–1972 ಈ ಎರಡು ವರ್ಷಗಳಲ್ಲಿ ನಾಲ್ಕು ಚಿತ್ರಗಳು ತೆರೆ ಕಂಡವು. ಇದು ತುಳು ಸಿನಿಮಾ ರಂಗದ ಅಡಿಪಾಯದ ಭದ್ರ ಬುನಾದಿಗೆ ಕಾರಣವಾಯಿತು ಮತ್ತು ನಿರ್ಮಾಪಕರಿಗೆ ಚಿತ್ರ ನಿರ್ಮಾಣ ಮಾಡಲು ಸ್ಫೂರ್ತಿ ದೊರೆತಂತಾಯಿತು. ಈ ಸಿನಿಮಾಗಳು ಅನೇಕ ಕಲಾವಿದರಿಗೆ ಕೂಡಾ ವೇದಿಕೆಯನ್ನು ಒದಗಿಸಿಕೊಟ್ಟಿತು. ಪಂಡರಿಬಾಯಿ, ಕವಿತಾ, ಆನಂದ್ ಶೇಖರ್, ಲೋಕಯ್ಯ ಶೆಟ್ಟಿ, ದಿಲೀಪ್ ಮಂಗಳೂರು ಮೊದಲಾದ ಕಲಾವಿದರು 'ಎನ್ನ ತಂಗಡಿ' ಚಿತ್ರದಲ್ಲಿ ನಟಿಸಿದ್ದರೆ, ಲೀಲಾವತಿ, ಕೆ.ಎನ್. ಟೇಲರ್, ಸೋಮಶೇಖರ್ ಪುತ್ರನ್, ಜನಾರ್ಧನ್, ಕೆ.ಜೆ. ರಾಜ್, ರಾಮಚಂದ್ರ ಕೂಳೂರು ಮುಂತಾದ ಕಲಾವಿದರು 'ದಾರೆದ ಬುಡೆದಿ' ಚಿತ್ರದಲ್ಲಿ ಅಭಿನಯಿಸಿದ್ದರು. ಇನ್ನು ರಾಮಚಂದ್ರ ಕೂಳೂರು, ಬಾಲಕೃಷ್ಣ ಕದ್ರಿ, ಬಿ.ವಿ. ಕಿರೋಡಿಯನ್, ಲೀಲಾವತಿ,

ಹೇಮಲತಾ, ಶಶಿಕಲಾ ಮುಂತಾದವರು 'ಪಗೆತ ಪುಗೆ' ಚಿತ್ರದಲ್ಲಿ ಅಭಿನಯಿಸಿದ್ದಾರೆ. ಹಾಗೆಯೇ ಕೆ.ಎನ್. ಟೇಲರ್, ರಾಮಚಂದ್ರ ಕೂಳೂರು, ಬಾಲಕೃಷ್ಣ ಕದ್ರಿ, ಹೇಮಲತಾ, ಲೀಲಾವತಿ, ಶಶಿಕಲಾ ಮುಂತಾದವರು 'ಬಿಸತ್ತಿ ಬಾಬು' ಸಿನಿಮಾದಲ್ಲಿ ಅಭಿನಯಿಸಿ ಚಿತ್ರದ ಯಶಸ್ಸಿಗೆ ಕಾರಣರಾದರು.

ತುಳು ನಾಟಕಗಳು ವೊತ್ತವೊದಲಿಗೆ ತುಳು ಭಾಷೆಗೆ ವಿಶ್ವವಾಪ್ತಿ ಮನ್ನಣೆ ದೊರಕಿಸಿಕೊಟ್ಟಿತ್ತು ಎಂದರೆ ತಪ್ಪಾಗಲಾರದು. ತುಳುನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವ ಚಿತ್ರಕಥೆಯನ್ನು ಹೊಂದಿದ ವಿಶು ಕುಮಾರ್ ನಿರ್ದೇಶನದ ಮೊದಲ ಇತಿಹಾಸ ಆಧಾರಿತ ತುಳು ಸಿನಿಮಾ 'ಕೋಟಿ ಚೆನ್ನಯ'. ಇದು ವಿಶು ಕುಮಾರ್ ಅವರ ತುಳು ಮಣ್ಣಿನ ಪರಂಪರೆಯನ್ನು ಅನಾವರಣಗೊಳಿಸಿದ 'ಕೋಟಿ ಚೆನ್ನಯ' ನಾಟಕಾಧಾರಿತ ಸಿನಿಮಾವಾಗಿದೆ. ಈ ಚಿತ್ರ 1973ರಲ್ಲಿ ಮಂಗಳೂರಿನ ಜ್ಯೋತಿ ಚಿತ್ರಮಂದಿರದಲ್ಲಿ ಬಿಡುಗಡೆಯಾಗಿ 150 ದಿನಗಳ ಯಶಸ್ವಿ ಪ್ರದರ್ಶನವನ್ನು ಕಂಡು ದಾಖಲೆ ನಿರ್ಮಿಸಿತು ಅಲ್ಲದೆ, ಅದೇ ವರ್ಷದಲ್ಲಿ ರಾಜ್ಯ ಸರಕಾರದ ನಾಲ್ಕನೇ ಅತ್ಯುತ್ತಮ ಚಿತ್ರ ಎಂಬ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತ್ತು. ಸುಭಾಶ್ ಪಡಿವಾಳ ಮತ್ತು ವಾಮನ್ ರಾಜ್ ಈ ಚಿತ್ರದ ಮುಖ್ಯ ಪಾತ್ರಧಾರಿಗಳು. ಮಿನುಗುತಾರೆ ಕಲ್ಪನಾ, ಫೈಟರ್ ಶೆಟ್ಟಿ, ಲೋಕಯ್ಯ, ಚಿನ್ನಪ್ಪ ಸುವರ್ಣ, ಆನಂದ ಗಾಣಿಗ ಮೊದಲಾದ ಕಲಾವಿದರು ಅಭಿನಯಿಸಿದ್ದರು. ಈ ಚಿತ್ರಕ್ಕೆ ಖ್ಯಾತ ಹಿನ್ನಲೆ ಗಾಯಕರಾದ ಎಸ್.ಪಿ. ಬಾಲಸುಬ್ರಮಣ್ಯಂ ಮತ್ತು ಎಸ್. ಜಾನಕಿ ಹಾಡಿದ್ದರು. ಈ ಚಿತ್ರದ ಎಲ್ಲಾ ಹಾಡುಗಳು ಬಹಳ ಜನಪ್ರಿಯಗೊಂಡಿವೆ ಮತ್ತು ಇಂದಿಗೂ ಜನರ ಮನಸ್ಸಿನಲ್ಲಿ ಉಳಿದಿವೆ.

ಮುಂದಿನ ದಿನಗಳಲ್ಲಿ ತುಳು ಸಿನಿಮಾ ರಂಗದಲ್ಲಿ ಅದ್ಭುತ ಬೆಳವಣಿಗೆಗಳು ಕಂಡು ಬಂದಿತು. ತುಳು ಚಿತ್ರಗಳ ಮೇಲೆ ಆಸಕ್ತಿಯೂ ಹೆಚ್ಚಾಗುತ್ತಿದ್ದಂತೆ, ಚಿತ್ರ ನಿರ್ಮಾಣ ಮಾಡುವವರ ಸಂಖ್ಯೆಯೂ ಹೆಚ್ಚಾಯಿತು. 1975ರಲ್ಲಿ ಎಂ. ವಾಸುದೇವನ್ ನಿರ್ದೇಶನದ 'ಉಡಲ್ದ ತುಡರ್' ಎಂ.ಕೆ. ಸೀತಾರಾಂ ಕುಲಾಲ್ ಅವರ 'ಸತ್ಯೊನೇ ದೇವೆರ್' ಎಂಬ ತುಳು ನಾಟಕಾಧಾರಿತ ಸಿನಿಮಾವಾಗಿದೆ. ಬಾಲಕೃಷ್ಣ ಕದ್ರಿ, ರಾಮಣ್ಣ ರೈ, ಶಶಿಕಲಾ, ರವಿ ಶಂಕರ್, ಚಿತ್ರಾಂಜಲಿ ಮುಂತಾದವರು ಅಭಿನಯಿಸಿದ್ದಾರೆ. ಈ ಚಿತ್ರದ ಅತ್ಯುತ್ತಮ ಚಿತ್ರಕಥೆ ಮತ್ತು ಸಂವಾದಕ್ಕೆ 'ನವಭಾರತ ತುಳುಕೂಟ ಪ್ರಶಸ್ತಿ' ಲಭಿಸಿದೆ.

ಅದೇ ವರ್ಷ ಮತ್ತೊಂದು ಸಿನಿಮಾ ತೆರೆ ಕಾಣಲು ಸಿದ್ಧವಾಗಿತ್ತು. 'ಕಾಸ್‌ದಾಯೆ ಕಂಡನೆ' ಈ ಚಿತ್ರವನ್ನು ಕನ್ನಡದ ಖ್ಯಾತ ನಿರ್ದೇಶಕ ಗೀತಪ್ರಿಯರವರು ನಿರ್ದೇಶಿಸಿದರು. ಈ ಚಿತ್ರದ ವಿಶೇಷವೆಂದರೆ ಖ್ಯಾತ ನಟಿ ಜಯಮಾಲರವರು ಅಭಿನಯಿಸಿರುವ ಮೊದಲ ಚಿತ್ರ ಇದಾಗಿತ್ತು. ಈ ಚಿತ್ರದಿಂದ ಅವರು ಕನ್ನಡ ಚಿತ್ರರಂಗಕ್ಕೂ ಪರಿಚಯವಾದರು. ಕೆ.ಎನ್. ಟೇಲರ್, ಆನಂದ ಶೇಖರ್. ಬಿ.ವಿ. ರಾಧಾ, ರತ್ನಮಾಲಾ ಮುಂತಾದ ತಾರೆಯರು ನಟಿಸಿದ್ದರು. ಈ ಚಿತ್ರವು ಕೆ.ಎನ್. ಟೇಲರ್‌ರವರ 'ಕಾಸ್‌ದಾಯೆ ಕಂಡನಿ' ಎಂಬ ತುಳು ನಾಟಕಾಧಾರಿತ ಸಿನಿಮಾವಾಗಿದೆ.

ಕೆ.ಎನ್. ಟೇಲರ್, ರಾಜೇಶ್, ನಾಗಪ್ಪ ಆಳ್ವ ಅವರ ಪರಿಚಿತರಾಗಿದ್ದ ಗೀತಪ್ರಿಯರವರು ಕೆ.ಎನ್. ಟೇಲರ್ ಅವರ ಒತ್ತಾಯದ ಮೇರೆಗೆ 1974ರಲ್ಲಿ 'ಯಾನ್ ಸನ್ಯಾಸಿ ಆಪೆ' ಎಂಬ ಇನ್ನೊಂದು ತುಳು ಚಿತ್ರವನ್ನು ತೆರೆಗೆ ತಂದರು. ಎ. ವಿಶ್ವನಾಥ ಅವರು ನಿರ್ಮಿಸಿದರು.

ಜಯಮಾಲ, ಕೆ.ಎನ್. ಟೇಲರ್ ಮುಂತಾದವರು ಅಭಿನಯಿಸಿದರು. ಈ ಚಿತ್ರ ಕೆ.ಎನ್. ಟೇಲರ್ ಅವರ 'ಯಾನ್ ಸನ್ಯಾಸಿ ಆಪೆ' ಎಂಬ ತುಳು ನಾಟಕಾಧಾರಿತ ಸಿನಿಮಾವಾಗಿದೆ.

ಆರೂರು ಪಟ್ಟಾಭಿ ನಿರ್ದೇಶನದಲ್ಲಿ ಅದೇ ವರ್ಷ ತೆರೆ ಕಂಡಂತಹ ಮತ್ತೊಂದು ಚಿತ್ರ 'ಬಯ್ಯಮಲ್ಲಿಗೆ'. ಈ ಚಿತ್ರ ಪ್ರಸಿದ್ಧ ರಂಗಭೂಮಿ ಕಲಾವಿದರಾದ ಸಂಜೀವ ದಂಡೆಕೇರಿಯವರ ಹಲವಾರು ಪ್ರದರ್ಶನಗಳನ್ನು ಕಂಡಂತಹ 'ಬಯ್ಯಮಲ್ಲಿಗೆ' (1968) ಎಂಬ ತುಳು ನಾಟಕಾಧಾರಿತ ಸಿನಿಮಾವಾಗಿದೆ. 'ಬಯ್ಯಮಲ್ಲಿಗೆ' ನಾಟಕವು ಹಳ್ಳಿಯ ಮೂಲೆಮೂಲೆಯನ್ನು ತಲುಪಿ ಲೆಕ್ಕವೇ ಸಿಗದಷ್ಟು ಯಶಸ್ವಿ ಪ್ರದರ್ಶನವನ್ನು ಆಗಲೇ ಕಂಡಿತ್ತು. ಇದರ ಜನಪ್ರಿಯತೆಯೇ ಮುಂದೆ ಚಿತ್ರ ನಿರ್ಮಾಣಕ್ಕೂ ಕಾರಣವಾಯಿತು. ಈ ಚಿತ್ರದಲ್ಲಿ ಸಂಜೀವ ದಂಡೆಕೇರಿ, ಜಯಮಾಲ, ಚಿತ್ರಾಂಜಲಿ, ವಿ.ಜಿ. ಪಾಲ್, ದೇವದಾಸ್, ರಾಮಣ್ಣ ರೈ, ರವೀಂದ್ರ ಜೆ. ಅಭಿನಯಿಸಿದ್ದರು. 'ಜ್ಯೋತಿ' ಮತ್ತು 'ರಾಮಕಾಂತಿ' ಚಿತ್ರಮಂದಿರಗಳಲ್ಲಿ ಏಕಕಾಲದಲ್ಲಿ ಇದು ಬಿಡುಗಡೆಯಾಯಿತು. ಈ ಚಿತ್ರಕ್ಕೆ ಕನ್ನಡದ ಖ್ಯಾತ ಸಂಗೀತ ನಿರ್ದೇಶಕರಾದ ಉಪೇಂದ್ರಕುಮಾರ್ ಸಂಗೀತ ನಿರ್ದೇಶನ ನೀಡಿದ್ದರು. ಚಿತ್ರವು ಅಷ್ಟೊಂದು ಯಶಸ್ಸು ಗಳಿಸದಿದ್ದರೂ ಚಿತ್ರದ ಹಾಡುಗಳು ಇಂದಿಗೂ ಜನಪ್ರಿಯವಾಗಿವೆ. ಈ ಚಿತ್ರ ಚಿಕ್ಕಮ್ಮನಿಂದ ತೊಂದರೆಗೊಳಗಾಗುವ ಅಣ್ಣ ತಂಗಿಯರ ಬಗೆಗಿದೆ. 'ಮಲತಾಯಿ ಕ್ರೌರ್ಯ'ವೆಂಬ ಪ್ರಸಿದ್ಧ ರೂಢಿಯ ವಿಚಾರವನ್ನೇ 'ಬಯ್ಯಮಲ್ಲಿಗೆ' ಒಳಗೊಳ್ಳುತ್ತದೆ. ಈ ಚಿತ್ರದಲ್ಲಿ ಅಣ್ಣ ತಂಗಿಯರ ಕತೆ ದುರಂತವಾದರೂ, ಅಂತಹ ಸಜ್ಜನ ಮೌಲ್ಯವನ್ನಾಧರಿಸಿದ್ದಕ್ಕೆ ಸತ್ತು ಅಮರರಾದರು. ಖಳರು ಒಮ್ಮೆ ಗೆದ್ದರೂ ಕೊನೆಯಲ್ಲಿ ವಿಧಿಯ ಶಿಕ್ಷೆಗೆ ಗುರಿಯಾಗುವುದನ್ನು ನಾವು ಕಾಣಬಹುದು.

1974ರಲ್ಲಿ ಕೆ.ಎನ್. ಟೇಲರ್ ಅವರ ನಿರ್ದೇಶನದಲ್ಲಿ ತೆರೆ ಕಂಡಂತಹ ಮತ್ತೊಂದು ಸಿನಿಮಾ 'ಏರ್ ಮಲ್ತಿನ ತಪ್ಪು' ಇದು ಅವರದೇ ರಚನೆ ಮತ್ತು ನಿರ್ದೇಶನದ ಹಲವು ಪ್ರದರ್ಶನಗಳನ್ನು ಕಂಡಂತಹ ಜನಪ್ರಿಯ ನಾಟಕ 'ಏರ್ ಮಲ್ತಿನ ತಪ್ಪು' ಎಂಬ ನಾಟಕಾಧಾರಿತ ಸಿನಿಮಾವಾಗಿದೆ. ಕನ್ನಡದ ಖ್ಯಾತನಟಿ ಮಿನುಗುತಾರೆ ಕಲ್ಪನಾ, ಕೆ.ಎನ್. ಟೇಲರ್ ಮುಂತಾದವರು ನಟಿಸಿದ್ದರು.

'ಸಾವಿರಡೊರ್ತಿ ಸಾವಿತ್ರಿ' 1976ರಲ್ಲಿ ಕೆ.ಎನ್. ಟೇಲರ್ ಅವರ ನಿರ್ಮಾಣದಲ್ಲಿ, ಗೀತಪ್ರಿಯರವರ ನಿರ್ದೇಶನದಲ್ಲಿ ಮೂಡಿ ಬಂದ ಇನ್ನೊಂದು ಚಿತ್ರ. ಈ ಚಿತ್ರದಲ್ಲಿ ಕೆ.ಎನ್. ಟೇಲರ್, ಮಮತಾ ಶೆಣೈ, ರಾಮ ಮೂರ್ತಿ ನಟಿಸಿದ್ದರು. ಕುಂದಾನಿ ಸತ್ಯನ್ ಅವರ ಕಥೆಯನ್ನು ಚಿತ್ರವನ್ನಾಗಿಸಿ ಪಿ.ಎಸ್. ಮೂರ್ತಿ ನಿರ್ದೇಶನದಲ್ಲಿ 1976ರಲ್ಲಿ ಬಿಡುಗಡೆಯಾದ ಚಿತ್ರ 'ನ್ಯಾಯೊಗು ಜಿಂದಾಬಾದ್'. ಕೆಮ್ತೂರು ದೊಡ್ಡಣ್ಣ ಶೆಟ್ಟಿ ಮತ್ತು ಬಿ.ಎಸ್. ರಾವ್‌ರವರು ನಿರ್ಮಾಣ ಮಾಡಿದ್ದರು. ಈ ಚಿತ್ರವು 'ರಾಮಕಾಂತಿ' ಚಿತ್ರ ಮಂದಿರದಲ್ಲಿ 5 ವಾರಗಳ ಪ್ರದರ್ಶನವನ್ನು ಕಂಡಿತು. ಪಂಡರಿಬಾಯಿ, ಅಶ್ವಥ್, ಸವಿತಾ ರಾಮಮೂರ್ತಿ, ಬಿ.ಎಸ್. ರಾವ್, ಚಂದ್ರಹಾಸ ಕೇಪು, ದೊಡ್ಡಣ್ಣ ಶೆಟ್ಟಿ ಅಭಿನಯಿಸಿದ್ದರು. ಈ ಎರಡು ಚಿತ್ರಗಳು ಮೇಲ್ನೋಟಕ್ಕೆ ನಾಟಕ ಆಧಾರಿತವಲ್ಲವೆಂದು ತೋರುತ್ತದೆ.

ಓಂಕಾರೇಶ್ವರಿ ಬ್ಯಾನರ್ ಅಡಿಯಲ್ಲಿ ದಯಾನಂದ ಗರೋಡಿಯವರ ನಿರ್ಮಾಣದಲ್ಲಿ ಬಿಡುಗಡೆಯಾದ ಚಿತ್ರ 'ತುಳುನಾಡ ಸಿರಿ' ಈ ಚಿತ್ರವನ್ನು ಕೆ.ಎನ್. ಟೇಲರ್ ಅವರು ನಿರ್ದೇಶಿಸಿದ್ದರು. ಇದು ಕೆ.ಜೆ. ಕಡಂದಲೆಯವರ ತುಳು ಕಥೆ 'ತುಳುನಾಡ ಸಿರಿ'ಯನ್ನು ಆಧರಿಸಿದ ತುಳು ಸಾಂಸ್ಕೃತಿಕ ಪರಂಪರೆಯ ಹಿನ್ನಲೆಯುಳ್ಳ ಚಿತ್ರವಾಗಿದೆ. ಇದರಲ್ಲಿ

ಸರೋಜಿನಿ ಶೆಟ್ಟಿ, ಕೆ.ಎನ್. ಟೇಲರ್ ಮೊದಲಾದ ಕಲಾವಿದರು ಅಭಿನಯಿಸಿದ್ದರು.

1977ರಲ್ಲಿ ಆರೂರು ಪಟ್ಟಾಭಿಯವರ ನಿರ್ದೇಶನದಲ್ಲಿ, ಸಂಜೀವ ದಂಡೆಕೇರಿಯವರ ನಿರ್ಮಾಣದಲ್ಲಿ ಮೂಡಿ ಬಂದ ಚಿತ್ರ 'ಬೊಳ್ಳಿದೋಟ'. ಈ ಚಿತ್ರ ಸಂಜೀವ ದಂಡೆಕೇರಿಯವರ ನೂರಾರು ಪ್ರದರ್ಶನಗಳನ್ನು ಕಂಡಂತಹ ಜನಪ್ರಿಯ ನಾಟಕ 'ಗಂಗಾ-ರಾಮ್' ನಾಟಕಾಧಾರಿತ ಸಿನಿಮಾವಾಗಿದೆ. ಈ ಚಿತ್ರದಲ್ಲಿ ಪಂಡರಿಬಾಯಿ, ಸಂಜೀವ ದಂಡೆಕೇರಿ, ದಯಾವತಿ, ಎಂ.ಎನ್. ಲಕ್ಷ್ಮೀದೇವಿ, ಸರೋಜಿನಿ ಶೆಟ್ಟಿ ಅಭಿನಯಿಸಿದ್ದರು

ಎರಡು ವರ್ಷಗಳ ನಂತರ ಅಂದರೆ 1981ರಲ್ಲಿ ಕೆ.ಎನ್. ಟೇಲರ್ ಅವರ 'ಕಂಡನಿ ಬುಡೆದಿ' ನಾಟಕವನ್ನಾಧಾರಿಸಿದ ಚಿತ್ರ 'ಭಾಗ್ಯವಂತೆದಿ' ಬಿಡುಗಡೆಯಾಯಿತು. 'ಲಾಂಛನ ನಿರ್ಮಿತಾ ಮೂವೀಸ್' ಬ್ಯಾನರ್ ಅಡಿಯಲ್ಲಿ ಟಿ.ಎ. ಶ್ರೀನಿವಾಸ್ ಅವರು ನಿರ್ಮಾಣ ಮಾಡಿದ ಈ ಚಿತ್ರವನ್ನು ನಿರ್ದೇಶನ ಮಾಡಿದವರು ಆರೂರು ಪಟ್ಟಾಭಿ. ಸದಾಶಿವ ಸಾಲ್ಯಾನ್, ಕೆ.ಎನ್. ಟೇಲರ್, ಸುಮಿತ್ರಾ, ರಾಮಚಂದ್ರ ಕೂಳೂರು, ವಿ.ಜಿ. ಪಾಲ್ ಅಭಿನಯಿಸಿದ್ದರು. ಉಪೇಂದ್ರ ಕುಮಾರ್ ಅವರ ಸಂಗೀತ ನಿರ್ದೇಶನವಿರುವ ಈ ಚಿತ್ರದ ಹಾಡುಗಳನ್ನು ಕನ್ನಡದ ಖ್ಯಾತ ಗಾಯಕರಾದ ಪಿ.ಬಿ. ಶ್ರೀನಿವಾಸ್, ಎಸ್.ಪಿ. ಬಾಲಸುಬ್ರಹ್ಮಣ್ಯಂ ಹಾಗೂ ವಾಣಿ ಜಯರಾಮ್ ಹಾಡಿದ್ದರು. ಚಿತ್ರ ಮಂದಿರದಲ್ಲಿ ಸುಮಾರು 8 ವಾರಗಳ ಕಾಲ ಪ್ರದರ್ಶನ ಕಂಡಿತು. ರಾಜ್ಯ ಸರಕಾರದ ವಿಶೇಷ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡ ಚಿತ್ರ ಇದಾಗಿದೆ. ಜೊತೆಗೆ ಚಿತ್ರದ ನಾಯಕ ನಟರಾದ ಸದಾಶಿವ ಸಾಲ್ಯಾನ್ ಮತ್ತು ಸಾಹಸ ನಿರ್ದೇಶಕರಾಗಿ ಶ್ರೀರಾಮ್ ಶೆಟ್ಟಿ ಅವರನ್ನು ಈ ಚಿತ್ರದ ಮೂಲಕ ತುಳು ಚಿತ್ರರಂಗಕ್ಕೆ ಪರಿಚಯಿಸಿದವರು ಟಿ.ಎ. ಶ್ರೀನಿವಾಸ್ ಅವರು.

ತುಳುವಿನ 25ನೇ ಚಿತ್ರ 'ಬಂಗಾರ್ ಪಟ್ಲೇರ್' ಈ ಚಿತ್ರ ತುಳುವಿನ ಮೊತ್ತಮೊದಲ ಈಸ್ಟ್‌ಮನ್ ಕಲರ್ ಸಿನಿಮಾ ಸ್ಕೋಪ್ ಚಿತ್ರವೂ ಹೌದು. ಈ ಚಿತ್ರ ಹಲವು ವಿಧಗಳಲ್ಲಿ ಪ್ರಮುಖ ಸ್ಥಾನ ಪಡೆದಿದೆ. ನಾರಾಯಣ ಶೆಟ್ಟಿಯವರ 'ಸತ್ಯ ಬತ್ತಲೆ' ನಾಟಕವನ್ನು ಸಿನಿಮಾವಾಗಿ ತೆರೆಗೆ ತಂದವರು ರಿಚರ್ಡ್ ಕ್ಯಾಸ್ಟಲಿನೊ. ಕನ್ನಡದ ಖ್ಯಾತ ನಟಿ ಸುಧಾರಾಣಿ, ವಾಮನ್ ರಾಜ್, ಸರೋಜಿನಿ ಶೆಟ್ಟಿ, ವಿ.ಜಿ. ಪಾಲ್, ಕಾಸರಗೋಡು ಚಿನ್ನಾ, ರೋಹಿದಾಸ್ ಕದ್ರಿ ಮುಂತಾದವರು ಅಭಿನಯಿಸಿದ್ದರು. ಈ ಚಿತ್ರವು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮನ್ನಣೆ ಪಡೆದುಕೊಂಡಿತು. ಅಲ್ಲದೇ ಉತ್ತಮ ಪ್ರಾದೇಶಿಕ ಚಿತ್ರದ ಪ್ರಶಸ್ತಿ, ರಾಷ್ಟ್ರಪತಿಯವರಿಂದ ಉತ್ತಮ ನಿರ್ದೇಶನ ಹಾಗೂ ಉತ್ತಮ ನಿರ್ಮಾಪಕ ಪ್ರಶಸ್ತಿ ಹಾಗೂ ರಾಜ್ಯ ಸರಕಾರದ ವಿಶೇಷ ಪ್ರಶಸ್ತಿಯನ್ನು ಗಳಿಸಿಕೊಟ್ಟ ಅದ್ವಿತೀಯ ಚಿತ್ರವಾಗಿದೆ. ಕಲ್ಕತ್ತಾದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಮಾರ್ಕೆಟಿಂಗ್ ವಿಭಾಗದಲ್ಲಿ ಪ್ರದರ್ಶನವಾಗಿ ತುಳು ಚಿತ್ರರಂಗಕ್ಕೆ ಜಾಗತಿಕ ಮಟ್ಟದ ಗುರುತನ್ನು ನೀಡಿತು.

ಈ ಚಿತ್ರ ಮಂಗಳೂರಿನ ಜ್ಯೋತಿ ಚಿತ್ರ ಮಂದಿರದಲ್ಲಿ 105 ದಿನಗಳ ಯಶಸ್ವಿ ಪ್ರದರ್ಶನಗಳನ್ನು ಕಂಡಿತು.

1990ರಲ್ಲಿ ತೆರೆ ಕಂಡ ದೇವದಾಸ್ ಕಾಪಿಕಾಡ್ ಅವರ ಜನಪ್ರಿಯ ನಾಟಕ 'ಬಲೇ ಚಾ ಪರ್ಕ'ವನ್ನು ಆಧರಿಸಿ 'ಸತ್ಯ ಓಲುಂಡು' ನಿರ್ಮಾಣವಾಯಿತು. ತುಳು ಸಿನಿಮಾಗಳನ್ನು

ನಿರ್ದೇಶಿಸಿ ದಾಖಲೆ ಮಾಡಿದ ಆರೂರು ಪಟ್ಟಾಭಿಯವರು ನಿರ್ದೇಶಿಸಿದ 9 ಚಿತ್ರಗಳಲ್ಲಿ ಕೊನೆಯ ಚಿತ್ರ ಇದಾಗಿದೆ. ಸದಾಶಿವ ಸಾಲ್ಯಾನ್ ಮತ್ತು ಎಸ್.ಎಸ್. ಪುತ್ರನ್ ನಿರ್ಮಿಸಿದ್ದರು.

ಸಮಾಜದ ವ್ಯವಸ್ಥೆಯ ವಿರುದ್ಧ ಸಿಡಿದೇಳುವ ಪ್ರತಿಭಟನೆ, ಹೋರಾಟದ ದನಿಯಿಂದ ಕೂಡಿದ ಚಿತ್ರ 'ಮಾರಿಬಲೆ'. ಈ ಚಿತ್ರ 1996ರಲ್ಲಿ ತೆರೆ ಕಂಡ ಕೃಷ್ಣಪ್ಪ ಉಪ್ಪೂರುರವರ 'ಹೌದ್ರಾಯನ ವಾಲಗ' ಎಂಬ ನಾಟಕಾಧಾರಿತ ಸಿನಿಮಾವಾಗಿದೆ. ಅವರದೇ ನಿರ್ದೇಶನದಲ್ಲಿ ಮೂಡಿ ಬಂದ ಚಿತ್ರಕ್ಕೆ, ಕುಂಬ್ರ ರಘುನಾಥ ರೈ ಅವರ ನಿರ್ಮಾಣವಿತ್ತು. ನೆಲೆ ಕಳೆದುಕೊಳ್ಳುತ್ತಿರುವ ಸಾಂಸ್ಕೃತಿಕ ಪರಂಪರೆ, ಬದಲಾಗುತ್ತಿರುವ ಸಾಮಾಜಿಕ, ಆರ್ಥಿಕ ವ್ಯವಸ್ಥೆ, ನಗರೀಕರಣ ಇವೆಲ್ಲವೂ ಸಾಂಕೇತಿಕವಾಗಿ, ಕಲಾತ್ಮಕವಾಗಿ ಈ ಚಿತ್ರದಲ್ಲಿ ಬಿಂಬಿತವಾಗಿದೆ. ನಂದಿನಿ, ವಾಮನ್‌ರಾಜ್, ಸಾಯಿ ಬಲ್ಲಾಳ್ ಸರೋಜಿನಿ ಶೆಟ್ಟಿ, ರೇಮಂಡ್ ಡಿಸೋಜಾ, ವಿ.ಜಿ. ಪಾಲ್ ಮುಂತಾದವರ ಅಭಿನಯದಲ್ಲಿ ಮೂಡಿ ಬಂದ ಚಿತ್ರಕ್ಕೆ ವಿ. ಮನೋಹರ್ ಅವರ ಸಂಗೀತ ನಿರ್ದೇಶನವಿತ್ತು.

2002ರಲ್ಲಿ ತುಳು ಜನಪ್ರಿಯ ನಾಟಕ, 'ಒಂಜಿ ನಿಮಿಷ' ಎಂಬುವುದು 'ಒಂತೆ ಅಡ್ಜಸ್ಟ್ ಮಲ್ಪಿ' ಸಿನಿಮಾವಾಗಿ ತೆರೆ ಕಂಡಿತು. ಕೆದಂಬಾಡಿ ಪ್ರೇಮನಾಥ ರೈ ಅವರ ನಿರ್ದೇಶನದಲ್ಲಿ, ಪ್ರಜ್ವಲ್ ಬ್ರಹ್ಮಾವರ ಅವರ ನಿರ್ಮಾಣದಲ್ಲಿ ತಯಾರಾದ ಈ ಚಿತ್ರದಲ್ಲಿ ಭವ್ಯಶ್ರೀ ರೈ, ಸದಾಶಿವ ಸಾಲ್ಯಾನ್, ಸರೋಜಿನಿ ಶೆಟ್ಟಿ, ಮಾಧವ ಕೆ. ಶಕ್ತಿ ನಗರ ಮುಂತಾದ ಕಲಾವಿದರು ನಟಿಸಿದ್ದರು.

ವಿಮರ್ಶಾತ್ಮಕವಾಗಿ ಮೆಚ್ಚುಗೆಯನ್ನು ಪಡೆದ ಚಿತ್ರ 'ಸುದ್ಧ' (2005). ಇದು ಡಿಜಿಟಲ್ ರೂಪದಲ್ಲಿ ತಯಾರಾದ ಮೊದಲ ಚಿತ್ರವೂ ಹೌದು. ರಾಮಚಂದ್ರ ಪಿ.ಎನ್. ಅವರ ನಿರ್ದೇಶನದ ಈ ಚಿತ್ರ ನಾರಾಯಣ ನಂದಳಿಕೆ ಅವರ 'ಬೊಜ್ಜ' ನಾಟಕ ಆಧಾರಿತ ಚಿತ್ರವಾಗಿದೆ. ಈ ಚಲನಚಿತ್ರವು 8ನೇ ವರ್ಷದ ಚಲನಚಿತ್ರೋತ್ಸವದಲ್ಲಿ ಅತ್ಯುತ್ತಮ ಭಾರತೀಯ ಚಿತ್ರ ಪ್ರಶಸ್ತಿ ಪಡೆಯಿತು. ಸುರೇಂದ್ರ ಕುಮಾರ್, ಮೋಹನ್ ಮಾರ್ನಾಡ್, ರಾಮಚಂದ್ರ ಪಿ.ಎನ್. ನಿರ್ಮಾಣದಲ್ಲಿ ಮೂಡಿ ಬಂದ ಈ ಚಿತ್ರ ಓಸಿಯನ್ ಅಂತರರಾಷ್ಟ್ರೀಯ ವಿಭಾಗದಲ್ಲಿ 'ಉತ್ತಮ ಚಿತ್ರ' ಎಂಬ ಪ್ರಶಸ್ತಿಯನ್ನು ಪಡೆದ ಮೊದಲ ಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಚಿತ್ರವು ಒಕ್ಕಲು ಪದ್ಧತಿಯ ಹಲವು ಮುಖಗಳನ್ನು ಅನಾವರಣಗೊಳಿಸುತ್ತದೆ. ಸಾಂಸ್ಕೃತಿಕ ಬದಲಾವಣೆ, ನಗರೀಕರಣ, ಹೊಸ ಸಂಸ್ಕೃತಿಯ ವ್ಯಾಮೋಹ ಇವುಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಈ ಚಿತ್ರದ ವಿಶೇಷ ಪ್ರದರ್ಶನವನ್ನು ಚಿತ್ರಭಾರತಿಯ ಟಿ.ಎ. ಶ್ರೀನಿವಾಸ್ ಅವರು 2006ರಲ್ಲಿ ಮಂಗಳೂರಿನ ಪುರಭವನದಲ್ಲಿ ಆಯೋಜಿಸಿ ಚಿತ್ರದ ಕಲಾವಿದರನ್ನು ಸನ್ಮಾನಿಸಿದ್ದರು.

ಇತ್ತೀಚಿನ ದಿನಗಳಲ್ಲಿ ತುಳು ಹೊಸ ಚಿತ್ರಕ್ಕೆ ಗಂಭೀರ ಪ್ರಯತ್ನಗಳು ನಡೆಯುತ್ತಿವೆ. ಅದರಲ್ಲೂ ತುಳು ರಂಗಭೂಮಿ ವೃತ್ತಿಪರ ತಂಡಗಳು ಮಂಡಿಸಿದ ಕೆಲವು ಚಿತ್ರಗಳು ಮಹೋನ್ನತ ಯಶಸ್ಸನ್ನು ಕಂಡಿದೆ. ಈ ಕೆಳಗೆ ನೀಡಿರುವ ಚಿತ್ರಗಳ ಪಟ್ಟಿಯಲ್ಲಿ ನಾಟಕಾಧರಿತ ತುಳು ಸಿನಿಮಾಗಳನ್ನು ಗುರುತಿಸಬಹುದು.

ಕ್ರ ಸ.	ಸಿನಿಮಾದ ಹೆಸರು	ನಿರ್ದೇಶಕರು	ನಿರ್ಮಾಣ	ವರ್ಷ	ನಾಟಕ
1	ಬಿಸತ್ತಿ ಬಾಬು	ಆರೂರು ಪಟ್ಟಾಭಿ	ಎಂ.ವೈ. ಕೋಲಾ	1972	ರಮಾನಂದ ಚೂರ್ಯರವರ ನಾಟಕಾಧಾರಿತ
2	ಕೋಟಿ ಚೆನ್ನಯ	ವಿಶು ಕುಮಾರ್	ಮುದ್ದು ಸುವರ್ಣ	1973	ವಿಶುಕುಮಾರ್ ಅವರ ಕೋಟಿ ಚೆನ್ನಯ ತುಳು ನಾಟಕಾಧಾರಿತ
3	ಕಾಸ್‌ದಾಯೆ ಕಂಡನಿ	ಗೀತಪ್ರಿಯ	ಆನಂದ ಶೇಖರ್	1973	ಕೆ.ಎನ್. ಟೇಲರ್ ಅವರ ಕಾಸ್‌ದಾಯೆ ಕಂಡನಿ ನಾಟಕಾಧಾರಿತ
4	ಉಡಲ್ದ ತುಡರ್	ಎಂ.ವಾಸುದೇವನ್	ಶಮೀನ್ ಮತ್ತು ಅನ್ವರ್ ಬೇಗಂ	1973	ಸೀತರಾಮ್ ಕುಲಾಲ್ ಅವರ 'ಸತ್ಯೊನೇ ದೇವೆರ್ ನಾಟಕಾಧಾರಿತ ಮತ್ತು 'ಹೃದಯ ಜ್ಯೋತಿ' ಎಂಬ ಕನ್ನಡ ನಾಟಕಾಧಾರಿತ
5	ಯಾನ್ ಸನ್ಯಾಸಿ ಆಪೆ	ಗೀತಪ್ರಿಯ	ಎ. ವಿಶ್ವನಾಥ್	1974	ಕೆ.ಎನ್. ಟೇಲರ್‌ರವರ ಯಾನ್ ಸನ್ಯಾಸಿ ಆಪೆ ನಾಟಕಾಧಾರಿತ
6	ಬಯ್ಯಮಲ್ಲಿಗೆ	ಆರೂರು ಪಟ್ಟಾಭಿ	ಸಂಜೀವ ದಂಡೆಕೇರಿ	1974	ಸಂಜೀವ ದಂಡೆಕೇರಿ ಅವರ ಬಯ್ಯಮಲ್ಲಿಗೆ ನಾಟಕಾಧಾರಿತ
7	ಏರ್ ಮಲ್ತಿನ ತಪ್ಪು	ಕೆ.ಎನ್. ಟೇಲರ್	ಕೆ.ಎನ್. ಟೇಲರ್	1974	ಕೆ.ಎನ್. ಟೇಲರ್ ಅವರ ಏರ್ ಮಲ್ತಿನ ತಪ್ಪು ನಾಟಕಾಧಾರಿತ
8	ಬೊಳ್ಳಿದೋಟ	ಆರೂರು ಪಟ್ಟಾಭಿ	ಸಂಜೀವ ದಂಡೆಕೇರಿ	1977	ಸಂಜೀವ ದಂಡೆಕೇರಿರವರ 'ಗಂಗಾರಾಮ್' ನಾಟಕಾಧಾರಿತ ಚಿತ್ರ
9	ಭಾಗ್ಯವಂತೆದಿ	ಆರೂರು ಪಟ್ಟಾಭಿ	ಟಿ.ಎ. ಶ್ರೀನಿವಾಸ್	1981	ಕೆ.ಎನ್. ಟೇಲರ್ ಅವರ ಕಂಡನಿ ಬುಡೆದಿ ನಾಟಕಾಧಾರಿತ ಚಿತ್ರ
10	ಸತ್ಯ ಓಲುಂಡು	ಆರೂರು ಪಟ್ಟಾಭಿ	ಸದಾಶಿವ ಸಾಲ್ಯಾನ್, ಎಸ್.ಎಸ್. ಪುತ್ರನ್	1990	ದೇವದಾಸ್ ಕಾಪಿಕಾಡ್‌ರವರ 'ಬಲೇ ಚಾಪರ್ಕ' ನಾಟಕಾಧಾರಿತ ಚಿತ್ರ
11	ಬಂಗಾರ್ ಪಟ್ಲೇರ್	ರಿಚರ್ಡ್ ಕ್ಯಾಸ್ಟಲಿನೊ	ರಿಚರ್ಡ್ ಕ್ಯಾಸ್ಟಲಿನೊ	1993	ನಾರಾಯಣ ಶೆಟ್ಟಿ ಅವರ 'ಸತ್ಯ ಬತ್ತಲೆ' ನಾಟಕ ಆಧಾರಿತ
12	ಮಾರಿಬಲೆ	ಕೃಷ್ಣಪ್ಪ ಉಪ್ಪೂರು	ರಘುನಾಥ ರೈ	1996	ಕೃಷ್ಣಪ್ಪ ಉಪ್ಪೂರು ಅವರ 'ಹೌದ್ರಾಯನ ವಾಲಗ' ಎಂಬ ನಾಟಕಾಧಾರಿತ ಚಿತ್ರ
13	ಒಂತೆ ಅಡ್ಜೆಸ್ಟ್ ಮಲ್ಪಿ	ಕೆದಂಬಾಡಿ ಪ್ರೇಮನಾಥ್	ಪ್ರಜ್ವಲ್ ಬ್ರಹ್ಮಾವರ	2002	'ಒಂಜಿ ನಿಮಿಷ' ನಾಟಕ ಆಧಾರಿತ
14	ಸುದ್ಧ	ರಾಮಚಂದ್ರ ಪಿ.ಎನ್.	ಮೋಹನ್ ಮಾರ್ನಾಡ್, ಸುರೇಂದ್ರ ಕುಮಾರ್, ರಾಮಚಂದ್ರ ಪಿ.ಎನ್	2005	ನಾರಾಯಣ ನಂದಳಿಕೆ ಅವರ 'ಬೊಜ್ಜ' ನಾಟಕ ಆಧಾರಿತ

ತುಳು ಸಿನಿಮಾದ ಮೇಲೆ ಕನ್ನಡ ಹಾಗೂ ಪರಭಾಷಾ ಚಿತ್ರದ ಪ್ರಭಾವ

ಕನ್ನಡ ಸಿನಿಮಾ ಆರಂಭದ ಬಹುಕಾಲದ ನಂತರ ತುಳು ಸಿನಿಮಾ ಬೆಳಕಿಗೆ ಬಂದಿರುವುದನ್ನು ಕಾಣುತ್ತೇವೆ. ತುಳುನಾಡಿನ ಜನರು ಹೆಚ್ಚಾಗಿ ದ್ವಿಭಾಷಿಕ (ತುಳು, ಕನ್ನಡ)ರಾದ ಕಾರಣ ಕನ್ನಡ ಸಿನಿಮಾದ ಬಗ್ಗೆ ಒಲವು ಹಾಗೂ ಅದರ ಪ್ರಭಾವವು ತುಳು ಸಿನಿಮಾ ಜಗತ್ತಿನ ಮೇಲೆ ಬೀರಿರುವುದನ್ನು ಕಾಣುತ್ತೇವೆ. ಈ ನೆಲೆಯಿಂದ ತುಳು ಸಿನಿಮಾದ ಮೇಲೆ ಕನ್ನಡ ಹಾಗೂ ಪರಭಾಷಾ ಸಿನಿಮಾದ ಪ್ರಭಾವದ ಕುರಿತಾಗಿ ಇಲ್ಲಿ ಫಲಿತಗಳನ್ನು ದಾಖಲಿಸಲಾಗುವುದು.

ತುಳು ಚಲನಚಿತ್ರ ನಿರ್ಮಾಣ ಮತ್ತು ನಿರ್ದೇಶನ ಕಾರ್ಯದಲ್ಲಿ ತಮ್ಮನ್ನು ಮೊದಲಾಗಿ ತೊಡಗಿಸಿಕೊಂಡವರು ತುಳುನಾಡಿನವರಾಗಿರದೆ, ಕೊಡಗಿನ ಎಸ್.ಆರ್. ರಾಜನ್ ಆಗಿರುತ್ತಾರೆ. ತುಳು ಸಿನಿಮಾಗಳ ಮೇಲಿನ ಪರಭಾಷಾ ಸಿನಿಮಾಗಳ ಪ್ರಭಾವವು ಗೀತೆಗಳಲ್ಲಿ, ಹಾಡುಗಳಲ್ಲಿ, ಪಾತ್ರಗಳ ಸರಳ ವರ್ಗೀಕರಣದಲ್ಲಿ, ಕತೆಗೆ ಒದಗುವ ಸಿದ್ಧ ತಿರುವುಗಳಲ್ಲಿ, ಪ್ರೀತಿ–ಪ್ರೇಮಕ್ಕೆ ಸಂಬಂಧಿಸಿದ ಸರಳ ಗ್ರಹಿಕೆಗಳಲ್ಲಿ, ಮೌಲ್ಯ ರಚನೆಯನ್ನು ತೀರಾ ಸರಳವಾಗಿ ನಿರ್ಮಿಸುವಲ್ಲಿ ಪರಭಾಷಾ ಸಿನಿಮಾ ಪ್ರಭಾವದಿಂದ ಕೂಡಿದ್ದರೂ ತುಳು ಸಿನಿಮಾ ತನ್ನದೇ ವಿಕಾಸವನ್ನು ಸಾಧಿಸಿತು.

ತುಳು ಭಾಷೆಗೆ ಸಂಬಂಧಿಸಿದ ಸಾಮಾಜಿಕ ಮತ್ತು ಆರ್ಥಿಕ ವಿನ್ಯಾಸದ ಹಿನ್ನಲೆಯಲ್ಲಿ ಇತರ ಸಿನಿಮಾಗಳ ಮೇಲಿನ ಪ್ರಭಾವವನ್ನು ಪರಿಶೀಲಿಸಬಹುದು. ಪರಭಾಷಾ ಸಿನಿಮಾ ಪ್ರಭಾವ ಎಂಬುವುದು ಅದರಿಂದ ಇಷ್ಟೇ ಪಡೆದುದು ಎಂಬಷ್ಟು ಸರಳ ರೇಖಾತ್ಮಕವಿಲ್ಲ. ತುಳು ಸಿನಿಮಾ ಪಡೆಯುವ ಇಂತಹ ಪ್ರಭಾವವು ಒಂದು ಬಗೆಯ ಚಲನಶೀಲತೆಯೇ ಆಗಿರುತ್ತದೆ.

ತುಳುವರಲ್ಲಿ ಪ್ರಬಲ ಆರ್ಥಿಕ ವಿನ್ಯಾಸ ಕಂಡು ಬರುವುದು ಮುಂಬಯಿಯಂತಹ ನಗರಗಳಿಗೆ ವಲಸೆ ಹೋದವರಲ್ಲಿ ಹಾಗೂ ಕರಾವಳಿಯ ಕೆಲವೇ ಪ್ರತಿಷ್ಠಿತ ಮನೆತನಗಳಲ್ಲಿ. ಹೀಗಾಗಿ ಭಾಷೆಯ ಪರವಾಗಿ ನಿಲ್ಲಲು ಇನ್ನೊಂದು ಬಲಿಷ್ಠ ಆರ್ಥಿಕತೆ ಇರಲಿಲ್ಲ. ಭಾಷೆಯ ಮೂಲಕ ಚಿಂತನೆ ಬೆಳೆಸುವುದು ಕನ್ನಡದಲ್ಲಿ ಸಂಭವಿಸಿತು. ತುಳುವರು ಓದುವುದು, ಬರೆಯುವುದು ಎಲ್ಲ ವ್ಯವಹಾರಗಳೂ ಕನ್ನಡದಲ್ಲೇ ಮಾಡಬೇಕಾದ ಪರಿಸ್ಥಿತಿಯಲ್ಲಿ ಪ್ರಾದೇಶಿಕ ಭಾಷೆಯಾಗಿರುವ ತುಳು ಸಿನಿಮಾಗಳು ಮಹಾ ಬಿರುಗಾಳಿಯಂತಹ ಪರಭಾಷಾ ಸಿನಿಮಾದ ಎದುರು ನಿಂತು ಬಾಳಲು ಸಾಧ್ಯವಿರಲಿಲ್ಲ. ಯಕ್ಷಗಾನಕ್ಕೆ ಸಾಧ್ಯವಾಗುವಂತಹ ದೇಸಿಯ ಅನನ್ಯತೆಯ ಬೇರುಗಳು ತುಳು ಸಿನಿಮಾಗಳಿಗೆ ಇಲ್ಲವಾಗಿದೆ. ಪರಭಾಷಾ ಸಿನಿಮಾಗಳನ್ನು ನೇರವಾಗಿ ಎದುರಿಸಲು ಸಾಧ್ಯವಿಲ್ಲದ ಸಂದರ್ಭದಲ್ಲಿ ತುಳು ಸಿನಿಮಾಗಳು ಪರಭಾಷಾ ಸಿನಿಮಾವನ್ನು ಎದುರಿಸುವ ಬದಲು ಅದನ್ನು ಕೊಂಚ ಒಳಗೊಳ್ಳುವ ಮೂಲಕ ಜನರನ್ನು ಸೆಳೆಯಲು ಪ್ರಯತ್ನಿಸಿದವು.

ಒಂದು ಭಾಷೆ ಅಥವಾ ಸಮಾಜವು ಕೊಡು–ಕೊಳ್ಳುವಿಕೆಗೆ ತನ್ನನ್ನು ತಾನು ತೆರೆದುಕೊಂಡಿದ್ದರೆ ಅಲ್ಲಿ ಕ್ರೀಯಾಶೀಲತೆ ಇರುತ್ತದೆ. ತುಳು ಸಿನಿಮಾ ಹಾಗೂ ಕನ್ನಡ

ಸಿನಿಮಾ ರಂಗ ಈ ನೆಲೆಯಲ್ಲಿ ತಮ್ಮೊಳಗೆ ಹಲವಾರು ಕೊಡು-ಕೊಳ್ಳುವಿಕೆಗೆ ಸಾಕ್ಷಿಯಾಗಿದೆ. ಮುಖ್ಯವಾಗಿ ತುಳು ಭಾಷೆಯ ಬಳಕೆ, ತುಳುನಾಡಿನ ಸಂಸ್ಕೃತಿಯ ಅನಾವರಣವನ್ನು ಬಹುತೇಕ ಕನ್ನಡದ ಸಿನಿಮಾಗಳಲ್ಲಿ ಕಾಣುತ್ತೇವೆ. ಹಾಗೆಯೇ ಕನ್ನಡ ಸಿನಿಮಾ ರಂಗದಲ್ಲಿ ಅದೆಷ್ಟೋ ತುಳುನಾಡಿನ ತಾರೆಯರು ಮಿಂಚುತ್ತಿದ್ದಾರೆ. ಅಲ್ಲದೆ ವಿನಯ ಪ್ರಸಾದ್, ಶೃತಿ, ಸುಧಾರಾಣಿ, ದಿಗಂತ್, ಟೆನ್ನಿಸ್ ಕೃಷ್ಣ, ಶ್ರೀನಗರ ಕಿಟ್ಟಿ, ಸುನೀತಾ, ಗೀತಾ, ಉಮಾಶ್ರೀ, ಪದ್ಮಜಾ ರಾವ್ ಮುಂತಾದ ಹೆಸರಾಂತ ಕನ್ನಡ ಸಿನಿಮಾ ತಾರೆಯರು ತುಳು ಚಿತ್ರಗಳಲ್ಲಿ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಖ್ಯಾತ ನಟಿ ಜಯಮಾಲರವರು ಕನ್ನಡ ಚಿತ್ರರಂಗಕ್ಕೆ ಪರಿಚಯವಾದುದು 'ಕಾಸ್‌ದಾಯೆ ಕಂಡನಿ' ಎಂಬ ತುಳು ಚಿತ್ರದಿಂದ.

ಕನ್ನಡ ಹಾಗೂ ಪರಭಾಷಾ ಚಿತ್ರದ ಪ್ರಭಾವವು ತುಳು ಸಿನಿಮಾ ರಂಗದ ಬೆಳವಣಿಗೆಯಲ್ಲಿ ಸಹಕಾರಿಯಾಗಿದೆ ಎಂಬುವುದು ಒಂದು ಕಾರಣವಾದರೂ ಅಷ್ಟೇ ಹಿನ್ನಡೆಯುನ್ನು ಕೂಡಾ ಅನುಭವಿಸಿದೆ. ತುಳುನಾಡಿನ ಜನರು ಸಾಮಾನ್ಯವಾಗಿ ಬಹುಭಾಷಿಕರಾದುದರಿಂದ ಅವರ ಒಲವು ಬಹುಭಾಷಾ ಸಿನಿಮಾದ ಕಡೆ ಹರಿಯುವುದು ಅಷ್ಟೇ ಸಹಜ. ಆದರೂ ಕನ್ನಡ, ಹಿಂದಿ ಹೀಗೆ ಬಹುಭಾಷಾ ಚಿತ್ರ ಪ್ರದರ್ಶನಗಳಂತಹ ಅನೇಕ ಸಮಸ್ಯೆಗಳನ್ನು ಎದುರಿಸಿಯೂ ಸಹ ತುಳು ಸಿನಿಮಾ ರಂಗ ಫಿನಿಕ್ಸ್‌ನಂತೆ ಮೇಲೆದ್ದು ಶರವೇಗದಲ್ಲಿ ಬೆಳೆಯುತ್ತಿದೆ. ಮಾತೃಭಾಷೆಗೆ ಒಂದು ಒಳ್ಳೆಯ ಚಿತ್ರ ಕೊಡಬೇಕೆಂದು ಮುಂದೆ ಬರುತ್ತಿರುವ ನಿರ್ಮಾಪಕರು ಇಂದು ಹೆಚ್ಚಾಗುತ್ತಿರುವುದು ಸಮಧಾನದ ಸಂಗತಿಯಾಗಿದೆ.

ಇಂದು ತುಳು ಚಿತ್ರರಂಗಕ್ಕೆ ಹೊಸತನ ನೀಡಲು ಹಂಬಲಿಸುತ್ತಿರುವ ನಿರ್ದೇಶಕರು ಕೂಡಾ ಸಿಗುತ್ತಿದ್ದಾರೆ. ಹೊಸ ತಂತ್ರಜ್ಞಾನ, ಗುಣಮಟ್ಟ, ಕಲಾವಿದರ ಕೊರತೆಯೂ ಇಲ್ಲ. ಆದರೂ ತುಳು ಸಿನಿಮಾಗಳಿಗೆ ಅಡ್ಡಿಯಾದದ್ದು ಮಾರುಕಟ್ಟೆ. ಸೀಮಿತ ಮಾರುಕಟ್ಟೆಯಾದುದರಿಂದ ಚಿತ್ರ ಮಾಡಲು ಕೆಲವರು ಹಿಂದೇಟು ಹಾಕುತ್ತಿದ್ದಾರೆ. ತುಳು ಚಿತ್ರಗಳು ಕರ್ನಾಟಕ ಪ್ರಾದೇಶಿಕ ಭಾಷಾ ಸಿನಿಮಾಗಳು ಆಗಿದ್ದರೂ ಕೂಡಾ ಯಾವುದೇ ರಿಯಾಯಿತಿಯನ್ನು ವಾಣಿಜ್ಯ ಮಂಡಳಿ ಕೊಡುತ್ತಿಲ್ಲ. ತುಳು ಚಿತ್ರಗಳು ಕರಾವಳಿ ಹಾಗೂ ಕೆಲವು ಸೀಮಿತ ವ್ಯಾಪ್ತಿಯಲ್ಲಿ ಮಾತ್ರ ಪ್ರದರ್ಶನಗೊಳ್ಳುತ್ತವೆ. ಕನ್ನಡ ಚಿತ್ರಗಳು ಕರ್ನಾಟಕದಾದ್ಯಂತ ತೆರೆ ಕಾಣುತ್ತವೆ. ಲಾಭದ ಲೆಕ್ಕಾಚಾರದಲ್ಲಿ ವ್ಯತ್ಯಾಸವಿರುತ್ತದೆ. ಹೀಗಿದ್ದರೂ ಕೂಡಾ ಕನ್ನಡ ಮತ್ತು ಪ್ರಾದೇಶಿಕ ಚಿತ್ರಗಳ ನೋಂದಣಿ ಮಾಡಬೇಕಾದರೆ ಒಂದೇ ರೀತಿಯ ಹಣವನ್ನು ಕರ್ನಾಟಕ ಚಲನಚಿತ್ರ ಮಂಡಳಿಗೆ ತೆರಬೇಕಾದ ಅನಿವಾರ್ಯತೆ ಇದೆ.

ಹೊಸ ಬ್ಯಾನರ್‌ನಲ್ಲಿ ಸಿನಿಮಾ ಮಾಡುವುದಾದರೆ, ಮೊದಲು ವಾಣಿಜ್ಯ ಮಂಡಳಿ ಹಾಗೂ ಚಲನಚಿತ್ರ ನಿರ್ಮಾಪಕರ ಸಂಘಕ್ಕೆ ಹಣ ನೀಡಿ ಬ್ಯಾನರ್ ಹಕ್ಕು ಪಡೆಯಬೇಕು. ಬಳಿಕ ಬೇರೆಯೇ ಹಣ ಪಾವತಿ ಮಾಡಿ ಹೊಸ ಚಿತ್ರದ ಹೆಸರು ನೋಂದಣಿ ಮಾಡಬೇಕು. ಬೇರೆ ಬ್ಯಾನರ್‌ನಲ್ಲಿ ಸಿನಿಮಾ ಮಾಡುವುದಾದರೆ ಹೊಸ ಬ್ಯಾನರ್‌ಗಾಗಿ ಹಣ ಕಟ್ಟಬೇಕಾಗಿಲ್ಲ. ಆದರೆ ಬೇರೆ ಬ್ಯಾನರ್‌ನಲ್ಲಿ ಇಷ್ಟೇ ಸಿನಿಮಾ ಮಾಡಬೇಕು ಎಂಬ ನಿಯಮವೂ ಜಾರಿಯಲ್ಲಿದೆ. ನೋಂದಣಿ ಮಾಡಿದ ಚಿತ್ರಗಳ ಹೆಸರನ್ನು ಪ್ರತಿವರ್ಷ ಹಣ ಪಾವತಿ ಮಾಡಿ ಪುನರ್ ನವೀಕರಣ ಮಾಡಬೇಕಾಗುತ್ತದೆ.

ಈ ತರಹ ನೀತಿಗಳು ಕನ್ನಡ ಚಿತ್ರರಂಗಗಳ ಬೆಳವಣಿಗೆಗೆ ಅನುಗುಣವಾಗಿ ಮಾಡಲಾಗಿರುವುದರಿಂದ ಸಣ್ಣ ಮಾರುಕಟ್ಟೆ ಹೊಂದಿರುವ ತುಳು ಚಿತ್ರಗಳ ನಿರ್ಮಾಪಕರುಗಳಿಗೆ ತಲೆನೋವಾಗಿ ಪರಿಣಮಿಸಿದೆ. ಆದ್ದರಿಂದ ತುಳು ಚಿತ್ರಗಳು ಪ್ರತ್ಯೇಕ ಚಲನಚಿತ್ರ ವಾಣಿಜ್ಯ ಮಂಡಳಿ ಹೊಂದುವುದು ಅನಿವಾರ್ಯವಾಗಿದೆ. ಇದರಿಂದ ಏನೇ ಸಮಸ್ಯೆಗಳಿದ್ದರೂ ತಕ್ಷಣ ಬಗೆಹರಿಸಿಕೊಳ್ಳಬಹುದು. ಪ್ರೋತ್ಸಾಹಕರು, ನಿರ್ಮಾಪಕರು, ತಾಂತ್ರಿಕ ವರ್ಗ ಎಲ್ಲವೂ ಜಾಸ್ತಿಯಾಗುವುದಲ್ಲದೇ ಮುಂದೊಂದು ದಿನ ತುಳು ಚಿತ್ರಗಳ ಜೊತೆ ತುಳು ಭಾಷೆಯೂ ಬೆಳೆಯುವುದು.

"ತುಳುವಿನ ಚಲನಚಿತ್ರಗಳು ಸೀಮಿತ ಪ್ರದರ್ಶನ ಅವಕಾಶದಿಂದಾಗಿ ಲಾಭ ಗಳಿಸಲಾರದೆ ಹಿಂದೆ ಬಿದ್ದಿವೆ. ಈ ಕ್ಷೇತ್ರಗಳಲ್ಲೂ ಸರಕಾರದ ನೆರವು ನಮ್ಮ ತುಳು ನಾಟಕ, ತುಳು ಸಿನಿಮಾಗಳಿಗೆ ಹೆಚ್ಚು ಔದಾರ್ಯವನ್ನು ತೋರಬೇಕಾಗಿದೆ. ತುಳು ಸಿನಿಮಾಗಳು ಕೇವಲ ಒಂದೆರಡು ಜಿಲ್ಲೆಗಳಲ್ಲಿ ನಡೆಯುವುದರಿಂದ ಇವುಗಳಿಗೆ ಹೆಚ್ಚಿನ ಸಹಾಯಧನ ಹಾಗೂ ಮನೋರಂಜನಕಾರ ವಿನಾಯಿತಿಯ ಸೌಲಭ್ಯ ಒದಗಿಸಲು ಸರಕಾರ ಮುಂದೆ ಬರಬೇಕಾಗಿದೆ. ಇದು ಪ್ರಾದೇಶಿಕ ಸಂಸ್ಕೃತಿಯ ದೃಷ್ಟಿಯಿಂದ ಸೂಕ್ತವೇ ಆಗಿದೆ" ಎಂದು ಡಾ. ವೀರೇಂದ್ರ ಹೆಗ್ಗಡೆ ಅವರು ತುಳು ಸಾಹಿತ್ಯ ಚರಿತ್ರೆಯ 'ತುಳುನಾಡು : ಸತ್ಯ ಧರ್ಮ ಸಾಹಸದ ಬೀಡು' ಎಂಬ ಲೇಖನದಲ್ಲಿ ಹೇಳಿರುವ ಮಾತನ್ನು ಈ ಸಂದರ್ಭದಲ್ಲಿ ನೆನೆಯಬೇಕು.

ಕಾದಂಬರಿ ಆಧಾರಿತ ತುಳು ಸಿನಿಮಾ

ಸಾಮಾನ್ಯವಾಗಿ ಕಲಾ ಮಾಧ್ಯಮವು ಆಯಾ ಪ್ರಾದೇಶಿಕ ಸಂಸ್ಕೃತಿಯನ್ನು, ಪರಂಪರೆಯನ್ನು ಬಿಂಬಿಸುತ್ತದೆ. ಇದಕ್ಕೆ ಸಿನಿಮಾವು ಹೊರತಾಗಿಲ್ಲ. ಹಾಗಾಗಿ ಇಲ್ಲಿನ ಜನಪದ ಕಲೆಗಳಾದ ಭೂತಾರಾಧನೆ, ಜನಪದ ಕುಣಿತಗಳು, ಜನಪದ ಕ್ರೀಡೆಗಳು ಸಿನಿಮಾದೊಳಗೆ ಸಮ್ಮಿಳಿತವಾದುದನ್ನು ನಾವು ಕಾಣುತ್ತೇವೆ. ತುಳುವಿನಲ್ಲಿ ಬಹುತೇಕ ಚಿತ್ರಗಳು ಸಾಮಾಜಿಕ ಸಮಸ್ಯೆಗಳನ್ನು ಇಂದಿಗೂ ಪ್ರತಿನಿಧಿಸುತ್ತವೆ. ವರದಕ್ಷಿಣೆಯ ಮಹಾಭೂತ, ಸಾಮಾಜಿಕ ಅಸಮಾನತೆಯ ಸಂಗತಿಗಳು ಆರಂಭದ ತುಳು ಸಿನಿಮಾಗಳಿಗೆ ಮುಖ್ಯವಾಗಿತ್ತು.

ತುಳು ಸಿನಿಮಾಗಳು ಹೆಚ್ಚಾಗಿ ಹಾಸ್ಯಪ್ರಧಾನವಾದವುಗಳು ಎಂಬ ವಿಮರ್ಶೆಗಳಿವೆ. ತುಳುವರು ಹಾಸ್ಯಪ್ರಿಯರಾಗಿರುವುದೇ ಇದಕ್ಕೆ ಮೂಲ ಕಾರಣವು ಇರಬಹುದು. ಸಿನಿಮಾವಲ್ಲದೇ ತುಳುನಾಡಿನಲ್ಲಿ ಪ್ರದರ್ಶಿತವಾಗುವ ನಾಟಕಗಳು ಕೂಡಾ ಹಾಸ್ಯ ಪ್ರಧಾನವಾಗಿರುವುದೇ ಇದಕ್ಕೆ ಸಾಕ್ಷಿ. ತುಳು ಸಿನಿಮಾಗಳು ಮೇಲ್ನೋಟಕ್ಕೆ ಹಾಸ್ಯಪ್ರಧಾನವಾಗಿ ಕಂಡರೂ, ಸಾಮಾಜಿಕ ನಡವಳಿಕೆಯನ್ನು ಬಿಂಬಿಸುವಲ್ಲಿ ಯಶಸ್ವಿಯಾಗಿದೆ ಎಂದರೆ ತಪ್ಪಾಗಲಾರದು. ಎಷ್ಟೋ ಸಂದರ್ಭಗಳಲ್ಲಿ ಚಿತ್ರಕತೆಯೇ ಸಿನಿಮಾವನ್ನು ಗೆಲ್ಲಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಹಾಗಾಗಿ ಒಂದು ಸಿನಿಮಾ ನಿರ್ಮಾಣದಲ್ಲಿ ಮೊದಲ ಪ್ರಾಧಾನ್ಯತೆ ಚಿತ್ರಕಥೆಗೆ. ಈಗಾಗಲೇ ಜನಪ್ರಿಯತೆ ಪಡೆದ ನಾಟಕ, ಕತೆ, ಕಾದಂಬರಿಗಳಿಗೆ ನಿರ್ಮಾಪಕರು ಮೊರೆ ಹೋಗುವುದನ್ನು ಕಾಣುತ್ತೇವೆ. ಹೀಗೆ ಕಾದಂಬರಿ ಆಧಾರಿತವಾಗಿ ನಿರ್ಮಾಣವಾದ ತುಳು ಸಿನಿಮಾಗಳು ಕೆಲವು ಇವೆ. ಚಲನಚಿತ್ರಗಳ ನಿರ್ಮಾಣಕ್ಕೆ ಕತೆ, ಕಾದಂಬರಿಗಳು ಬೇಕು. ಆದರೆ ಚಲನಚಿತ್ರ ನಿರ್ಮಾಣವನ್ನು ದೃಷ್ಟಿಯಲ್ಲಿಟ್ಟುಕೊಂಡು ಕಾದಂಬರಿ ಬರೆಯುವುದು, ಚಿತ್ರ ನಿರ್ಮಾಪಕನ ಅಪೇಕ್ಷೆಗೆ ಕತೆ ರಚಿಸುವುದು ಸಾಹಿತ್ಯದ ಮಟ್ಟಿಗೆ ಹಿತಕರವಲ್ಲದ ಪ್ರವೃತ್ತಿ ಎಂಬುವುದನ್ನು ಕೂಡಾ ಈ ಸಂದರ್ಭದಲ್ಲಿ ಗಮನಿಸಬೇಕು.

ಆರೂರು ಪಟ್ಟಾಭಿ ಅವರ ನಿರ್ದೇಶನದಲ್ಲಿ ಹಾಗೂ ಆನಂದ ಶೇಖರ್ ನಿರ್ಮಿಸಿದ ತುಳು ಚಿತ್ರರಂಗ ಕಂಡ ಮೂರನೇ ಸಿನಿಮಾ 'ಪಗೆತ ಪುಗೆ'. ಇದು ಸೂರ್ಯ ನಾರಾಯಣ ಚಡಗರವರ 'ಹೆಣ್ಣು-ಹೊನ್ನು-ಮಣ್ಣು' ಎಂಬ ಕಾದಂಬರಿ ಆಧಾರಿತ ಸಿನಿಮಾವಾಗಿದೆ. 1972ರಲ್ಲಿ ಸೆಂಟ್ರಲ್ ಚಿತ್ರಮಂದಿರದಲ್ಲಿ ಈ ಚಿತ್ರವು ಬಿಡುಗಡೆಯಾಯಿತು.

1991ರಲ್ಲಿ ಕೋಡ್ಲು ರಾಮಕೃಷ್ಣ ಅವರ ನಿರ್ದೇಶನದಲ್ಲಿ 'ರಾತ್ರಿ-ಪಗೆಲ್' ಚಿತ್ರ ತೆರೆ ಕಂಡಿತು. ಡಾ. ಚಂದ್ರಿಕಾರವರು ನಿರ್ಮಿಸಿದ ಈ ಸಿನಿಮಾವು ಕನ್ನಡದ 'ಬಿಸಿಲು ಬೆಳದಿಂಗಳು' ಕಾದಂಬರಿ ಆಧಾರಿತ ಸಿನಿಮಾವಾಗಿದೆ. ಅವಿನಾಶ್, ಅಂಜಲಿ, ತ್ರಿವೇಣಿ ಈ ಚಿತ್ರದ ಮುಖ್ಯ ಪಾತ್ರದಲ್ಲಿ ಅಭಿನಯಿಸಿದ್ದಾರೆ.

2001ರಲ್ಲಿ ಪ್ರಶಾಂತ್ ಶೆಟ್ಟಿ, ಪ್ರೇಮನಾಥ್ ಶೆಟ್ಟಿ ಅವರ ನಿರ್ಮಾಣದಲ್ಲಿ 'ತುಡರ್' ಎಂಬ ಮಲ್ಲಾದಿ ವೆಂಕಟಕೃಷ್ಣಮೂರ್ತಿ ಅವರ 'ಮಂದಾಕಿನಿ' ಕಾದಂಬರಿಯನ್ನು ಆಧರಿಸಿದ ಚಿತ್ರ ತೆರೆ ಕಂಡಿತು. ಈ ಚಿತ್ರವನ್ನು ಕೋಡ್ಲು ರಾಮಕೃಷ್ಣರವರು ನಿರ್ದೇಶಿಸಿದ್ದಾರೆ. ಸಾಮಾಜಿಕ ಸಮಸ್ಯೆಯನ್ನು ಬಹಳ ಚೆನ್ನಾಗಿಯೇ ಬಿಂಬಿಸಿದ ಈ ಚಿತ್ರದಲ್ಲಿ ವಿದ್ಯಾವಂತ ಮಹಿಳೆಯೊಬ್ಬಳು ದುಶ್ಚಟಗಳಿಗೆ ಬಲಿಯಾದ ತನ್ನ ಗಂಡನನ್ನು ಸರಿದಾರಿಗೆ ತರುವ ಪ್ರಯತ್ನವನ್ನು ಮಾಡುವ ಮೂಲಕ ಮಾದಕ ವ್ಯಸನಗಳಿಂದಾಗುವ ಪರಿಣಾಮ ಮತ್ತು ಅದರ ವಿರುದ್ಧ ಹೋರಾಡಿದ ಛಾಯೆಯನ್ನು ಅನಾವರಣಗೊಳಿಸುತ್ತದೆ.

2010ರಲ್ಲಿ ಸುಧಾಕರ್ ಬನ್ನಂಜೆ ಅವರ ನಿರ್ದೇಶನದಲ್ಲಿ 'ದೇವೆರ್' ಚಿತ್ರ ತೆರೆ ಕಂಡಿತು. ಈ ಚಿತ್ರವು ಸುಧಾಕರ್ ಬನ್ನಂಜೆ ಅವರದ್ದೇ ಆದ 'ದೇವೆರ್' ಎಂಬ ತುಳು ಕಾದಂಬರಿ ಆಧಾರಿತ ಸಿನಿಮಾವಾಗಿದೆ. ಜಾತಿ ಪದ್ಧತಿ, ಭ್ರಷ್ಟಚಾರದ ಕರಿಛಾಯೆಗಳು ನಮ್ಮ ಸಮಾಜವನ್ನು ಇಂದಿಗೂ ಹೇಗೆ ಆವರಿಸಿಕೊಂಡಿದೆ ಎಂಬುವುದನ್ನು ಮನೋಜ್ಞವಾಗಿ ಈ ಚಿತ್ರದಲ್ಲಿ ಬಿಂಬಿಸಲಾಗಿದೆ.

ಕ್ರ. ಸ.	ಸಿನಿಮಾದ ಹೆಸರು	ನಿರ್ದೇಶಕರು	ನಿರ್ಮಾಣ	ವರ್ಷ	ಕಾದಂಬರಿ
1	ಪಗೆತ ಪುಗೆ	ಆರೂರು ಪಟ್ಟಾಭಿ	ಆನಂದ ಶೇಖರ್	1972	ಸೂರ್ಯನಾರಾಯಣ ಚಡಗರವರ ಹೆಣ್ಣು-ಹೊನ್ನು- ಮಣ್ಣು ಕಾದಂಬರಿ ಆಧಾರಿತ
2	ರಾತ್ರಿ ಪಗೆಲ್	ಕೋಡ್ಲು ರಾಮಕೃಷ್ಣ	ಡಾ. ಚಂದ್ರಿಕಾ	1991	ಕನ್ನಡದ 'ಬಿಸಿಲು ಬೆಳದಿಂಗಳು' ಕಾದಂಬರಿ ಆಧಾರಿತ
3	ತುಡರ್	ಕೋಡ್ಲು ರಾಮಕೃಷ್ಣ	ಪ್ರಜ್ವಲ್ ಬ್ರಹ್ಮಾವರ	2001	ಮಲ್ಲಾದಿ ವೆಂಕಟಕೃಷ್ಣಮೂರ್ತಿ ಅವರ 'ಮಂದಾಕಿನಿ' ಕಾದಂಬರಿ ಆಧಾರಿತ
4	ದೇವೆರ್	ಸುಧಾಕರ ಬನ್ನಂಜೆ	ಪವನ್ ಶೆಟ್ಟಿ ವಿ.ಕೆ ಪ್ರಕಾಶ್	2010	ಸುಧಾಕರ ಬನ್ನಂಜೆ ಅವರ 'ದೇವೆರ್' ಕಾದಂಬರಿ ಆಧಾರಿತ ಚಿತ್ರ

ತುಳುನಾಡಿನ ಮಣ್ಣಿನ ಪರಂಪರೆಯನ್ನು ಬಿಂಬಿಸಿದ ಸಿನಿಮಾಗಳು

ರಂಗಭೂಮಿಯಲ್ಲಿ ಸೃಜಶೀಲತೆ ಇದೆ. ಆದರೆ ಸಿನಿಮಾದಲ್ಲಿ ತಂತ್ರಜ್ಞಾನವಿದೆ. ಇಂದು ಸಿನಿಮಾಗಳಿಗೆ ರಂಗಭೂಮಿ, ದೂರದರ್ಶನ ಸ್ಪರ್ಧಿಯಲ್ಲ ಬದಲಾಗಿ, ಸಿನಿಮಾಗಳೇ ಪ್ರತಿಸ್ಪರ್ಧಿ. ಇಂದಿನ ಕೆಲವು ಸಿನಿಮಾಗಳು ನಾಲ್ಕು ಪದ್ಯ, ಒಂದು ಸ್ವಲ್ಪ ಪ್ರೀತಿ–ಪ್ರೇಮ, ಒಂದು ಐಟಂ ಸಾಂಗ್, ಎರಡು ಫೈಟು, ಸ್ವಲ್ಪ ಸೆಂಟಿಮೆಂಟು, ಕೊನೆ ಕುಸುಕು (ಟೇಲ್ ಟ್ವಿಸ್ಟಿಂಗ್) ಇತ್ಯಾದಿಗಳ ಮಸಾಲಗಳಂತಿದೆ. ಮುಖ್ಯವಾಹಿನಿಯಲ್ಲಿ ಪ್ರೇಮ, ಕುಣಿತ, ಹೊಡೆದಾಟ, ಕೌಟುಂಬಿಕ ಸನ್ನಿವೇಶಗಳು ಸಾಮಾನ್ಯವಾಗಿ ಇದ್ದರೆ ಅದನ್ನು ಸಿನಿಮಾ ಅಂದುಕೊಳ್ಳುವ ಭ್ರಾಂತಿಯಲ್ಲಿ ಇಂದು ನಾವಿದ್ದೇವೆ. ಸಿನಿಮಾ ಅದೊಂದು ಕೇವಲ ಮನರಂಜನೆ ಅಂದುಕೊಳ್ಳುವುದಾದರೆ ಅದರಿಂದ ಸಮಾಜಕ್ಕೆ ಏನು ದೊರಕುವುದು? ಎಂಬುವುದನ್ನು ತಿಳಿಯಬೇಕಾಗುವುದು.

ಸಿನಿಮಾದ ಕಥಾವಸ್ತುವನ್ನು ಆಧರಿಸಿ ಪೌರಣಿಕ, ಐತಿಹಾಸಿಕ, ಸಾಮಾಜಿಕ, ಜನಪದ, ಸಾಹಸ, ಅದ್ಭುತರಮ್ಯ, ರೋಮ್ಯಾಂಟಿಕ್, ಭಯಾನಕ ಹೀಗೆ ವಿವಿಧ ರೀತಿಯಲ್ಲಿ ವಿಂಗಡಿಸಬಹುದು. ತುಳು ಸಿನಿಮಾ ರಂಗದ ಆರಂಭದ ದಿನಗಳಲ್ಲಿ ಸಾಮಾಜಿಕ ಚಿತ್ರಗಳೇ ಹೆಚ್ಚಾಗಿ ಬಂದುವು. ಆದರೆ ಪೌರಣಿಕ, ಐತಿಹಾಸಿಕ ಜನಪದ ಕತೆಗಳಿಗೆ ಹೆಚ್ಚು ಒತ್ತು ಕೊಡಲಿಲ್ಲ.

ಸಾಮಾನ್ಯವಾಗಿ ನಾವು ಸಿನಿಮಾವನ್ನು ಎರಡು ರೀತಿಯಾಗಿ ವರ್ಗೀಕರಣ ಮಾಡುತ್ತೇವೆ.

1. ಕಮರ್ಷಿಯಲ್ ಸಿನಿಮಾ (ವ್ಯಾಪಾರಿ ಚಿತ್ರ)
2. ಕಲಾತ್ಮಕ ಸಿನಿಮಾ

ಕಲಾತ್ಮಕ ಚಿತ್ರಗಳಲ್ಲಿ ಅಬ್ಬರ ಇಲ್ಲದಿದ್ದರೂ ಅದು ನಮ್ಮ ಬದುಕು ಭಾವನೆಗಳಿಗೆ ಹತ್ತಿರವಾಗಿರುತ್ತದೆ. ಕನ್ನಡದ ಒಳ್ಳೆಯ ಹಾಗೂ ಅತ್ಯಂತ ಕಲಾತ್ಮಕ ಚಿತ್ರವಾದ 'ಸಂಸ್ಕಾರ'ವು ಚಿತ್ರಮಂದಿರಗಳಲ್ಲಿ 3 ದಿನವೂ ಓಡದೇ ಖಾಲಿ ಖಾಲಿ ಇದ್ದಿತೆಂದರೆ ಪ್ರೇಕ್ಷಕನ ಅಭಿರುಚಿ ಏನು? ಯಾವುದು? ಎಂಬುವುದರ ಕುರಿತು ಸಹಜ ಪ್ರಶ್ನೆಗಳು ನಿರ್ದೇಶಕ, ನಿರ್ಮಾಪಕ ಹಾಗೂ ವಿತರಕರಲ್ಲಿ ಕಾಡುವುದು. ಹಾಗಾಗಿ ಒಳ್ಳೆಯ ಚಿತ್ರಗಳ ಭವಿಷ್ಯ ಪ್ರೇಕ್ಷಕನ ಕೈಯಲ್ಲಿರುವುದು. ಇಂದು 'ಕಮರ್ಷಿಯಲ್ ಸಿನಿಮಾ'ಗಳ ದಂಥೆಯಲ್ಲಿ ಕಲಾತ್ಮಕ ಚಿತ್ರಗಳು ಕಣ್ಮರೆಯಾಗುತ್ತಿವೆ. ಸಿನಿಮಾ ಕಲಾತ್ಮಕ ದೃಷ್ಟಿ ಮತ್ತು ಪ್ರತಿಭೆಗಳ ಮೂಲಕ ಸೃಷ್ಟಿಯಾಗುವುದರಿಂದ ಕಲೆ ಎನ್ನಬಹುದಾದರೂ, ಸೃಜನಶೀಲತೆ ಮತ್ತು ಶ್ರಮವನ್ನು ಒಟ್ಟಿಗೆ ಒಳಗೊಂಡಿರುವ 'ಅಭಿವ್ಯಕ್ತ ಮಾಧ್ಯಮ' ಎನ್ನಬಹುದು.

"ಒಂದು ಚಲನಚಿತ್ರ ನಮ್ಮನ್ನು ಎಷ್ಟರ ಮಟ್ಟಿಗೆ ರಂಜಿಸುತ್ತದೆ ಎಂಬುವುದು ಅದರ ಮೌಲ್ಯವಾಗಬಾರದು, ಅದು ಎಷ್ಟರ ಮಟ್ಟಿಗೆ ನಮ್ಮನ್ನು ಕಾಡಿತು, ಚಿಂತನೆಗೆ ಹಚ್ಚಿತು ಎನ್ನುವುದು ಮುಖ್ಯವಾಗುತ್ತದೆ" ಎಂಬ ಎಂ. ಅಬ್ದುಲ್ ರೆಹಮಾನ್ ಪಾಷ ಅವರ

ಮಾತನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಒಂದು ಒಳ್ಳೆಯ ಪ್ರೇಕ್ಷಕನಿಂದ ಒಂದು ಒಳ್ಳೆಯ ಗುಣಮಟ್ಟದ ಚಿತ್ರ ನಿರ್ಮಾಣವಾಗುವುದು ಸಾಧ್ಯ. ಅಂದರೆ ಪ್ರೇಕ್ಷಕ ಉತ್ತಮ ಗುಣಮಟ್ಟದ, ಕಲಾತ್ಮಕ ಚಿತ್ರಗಳನ್ನು ಕೈ ಹಿಡಿಯಬೇಕು. ಆದರೆ ಇಂದು ಮನರಂಜನೆಯೇ ಪ್ರಧಾನವಾಗಿರುವ ಸಿನಿಮಾಗಳಿಗೆ ಪ್ರೇಕ್ಷಕ ನೀಡುವ ಒತ್ತು ನಿರ್ಮಾಪಕರನ್ನು ಅದೇ ದಾರಿಯಲ್ಲಿ ಸಾಗುವಂತೆ ಮಾಡಿದೆ.

ತುಳು ಚಿತ್ರರಂಗಕ್ಕೆ ಗಿರೀಶ್ ಕಾಸರವಳ್ಳಿ, ಪಿ. ಶೇಷಾದ್ರಿಯವರಂತಹ ಕಲಾತ್ಮಕ ನಿರ್ದೇಶಕರ ಅಗತ್ಯವಿದೆ. ಇಂದು ಚಿತ್ರರಂಗವೂ ಕಲಾ ಮಾಧ್ಯಮವಾಗುವ ಬದಲು ಮಾರುಕಟ್ಟೆಯ ಸರಕಾಗಿದೆಯೇನೋ? ಎಂಬ ಪ್ರಶ್ನೆಗಳಿಗೆ, ಅನುಮಾನಗಳಿಗೆ ಉತ್ತರವನ್ನು ನಾವೇ ಕಂಡುಕೊಳ್ಳಬೇಕಾಗುತ್ತದೆ. ನಮ್ಮ ನೆರೆಯ ಮಲಯಾಳಂ ಚಿತ್ರರಂಗವು ಕೆಲವೇ ಕೆಲ ದಶಕಗಳ ಹಿಂದೆ ಅಂತಹ ಒಳ್ಳೆಯ ಹೆಸರನ್ನು ಪಡೆಯದಿದ್ದರೂ, ಇಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಪಡೆದಿರುವುದನ್ನು ಕಂಡಾಗ ಅಚ್ಚರಿಯಾಗುವುದು. ಅಲ್ಲಿನ ಸಿನಿಮಾಗಳಲ್ಲಿ ಆಡಂಬರ, ಅಬ್ಬರಗಳಿಲ್ಲ. ಬದಲಾಗಿ ದೇಸಿಯತೆಯ ಸೊಗಡಿನ ಛಾಯೆಯನ್ನು ಕಾಣುತ್ತೇವೆ.

ಸಾಮಾನ್ಯವಾಗಿ ಸಿನಿಮಾಗಳಲ್ಲಿ ಸಮೃದ್ಧ ವಸ್ತುವೆಂದರೆ ಪ್ರೇಮ. ನಿರ್ಮಾಣವಾಗುವ ತುಳು ಸಿನಿಮಾಗಳು ಕೇವಲ ಪ್ರೀತಿ-ಪ್ರೇಮ-ಪ್ರಣಯದ ಸುತ್ತ ಸುತ್ತುವ ಚಿತ್ರಗಳಾಗದೇ ಅದಕ್ಕೆ ವಿಶಿಷ್ಟ ಕಥಾವಸ್ತುವಿನ ಅಗತ್ಯವಿದೆ. ಅದು ತುಳು ಭಾಷೆ-ಸಂಸ್ಕೃತಿಯ ಬೆಳವಣಿಗೆಗೆ ಸಹಕಾರಿಯಾಗಿರಬೇಕು. ಆರಂಭದ ಕಾಲಘಟ್ಟದಲ್ಲಿ ನಮ್ಮ ಸಿನಿಮಾದ ಮೇಲೆ ಸಮಾಜದಲ್ಲಿ ಆಳವಾಗಿ ಬೇರೂರಿರುವ ಜಾತಿಪದ್ಧತಿ, ಅಸ್ಪೃಶ್ಯತೆ, ಲಿಂಗತಾರತಮ್ಯವು ಪ್ರಭಾವ ಬೀರಿದೆ. ಕೂಡುಕುಟುಂಬದ ಕಲ್ಪನೆಯು ಆರಂಭದ ಸಿನಿಮಾಗಳಲ್ಲಿ ಕಂಡರೂ ನಂತರದ ಸಿನಿಮಾಗಳಲ್ಲಿ ಅವು ಕಣ್ಮರೆಯಾಗುವುದನ್ನು ಕಾಣಬಹುದು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸಮಾಜದ ಪ್ರಭಾವ ಹೇಗೆ ನೇರವಾಗಿ ಸಿನಿಮಾದ ಮೇಲೆ ಬೀರುತ್ತದೆಯೋ ಹಾಗೆಯೇ ಸಿನಿಮಾದ ಪ್ರಭಾವ ಸಮಾಜದ ಮೇಲೂ ಬೀರುತ್ತದೆ.

ತುಳುವಿನಲ್ಲಿ ಅನಿಶ್ಚಿತವಾದ ಮುಕ್ತಾಯವನ್ನು ನೀಡಿದಂತಹ ಸಿನಿಮಾಗಳಿಲ್ಲ. ಕನ್ನಡದ ಸಿನಿಮಾಗಳಾದ 'ಘಟಶ್ರಾದ್ಧ', ಸಂಸ್ಕಾರ, ವಂಶವೃಕ್ಷ ಸಿನಿಮಾಗಳು ಪ್ರೇಕ್ಷಕರ ಮನಸ್ಸಿನಲ್ಲಿ ಹುಟ್ಟು ಹಾಕುವ ವಾಗ್ವಾದಗಳು ತುಳು ಸಿನಿಮಾಗಳಲ್ಲಿ ಕಂಡು ಬಂದಿಲ್ಲ. ಕಾದಂಬರಿ ಆಧಾರಿತ ಇನ್ನು ಹೆಚ್ಚಿನ ಕಲಾತ್ಮಕ ಸಿನಿಮಾಗಳ ಅವಶ್ಯಕತೆ ತುಳು ಚಿತ್ರರಂಗಕ್ಕೆ ಇದೆ.

ಒಂದು ಸಿನಿಮಾದ ಯಶಸ್ಸು ಸಾಮಾನ್ಯವಾಗಿ ಅದರ ಅಂತ್ಯವನ್ನು ಅವಲಂಬಿತವಾಗಿರುತ್ತದೆ. ಉದಾಹರಣೆಗೆ ಹಲವಾರು ದಾಖಲೆ ಗಳಿಸಿದ, ಪ್ರಶಸ್ತಿ ಪಡೆದ 'ಬಂಗಾರ್ ಪಟ್ಲೇರ್' ಸಿನಿಮಾದ ಯಶಸ್ಸು ಇರುವುದು ಅದರ ಅಂತ್ಯದಲ್ಲಿ. ಇಂತಹ ಸಿನಿಮಾಗಳು ನೋಡುಗನ ಮನಸ್ಸಿನಲ್ಲಿ ಮುಂದುವರೆಯುವ ಹಾಗೂ ಸದಾ ಕಾಲ ಉಳಿಯುವ ಸಿನಿಮಾಗಳು. ಪ್ರೇಕ್ಷಕನಿಗೆ ಕೆಲವೊಮ್ಮೆ ಸಿನಿಮಾದ ಕಥಾವಸ್ತು ಮುಖ್ಯವಾಗುವಷ್ಟು ಸಿನಿಮಾದ ತಾಂತ್ರಿಕ ಅಂಶಗಳು ಮುಖ್ಯ ಎನಿಸುವುದಿಲ್ಲ.

ಸಿನಿಮಾ ಅಂದರೆ ಕೇವಲ ಕಲೆ, ಮನರಂಜನೆ, ಉದ್ಯಮ ಎಂದು ಹೇಳಲಾಗದು.

ಅದೊಂದು ಬದುಕು. ನಮ್ಮ ಭಾವನೆಗಳನ್ನು ಪ್ರತಿಬಿಂಬಿಸುವ ಕೈಗನ್ನಡಿ. ಆದರೆ ಸಿನಿಮಾ ಒಂದು ಲಾಭ ತರುವ ಉದ್ಯಮವೆಂದು ಪರಿಗಣಿಸಿದರೆ ಅದು ಕಲೆಗೆ ವಿನಾಶಕಾರಿ. ಒಳ್ಳೆಯ ಸಿನಿಮಾ ಮಾಡಿ ಲಾಭ ಮಾಡಿಕೊಳ್ಳುವುದು ಉಚಿತವೆಂದರೂ, ಲಾಭಕ್ಕಾಗಿಯೇ ಸಿನಿಮಾದ ಉತ್ಪಾದನೆ ಸರಿಯಲ್ಲ. ಲಾಭ ಇಲ್ಲ ಅಂದ ಮೇಲೆ ಸಿನಿಮಾ ಮಾಧ್ಯಮ ಉಳಿಯುವುದಿಲ್ಲ ಅನ್ನುವುದು ಕೂಡಾ ಅಷ್ಟೇ ಸಹಜ.

ಸಿನಿಮಾ ಎಂಬುವುದು ಒಂದು ಸಾಮಾಜಿಕ ಹೊಣೆಗಾರಿಕೆಯುಳ್ಳ ಮಾಧ್ಯಮ. ಸಿನಿಮಾಗಳು ಕೇವಲ ಕತೆ ಹೇಳುವುದಲ್ಲ, ಜೊತೆಗೆ ಸಂದೇಶವನ್ನು ನೀಡುತ್ತದೆ. ಸಿನಿಮಾದಿಂದ ಒಂದು ಒಳ್ಳೆಯ ಸಂದೇಶ ನೀಡುವುದು ಕಷ್ಟಸಾಧ್ಯ ಎಂಬ ಮಾತು ಕೆಲವು ನಿರ್ದೇಶಕರಲ್ಲಿದೆ. ಆದರೆ ಒಂದು ಚಿತವ್ರನ್ನು ನಿರ್ಮಿಸಿ ಸಂದೇಶವನ್ನು ಜಾಣ ಪ್ರೇಕ್ಷಕರಿಗೆ ಬಿಟ್ಟು ಬಿಡುವುದು ಕ್ರೀಯಾಶೀಲ ನಿರ್ದೇಶಕರ ಕೈಚಳಕ.

ಸಾಮಾನ್ಯವಾಗಿ ಕಲಾ ಮಾಧ್ಯಮವು ಆಯಾ ಪ್ರಾದೇಶಿಕ ಸಂಸ್ಕೃತಿಯನ್ನು, ಪರಂಪರೆಯನ್ನು ಬಿಂಬಿಸುತ್ತದೆ. ಇದಕ್ಕೆ ಸಿನಿಮಾವು ಹೊರತಾಗಿಲ್ಲ. ಹಾಗಾಗಿ ಇಲ್ಲಿನ ಜನಪದ ಕಲೆಗಳಾದ ಭೂತಾರಾಧನೆ, ಜನಪದ ಕುಣಿತ, ಜನಪದ ಕ್ರೀಡೆಗಳು ಮುಂತಾದುವುಗಳನ್ನು ತುಳುಚಿತ್ರಗಳು ಒಳಗೊಂಡಿದೆ. ಪರಂಪರೆ, ಸಂಸ್ಕೃತಿ ಎಂದು ಜನಪದ ಕಲೆಗಳನ್ನು ಅನಗತ್ಯವಾಗಿ ಸಿನಿಮಾದಲ್ಲಿ ತುರುಕಿಸುವುದು ಸರಿಯಲ್ಲ. ತುಳು ಸಿನಿಮಾಗಳಿಗೆ ನಿರ್ದಿಷ್ಟ ಪ್ರೇಕ್ಷಕ ವಲಯ ಇರುವುದರಿಂದ ಹಾಗೂ ಅವರೆಲ್ಲರೂ ತುಳುವರಾಗಿರುವುದರಿಂದ ತುಳು ಸಿನಿಮಾಗಳಿಗೆ ತುಳು ಪರಂಪರೆ, ಸಂಸ್ಕೃತಿಯನ್ನು ಹಿನ್ನಲೆಯಾಗಿ ಇಟ್ಟುಕೊಳ್ಳಬೇಕೇ? ಬೇಡವೇ? ಎಂಬ ಗೊಂದಲಗಳು ಇಂದಿಗೂ ನಿರ್ದೇಶಕರಲ್ಲಿ ಇದೆ. ಆದರೆ ತೆರೆಗೆ ಬಂದಂತಹ ಹೆಚ್ಚಿನ ಸಿನಿಮಾಗಳೆಲ್ಲವೂ ತುಳುನಾಡಿನ ಮಣ್ಣಿನ ಪರಂಪರೆಯನ್ನು, ಸಂಸ್ಕೃತಿಯನ್ನು ಬಿಂಬಿಸಲು ಯತ್ನಿಸಿವೆ. ಅಂತಹ ಕೆಲವು ಪ್ರಾತಿನಿಧಿಕ ಸಿನಿಮಾಗಳ ಬಗ್ಗೆ ಒಂದು ನೋಟ ಇಲ್ಲಿದೆ.

ಕೋಟಿ ಚೆನ್ನಯ

ಕಟಪಾಡಿಯ ಮುದ್ದು ಸುವರ್ಣರು ತಯಾರಿಸಿದ ಪ್ರಜಾ ಫಿಲಂಸ್ ಅವರ 'ಕೋಟಿ ಚೆನ್ನಯ' ಸಿನಿಮಾ ತುಳು ಚಿತ್ರರಂಗದಲ್ಲಿ ಒಂದು ವಿಶಿಷ್ಟ ದಾಖಲೆ ಎನ್ನಬಹುದು. ಚಿತ್ರಕಥೆ, ಸಂಭಾಷಣೆಯ ಜೊತೆಗೆ ನಿರ್ದೇಶನವನ್ನು ಮಾಡಿದಂತಹ ವಿಶುಕುಮಾರ್ ಅವರು ತುಳು ಚಿತ್ರರಂಗಕ್ಕೆ ಒಂದು ಅಪೂರ್ವ ಕಾಣಿಕೆಯನ್ನು ಈ ಮೂಲಕ ನೀಡಿದರು. ಚಿತ್ರಕ್ಕೆ ಹಿರಿಯ ಸಾಹಿತಿಗಳಾದ ಅಮೃತ ಸೋಮೇಶ್ವರ, ಬಿ.ಎ. ವಿವೇಕ್ ರೈ ಹಾಗೂ

ವಿಶುಕುಮಾರ್ ಅವರ ಗೀತರಚನೆ ಇದೆ.

ನಮ್ಮ ತುಳುನಾಡು ಹಲವು ಐತಿಹಾಸಿಕ ಪುರುಷರಿಗೆ ಜನ್ಮ ನೀಡಿದ ನೆಲೆಬೀಡು. ತುಳುನಾಡಿನಲ್ಲಿ ಸುಮಾರು 64 ಗರಡಿಗಳಲ್ಲಿ ಕಾಲಕಾಲಕ್ಕೆ ಸೇವೆ ಪಡೆದುಕೊಳ್ಳುತ್ತಿರುವ ಕೋಟಿ ಚೆನ್ನಯ ವೀರಪುರುಷರ ಕಾರಣಿಕದ ಕತೆಗಳು ಜನಜನಿತವಾಗಿವೆ. ಆದರೂ ಸುಮಾರು 300 ವರ್ಷದ ಹಿಂದಿನ ಕತೆಯನ್ನು ಪರದೆಯ ಮೇಲೆ ತರಬೇಕೆಂಬ ವಿಶುಕುಮಾರ್ ಅವರ ಆಸೆ 1973ರ ಜೂನ್ 15ರಂದು ಈಡೇರಿತು. ಈ ಚಿತ್ರವು ಮಂಗಳೂರು ನಗರದ 'ಜ್ಯೋತಿ' ಚಿತ್ರಮಂದಿರದಲ್ಲಿ ಬಿಡುಗಡೆಯಾಗಿ 125 ದಿನಗಳು ಯಶಸ್ವಿ ಪ್ರದರ್ಶನಗೊಂಡು ಅಪಾರ ಜನಪ್ರಿಯತೆಯನ್ನು ಗಳಿಸಿತು.

ಸುಭಾಷ್, ವಾಮನರಾಜ್, ಫೈಟರ್ ಶೆಟ್ಟಿ, ಭೋಜರಾಜ್, ಕಲ್ಪನಾ ಮುಂತಾದ ತಾರಾಗಣವಿರುವ ಈ ಚಿತ್ರದಲ್ಲಿ ಒಟ್ಟು ನಾಲ್ಕು ಹಾಡುಗಳಿವೆ. ಚಿತ್ರಕ್ಕೆ ಸಂಗೀತ ನಿರ್ದೇಶನ ವಿಜಯ ಭಾಸ್ಕರ್ ಅವರದ್ದು. ಗಾನಕೋಗಿಲೆ ಎಸ್. ಜಾನಕಿ ಅವರ ಕಂಠಸಿರಿಯಲ್ಲಿ ಬಂದಂತಹ 'ಎಕ್ಕಸಕ್ಕ ಎಕ್ಕಸಕ್ಕ ಎಕ್ಕಸಕ್ಕಲಾ, ಅಕ್ಕ ಪಂಡ್‌ದ್ ಲೆಪ್ಪುನಕುಲು ಬತ್ತೆರಿತ್ತೆಲಾ' ಹಾಡು ಇಂದಿಗೂ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿದೆ.

ಪೆರುಮಲೆ ಬಲ್ಲಾಳರು ಕಾಲಿಗೆ ಮುಳ್ಳು ಚುಚ್ಚಿದ ಪರಿಣಾಮ ವಿಪರೀತ ನೋವಿಗೆ ಒಳಗಾಗುತ್ತಾರೆ. ಈ ನೋವನ್ನು ನಿವಾರಿಸಲು ಸಾಯನ ಬೈದನ ತಂಗಿ ದೇಯಿ ಬೈದಿತಿಗೆ ಅರಮನೆಯಿಂದ ರಾಜದಂಡಿಗೆ ಕಳುಹಿಸಲಾಗುತ್ತದೆ. ಇಲ್ಲಿ ರಾಜದಂಡಿಗೆ ಕಳುಹಿಸಿದರ ಕುರಿತಾಗಿ ಪೆರುಮಲೆ ಬಲ್ಲಾಳ ಹಾಗೂ ಬುದ್ಧ್ಯಂತರಿಗೆ ವಾದ-ವಿವಾದ ನಡೆಯುತ್ತದೆ. ಕಾರಣ ದೇಯಿ ಬೈದಿತಿ ಕೆಳಜಾತಿ ಎಂಬ ಕಾರಣಕ್ಕಾಗಿ. ಮಂತ್ರಿ ಬುದ್ಧ್ಯಂತನು ತನ್ನ ಹಗೆತನವನ್ನು ಮುಂದುವರಿಸಿ ಅರಮನೆಯಲ್ಲಿ ದೇಯಿ ಬೈದಿತಿಗೆ ಜನಿಸಿದ ಮಕ್ಕಳನ್ನು ಸಾಯಿಸಲು ಹಾಲಿಗೆ ವಿಷ ಬೆರೆಸುವ ತಂತ್ರವನ್ನು ರೂಪಿಸುತ್ತಾನೆ. ಆದರೆ ಅದನ್ನು ದೇಯಿ ಬೈದಿತಿ ಕುಡಿದು ಸಾಯುವಳು. ಮುಂದೆ ಈ ಹಗೆತನ ಚೆನ್ನಯನು ಬುದ್ಧ್ಯಂತನನ್ನು ಸುರಿಯದಿಂದ ಕೊಲ್ಲುವುದರೊಂದಿಗೆ ಅಂತ್ಯವಾಗುವುದು.

ಮಂತ್ರಿ ಬುದ್ಧ್ಯಂತನನ್ನು ಕೊಂದ ಕಾರಣಕ್ಕಾಗಿ ಕೋಟಿ ಚೆನ್ನಯರು ಊರು ಬಿಟ್ಟು ಅಕ್ಕ ಕಿನ್ನಿದಾರು ಮತ್ತು ಬಾವ ಪಯ್ಯಬೈದನಲ್ಲಿಗೆ ಬರುತ್ತಾರೆ. ಅಲ್ಲಿನ ಮಂತ್ರಿ ಚಂದುಗಿಡಿಯ ಕುತಂತ್ರಕ್ಕೆ ಕತ್ತಲ ಕೋಣೆಯಲ್ಲಿ ಬಂಧಿಗಳಾಗಿ, ನಾಗಬೆರ್ಮರ ಶಕ್ತಿಯಿಂದ ಅಲ್ಲಿಂದ ಹೊರಬರುತ್ತಾರೆ. ಮುಂದೆ ಮೂರು ಸೀಮೆಯ ಅರಸರ ಒಳಜಗಳದ ಸಂದರ್ಭದಲ್ಲಿ ಕೋಟಿಯು ಬಲ್ಲಾಳರ ಬಾಣಕ್ಕೆ ಬಲಿಯಾಗುತ್ತಾನೆ. ಅಣ್ಣನ ಮರಣ ಕಂಡು ಚೆನ್ನಯನು ಅಲ್ಲಿಯೇ ಪ್ರಾಣ ಬಿಡುವನು. ಈ ವೀರಪುರುಷರು ಇಂದಿಗೂ ತುಳುನಾಡಿನಲ್ಲಿ ಅಮರರಾಗಿದ್ದಾರೆ.

ಈ ಚಿತ್ರದಲ್ಲಿ ಒಂದು ಕಾಲದಲ್ಲಿ ಜೈನ ಅರಸರ ಪ್ರಭಾವವು ತುಳುನಾಡನ್ನು ಹೇಗೆ ಆವರಿಸಿತ್ತು? ಆ ಅರಸುಮನೆತನಗಳ ಅಡಿಯಲ್ಲಿ ಅದೆಷ್ಟೋ ಕೆಳವರ್ಗಗಳು ಜಾತಿ ಪದ್ಧತಿಯ ಶೋಷಣೆಯಲ್ಲಿ ನರಳಿದವು ಎಂಬುವುದನ್ನು ಕಾಣುತ್ತೇವೆ. ಜೊತೆಗೆ ತುಳುನಾಡಿನ ಕೃಷಿ ಬದುಕಿನ ಅನಾವರಣ ಕೂಡಾ ಇಲ್ಲಿದೆ.

ತುಳುನಾಡ ಸಿರಿ

ಸಂತಾನ ಇಲ್ಲದೆ ಕೊರಗುತ್ತಿರುವ ಸತ್ಯನಾಪುರದ ಬಿರುಮಾಳ್ವ, ಮುಂದೆ ಹರಕೆಯೊಂದನ್ನು ತೀರಿಸಿದ ಬಳಿಕ ತೊಟ್ಟಿಲಲ್ಲಿದ್ದ ಹಿಂಗಾರದ ಮಾಯದ ಶಕ್ತಿಯಿಂದ ಸಿರಿಯ ಜನನವಾಗುವುದು. ಇತ್ತ ಸತ್ಯನಾಪುರದ ಆಸ್ತಿಗಾಗಿ ಶಂಕರ ಆಳ್ವ ಹೊಂಚು ಹಾಕುತ್ತಿರುತ್ತಾನೆ. ಸಿರಿ ಬೆಳೆದು ದೊಡ್ಡವಳಾದ ಮೇಲೆ ಅವಳ ವಿವಾಹವು ಬಸ್ರೂರು ಗುತ್ತಿನ ಶಂಕರಿ ಪೂಂಜೆದಿ ಎಂಬುವವಳ ಮಗನಾದ ಕಾಂತು ಪೂಂಜನೊಂದಿಗೆ ನಡೆಯುತ್ತದೆ.

ಇತ್ತ ಸೂಳೆ ಕಿನ್ನಿಗಳ ಸಂಪರ್ಕದಲ್ಲಿರುವ ಕಾಂತುಪೂಂಜ ಅವಳಿಗೆ ತಾನು ಹಿಂದೆ ಕೊಟ್ಟ ಮಾತಿನಂತೆ ಕಾವೇರಿ ಸಂಕ್ರಮಣದಂದು ಸಿರಿಯ ಕಣ್ಣೆದುರೇ ಮದುವೆಯಾಗುತ್ತಾನೆ. ಹೆಣ್ಣಿಗೆ ತಾಳ್ಮೆಯಿದೆ, ಸಹನೆಯಿದೆ ಆದರೆ ಅದಕ್ಕೊಂದು ಮಿತಿಯಿದೆ. ಗಂಡನ ಅನಾಚಾರವನ್ನು ಮೊದಮೊದಲಿಗೆ ಸಹಿಸಿದ ಸಿರಿ ಮುಂದೆ ಅದು ಮಿತಿಮೀರಿದಾಗ ಪುರುಷ ಪ್ರಧಾನ ವ್ಯವಸ್ಥೆಯನ್ನು ಧಿಕ್ಕರಿಸುತ್ತಾಳೆ. ವೇಶ್ಯೆ ಕಿನ್ನಿಗಳು ತನ್ನ ಸೀಮಂತಕ್ಕೆ ತಂದಂತಹ ಸೀರೆಯನ್ನು ಉಟ್ಟದನ್ನು ಮಾಯದ ಶಕ್ತಿಯಿಂದ ತಿಳಿದ ಸಿರಿಯು ಸೀರೆಯನ್ನು ತಿರಸ್ಕರಿಸುತ್ತಾ, ಗಂಡನ ಮನೆಯನ್ನು ಬಿಟ್ಟು ಹೊರ ನಡೆಯುತ್ತಾಳೆ.

ಬಳಿಕ ಸತ್ಯನಾಪುರದಲ್ಲಿ ಸಿರಿ ಕುಮಾರನಿಗೆ ಜನ್ಮ ನೀಡುವಳು. ಕುಮಾರನನ್ನು ಎತ್ತಿಕೊಂಡ ಕಾರಣಕ್ಕಾಗಿ ಬಿರುಮಾಳ್ವರು ಸಾವನ್ನಪ್ಪುತ್ತಾರೆ. ಇದೇ ಸಂದರ್ಭದಲ್ಲಿ ಶಂಕರ ಆಳ್ವ ಆಸ್ತಿಗಾಗಿ ಸಿರಿಯ ಜೊತೆ ವಾಗ್ವಾದಕ್ಕೆ ಇಳಿದಾಗ ಸಿರಿಯು ಅರಮನೆಯಿಂದ ಹೊರ ನಡೆಯುತ್ತಾಳೆ. ಸ್ವಲ್ಪ ದೂರ ಬಂದ ಕೂಡಲೇ ಅರಮನೆಗೆ ಬೆಂಕಿ ಬೀಳುವುದು. ಹರಕೆ ಒಪ್ಪಿಸಲು ಬಂದಾಗ ಅರ್ಚಕರು ದೇವಸ್ಥಾನದ ಬಾಗಿಲು ತೆರೆಯಲು ನಿರಾಕರಿಸಿದಾಗ ಮಾಯದ ಶಕ್ತಿಯಿಂದ ಸಿರಿ ಬಾಗಿಲು ತೆರೆಯಿಸುತ್ತಾಳೆ. ಹೊಳೆ ದಾಟಿಸಲು ಅಂಬಿಗನು ನಿರಾಕರಿಸಿದಾಗ ಆತನ ಸಹಾಯವಿಲ್ಲದೆ ಸಿರಿ ಹೊಳೆಯನ್ನು ದಾಟುತ್ತಾಳೆ. ಸ್ತ್ರೀವ್ಯಾಮೋಹಿ ವೀರಭದ್ರನನ್ನು ಶಾಪದಿಂದ ಕಲ್ಲಾಗಿಸುತ್ತಾಳೆ.

ಜಾನಪದ ಕತೆಯನ್ನು ಆಧರಿಸಿದ ಈ ಚಿತ್ರದಲ್ಲಿ ಎರಡು ಸನ್ನಿವೇಶಗಳು ನಿಜಕ್ಕೂ

ಕ್ರಾಂತಿಕಾರಿ ರೂಪದಲ್ಲಿದೆ. ಒಂದು, ಕಾಂತುಪೂಂಜನ ಸೇಡಿಗೆ, ಅವಮಾನಕ್ಕೆ ಬಲಿಯಾಗುವ ಸಿರಿ ಗಂಡನ ಕಣ್ಣೆದುರೇ ತಾಳಿಯನ್ನು ಕಿತ್ತು ಬಿಸಾಕುವುದು. ಇನ್ನೊಂದು, ದೇಸಿಂಗ ಸಹೋದರರು ಪಂಥದಲ್ಲಿ ಸೋತ ಕಾರಣ ಕೊಟ್ರಾಡಿ ಗುತ್ತುವಿನ ಕೊಡ್ಸರಾಳ್ವನ ಜೊತೆ ಸಿರಿಯು ಎರಡನೆ ಮದುವೆ ಮಾಡಿಕೊಳ್ಳುವುದು.

'ಜೊ ಜೊ ಜೊ, ಜೊ ಬಾಲೆ ಜೊ
ತುಳುನಾಡ ತುಡರ್, ತಿಳಿನೀರ ಒಸರ್
'ಕುಮಾರ ಬಾಲೆ'

ಇಂತಹ ಸುಮಧುರ ಹಾಡನ್ನು ಒಳಗೊಂಡ ಈ ಚಿತ್ರವು 1976ರಲ್ಲಿ ಮಂಗಳೂರಿನ 'ಪ್ರಭಾತ್' ಚಿತ್ರಮಂದಿರದಲ್ಲಿ ಬಿಡುಗಡೆಯಾಯಿತು. ಕೆ.ಎನ್. ಟೇಲರ್, ಸರೋಜಿನಿ ಶೆಟ್ಟಿ, ಜಯಶೀಲ ಮುಂತಾದ ತಾರಾಗಣವಿದೆ. ಕೆ. ದಯಾನಂದ ಮತ್ತು ಎಸ್.ಎಸ್. ಪುತ್ರನ್ ಅವರು 'ಓಂಕಾರೇಶ್ವರ ಫಿಲಂಸ್'ನ ಹೆಸರಿನಲ್ಲಿ ನಿರ್ಮಿಸಿದ ಈ ಚಿತ್ರವನ್ನು ಕೆ.ಎನ್. ಟೇಲರ್ ಅವರು ನಿರ್ದೇಶಿಸಿರುತ್ತಾರೆ.

ಪೆಟ್ಟಾಯಿ ಪಿಲಿ



"ನಾಲ್ ಬರವು ನಮಡಿತ್ತ್‌ಂಡ, ನಾಲ್ ಜನ ನಮ್ಮ ಪಿರವುಡಿಪ್ಪೆರ್" ಎಂದು ನಂಬಿ ಬದುಕುವ ನಾರಾಯಣ ಮೇಷ್ಟ್ರು ಊರಿಗೆಲ್ಲ ಆದರ್ಶರಾಗಿದ್ದರು. ಒಂದು ಸಮಾಜವನ್ನು ವ್ಯಕ್ತಿ ಹೇಗೆ ಬದಲಾಯಿಸಬಹುದು ಹಾಗೆಯೇ ಅದೇ ಸಮಾಜವು ವ್ಯಕ್ತಿಯನ್ನು ಯಾವ ರೀತಿಯಲ್ಲಿ ಬದಲಾಯಿಸುತ್ತದೆ ಎಂಬುವುದನ್ನು ಇಲ್ಲಿ ಸ್ಪಷ್ಟವಾಗಿ ಕಾಣಬಹುದು. ಊರಿಗೆಲ್ಲ ಆದರ್ಶನಾಗಿದ್ದ ನಾಯಕ ತನ್ನ ತಾಯಿಯ ಮರಣದ ನಂತರ ಪ್ರತೀಕಾರಕ್ಕಾಗಿ ಅಡ್ಡದಾರಿ ಹಿಡಿಯುವನು.

ಚಿತ್ರದ ಒಂದು ಸನ್ನಿವೇಶ ಹೀಗಿದೆ– ನಾರಾಯಣ ಮೇಷ್ಟ್ರು ಶಾಲೆಯಲ್ಲಿ ಮಕ್ಕಳಿಗೆ ಗಾಂಧೀಜಿ ಬಗ್ಗೆ ತುಳು ಭಾಷೆಯಲ್ಲಿ ಪಾಠ ಮಾಡುವುದು. ನಿಜಕ್ಕೂ ಇಂತಹ ಸನ್ನಿವೇಶ ಇಂದು ತುಳುನಾಡಿನಲ್ಲಿ ಇದೆಯಾ? ಅಥವಾ ಇರಬೇಕಾ? ಎಂಬ ಪ್ರಶ್ನೆ ನಮ್ಮಲ್ಲಿ ಉದ್ಭವಿಸುತ್ತದೆ. ಮಾಧ್ಯಮ ಅಲ್ಲದಿದ್ದರೂ ಒಂದು ಭಾಷೆಯಾಗಿ ತುಳುವನ್ನು ಇಂದು ಯಾರು ಕಲಿಯುತ್ತಿದ್ದಾರೆ? ಯಾರು ಕಲಿಸುತ್ತಿದ್ದಾರೆ? ಎನ್ನುವ ಪ್ರಶ್ನೆಗಳು ಕೂಡಾ ಇದೇ ಸಂದರ್ಭದಲ್ಲಿ ನಮ್ಮನ್ನು ಕಾಡುತ್ತವೆ.

ಭೂತರಾಧನೆ, ನಾಗಾರಾಧನೆಯಂತಹ ವಿಶಿಷ್ಟ ಸಂಸ್ಕೃತಿ ಹೊಂದಿದ ತುಳುನಾಡಿಗೆ ಭೂಗತ ಲೋಕದ ಸಂಪರ್ಕ, ಕಳ್ಳಬಟ್ಟಿ ವ್ಯಾಪಾರದ ಕರಾಳ ಮುಖವೂ ಇದೆ. ಇಲ್ಲಿ

ಖಳನಾಯಕನಾದ ರಾಜನ್ ಕಳ್ಳತನದ ಮದ್ಯಮಾರಾಟ ದಂಧೆಯಲ್ಲಿ ನಿರತನಾಗಿದ್ದು ಸಮಾಜಕ್ಕೆ ದುಷ್ಟಶಕ್ತಿಯಾಗಿರುವುದು. ಆತನಿಂದ ಶಾಲೆಗೆ ಬೆಂಕಿ ಬೀಳುವುದು, ನಾರಾಯಣ ಮೇಷ್ಟ್ರು ತನ್ನ ತಾಯಿಯನ್ನು ಕಳೆದುಕೊಳ್ಳುವುದು. ಕೊನೆಗೆ ಮೇಷ್ಟ್ರು ಆದರ್ಶ ಜೀವನವನ್ನು ಕಳಚಿ ಮುಳ್ಳನ್ನು ಮುಳ್ಳಿನಿಂದಲೇ ಕೀಳಬೇಕು ಎಂಬಂತೆ ತಾನೂ ಕಳ್ಳದಂಧೆ ವ್ಯಾಪಾರಕ್ಕೆ ಇಳಿದು ರಾಜನ್‌ಗೆ ಬುದ್ಧಿ ಕಲಿಸಲು ಮುಂದಾಗುತ್ತಾ ಕೊನೆಗೆ ನ್ಯಾಯ ವ್ಯವಸ್ಥೆಗೆ ಶರಣಾಗುತ್ತಾರೆ. ಇಲ್ಲಿ ವ್ಯಕ್ತಿ ಒಳ್ಳೆಯವನಾಗಲಿ, ಕೆಟ್ಟವನಾಗಲಿ ತಾನು ಮಾಡಿದ ತಪ್ಪಿಗೆ ಶಿಕ್ಷೆ ಅನುಭವಿಸಲೇಬೇಕು ಎಂಬ ಸಂದೇಶವಿದೆ.

1987ರ ಮೇ ತಿಂಗಳ 8ರಂದು ಮಂಗಳೂರಿನ 'ಜ್ಯೋತಿ' ಚಿತ್ರಮಂದಿರದಲ್ಲಿ ಬಿಡುಗಡೆಯಾದ ಈ ಚಿತ್ರದಲ್ಲಿ ಸದಾಶಿವ ಸಾಲಿಯಾನ್, ಪ್ರಕಾಶ್ ಭಂಡಾರಿ, ಡಿ.ಎಸ್. ಬೋಳೂರು, ಆನಂದ್ ಬೋಳಾರ್, ರಾಮಚಂದ್ರ ಕೂಳೂರು, ಅರ್ಚನಾ, ಹೇಮಶ್ರೀ, ಸೌಮ್ಯ ಮುಂತಾದ ತಾರಾಗಣವಿದೆ. ಕಥೆ–ಚಿತ್ರಕಥೆ–ಸಂಭಾಷಣೆ ಹಾಗೂ ಹಾಡುಗಳು ಮಚ್ಛೇಂದ್ರನಾಥ ಪಾಂಡೇಶ್ವರ ಅವರದ್ದು. ಎಸ್.ಎಸ್. ಪುತ್ರನ್ ಅವರು ಎಸ್.ಎಸ್. ಫಿಲಂಸ್ ಲಾಂಛನದಲ್ಲಿ ನಿರ್ಮಿಸಿದ ಈ ಚಿತ್ರವನ್ನು ರವಿ ಎನ್. ಕಾಂಚನ್ ಅವರು ನಿರ್ದೇಶಿಸಿರುತ್ತಾರೆ.

ಬಂಗಾರ್ ಪಟ್ಲೇರ್



ತುಳುವಿನ 25ನೇ ಚಿತ್ರವಾದ 'ಬಂಗಾರ್ ಪಟ್ಲೇರ್' ನಾರಾಯಣ ಶೆಟ್ಟಿ ಅವರ 'ಸತ್ಯ ಬತ್ತಲೆ' ನಾಟಕವನ್ನು ಆಧರಿಸಿದೆ. 1993ರ ಎಪ್ರಿಲ್ 23ರಂದು ರಿಚರ್ಡ್ ಕ್ಯಾಸ್ಟಲಿನೊ ಅವರ ಪ್ರಯತ್ನದಿಂದ 'ಬಂಗಾರ್ ಪಟ್ಲೇರ್' ಸಿನಿಮಾವಾಗಿ ತೆರೆ ಕಂಡಿತು. ಸುಧಾರಾಣಿ, ವಾಮನ್‌ರಾಜ್, ಸರೋಜಿನಿ ಶೆಟ್ಟಿ, ವಿ.ಜಿ. ಪಾಲ್, ಕಾಸರಗೋಡು ಚಿನ್ನಾ, ರೋಹಿದಾಸ್ ಕದ್ರಿ, ರಾಮಣ್ಣ ರೈ, ಪದ್ಮ ಪ್ರಧಾನ ಭೂಮಿಕೆಯಲ್ಲಿದ್ದ ಈ ಚಿತ್ರವನ್ನು ಸ್ವತಃ ರಿಚರ್ಡ್ ಕ್ಯಾಸ್ಟಲಿನೊ ಅವರೇ ನಿರ್ಮಿಸಿ, ನಿರ್ದೇಶಿಸಿದ್ದಾರೆ.

ರಾಜಲಕ್ಷ್ಮಿ ಫಿಲಂಸ್ ಮಂಗಳೂರು ಇವರ ಈ ಚಿತ್ರದಲ್ಲಿ ಒಟ್ಟು ಐದು ಹಾಡುಗಳಿವೆ. ಚರಣ್ ಕುಮಾರ್ ಅವರು 'ರಾಗ್‌ದೇವ್' ಎಂಬ ಹೆಸರಿನಲ್ಲಿ ಸಂಗೀತ ನಿರ್ದೇಶನ ನೀಡಿದ್ದಾರೆ. ತುಳುನಾಡಿನ ಗ್ರಾಮೀಣ ಸೊಗಡನ್ನು ಛಾಯಾಗ್ರಹಣದ ಮೂಲಕ ಸೆರೆ ಹಿಡಿದ ಸುವರ್ಣರ ಕೈಚಳಕವನ್ನು ಇಲ್ಲಿ ಕಾಣಬಹುದು. ಮಂಗಳೂರಿನ 'ಜ್ಯೋತಿ' ಚಿತ್ರಮಂದಿರದಲ್ಲಿ 105 ದಿನಗಳ ಕಾಲ ಯಶಸ್ವಿ ಪ್ರದರ್ಶನ ಕಂಡ ಇದು ತುಳುವಿನ

ಮೊತ್ತಮೊದಲ ಈಸ್ಟ್‌ಮನ್ ಕಲರ್ ಸಿನಿಮಾ ಸ್ಕೋಪ್ ಚಿತ್ರವೂ ಹೌದು. ರಾಜ್ಯ ಪ್ರಶಸ್ತಿ ಮಾತ್ರವಲ್ಲ ರಾಷ್ಟ್ರೀಯ ಪುರಸ್ಕಾರವನ್ನು ಪಡೆದಿರುವುದೇ ಚಿತ್ರದ ಹೆಗ್ಗಳಿಕೆ.

ಪಟೇಲರ ಆದರ್ಶದ ಬದುಕು ಒಂದೆಡೆಯಾದರೆ, ತನಗೆ ಪಟೇಲ ಪಟ್ಟ ಸಿಗಲಿಲ್ಲವೆಂದು ವಿಷ ಕಾರುವ ನಾಗಣ್ಣ. ಇಲ್ಲಿ ಬೊಂಬಾಯಿ ಸೀತಮ್ಮನ ಜೊತೆ ಸೇರಿ ಕಳ್ಳಭಟ್ಟಿ ವ್ಯಾಪಾರ ನಡೆಸುವ ನಾಗಣ್ಣನ ವಿಷಕಾರಿ ಚಿಂತನೆಗಳು ಸಮಾಜವನ್ನು ಅಧಃಪತನಕ್ಕೆ ಕೊಂಡೊಯ್ಯುವ ಚಿತ್ರಣವಿದೆ. ಮುಂದೆ ನಿಷ್ಠಾವಂತ ಪೋಲಿಸ್ ಅಧಿಕಾರಿಯು ನಾಗಣ್ಣನನ್ನು ಕಾನೂನಿನ ಅಡಿಯಲ್ಲಿ ಬಂಧಿಸಿದರೂ ನೀಚ ರಾಜಕಾರಣವು ಕೊನೆಗೆ ಪೋಲಿಸ್ ಅಧಿಕಾರಿಯನ್ನೇ ವೃತ್ತಿಯಿಂದ ವಿಮುಖನಾಗುವಂತೆ ಮಾಡುತ್ತದೆ.

ನಾಗಣ್ಣನು ಪಟೇಲರ ವಿರುದ್ಧ ಚೋಮನ ಮಗ ವಕೀಲನಾದ ನಕ್ಕುರನನ್ನು ಎತ್ತಿ ಕಟ್ಟುತ್ತಾನೆ. ಚೋಮನ ಮಗಳಾದ ಕರ್ಗಿಯನ್ನು ಬಲಾತ್ಕರಿಸಲು ಮುಂದಾಗುತ್ತಾನೆ. ಕೊನೆಗೆ ನಿಜ ತಿಳಿದ ನಕ್ಕುರ ನಾಗಣ್ಣನ ವಿರುದ್ಧ ಹೋರಾಡುತ್ತಾನೆ. ಈ ವೈಷಮ್ಯವು ಮುಂದೆ ನಾಗಣ್ಣನು ದಲಿತ ಕೇರಿಗೆ ಬೆಂಕಿ ಇಡುವಂತೆ ಮಾಡುತ್ತದೆ. ಈ ದುರಂತದಲ್ಲಿ ಕರ್ಗಿ ಮತ್ತು ಆಕೆಯ ಪ್ರಿಯಕರ ಬಾಬು ಅಂತ್ಯವನ್ನು ಕಾಣುತ್ತಾರೆ. 'ಜಮೀನ್ದಾರಿ ಪದ್ಧತಿ'ಯ ಒಳಿತು-ಕೆಡುಕುಗಳ ಎರಡು ಮುಖಗಳು ಈ ಚಿತ್ರದಲ್ಲಿವೆ. ಭೂಸುಧಾರಣೆ ಕಾನೂನಿನ ಪ್ರಸ್ತಾಪವಿದೆ. ಜೊತೆಗೆ ಒಂದು ರೀತಿಯ ಹೊಲಸು ರಾಜಕಾರಣದ ಛಾಯೆ ಕೂಡಾ ಇದೆ.

ಈ ಚಿತ್ರದಲ್ಲಿ ಗಮನಿಸಬೇಕಾದ ಸಂಗತಿ ಎಂದರೆ 'ಬಾಬು-ಕರ್ಗಿ'ಯ ಪ್ರೇಮ. ಇವರಿಬ್ಬರ ಅಂತರ್ಜಾತಿ ವಿವಾಹಕ್ಕೆ ಪಟೇಲರು ಸಮ್ಮತಿಸಿದರೂ ಕೊನೆಗೆ ಈ ವಿವಾಹ ನಡೆಯುವುದಿಲ್ಲ. ಇಲ್ಲಿ ಒಂದು ನೆಲೆಯ ನಿರ್ದೇಶಕರ ಎಚ್ಚರಿಕೆಯ ಹೆಜ್ಜೆಯನ್ನು ಕೂಡಾ ಕಾಣಬಹುದು. ಆದರೂ ಎಲ್ಲಾ ಸಿನಿಮಾಗಳಂತೆಯೇ 'ಬಾಬು-ಕರ್ಗಿ'ಯ ಪ್ರೇಮ ಪ್ರಕರಣ ಸುಖಾಂತ್ಯವನ್ನು ಕಾಣದೇ ದುಃಖಾಂತ್ಯವನ್ನು ಕಾಣುವುದೇ ಸಿನಿಮಾದ ವೈಶಿಷ್ಟ್ಯವೂ ಹೌದು.

ಗಗ್ಗರ

ರಾಷ್ಟ್ರಮಟ್ಟದಲ್ಲಿ ತುಳು ಭಾಷೆ, ಸಂಸ್ಕೃತಿ ಮತ್ತೊಮ್ಮೆ ಗುರುತಿಸಲ್ಪಟ್ಟಿತ್ತೆಂದರೆ ಅದಕ್ಕೆ ಕಾರಣ 2008ರ ಶ್ರೇಷ್ಠ ಪ್ರಾದೇಶಿಕ ಚಲನಚಿತ್ರ ಪ್ರಶಸ್ತಿ ಪಡೆದ ತುಳುಚಿತ್ರ 'ಗಗ್ಗರ'. 1 ಗಂಟೆ 50 ನಿಮಿಷ ಕಾಲಾವಧಿಯ ಈ ಕಲಾತ್ಮಕ ಚಿತ್ರದ ನಿರ್ದೇಶಕರು ಶಿವಧ್ವಜ್. ಗುರುದತ್ ಅವರು ನಿರ್ಮಾಣ ಮಾಡಿದ ಈ ಚಿತ್ರವು 2011 ಮಾರ್ಚ್ 4ರಂದು ಮಂಗಳೂರಿನ 'ಜ್ಯೋತಿ' ಚಿತ್ರ ಮಂದಿರದಲ್ಲಿ ಬಿಡುಗಡೆಗೊಂಡಿತು.

ತುಳುನಾಡಿನ ವಿಶಿಷ್ಟ ಆರಾಧನಾ ಪದ್ಧತಿಯ 'ಭೂತರಾಧನೆ'ಯ ಅನಾವರಣ ಇಲ್ಲಿದೆ. ಭೂತ ಅಥವಾ ಕೋಲ ಕಟ್ಟಲು ಪರವ, ಪಂಬದ, ಅಜಿಲ, ನಲಿಕೆಯವರೆಂಬ ಪ್ರತ್ಯೇಕ ಜನಾಂಗವಿದೆ. ಈ ಜನಾಂಗವು ಸಮಾಜದ ಶೋಷಿತ ವರ್ಗ ಕೂಡಾ ಹೌದು. ಪ್ರಸ್ತುತ ಕಾಲಘಟ್ಟದಲ್ಲಿ ಶಿಕ್ಷಣ ಎನ್ನುವುದು ಎಲ್ಲರ ಕೈಗೆಟುಕಿ ವಿದ್ಯಾವಂತರಾಗುತ್ತಿದ್ದಾರೆ. ಅದಕ್ಕೆ ಈ ಜನಾಂಗದವರು ಹೊರತಾಗಿಲ್ಲ. ಹಾಗಾಗಿ ಇಂದು ಭೂತ/ಕೋಲ ಕಟ್ಟುವವರ ಮಕ್ಕಳು ವಿದ್ಯಾವಂತರು, ಉದ್ಯೋಗವಂತರು. ಕೆಲವೊಂದು ಸಂದರ್ಭಗಳಲ್ಲಿ ಈ ವಿದ್ಯಾವಂತ ಮಕ್ಕಳು ಭೂತ ಕಟ್ಟಲು ಸಿಗೋದಿಲ್ಲ. ಕಲಿತು ಉದ್ಯೋಗದ ಬೆನ್ನು ಹತ್ತಬೇಕೇ? ಅಥವಾ ಪರಂಪರೆಯಿಂದ ಬಂದಂತಹ ವೃತ್ತಿಯನ್ನು ಅನುಸರಿಸಬೇಕೇ? ಎಂಬ ದ್ವಂದ್ವತೆಗಳು ಚಿತ್ರದಲ್ಲಿವೆ.

ಡಾಕ್ಯುಮೆಂಟೇಶನ್ನಿಗಾಗಿ ವಿದೇಶಿ ತಂಡವೊಂದು ಶಿಕ್ಷಕನಾಗಿರುವ ಶಂಕರನ ಮನೆಗೆ ಬರುತ್ತದೆ. ಶಂಕರ ಭೂತ ಕಟ್ಟುವ ವ್ಯಕ್ತಿ ಚನಿಯನ ಮಗ. ಆತ ತನ್ನ 'ಭೂತ' ಕಾಲದ ಬದುಕನ್ನು ಅವರೆದುರು ತೆರೆದಿಡುತ್ತಾನೆ. ಇಲ್ಲಿ 'ಭೂತ' ಎಂದರೆ ಅತಿಮಾನುಷದ ಶಕ್ತಿಯೂ ಹೌದು, ಗತಕಾಲವೂ ಹೌದು. 'ಗಗ್ಗರ' ಎಂದರೆ ಭೂತದ ಕಾಲಿನ ಹಿತ್ತಾಳೆಯ ಗೆಜ್ಜೆ ಆಭರಣ. 'ಗಗ್ಗರ' ಕಟ್ಟಿದ ಮೇಲೆಯೇ ಆವೇಶ ಬರುವುದು ಭೂತ ಅವನಲ್ಲಿ ಅವಾಹನೆಗೊಳ್ಳುವುದು.

ಇಲ್ಲಿ ಸಮಸ್ಯೆ ಆರಂಭವಾಗುವುದು ಮಗ ಶಂಕರ ವಿದ್ಯಾವಂತನಾದಾಗ. ಚನಿಯನ ಆಕಸ್ಮಿಕ ಅನಾರೋಗ್ಯವು ಅವನನ್ನು ಭೂತಕೋಲದಿಂದ ದೂರ ಉಳಿಯುವಂತೆ ಮಾಡುತ್ತದೆ. ಊರಿನವರು ಚನಿಯನ ಮಗ ಶಂಕರನೆ ಭೂತ ಕಟ್ಟಬೇಕೆಂದಾಗ ಆತ ಒಪ್ಪುವುದೇ ಇಲ್ಲ. ಆದರೆ ಕೊನೆಗೆ ಆತ ಕೋಲ ಕಟ್ಟುತ್ತಾನೆ. "ಈರೆಗ್ ದೈವ ಬೋಡು, ದೈವ ಕಟ್ಟುನಾಯೆ ಬೊಡ್ಚಿ' (ನಿಮಗೆ ದೈವ ಬೇಕು, ದೈವ ಕಟ್ಟುವವ ಬೇಡ) ಎಂಬ ಮಾತಿನಿಂದ ಸಿನಿಮಾದ ಮುಖ್ಯ ಆಶಯವು ವ್ಯಕ್ತವಾಗುತ್ತದೆ.

ಸಿನಿಮಾದ ಕೊನೆಯಲ್ಲಿ ಶಂಕರ ಸ್ಕೂಟರಿನಲ್ಲಿ ಕೋಲದ ಪರಿಕರಗಳನ್ನಿಟ್ಟುಕೊಂಡು ಪತ್ನಿ ಮಗನೊಡನೆ ಕೋಲ ಕಟ್ಟಲು ತೆರಳುವುದು ಮಾತ್ರವಲ್ಲ, ಶಂಕರ ಮಗನ ಬಾಯಿಯಿಂದ "ನಾನೂ ಕೋಲ ಕಟ್ಟುತ್ತೇನೆ" ಎಂದು ಹೇಳಿಸುತ್ತಾನೆ. ನಮ್ಮ ಕಲೆ, ಜನಪದ ಪರಂಪರೆ ಉಳಿಯಬೇಕೆಂಬ ಆಶಿಸುವ ಇಂದಿನ ಸಮಾಜವು ಇಂತಹ ಕಲಾವಿದರ ಬದುಕಿಗೆ ಆಶಾದೀಪವಾಗಿದೆಯೇ? ಜಾತಿಪದ್ಧತಿಯನ್ನು ಹೋಗಲಾಡಿಸಿದೆಯೇ? ಎಂಬ ವಿಚಾರವನ್ನು ಪ್ರೇಕ್ಷಕನಲ್ಲಿ ಮೂಡಿಸುತ್ತದೆ.

ಜಾಗತೀಕರಣದ ಪ್ರವಾಹದ ಎದುರು ನಮ್ಮ ಭಾಷೆ, ಸಂಸ್ಕೃತಿ, ಆಚರಣೆ, ಸಂಪ್ರದಾಯ ನಲುಗುವ ಸ್ಥಿತಿಯ ಚಿತ್ರಣ ಇಲ್ಲಿದೆ. ಆದರೆ ಇಂತಹ ಉತ್ತಮ ಚಿತ್ರವೂ ಚಿತ್ರಮಂದಿರಗಳಲ್ಲಿ ಪ್ರದರ್ಶನವಾದರೂ ಪ್ರೇಕ್ಷಕನ ನೀರಸ ಪ್ರತಿಕ್ರಿಯೆ ತುಳು ಚಿತ್ರರಂಗದ ದೌರ್ಭಾಗ್ಯ ಎನ್ನಬಹುದು. ಆದರೂ 56ನೇ ರಾಷ್ಟ್ರೀಯ ಸಿನಿಮಾ ಪ್ರಶಸ್ತಿಗಳ ಪಟ್ಟಿಯಲ್ಲಿ 'ಅತ್ಯುತ್ತಮ ಪ್ರಾದೇಶಿಕ ಭಾಷಾ ಚಿತ್ರ'ವೆಂದು ಮನ್ನಣೆ ಪಡೆದಿರುವುದು ಮಾತ್ರವಲ್ಲ, ತುಳು ಸಿನಿಮಾ ಇತಿಹಾಸದಲ್ಲಿ 'ಪನೋರಮ'ಕ್ಕೆ ಆಯ್ಕೆಯಾದ ಪ್ರಪ್ರಥಮ ಚಿತ್ರ ಎಂಬ ಹೆಗ್ಗಳಿಕೆಯೂ ಈ ಸಿನಿಮಾದ್ದಾಗಿದೆ.

ಕಂಚಿಲ್ದ ಬಾಲೆ

'ಕಾಲಭೈರವ ಕ್ರಿಯೇಷನ್ಸ್' ಬೆಂಗಳೂರು ಇದರ ಮೂಲಕ ಅರ್ಪಿಸಿದ, ಕುಂಬ್ರ ಜಗನ್ನಾಥ ರೈ ನಿರ್ಮಿಸಿ ನಿರ್ದೇಶಿಸಿರುವ 'ಕಂಚಿಲ್ದ ಬಾಲೆ' ಚಿತ್ರವು 2011ರ ಮಾರ್ಚ್ 25ರಂದು ಮಂಗಳೂರಿನ ಪ್ರಭಾತ್ ಚಿತ್ರ ಮಂದಿರದಲ್ಲಿ ಬಿಡುಗಡೆಯಾಗಿ ಪ್ರದರ್ಶನಗೊಂಡಿತು. ಪ್ರದೀಪ್ ಚಂದ್ರ, ಮಾನಸಿ, ಡಿ.ಎಸ್. ಬೋಳೂರು, ಸುಧೀರ್ ರಾಜ್ ಕಟೀಲು ತಾರಾಗಣದೊಂದಿಗೆ ವಿಶೇಷ ಪಾತ್ರದಲ್ಲಿ ಶಕುಂತಲಾ ಶೆಟ್ಟಿ, ಮುತ್ತಪ್ಪ ರೈ ಅವರು ಹಾಗೂ ಅತಿಥಿ ಪಾತ್ರದಲ್ಲಿ ನವೀನ್ ಡಿ. ಪಡೀಲ್, ಅರವಿಂದ ಬೋಳಾರ್, ಸಾಯಿಕೃಷ್ಣ ಕುಡ್ಲ ಇರುವ ಈ ಚಿತ್ರದಲ್ಲಿ ಹಳ್ಳಿಯ ನೈಜ ದೃಶ್ಯಗಳನ್ನು ಸುಂದರವಾಗಿ ಸೆರೆ ಹಿಡಿದ ನೋಟವಿದೆ.

ಅಮೆರಿಕಾದಿಂದ ಹಳ್ಳಿಗೆ ಬರುವ ಮನುವಿನ ಪುಟ್ಟ ಸಂಸಾರ. ಮನುವಿಗೆ ಮಗಳಾದದ್ದು ತಾನು ಹೇಳಿದ ಹರಕೆಯಿಂದ ಎಂಬ ನಂಬಿಕೆಯ ಅಜ್ಜಿಯು ಮಗುವನ್ನು ಕಂಚಿಯಲ್ಲಿ ಹಾಕಬೇಕು ಎನ್ನುತ್ತಾಳೆ. ಆದರೆ ಹರಕೆಯಿಂದ ಮಗುವಾಗಿದೆ ಅದಕ್ಕಾಗಿಯೇ ಮಗುವನ್ನು ಕಂಚಿಯಲ್ಲಿ ಹಾಕಲು ಮನುವಿನ ಮನಸ್ಸು ಒಪ್ಪುವುದಿಲ್ಲ. "ದೀಪ ತೆಕ್ಕವುನವು, ಬಿಸತ್ತಿ ಪಾಡುನವು ನಮ್ಮ ಸಂಸ್ಕೃತಿ ಅತ್, ದೀಪ ಬೆಳಗವುನವು ನಮ್ಮ ಸಂಸ್ಕೃತಿ" (ದೀಪ ಆರಿಸುವುದು, ಚಾಕು ಹಾಕುವುದು ನಮ್ಮ ಸಂಸ್ಕೃತಿ ಅಲ್ಲ, ದೀಪ ಬೆಳಗಿಸುವುದು ನಮ್ಮ ಸಂಸ್ಕೃತಿ) ಎಂಬ ಅಜ್ಜಿಯ ಮಾತು ತುಳುನಾಡಿನ ಮಣ್ಣಿನ ಗುಣವನ್ನು ತೋರಿಸಿದೆ. ನಂಬಿಕೆಗಳನ್ನು ವೈಜ್ಞಾನಿಕ ದೃಷ್ಟಿಯಿಂದ ನೋಡುವ ಚಿತ್ರಣ ಕೂಡಾ ಇಲ್ಲಿದೆ. ಉದಾ: ದೃಷ್ಟಿ ತೆಗೆಯುವುದು. ಜೊತೆಗೆ ಮಹಾಬಲ ಅನ್ನುವ ಪಾತ್ರದ ಮೂಲಕ ಸ್ಥಳಿಯ ಇತಿಹಾಸವನ್ನು ಪರಿಚಯಿಸುವ ಸಣ್ಣ ಪ್ರಯತ್ನ ಈ ಚಿತ್ರದಲ್ಲಿದೆ.

ಚಿತ್ರದಲ್ಲಿರುವ–

"ತುಳುನಾಡ ಜಾಲೊರ್ಮೆ, ಅಡಿದೀಂಡ ಪೊಡಿಬಾಲೆ

ತುಳುವಪ್ಪೆ ಕೈತೂದು ಬೆರಗಾಂಡ ಪುರುಬಾಲೆ" ಈ ಹಾಡಿನ ಸಂಗೀತ, ಸಾಹಿತ್ಯ ಬಹಳ ಇಂಪಾಗಿ ಹಾಗೂ ಅರ್ಥವತ್ತಾಗಿ ಮೂಡಿ ಬಂದಿದೆ.

"ನಂಬುನಕ್ಲ್ ಇಪ್ಪುನಗ ನಂಬವುನೆಕ್ ದಾನೆ..." (ನಂಬುವವರು ಇದ್ದಾಗ ನಂಬಿಸುವುದಕ್ಕೆ ಏನು...) ಎನ್ನುವ ಕಪಟ ಕುಪ್ಪಣ್ಣ ಭಟ್ಟರು ತನ್ನ ಮನೆಯ ಸಮಸ್ಯೆಯನ್ನು ನಿವಾರಿಸಲಾಗದಿದ್ದರೂ, ಊರಿನ ಜನರ ಸಮಸ್ಯೆಗಳಿಗೆ ಪರಿಹಾರ ಹೇಳುವುದು ವ್ಯಂಗ್ಯವಾಗಿ ಕಾಣುತ್ತದೆ. ನಮ್ಮ ನಾಡಿನಲ್ಲಿ ಹಳ್ಳಿಯ ಜನರು ಜ್ಯೋತಿಷ್ಯ ಶಾಸ್ತ್ರ ಹಾಗೂ ಸಾಮಾನ್ಯವಾಗಿ ಹರಕೆಯ ಮೇಲೆ ಹೇಗೆ ಅವಲಂಬಿತರಾಗುತ್ತಾರೆ ಎಂಬುವುದರ ಚಿತ್ರಣವಿದೆ. ನಂಬಿಕೆ

ಬೇರೆ, ಮೂಢನಂಬಿಕೆ ಬೇರೆ ಎಂಬ ಎಚ್ಚರಿಕೆಯ ಸಂದೇಶದ ಜೊತೆಗೆ ಅಜ್ಜಿಯ ನಂಬಿಕೆ ಮತ್ತು ಮನುವಿನ ವಿಚಾರಗಳ ನಡುವೆ ಸಣ್ಣ ಸಂಘರ್ಷವಿದೆ. ಆದರೂ ಕೊನೆಗೂ ಅಜ್ಜಿಯ ಮಾತಿನಂತೆ ಮಗುವನ್ನು ಕಂಚಿಯಲ್ಲಿ ಹಾಕಲು ಮನು ಒಪ್ಪುವುದು ಮೂಲ ಸಂಸ್ಕೃತಿಯ ಉಳಿವಿನ ಮಹತ್ವವನ್ನು ಸಾರುತ್ತದೆ.

ಚಿತ್ರದ ಕೊನೆಗೆ –

ಮೂಲ ನಂಬಿಕೆನ್ ಒರಿಪುಲೆ (ಮೂಲ ನಂಬಿಕೆಯನ್ನು ಉಳಿಸಿ)

ಮೂಢ ನಂಬಿಕೆನ್ ದಂಟ್‌ಲೆ (ಮೂಢ ನಂಬಿಕೆಯನ್ನು ನಿರ್ಲಕ್ಷಿಸಿ)

ಎಂಬ ಸಂದೇಶ ಪ್ರೇಕ್ಷಕನಲ್ಲಿ ನಂಬಿಕೆ, ಸಂಪ್ರದಾಯಗಳ ಬಗ್ಗೆ ಒಂದು ನೆಲೆಯಲ್ಲಿ ವೈಚಾರಿಕತೆಯನ್ನು, ಜಾಗೃತಿಯನ್ನು ಮೂಡಿಸುತ್ತದೆ.

ಒರಿಯದ್ ಒರಿ ಅಸಲ್

"ತುಳು ಸಿನಿಮಾಗಳನ್ನು ನಿರ್ಮಿಸುವುದೆಂದರೆ ಹಣ ಸುಡಲು ಹೊರಟಂತೆ" ಎಂಬ ಮಾತು ಒಂದು ಕಾಲದಲ್ಲಿ ಜನಜನಿತವಾಗಿತ್ತು. ಆದರೆ ಈ ಭಯವನ್ನು ದೂರಮಾಡಿದ್ದು ವಿಜಯ ಕುಮಾರ್ ಕೊಡಿಯಾಲ್ ಬೈಲ್ ಅವರ 'ಒರಿಯದ್ ಒರಿ ಅಸಲ್' ಚಿತ್ರ. 175 ದಿನಗಳ ಯಶಸ್ವಿ ಪ್ರದರ್ಶನ ಕಂಡ ತುಳುವಿನ ಮೊತ್ತ ಮೊದಲ ಸಿನಿಮಾ ಕೂಡ ಹೌದು.

"ಕುಡ್ಲ ಪನ್ಪಿನ ಊರುದುಲಯಿ
ಸಿಟಿತ ನಡುಟ್ ಒಂತೆ ಉಲಯಿ
ಮೀಸೆ ಕೇಚುನ ಬಿತ್ತಿಲ್‌ಡ್

ಒರಿಯದ್ ಒರಿ ಅಸಲ್‌ಯೆ, ಒರಿಯದ್ ಒರಿ ಅಸಲ್‌ಯೆ" – ಎಂಬ ಹಾಡಿನೊಂದಿಗೆ ಆರಂಭವಾಗುವ ಈ ಸಿನಿಮಾದಲ್ಲಿ ಭವಾನಿ ಶಂಕರ್ ಹಾಗೂ ಅವನ ನಾಲ್ಕು ಬಿಡಾರದವರ ಕತೆಯನ್ನು ಹೆಣೆಯಲಾಗಿದೆ. ಬಿಡಾರದಲ್ಲಿರುವ ಡ್ರೈವರ್ ಬಾಬಣ್ಣನ ಮಗ ಮುನ್ನ ನಾಯಕನ ಸ್ಥಾನದಲ್ಲಿ ನಿಂತು ತುಳುನಾಡಿನ ಮೂಲ ಸಂಸ್ಕೃತಿಯ ಉಳಿವಿಗಾಗಿ ಊರಿನವರ ಜೊತೆಗೂಡಿ ಹೋರಾಡುತ್ತಾನೆ. ಹಾಗೆಯೇ ಆರಂಭದಲ್ಲಿ ದುರಹಂಕಾರಿಯಾದ ಭವಾನಿ ಶಂಕರನ ಮಗಳು ಪ್ರಿಯಾ, ಮುನ್ನನ ಸ್ವಭಾವದಿಂದ ಪ್ರೇರಿತಳಾಗಿ ಆತನನ್ನು ಪ್ರೀತಿಸಲು ತೊಡಗುತ್ತಾಳೆ. ಮಗಳ ಪ್ರೀತಿಯನ್ನು, ವಠಾರದ ಜನರನ್ನು ದ್ವೇಷಿಸುತ್ತಿದ್ದ ಭವಾನಿ ಶಂಕರ್ ಕೊನೆಗೆ ಪರಿವರ್ತಿತನಾಗುತ್ತಾನೆ. ಚಿತ್ರದುದ್ದಕ್ಕೂ ಕಾರ್ಪೋರೇಟರ್ ಕಾಂತಪ್ಪಣ್ಣನ, ಡ್ರೈವರ್ ಬಾಬಣ್ಣನ ಹಾಗೂ ಭಜನೆ ಬಸಪ್ಪಣ್ಣನ ಪಾತ್ರಗಳು ನೋಡುಗರನ್ನು ನಗೆಗಡಲಲ್ಲಿ ತೇಲಿಸಿ ಬಿಡುತ್ತವೆ.

ಚಿತ್ರದಲ್ಲಿ ಮಂಗಳೂರು ನಗರದ ಪ್ರಮುಖ ಸಮಸ್ಯೆಯಾದ ನೀರಿನ ಸಮಸ್ಯೆ, ಸ್ಥಳೀಯ ರಾಜಕಾರಣದ ಪೊಳ್ಳು ಭರವಸೆಗಳ ದರ್ಶನದ ಜೊತೆಗೆ ಸಮಸ್ಯೆಗಳ ಕುರಿತಾಗಿ ಜನರ ಪ್ರತಿಧ್ವನಿಯ ಚಿತ್ರಣವಿದೆ. ಭೂವ್ಯವಹಾರ ದಂಧೆಯ ಛಾಯೆಯನ್ನು ಇಲ್ಲಿ ಕಾಣಬಹುದು. ತುಳು ಭಾಷೆಯನ್ನು ಎಂಟನೇ ಪರಿಚ್ಛೇದಕ್ಕೆ ಸೇರಿಸಲಾಗಿಲ್ಲವೆಂಬ ನೋವು ಹಾಗೂ ಸೇರಿಸಲೇಬೇಕೆಂಬ ತುಡಿತ ಚಿತ್ರದುದ್ದಕ್ಕೂ ಇದೆ.

ಕರಾವಳಿಯು ಶಿಕ್ಷಣ ಸಂಸ್ಥೆಗಳಿಗೆ ಪ್ರಸಿದ್ಧ. ಆದರೆ ಹೆಚ್ಚಿನ ವಿದ್ಯಾಸಂಸ್ಥೆಗಳು ರಾಜಕಾರಣಿಗಳ ಹಿಡಿತದಲ್ಲಿರುವುದನ್ನು, ಕೃಷಿಭೂಮಿಯನ್ನು ಅಭಿವೃದ್ಧಿ ಎಂಬ ಹೆಸರಿನಲ್ಲಿ ಖಾಸಗಿ ಕಂಪೆನಿಗಳು ಒತ್ತುವರಿ ಮಾಡಲು ಯತ್ನಿಸುವಂತಹ ಕಾರ್ಯಗಳನ್ನು ಸಾಂದರ್ಭಿಕವಾಗಿ ಬಿಂಬಿಸಲಾಗಿದೆ. "ಗೇಲ್ ತುಳುನಾಡ್‌ದ ನೆಲ-ನೀರ್-ಸಂಸ್ಕೃತಿನ್ ಪ್ರೀತಿ ಮನ್ಪುನಕ್‌ಲೆನ ಮರ್ಗಿಲ್‌ಡೆ ಉಂಡು" (ಗೆಲುವು ತುಳುನಾಡಿನ ನೆಲ-ನೀರು-ಸಂಸ್ಕೃತಿಯನ್ನು ಪ್ರೀತಿ ಮಾಡುವವರ ಹೃದಯದಲ್ಲಿಯೇ ಇದೆ) ಎಂಬ ನಾಯಕನ ಮಾತು ಹೋರಾಟಗಾರರನ್ನು ಪ್ರೇರೆಪಿಸುವಂತಿದೆ. ಒಟ್ಟಿನಲ್ಲಿ ತುಳುನಾಡ ಸಂಸ್ಕೃತಿಯ ಒಲವು ಚಿತ್ರದಲ್ಲಿದೆ. ಹಾಗೆಯೇ ಚಿತ್ರದ ಕೊನೆಗೆ ಅನಿವಾರ್ಯವಾಗಿ 'ಫ್ಲ್ಯಾಟ್ ಸಂಸ್ಕೃತಿ'ಗೆ ಹೊಂದಿಕೊಳ್ಳುವ ಸಂದರ್ಭವನ್ನು ಕೂಡ ನಾವು ಗಮನಿಸಬೇಕಾಗುತ್ತದೆ.

2011ರ ಮೇ ತಿಂಗಳ 27ರಂದು ಮಂಗಳೂರಿನ 'ಜ್ಯೋತಿ' ಚಿತ್ರಮಂದಿರದಲ್ಲಿ ಬಿಡುಗಡೆಗೊಂಡು ನಂತರ 'ಪ್ರಭಾತ್' ಚಿತ್ರಮಂದಿರದಲ್ಲಿ ಒಟ್ಟು 25 ವಾರಗಳ ಪ್ರದರ್ಶನ ಕಂಡು ದಾಖಲೆ ನಿರ್ಮಿಸಿದ ಚಿತ್ರವಿದು. ತುಳು ಚಿತ್ರರಂಗದ ಇತಿಹಾಸದಲ್ಲಿ ದೊಡ್ಡ ಹಿಟ್ ಮತ್ತು 10 ಮಿಲಿಯನ್ ಬಜೆಟ್ ಮತ್ತು ಸುಮಾರು 5 ಮಿಲಿಯನ್ ಲಾಭವನ್ನು ತಂದುಕೊಟ್ಟ ಚಿತ್ರವಾಗಿದೆ. ಲಿಖಿತ್ ಶೆಟ್ಟಿ, ನವೀನ್ ಡಿ. ಪಡೀಲ್, ಅರವಿಂದ ಬೋಳಾರ್, ರಾಜೇಶ್ ಬಂಟ್ವಾಳ, ಸಂತೋಷ್ ಶೆಟ್ಟಿ, ರಮ್ಯಾ ಬಾರ್ನೆ, ರೇಖಾದಾಸ್, ಎಂ.ಎನ್. ಲಕ್ಷ್ಮಿದೇವಿ ಮುಂತಾದ ತಾರಾಗಣವಿರುವ ಚಿತ್ರಕ್ಕೆ ಕಥೆ-ಚಿತ್ರಕಥೆ-ಸಂಭಾಷಣೆ ಹಾಗೂ ಗೀತಸಾಹಿತ್ಯ ವಿಜಯ್‌ಕುಮಾರ್ ಕೊಡಿಯಾಲ್‌ಬೈಲ್ ಅವರದ್ದು. ರೂಪಲಕ್ಷ್ಮಿ ಫಿಲಂಸ್ ಅವರು ನಿರ್ಮಿಸಿದ ಈ ಚಿತ್ರವನ್ನು ಹ. ಸೂ. ರಾಜಶೇಖರ್ ಅವರು ನಿರ್ದೇಶಿಸಿರುತ್ತಾರೆ.

ದೇವೆರ್



ಈ ಚಿತ್ರದ ಕಥಾವಸ್ತುವೇ ಬಹಳ ವಿಭಿನ್ನವಾಗಿದೆ. ಇಲ್ಲಿಯವರೆಗೆ ತುಳು ಸಿನಿಮಾ ಅಂದರೆ ಕೇವಲ ಗುತ್ತಿನ ಮನೆಯ ವೈಭವ, ಕೋಲ-ಕಂಬಳ ಮುಂತಾದ ಕಲೆಗಳ ಪ್ರದರ್ಶನ, ಹಾಸ್ಯ, ಪ್ರೀತಿ-ಪ್ರೇಮ ಎಂದು ನಂಬಲಾಗಿತ್ತು. ಆದರೆ ಈ ಚಿತ್ರ ಸಮಾಜದಲ್ಲಿ ಬದುಕುವ ಒಂದು ವರ್ಗದ ಸಾಮಾಜಿಕ ಬದುಕಿನ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡಿದ್ದು ನಿಜಕ್ಕೂ

ಮೆಚ್ಚುವಂತಹುದು.

ಕಸ ಗುಡಿಸುವ ಕೆಲಸದವನಾದ ತನಿಯ ಪ್ರಾಮಾಣಿಕತೆಯುಳ್ಳವನು. ಕೆಲಸವೇ ದೇವರೆಂದು ನಂಬಿ ಬದುಕುವವ. ಇವನ ಆದರ್ಶ ಜೀವನವನ್ನು ಬಿಂಬಿಸುತ್ತಾ, ಸಮಾಜದಲ್ಲಿರುವ ಜಾತಿಪದ್ಧತಿಯ ಕರಿಛಾಯೆಯ ದರ್ಶನವಾಗುತ್ತದೆ. (ಶಾಲೆಯಲ್ಲಿ ತನಿಯನ ಜೊತೆ ಕುಳಿತುಕೊಳ್ಳಲು ವಿದ್ಯಾರ್ಥಿಗಳು ನಿರಾಕರಿಸುವುದು) ಕೆಳಜಾತಿಯವರನ್ನು ಸದಾ ಮೈಲಿಗೆ ಎಂದು ದೂರವಿಡುವ ನಮ್ಮ ಸಮಾಜ ಅನಿವಾರ್ಯವಾದಾಗ ಅವರನ್ನು ಒಪ್ಪಿಕೊಳ್ಳುವ ಪ್ರಸಂಗಗಳು ಇಲ್ಲಿವೆ. ಜಾತಿಯ ಹೆಸರಿನಲ್ಲಿ ದಿನ ಸಾಯುವ ಒಂದು ವರ್ಗದ ನೋವಿನ ಚಿತ್ರಣದೊಂದಿಗೆ ಸಮಾನತೆಯನ್ನು ಬಯಸಿ ತನಿಯನ ಜೊತೆಗೆ ಸಹಪಂಕ್ತಿ ಭೋಜನ ಮಾಡುವ ಅಪ್ಪಣ್ಣ ಭಟ್ಟರ ಪಾತ್ರವೂ ಇದೆ.

"ಸುರುಟ್ ಗಂಗಸರನ್ ನಮ ಪರ್ಪ, ಬೊಕ್ಕ ಅವು ನಮನೇ ಪರ್ಪುಂಡು" (ಮೊದಲು ಸಾರಾಯಿಯನ್ನು ನಾವು ಕುಡಿಯುತ್ತೇವೆ, ಮತ್ತೆ ಅದು ನಮ್ಮನ್ನೇ ಕುಡಿಯುತ್ತದೆ) ಎನ್ನುವ ತನಿಯನ ಮಾತು ಆತನನ್ನು ಸಮಾಜ ಸುಧಾರಕನಂತೆ ಬಿಂಬಿಸಿದೆ. ಕನ್ನಡ ಶಾಲೆಯ ಉಳಿವಿನ ಚಿಂತನೆ, ಮಹತ್ವವನ್ನು ಇಲ್ಲಿ ಕಾಣುತ್ತೇವೆ. ಒಂದು ಹಂತಕ್ಕೆ ಹಿಂದೂ ಧರ್ಮದಿಂದ ದೂರವಾಗಿ ಬೌದ್ಧ ಧರ್ಮಕ್ಕೆ ಸೇರುವ ಆಲೋಚನೆಯಲ್ಲಿದ್ದ ತನಿಯ ಮುಂದೆ ಹಿಂದೂ ಧರ್ಮದಲ್ಲಿಯೇ ಉಳಿಯಲು ನಿರ್ಧರಿಸುತ್ತಾನೆ.

ಬಡತನವೇ ಶಾಪ. ಅದರ ಮೇಲೆ ಕಾಯಿಲೆ ಅಂಟಿಕೊಂಡಾಗ ಬದುಕು ಎಷ್ಟು ಯಾತನೆ ಎಂಬುವುದರ ಚಿತ್ರಣ ಇಲ್ಲಿದೆ. ಲಂಚ ತೆಗೆದುಕೊಳ್ಳುವ ಈ ಸಮಾಜದಲ್ಲಿ ಲಂಚ ತೆಗೆದುಕೊಳ್ಳದವ ಎಲ್ಲರಿಗೂ ವಿಚಿತ್ರವಾಗಿ ಕಾಣುತ್ತಾನೆ. ಆದರೆ ಈ ಚಿತ್ರದಲ್ಲಿ ಅವನೇ ಕೊನೆಗೆ ದೇವರಾಗುತ್ತಾನೆ. ಲಂಚ ತೆಗೆದುಕೊಳ್ಳದ ತನಿಯ ಕೊನೆಗೆ ಲಂಚ ಕೊಡಬೇಕಾದ ಪರಿಸ್ಥಿತಿಗೆ ಬರುತ್ತಾನೆ. ಪ್ರಾಮಾಣಿಕ ಜೀವನಕ್ಕೆ ಕಷ್ಟಗಳ ಸುರಿಮಳೆ ತಪ್ಪಿದ್ದಲ್ಲ ಎಂಬುವುದಕ್ಕೆ ಈ ಸಿನಿಮಾವು ಹೊರತಾಗಿಲ್ಲ. ಈ ಸಮಾಜದ ಅಪ್ರಾಮಾಣಿಕತೆಗೆ ಪತ್ನಿಯನ್ನು, ಮಗನನ್ನು ಕಳಕೊಂಡ ತನಿಯ ಕೊನೆಗೂ ತನ್ನ ಪ್ರಾಮಾಣಿಕತೆಯನ್ನು ಬಿಡದೆ ದೇವರಾಗುತ್ತಾನೆ.

ಸುಧೀರ್ ಕೊಟ್ಟಾರಿ, ಲಹರಿ, ಸುಧಾಕರ ಬನ್ನಂಜೆ, ಚೇತನ್ ರೈ, ಶೇಖರ ಭಂಡಾರಿ ಮುಂತಾದ ಪ್ರಧಾನ ತಾರಗಣವನ್ನು ಒಳಗೊಂಡ ವಚನ್ ಶೆಟ್ಟಿ, ವಿ.ಕೆ. ಪ್ರಕಾಶ್ ಹಾಗೂ ಶ್ರೀಮತಿ ವೇದಾವತಿ ಶೆಟ್ಟಿ, ಜಯಶೀಲ ಶೆಟ್ಟಿ ಅವರು ನಿರ್ಮಿಸಿರುವ ಸುಧಾಕರ್ ಬನ್ನಂಜೆ ಅವರ ಮೂಲಕತೆ–ಚಿತ್ರಕಥೆ, ನಿರ್ದೇಶನವಿರುವ ಈ 'ದೇವೆರ್' ಚಿತ್ರವು 2010ರ ಅಗಸ್ಟ್ 27ರಂದು ಮಂಗಳೂರಿನ ಪ್ರಭಾತ್ ಚಿತ್ರಮಂದಿರದಲ್ಲಿ ಬಿಡುಗಡೆಯಾಯಿತು. ಡಿ.ಟಿ.ಎಸ್ ಸೌಂಡ್ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವ ಪ್ರಥಮ ತುಳುಚಿತ್ರ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ.

ಇತ್ತೀಚೆಗೆ ತುಳು ಸಿನಿಮಾಗಳಿಗೆ ಸುಗ್ಗಿ ಕಾಲ. ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಚಿತ್ರಮಂದಿರಗಳನ್ನು ಗಮನಿಸಿದಾಗ ಈ ಅಂಶ ಸ್ಪಷ್ಟವಾಗುತ್ತದೆ. ನಿರ್ಮಾಣವಾಗುವ ಎಲ್ಲಾ ತುಳು ಸಿನಿಮಾಗಳಿಗೂ ಇಂದು ಪ್ರಚಾರದ ಜೊತೆಗೆ ಜನಪ್ರಿಯತೆಯು ಸಿಗುತ್ತಿದೆ.

ಆದರೆ ಈ ಚಿತ್ರಗಳಲ್ಲಿ ಸಂದೇಶ ಬೀರುವ ಮೌಲ್ಯಗಳಿವೆಯೇ? ಅಥವಾ ಇವುಗಳು ಪ್ರಾದೇಶಿಕ ಸಂಸ್ಕೃತಿಯನ್ನು ಬಿಂಬಿಸುತ್ತಿದೆಯೇ? ಎಂಬುವುದನ್ನು ಕೂಡಾ ನಾವಿಲ್ಲಿ ತಿಳಿದುಕೊಳ್ಳಬೇಕು.

ಸಿನಿಮಾಗಳು ಯಾವ ಉದ್ದೇಶಕ್ಕಾಗಿ ನಿರ್ಮಾಣವಾಗುತ್ತಿದೆ ಪ್ರಚಾರಕ್ಕಾಗಿಯೇ? ಲಾಭಕ್ಕಾಗಿಯೇ? ಅಥವಾ ತುಳು ಭಾಷೆ-ಸಂಸ್ಕೃತಿ ಮೇಲಿನ ಅಭಿಮಾನಕ್ಕಾಗಿಯೇ? ಎಂಬುವುದನ್ನು ಸಿನಿಮಾವನ್ನು ಕಂಡಾಗ ಹೇಳಲಾಗದು. ಅತಿಯಾದ ಸ್ಪರ್ಧೆಯಿಂದ ಕೆಲವೊಮ್ಮೆ ತುಳು ಸಿನಿಮಾ ರಂಗವು ಹಿನ್ನಡೆಯನ್ನು ಅನಭವಿಸಬಹುದು.

ಒಂದು ಕಾಲದಲ್ಲಿ ವರ್ಷಕ್ಕೆ ಒಂದು ಅಥವಾ ಎರಡೋ ಸಿನಿಮಾಗಳು ತೆರೆ ಕಾಣುವಂತಹ ಸಂದರ್ಭವಿತ್ತು. ಆದರೆ ಇತ್ತೀಚೆಗೆ ಲಾಭದ, ಗೆಲುವಿನ ಲೆಕ್ಕಚಾರಗಳು ತುಳುವಿನಲ್ಲಿ ಸಾಲು ಸಾಲು ಸಿನಿಮಾಗಳನ್ನು ಹುಟ್ಟು ಹಾಕುತ್ತಿದೆ. ಇಲ್ಲಿ ಪ್ರೇಕ್ಷಕರ ಹಾಗೂ ಚಿತ್ರಮಂದಿರದ ಸೀಮಿತ ವ್ಯಾಪ್ತಿ ಇದೆ ಎಂಬ ವಾಸ್ತವವನ್ನು ತಿಳಿದುಕೊಳ್ಳುವ ಅವಶ್ಯಕತೆಯಿದೆ. ಯಶಸ್ಸು ಚಿತ್ರಗಳ ತಂತ್ರಗಳನ್ನು ಅನುಸರಿಸಿ ನಿರ್ಮಾಣವಾಗುವ ಚಿತ್ರಗಳು ಗೆಲ್ಲುತ್ತವೆ ಎಂಬ ವಿಶ್ವಾಸ ಕಡಿಮೆ. ಕನ್ನಡದಲ್ಲಿ ವರ್ಷಕ್ಕೆ ಸುಮಾರು ಅಂದರೆ 120ರಿಂದ 130ರವರೆಗೆ ಸಿನಿಮಾಗಳು ಪ್ರದರ್ಶನಗೊಳ್ಳುತ್ತಿವೆ. ಕನ್ನಡದಲ್ಲಿ ಉಂಟಾಗಿರುವ ಚಿತ್ರಮಂದಿರದ ಸಮಸ್ಯೆ ಇಂದು ತುಳು ಸಿನಿಮಾ ರಂಗದ ಬೆನ್ನು ಬಿದ್ದಿದೆ.

ಇತ್ತೀಚೆಗೆ ಪತ್ರಿಕೆಯಲ್ಲಿ ಒಂದು ತುಳು ಸಿನಿಮಾದ ಜಾಹೀರಾತು 'ಹೌಸ್‌ಫುಲ್' ಎಂದಿತ್ತು. ಆದರೆ ಚಿತ್ರ ವೀಕ್ಷಣೆಗೆ ಹೋದಾಗ ಅಲ್ಲಿದ್ದ ಪ್ರೇಕ್ಷಕರ ಸಂಖ್ಯೆ 20ರ ಗಡಿ ದಾಟಿರುವುದು ಅನುಮಾನವಿತ್ತು. ಅಂದರೆ ಇದು ಸುಮ್ಮನೆ ಪ್ರಚಾರದ ತಂತ್ರವೇ? ಅಥವಾ ಚಿತ್ರಮಂದಿರದ ಬಾಡಿಗೆ ನೀಡಿ ಹೆಚ್ಚು ದಿನ ಸಿನಿಮಾ ಓಡಿಸುವ ಶಕ್ತಿಯೋ? ತಿಳಿಯದು. ದಾಖಲೆಯ ಹೆಸರಿನಲ್ಲಿ ಇನ್ನಾವುದೋ ಬಿಡುಗಡೆಯಾಗಲು ಕಾಯುತ್ತಿರುವ ಚಿತ್ರಕ್ಕೆ ಅನ್ಯಾಯ ಆಗಬಾರದು.

ಇಂದು ತುಳು ಸಿನಿಮಾ ರಂಗದ ಪೈಪೋಟಿಯು ಪ್ರೇಕ್ಷಕನಲ್ಲಿ ಗೊಂದಲವನ್ನು ಉಂಟು ಮಾಡಿದೆ. ಸಿನಿಮಾ ನೋಡುವುದಿರಲಿ ಕೆಲವೊಂದು ಸಿನಿಮಾ ಬಂದು ಹೋಗಿದೆಯೆಂಬ ವಿಚಾರವೂ ನೆನಪಿಗೆ ಬಾರದು. ನಮ್ಮ ಮಣ್ಣಿನ ಸಂಸ್ಕೃತಿಗೆ ಹತ್ತಿರವಾಗಿ, ಬಂಡವಾಳ ಸಂಸ್ಕೃತಿಯಿಂದ ದೂರ ಇದ್ದಷ್ಟು ತುಳು ಸಿನಿಮಾಕ್ಕೆ ಒಳ್ಳೆಯದು. ಒಂದು ಸಿನಿಮಾ ಬಿಡುಗಡೆಯಾಗಿ ಕನಿಷ್ಠ ತಿಂಗಳ ಕಾಲದ ಅಂತರವಿಲ್ಲದೆ ಮತ್ತೊಂದು ಸಿನಿಮಾ ಬಿಡುಗಡೆಯಾಗುವುದು ಅಥವಾ ಒಳ್ಳೆಯ ಸಿನಿಮಾಗಳು ಬೆನ್ನುಬೆನ್ನಿಗೆ ಬಿಡುಗಡೆಯಾದರೆ ಅದು ಪ್ರೇಕ್ಷಕನ ಮಿತಿಯಿಂದ ಕೈ ತಪ್ಪಿ ಹೋಗುವ ಸಂದರ್ಭವೇ ಹೆಚ್ಚು. ಅಲ್ಲದೆ, ಚಿತ್ರಮಂದಿರದ ಸಮಸ್ಯೆಯನ್ನು ಎದುರಿಸಬೇಕಾದಿತು. ಇದಕ್ಕಾಗಿ ನಿರ್ಮಾಪಕರ ಪರಸ್ಪರ ಹೊಂದಾಣಿಕೆಯು ಅಗತ್ಯ. "ನಮ್ಮಲ್ಲಿ ಭಾಷಾಭಿಮಾನ ಇನ್ನೂ ಬೆಳೆಯಲಿ. ಆದರೆ ಸ್ಪರ್ಧೆಗಳು ಬೇಡ. ಉತ್ತಮವಾದುದನ್ನು ನೀಡಿದರೆ ಜನ ಖಂಡಿತ ಸ್ವೀಕರಿಸುತ್ತಾರೆ ಎನ್ನುವುದಕ್ಕೆ ಹಲವಾರು ಯಶಸ್ವಿ ಸಿನಿಮಾಗಳು ಸಾಕ್ಷಿಯಾಗಿದೆ". ಚಿತ್ರ ನಿರ್ಮಾಪಕ ಹಾಗೂ ವಿತರಕರಾದ ಟಿ.ಎ. ಶ್ರೀನಿವಾಸ್ ಅವರ ಈ ಮಾತನ್ನು ಅರ್ಥೈಸಿಕೊಂಡರೆ ತುಳು ಸಿನಿಮಾ ರಂಗಕ್ಕೆ ಒಳಿತು.

ತುಳು ಸಿನಿಮಾದಲ್ಲಿ ಬಳಕೆಗೊಂಡ ಸಾಹಿತ್ಯ

ಸ-ಹಿತವಾದದ್ದೇ ಸಾಹಿತ್ಯ. ಸಹೃದಯ ಮತ್ತು ಸಾಹಿತ್ಯಕ್ಕೆ ನೇರವಾದ ಸಂಬಂಧವಿದೆ. ಒಂದು ಸಿನಿಮಾದಲ್ಲಿ ಬಳಕೆಗೊಂಡ ಸಾಹಿತ್ಯ ಸಹೃದಯರ ಸ್ವೀಕರಣಾ ನೆಲೆಯಲ್ಲಿ, ಸಿನಿಮಾದ ಯಶಸ್ಸಿನ ಹಿನ್ನಲೆಯಲ್ಲಿ ಮಹತ್ವದ ಸ್ಥಾನವನ್ನು ಪಡೆಯುತ್ತದೆ. ತುಳು ಭಾಷೆ ಎಂದಾಗ ಮೌಖಿಕವಾಗಿ ಆಯಾಯ ಪ್ರದೇಶಗಳಿಗೆ ಭಿನ್ನತೆಯ ಸ್ವರೂಪ ಪಡೆಯುತ್ತಾ ಹೋಗುತ್ತದೆ. ಉದಾಹರಣೆಗೆ ಮಂಗಳೂರು ತುಳು, ಉಡುಪಿ ತುಳು, ಪುತ್ತೂರು ತುಳು, ಕಾಸರಗೋಡು ತುಳು ಹೀಗೆ ಆಯಾಯ ಪ್ರದೇಶಗಳಿಗನುಸಾರವಾಗಿ ತುಳು ಭಾಷೆಯಲ್ಲಿ ವಿಭಿನ್ನತೆಗಳಿವೆ. ಹಾಗಾಗಿ ಈ ಪ್ರಾದೇಶಿಕ ಭಿನ್ನತೆಯನ್ನು ಮೀರಿ ನಿಲ್ಲಲು ತುಳು ಸಿನಿಮಾ ರಂಗಕ್ಕೆ ಸಾಧ್ಯವಾಗಿದೆಯೇ? ಅಲ್ಲದೆ ಈ ಸಾಹಿತ್ಯದ ಮೂಲಕ ಪರಿಣಾಮಕಾರಿಯಾಗಿ ಈ ತುಳುನಾಡಿನ ಪರಂಪರೆ, ಸಂಸ್ಕೃತಿಯನ್ನು ಬಿಂಬಿಸಲು ಶಕ್ತವಾಗಿದೆಯೇ? ಇಂದಿನ ತುಳು ಸಿನಿಮಾಗಳಲ್ಲಿ ಬಳಕೆಯಾಗುವ ಸಾಹಿತ್ಯ ತುಳು ಭಾಷೆಯ ಬೆಳವಣಿಗೆಗೆ ಪೂರಕವಾಗಬಹುದೇ? ಎಂಬ ವಿಚಾರವನ್ನು ಕೂಡಾ ಸೂಕ್ಷ್ಮವಾಗಿ ಗಮನಿಸಬೇಕು.

ದೃಶ್ಯ ಮಾಧ್ಯಮವಾದ ಸಿನಿಮಾಗಳು ಭಾಷೆಯನ್ನು ಒಂದು ರೀತಿಯಲ್ಲಿ ಪರಿಣಾಮಕಾರಿಯಾಗಿ ಬಳಸುತ್ತಿವೆ. ಸಿನಿಮಾಕ್ಕೂ ಹಾಗೂ ಸಾಹಿತ್ಯಕ್ಕೂ ಒಂದು ರೀತಿಯ ಅವಿನಾಭಾವ ಸಂಬಂಧವಿದೆ. ಒಳ್ಳೆಯ ಸಾಹಿತ್ಯ ಸಿನಿಮಾ ಆಗಬಹುದು ಅಥವಾ ಸಿನಿಮಾಕ್ಕಾಗಿಯೇ ಸಾಹಿತ್ಯ ಸೃಷ್ಟಿಯಾಗಬಹುದು. ಸಾಹಿತಿಯ ಕಣ್ಣು ಎಲ್ಲವನ್ನು ನೋಡಲು ಸಾಧ್ಯವಾದರೆ, ನಿರ್ದೇಶಕನ ಕಣ್ಣು ನಿರ್ದಿಷ್ಟ ಭಾಗಗಳಿಗೆ ಮಿತಿಗೊಳ್ಳುತ್ತದೆ. ಸಿನಿಮಾದ ಒಂದು ಹಾಡನ್ನು ಆಯ್ಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ಆಯಾ ಸನ್ನಿವೇಶಕ್ಕೆ ಸರಿ ಹೊಂದುವ ಕವಿತೆಯನ್ನು ರಚಿಸುವುದು, ಆಯ್ಕೆ ಮಾಡಿಕೊಳ್ಳುವುದು ಅಗತ್ಯ. ಸಿನಿಮಾದಲ್ಲಿ ಸಾಹಿತ್ಯ, ಸಂಗೀತ, ನೃತ್ಯ, ನಾಟಕ ಇತ್ಯಾದಿ ಕಲೆಗಳೆಲ್ಲ ಕೇಂದ್ರ ಪ್ರಜ್ಞೆಯಲ್ಲಿ ಕ್ರೋಢಿಕರಣಗೊಂಡು ದುಡಿಯುತ್ತವೆ. ನಿರ್ದೇಶಕರಾದ ಗಿರೀಶ್ ಕಾಸರವಳ್ಳಿ ಪ್ರಕಾರ "ಸಾಹಿತ್ಯ ಅನುಭವದಿಂದ ಅರ್ಥ ಹುಡುಕುವ ಮಾಧ್ಯಮವಾದರೆ, ಸಿನಿಮಾ ಅರ್ಥದಿಂದ ಅನುಭವ ಹುಡುಕುವ ಮಾಧ್ಯಮ". ಹಾಗೆಯೇ ಸಾಹಿತ್ಯ ಒಂದು ನೇರ ಸೃಷ್ಟಿ, ಸಿನಿಮಾ ಒಂದು ಪುನರ್ ಸೃಷ್ಟಿ. ನಿರ್ದೇಶಕನ ನೇತೃತ್ವದಲ್ಲಿ ರೂಪುಗೊಂಡಂತಹ ಸಿನಿಮಾ ಕೊನೆಗೆ ಇಡೀ ಸಮೂಹವನ್ನು ತಲುಪುತ್ತದೆ. "ಸಿನಿಮಾಕ್ಕೆ ಸಾಹಿತ್ಯ ಕೃತಿಯನ್ನು ಅಳವಡಿಸುವ ಕ್ರಿಯೆಯು ಸಿನಿಮಾ ಮಾಧ್ಯಮದ ವಿಶಿಷ್ಟತೆಗೆ ವಿರುದ್ಧವಾಗಿ ಕೆಲಸ ಮಾಡುತ್ತದೆ" ಎಂದು ಎಚ್ಚರಿಸಿದ ವಾಂಚೆಲ್ ಲಿಂಡ್ಸೆ ಎಂಬ ನಿರ್ದೇಶಕ ಸಾಹಿತ್ಯ ಕೃತಿಯನ್ನು ಸಿನಿಮಾಕ್ಕೆ ಅಳವಡಿಸುವ ಕ್ರಮವನ್ನೇ ಖಂಡಿಸಿದ.

ಸಾಹಿತ್ಯ ಪ್ರಕಾರಗಳಲ್ಲಿ ಸಿನಿಮಾ ಸಾಹಿತ್ಯಕ್ಕೂ ತನ್ನದೇ ಆದ ಸ್ಥಾನಮಾನವಿದೆ. ಪ್ರಸಿದ್ಧ ಗೀತಸಾಹಿತಿ ಜಯಂತ್ ಕಾಯ್ಕಿಣಿ ಅವರು ಹೇಳುವಂತೆ "ಸಾಹಿತ್ಯ ಎಂಬ ಮರದ ಒಂದು ಕೊಂಬೆ ಸಿನಿಮಾ ಸಾಹಿತ್ಯ. ಇದಕ್ಕೆ ಬೇಕಾದ ಕೌಶಲವೇ ಬೇರೆ. ಇದು ಜೀವನದ ಒಳನೋಟದ ಅಭಿವ್ಯಕ್ತಿಯಲ್ಲ. ಬದಲಿಗೆ ನಡೆಯುತ್ತಿರುವ ಒಂದು ಚಿತ್ರದ, ಕಥನದ, ಪಾತ್ರದ ಪ್ರಸಂಗಕ್ಕೆ ಬೇಕಾದ ಭಾವಾಭಿವ್ಯಕ್ತಿ. ಹೀಗಾಗಿ ಇದರ ಕಷ್ಟ ಸುಖಗಳೇ ಬೇರೆ. ಇದೊಂದು ಪೂರಕ ಸಾಹಿತ್ಯ ಎರಡೂ ಪರಕಾಯ ಪ್ರವೇಶವೇ. ವ್ಯಾಪ್ತಿ ಮತ್ತು ಮಿತಿ ಬೇರೆ ಬೇರೆ".

ಕನ್ನಡದಲ್ಲಿ ಸಣ್ಣಕಥೆಗಳನ್ನು ಆಧರಿಸಿ ಘಟಶ್ರಾದ್ಧ, ಕಥಾಸಂಗಮ, ಬರ, ಫೀನಿಕ್ಸ್, ಮುಯ್ಯಿ, ಗೀಜಗನ ಗೂಡು, ತಬರನ ಕತೆ, ಅಬಚೂರಿನ ಪೋಸ್ಟಾಫೀಸು ಚಿತ್ರಗಳು ನಿರ್ಮಾಣವಾದವು. ಆದರೆ ತುಳು ಸಿನಿಮಾದಲ್ಲಿ ನಾಟಕಗಳಿಗೆ ಸಿಕ್ಕಿದಷ್ಟು ಪ್ರಾಧಾನ್ಯತೆ ಸಣ್ಣಕಥೆಗಳಿಗೆ ಸಿಗಲಿಲ್ಲ. ತುಳು ಚಿತ್ರದ ಪ್ರಾರಂಭದ ದಿನಗಳಲ್ಲಿ ಸಹಜವಾಗಿ ಮೊದಲೇ ಚಾಲ್ತಿಯಲ್ಲಿದ್ದ ಮನರಂಜನಾ ಮಾಧ್ಯಮವಾದ ನಾಟಕಗಳಿಂದ ನೇರವಾಗಿ ಪಡೆದು ಚಿತ್ರಕತೆಗೆ ಪರಿವರ್ತಿಸಲಾಗುತ್ತಿತ್ತು. ನಂತರ ಸಹಜವಾಗಿಯೇ ಇಂತಹ ಸಿದ್ಧಗೊಂಡಿರುವ ಕತೆಗಳ ಹುಡುಕಾಟದ ಸಂದರ್ಭ ಚಿತ್ರ ನಿರ್ಮಾಪಕರಿಗೆ ಕಾದಂಬರಿಗಳನ್ನು ಆಧರಿಸಿ ಚಿತ್ರ ತಯಾರಿಸುವ ಅವಕಾಶ ಸಿಕ್ಕಿತು. ಇದರಿಂದ ತುಳು ಸಾಹಿತ್ಯ ಮತ್ತು ತುಳು ಚಿತ್ರರಂಗದ ನಂಟು ಬೆಳೆಯಿತು. ಕಾದಂಬರಿಯಾಧಾರಿತ ಚಿತ್ರಗಳ ಭಾಷೆ ಆಡುನುಡಿಗೆ ಹತ್ತಿರವಾಗಿದೆ. ಕತೆ, ಪಾತ್ರಗಳ ಸೃಷ್ಟಿ, ಸಂಭಾಷಣೆ ಎಲ್ಲವೂ ಸಾಹಿತಿಯ ಆಯ್ಕೆ. ಭಾಷೆಯನ್ನು ಮಾತ್ರ ಸಾಮಾಜಿಕವಾಗಿ ಆಡುವಂತಹ ಭಾಷೆಯನ್ನೇ ಬಳಸಲಾಗಿದೆ. ಸಾಮಾಜಿಕ ಚಿತ್ರಗಳ ಭಾಷೆ ಆಡುನುಡಿಯಾಗಿದೆ. ಹಾಗಾಗಿ ಸಾಮಾಜಿಕ ಚಿತ್ರಗಳ ಸಂಭಾಷಣೆಯಲ್ಲಿ ತುಳು ಭಾಷೆಯ ಜೊತೆಗೆ ಇಂಗ್ಲಿಷ್ ಭಾಷೆಯ ಬಳಕೆಯನ್ನು ಕಾಣಬಹುದು.

ಕನ್ನಡ ಸಿನಿಮಾಗಳಲ್ಲಿ ಹಾಸ್ಯ ಪಾತ್ರಗಳು ಹೆಚ್ಚಾಗಿ ಮಂಗಳೂರು ಕನ್ನಡ, ಧಾರವಾಡ ಕನ್ನಡ, ಉರ್ದು ಮಿಶ್ರಿತ ಕನ್ನಡ ಹಾಗೂ ಹೆಚ್ಚಾಗಿ ಉತ್ತರ ಕರ್ನಾಟಕದ ಭಾಷೆಯನ್ನು ಬಳಸುತ್ತಾರೆ. ಅಲ್ಲದೆ ಇತರ ಪಾತ್ರಗಳು ಸಾಮಾಜಿಕ ನಿತ್ಯ ಬಳಕೆಯ ಭಾಷೆಯನ್ನು, ಆಡುನುಡಿಗೆ ಹತ್ತಿರವಾದ ಭಾಷೆಯನ್ನು ಬಳಸುತ್ತಾರೆ. ದಿನನಿತ್ಯದ ಬಳಕೆಯಲ್ಲಿ ಹೇಗೆ ಇಂಗ್ಲಿಷ್ ಉಪಯೋಗಿಸುತ್ತವೆಯೋ ಹಾಗೆಯೇ ತುಳು ಸಿನಿಮಾವನ್ನು ಇಂಗ್ಲಿಷ್ ಅಷ್ಟೇ ಸಲೀಸಾಗಿ ಹಾಸು ಹೊಕ್ಕಿದೆ.

ಗ್ರಾಮೀಣ ಪಾತ್ರಗಳಲ್ಲಿ ಬೈಗುಳಗಳು ಹೆಚ್ಚಾಗಿ ಪ್ರಯೋಗವಾಗಿದೆ. ನಮ್ಮ ಸಮಾಜದ ಸಂಪ್ರದಾಯವನ್ನು, ಆಯಾ ಕಾಲದ ಸಂಸ್ಕೃತಿಯನ್ನು ತುಳು ಚಿತ್ರರಂಗ ಪ್ರತಿನಿಧಿಸುತ್ತಾ ಬಂದಿದೆ. ಅಲ್ಲದೆ ಆಯಾ ಕಾಲಕ್ಕೆ ತಕ್ಕಂತೆ ದಾಖಲಿಸುತ್ತಿದೆ. ಸಂಪ್ರದಾಯವನ್ನು ಒಪ್ಪಿಕೊಳ್ಳುವ ಸಿನಿಮಾಗಳ ಜೊತೆ ವಿರೋಧಿಸುವ ಸಿನಿಮಾಗಳು ಇವೆ.

ಇನ್ನು ತುಳುಚಿತ್ರದ ಹಾಡುಗಳನ್ನು ಗಮನಿಸುವುದಾದರೆ ಮೊದಲ ಘಟ್ಟದಲ್ಲಿ ಹೆಣ್ಣಿನ ವರ್ಣನೆಯ, ಶೃಂಗಾರದ ಹಾಗೂ ನಾಡು-ನುಡಿಯ ಕುರಿತಾದ ಗೀತೆಗಳೇ ಹೆಚ್ಚು. ತುಳುನಾಡಿನ ಹಿರಿಯ ಸಾಹಿತಿಗಳಾದ ಅಮೃತ ಸೋಮೇಶ್ವರ, ಬಿ.ಎ. ವಿವೇಕ ರೈ, ವಾಮನ ನಂದಾವರ, ಎಂ.ಕೆ. ಸೀತಾರಾಮ ಕುಲಾಲ್ ಮುಂತಾದವರ ಹಾಡುಗಳನ್ನು ಅರ್ಥಪೂರ್ಣವಾಗಿ ಬಳಸಿದ ಚಿತ್ರಗಳು ಯಶಸ್ಸನ್ನು ಕಂಡ ನಿದರ್ಶನಗಳು ಇವೆ. ತುಳು ಸಿನಿಮಾ ರಂಗದಲ್ಲಿ 1973ರಲ್ಲಿ ಬಿಡುಗಡೆಯಾದ ವಿಶುಕುಮಾರ್ ನಿರ್ದೇಶನದ 'ಕೋಟಿ ಚೆನ್ನಯ' ಸಿನಿಮಾದ ಹಾಡುಗಳು ಇಂದಿಗೂ ಜನಪ್ರಿಯವಾಗಿದೆ. ವಿಜಯ ಭಾಸ್ಕರ್ ಸಂಗೀತದ ಬಿ.ಎ. ವಿವೇಕ ರೈ ಅವರು ರಚಿಸಿದ ಜಾನಕಿ ಅವರ ಕಂಠಸಿರಿಯಲ್ಲಿ ಹೊಮ್ಮಿದ-

"ಎಕ್ಕಸಕ್ಕ ಎಕ್ಕಸಕ್ಕ ಎಕ್ಕಸಕ್ಕಲ
ಅಕ್ಕಾ ಪಂಡ್‌ದ್ ಲೆಪ್ಪುನಕುಲು ಬತ್ತೆರಿತ್ತೆಲ"

ಎಂಬ ಈ ಹಾಡು ಇಂದಿಗೂ ತುಳು ಭಾಷಿಕರ ಮಾತ್ರವಲ್ಲದೆ ಅನ್ಯ ಭಾಷಿಕರ ನಾಲಗೆಯಲ್ಲಿಯೂ ಕುಣಿದಾಡುತ್ತಿದೆ.

'ಬೊಳ್ಳಿದೋಟ' ಸಿನಿಮಾದ –
"ದಾನೆ ಪೊಣ್ಣೆ ನಿನ್ನ ಮನಸ್ ಎಂಕ್, ತೆರಿಯಂದೆ ಪೋವ
ಆಸೆ ದೀದ್ ಈ ಕಾಪುವ, ಪಿಂಗಾರ್ದ ಪೂವ"

ಹಾಗೆಯೇ ಅದೇ ಸಿನಿಮಾದ ಇನ್ನೊಂದು ಹಾಡು–

"ಪರಶುರಾಮನ ಕುಡರಿಗ್ ಪುಟ್ಟಿನ ತುಳುನಾಡ್
ಕಡಲ್ ಪಾರ್‌ದ್ ಉಡಲ್ ಬುಲೆಯಿನ ತುಳುವೆರೆ ಬೂಡು"

'ಬಿಸತ್ತಿ ಬಾಬು' ಸಿನಿಮಾದ–
"ಅನ್ಯಾಯನಾ.. ವಿಚಿತ್ರನಾ.. ಕಲ್ಜಿಗದ ಕಾಲ ದಾನೇ.."

'ದಾರೆದ ಬುಡೆದಿ' ಸಿನಿಮಾದ–
"ನಿಕ್ಕಾದ್ ಯಾನ್ ದುಂಬಿಯಾದ್ ಬರ್ಪೆ
ಪೂ ಆದೆ ಈಯೆ ಉಂತಿ ರಸೊನು ಪರ್ಪೆ"

'ಪಗೆತ ಪುಗೆ' ಸಿನಿಮಾದ–
"ಮೋಕೆದ ಸಿಂಗಾರಿ ಉಂತುದೆ ವಯ್ಯಾರಿ
ಯಾನ್ ಮೂಲೆ ಕಾತೊಂದುಲ್ಲೆ ಮದತೆ ಪೋಪನ
ಓ.... ಪೊಣ್ಣೆ ಎನ್ನ ಮೋನೆ ತೂದು ದಾಯೆ ಕೋಪನ"

ಮುಂತಾದ ಹಾಡುಗಳಲ್ಲಿ ತುಳುವಿನ ದೇಸಿಯುತೆಯು ಸೊಗಡನ್ನು ಬಹಳ ಅರ್ಥಪೂರ್ಣವಾಗಿ ಬಳಸಲಾಗಿದೆ. ಹಾಗಾಗಿ ಈ ಹಾಡುಗಳಿಗೆ 30–40 ವರ್ಷವಾದರೂ ಅದು ಇಂದಿಗೂ ತನ್ನ ಜನಪ್ರಿಯತೆಯನ್ನು ಕಳೆದುಕೊಳ್ಳಲಿಲ್ಲ. ಉದಾಹರಣೆಗೆ ಇತ್ತೀಚೆಗೆ ಬಿಡುಗಡೆಯಾದ 'ಚಂಡಿಕೋರಿ' ಸಿನಿಮಾದಲ್ಲಿ ಹಿರಿಯ ಕವಿ ಕಯ್ಯಾರ ಕಿಞ್ಞಣ್ಣ ರೈ ಅವರ–

"ಏತ್ ಪೊರ್ಲುದ ಭಾಷೆ ನಮ್ಮ ತುಳು
ಸಾರ ಎಸಳ್‌ದ ತಾಮರೆ
ಪನ್ಪಿ ಬಾಯಿಡ್ ಕೇನ್ಪಿ ಕೆಬಿಕ್ಲೆಡ್
ಉರ್ಕುಂಡ್ ಅಮೃತದ ನುರೆನುರೆ"

(ಅಂದರೆ ಎಷ್ಟು ಸುಂದರವಾದ ಭಾಷೆ ನಮ್ಮ ತುಳು. ಸಾವಿರ ಎಸಳಿನ ತಾವರೆಯ ಹಾಗೆ. ಹೇಳುವ ಬಾಯಿಯಲ್ಲಿ, ಕೇಳುವ ಕಿವಿಯಲ್ಲಿ ಉಕ್ಕುವುದು ಅಮೃತದ ನೊರೆ ನೊರೆ) ಕವಿತೆಯನ್ನು ಬಳಸಿಕೊಳ್ಳಲಾಗಿದೆ.

ತುಳು ಚಿತ್ರರಂಗದ ಆರಂಭದ ದಿನಗಳಲ್ಲಿ ಕನ್ನಡ ಚಿತ್ರರಂಗದಲ್ಲಿ ಖ್ಯಾತ

ಗಾಯಕರುಗಳಾದ ಪಿ.ಬಿ. ಶ್ರೀನಿವಾಸ್, ಎಸ್. ಜಾನಕಿ ಹಾಗೂ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರ ಧ್ವನಿಯಲ್ಲಿ ಹೆಚ್ಚಿನ ತುಳು ಹಾಡುಗಳು ಜನಪ್ರಿಯವಾಗಿದ್ದವು. ತುಳುವರಲ್ಲದೆ ಇತರ ಭಾಷಿಕರಲ್ಲಿಯೂ ಆ ಹಾಡುಗಳು ಗುನುಗುಣಿಸುತಿತ್ತು. ಊರಿನಲ್ಲಿ ನಡೆಯುವ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿಯೂ, ಧ್ವನಿವರ್ಧಕಗಳಲ್ಲಿಯೂ ತುಳು ಹಾಡುಗಳ ಮೇಲುಗೈ ಕಾಣಿಸುತಿತ್ತು. ಆದರೆ ಇತ್ತೀಚೆಗೆ ತುಳುವಿನ ಹಳೆಯ ಚಿತ್ರಗಳ ಹಾಡುಗಳನ್ನು ನವೀಕರಿಸಿ 'ರಿಮಿಕ್ಸ್' ಎಂಬ ಕರ್ಕಶತೆಯಿಂದ ಮೂಲ ಹಾಡಿನ ಸೊಗಡನ್ನೇ ಮರೆಮಾಚುವ ಪ್ರಯತ್ನ ನಡೆಯುತ್ತಿದೆ. ಅಲ್ಲದೆ ಚಿತ್ರಕ್ಕೆ ಹಾಡುಗಳು ಪೂರಕವೇ ಎಂಬ ಅಂಶವನ್ನು ಮೊದಲು ಗಮನಿಸಬೇಕು. ಕೇವಲ ಹಾಡಿಗಾಗಿ ಹಾಡಿನ ಒತ್ತಾಯದ ಅಳವಡಿಕೆ ಸಿನಿಮಾದ ದೃಷ್ಟಿಯಿಂದ ಒಳ್ಳೆಯದಲ್ಲ.

ಒಂದು ಸಿನಿಮಾವು ಹಾಡುಗಳ ಹೊರತಾಗಿ ಅಪೂರ್ಣ ಅನಿಸಿಬಿಡುತ್ತದೆ. ಇಂದು ಸಿನಿಮಾಗಳಲ್ಲಿರುವ ಹಾಡುಗಳಲ್ಲಿ ಅರ್ಥವಿಲ್ಲ. ಅರ್ಥವಿದ್ದರೂ ಆಳವಿಲ್ಲ. ಹಾಗಾಗಿ ಇಂತಹ ಹಾಡುಗಳನ್ನು ಜನರು ಮೆಚ್ಚುವುದಾದರೂ ಹೇಗೆ? ಕಳಪೆ ಗುಣಮಟ್ಟದ ಹಾಡುಗಳನ್ನು ತುಂಬು ಹೃದಯದಿಂದ ಸ್ವೀಕರಿಸುವವರು ಯಾರು? ತುಳು ಹಾಡುಗಳನ್ನು ಹಿಂದಿ, ಇಂಗ್ಲಿಷ್ ಭಾಷೆಯ ಶೈಲಿಯಲ್ಲಿ ಹಾಡಿಸುವ ಹೊಸ ಮಾದರಿಯನ್ನು ಇಂದಿನ ಸಂಗೀತ ನಿರ್ದೇಶಕರು ಕಂಡುಕೊಳ್ಳುತ್ತಿರುವುದು ಸರಿಯಲ್ಲ. ಹಾಗೆಯೇ ತುಳು ಭಾಷೆಯ ಗಂಧಗಾಳಿ ತಿಳಿಯದವರಿಂದ ಹಾಡನ್ನು ಹಾಡಿಸಿದಾಗ ಅದರ ದನಿಯೇ ವಿಚಿತ್ರ ಎನಿಸುವಂತೆ ಕೇಳುತ್ತದೆ. ಅದಲ್ಲದೆ ಇತ್ತೀಚಿನ ಹಾಡುಗಳಲ್ಲಿ ಕೇವಲ ಸಂಗೀತ ಅಬ್ಬರವಿರುತ್ತದೆಯೇ ವಿನಃ ಸಾಹಿತ್ಯವು ಕಿವಿಗೆ ಬೀಳುವುದೇ ಇಲ್ಲ.

ಒಂದು ಒಳ್ಳೆಯ ಸಿನಿಮಾ ಸಾಹಿತ್ಯದಿಂದಲೇ ರಚನೆಯಾಗುತ್ತದೆ ಎಂಬ ಮಾತನ್ನು ಒಪ್ಪುವುದು ಕಷ್ಟವಾದರೂ ಸಿನಿಮಾದ ಯಶಸ್ಸಿನಲ್ಲಿ ಸಾಹಿತ್ಯವು ವಹಿಸುವ ಪಾತ್ರವನ್ನು ಅಲ್ಲಗಳೆಯುವಂತಿಲ್ಲ. ಈ ನೆಲೆಯಲ್ಲಿ ಭಾಷೆಯನ್ನು ಬೆಳೆಸುವುದರ ಜೊತೆಗೆ ತುಳುವಿನ ಅನೇಕ ಭಾಷಾ ಪ್ರಭೇದಗಳನ್ನು ತಿಳಿಸುವ ಕಾರ್ಯವನ್ನು ತುಳು ಸಿನಿಮಾಗಳು ಮಾಡುತ್ತಿವೆ.

ತುಳು ಸಿನಿಮಾದಲ್ಲಿ ಪಾತ್ರವಹಿಸಿದ ಸ್ಥಳೀಯ ಹಾಗೂ ಪರಭಾಷಾ ಕಲಾವಿದರು

ಸಿನಿಮಾ ಕಲೆಯು ಒಂದು ಆಧುನಿಕ ಅವಿಷ್ಕಾರ. ಸಿನಿಮಾ ಮೂಲತಃ ವಿಜ್ಞಾನ ಹಾಗೂ ತಂತ್ರಜ್ಞಾನಗಳ ಸೃಷ್ಟಿ. ಈ ನೆಲೆಯಲ್ಲಿ ಸಿನಿಮಾ ಸಹ ಒಂದು ಸಮೂಹ ಸೃಷ್ಟಿ. ಸಿನಿಮಾದಲ್ಲಿ ಸಮೂಹವೊಂದರ ಭಾಗವಹಿಸುವಿಕೆ ಅಗತ್ಯ ಹಾಗೂ ಅನಿವಾರ್ಯ. ಸಿನಿಮಾ ಯಂತ್ರಗಳ ಮೂಲಕ ಮಾಡುವ ಮಾಧ್ಯಮ. ಆದ್ದರಿಂದ ಇದು ಕಲಾತ್ಮಕ ಮಾಧ್ಯಮವಲ್ಲ ಎಂಬ ಅಭಿಪ್ರಾಯವಿದೆ. ಸಿನಿಮಾ ಒಂದು ಕಲೆಯೂ ಹೌದು, ಮಾಧ್ಯಮವೂ ಹೌದು. ಹಾಗಾಗಿ ಇದನ್ನು 'ಕಲೋದ್ಯಮ' ಎಂದು ಕರೆಯುವುದು ಉಚಿತ. ಸಿನಿಮಾ ಮಾಧ್ಯಮವೂ ಉದ್ಯಮವಾಗಿ ಪ್ರಬಲವಾಗುತ್ತ ಹೋದಂತೆ ರಂಗಭೂಮಿಗೆ ಧಕ್ಕೆಯಾಯಿತೆಂದು ಭಾವಿಸಲಾಯಿತು. ಇಲ್ಲಿ ಗಮನಿಸಬೇಕಾದ ಒಂದು ವಿಚಾರ ಎಂದರೆ ಇಲ್ಲಿ ಒಂದರ ವಿರೋಧಿ ಇನ್ನೊಂದಲ್ಲ. ಬದಲಾಗಿ ಅವೆರಡು ಪೂರಕ. ಏಕೆಂದರೆ ಒಂದರಿಂದ ಇನ್ನೊಂದು ಬೆಳೆದಿದೆ ಎಂದರೆ ಒಪ್ಪಬೇಕಾಗುವುದು.

ಸಿನಿಮಾ ಒಂದು ಸಾಮೂದಾಯಿಕ ಕಲೆ, ತಾಂತ್ರಜ್ಞಾನಿಕ ಕಲೆ ಕೂಡಾ ಎನ್ನಬಹುದು. ಸಾಮಾನ್ಯವಾಗಿ ಸಿನಿಮಾದಲ್ಲಿ ವಸ್ತು ಮತ್ತು ವಿನ್ಯಾಸ ಎಂಬ ಪರಿಕಲ್ಪನೆಗಳಿರುತ್ತವೆ. ಯಾವುದೇ ಸಿನಿಮಾ ಆಗಿರಲಿ ಅದು ಒಂದು ಪ್ರಮುಖ ಸಂಗತಿಯನ್ನು ಬಿತ್ತರಿಸಲು ಪ್ರಯತ್ನ ಪಡುತ್ತದೆ. ಸಿನಿಮಾ ಮೇಲೆ ರಾಜಕೀಯ, ಧಾರ್ಮಿಕ, ಸಾಮಾಜಿಕ ಸಂಗತಿಗಳು ಪ್ರಭಾವ ಬೀರಿರಬಹುದು ಅಥವಾ ಆ ಸಿನಿಮಾ ಸಮಾಜದ ಮೇಲೆ ಪ್ರಭಾವ ಬೀರಬಹುದು. ಸಿನಿಮಾವು ಸಂಸ್ಕೃತಿಯ ಸ್ವರೂಪವೂ ಹೌದು, ವಾಣಿಜ್ಯವೂ ಹೌದು. ಸಿನಿಮಾ ಒಂದು ಪೂರ್ಣ ಪ್ರಮಾಣದ 'ಕಲೆ' ಎನ್ನಬೇಕಾದರೆ ಅಲ್ಲಿ ಕಲಾವಿದನ ಪ್ರಮುಖ ಪಾತ್ರವಿರಬೇಕು. ಕಲಾವಿದನು ತನ್ನ ಅಭಿನಯದ ಮೂಲಕ ಸಿನಿಮಾಕ್ಕೆ ನ್ಯಾಯವನ್ನು ಒದಗಿಸಬೇಕು.

"ಸಿನಿಮಾ ಒಂದು ಒಕ್ಕೂಟ ಕಲೆ (Federal Art). ಅನೇಕ ಕಲೆಗಳ ಸಮ ಸಂಯೋಜನೆಯಿಂದಾಗಿಯೇ ಸಿನಿಮಾ ಸೃಷ್ಟಿಯಾಗುತ್ತದೆ. ಸಾಹಿತ್ಯ, ಸಂಗೀತ, ಸಂಕಲನ, ಛಾಯಾಗ್ರಹಣ, ಕಲಾ ನಿರ್ದೇಶನ, ಅಭಿನಯ – ಹೀಗೆ ಅನೇಕ ಕಲಾ ಮಾಧ್ಯಮಗಳು ಅಗತ್ಯಕ್ಕೆ ಅನುಸಾರವಾಗಿ ಒಟ್ಟಿಗೆ ನಿರ್ದಿಷ್ಟ ವಿನ್ಯಾಸ ಕೊಡುವ ಪ್ರಕ್ರಿಯೆಯ ಫಲವಾಗಿ ಸಿನಿಮಾ ರೂಪುಗೊಳ್ಳುತ್ತದೆ. ವಿವಿಧ ಕಲಾ ಪ್ರಕಾರಗಳನ್ನು ದುಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಸಿನಿಮಾಕ್ಕೆ ಪ್ರಜಾಸತ್ತಾತ್ಮಕ ಸ್ವರೂಪ ಲಭ್ಯವಾಗುತ್ತದೆ. ನಿರ್ದೇಶಕರೇ ಕೇಂದ್ರ ಶಕ್ತಿಯಾದರೂ ಇನ್ನಿತರ ವಿಭಾಗಗಳನ್ನು ಆಯಾ ವಿಭಾಗದ ಕಲಾ ಶಕ್ತಿಗಳನ್ನೂ ಗೌಣಗೊಳಿಸುವಂತಿಲ್ಲ. ಕೇಂದ್ರಶಕ್ತಿ ಮತ್ತು ಪೂರಕ ಶಕ್ತಿಗಳು ಕೂಡಿಯೇ ಸಿನಿಮಾ ಸೃಷ್ಟಿಯಾಗುವುದರಿಂದ ಅದು ತನ್ನೊಳಗೆ ಪ್ರಜಾಸತ್ತಾತ್ಮಕತೆಯನ್ನು ಪಡೆದುಕೊಳ್ಳುವ ಒಕ್ಕೂಟದ ಕಲೆಯಾಗುತ್ತದೆ" ಎಂಬುವುದು ಕನ್ನಡದ ಖ್ಯಾತ ಸಾಹಿತಿ, ಚಲನಚಿತ್ರ ನಿರ್ದೇಶಕ ಬರಗೂರು ರಾಮಚಂದ್ರಪ್ಪ ಅವರ ಮಾತು. ಅವರ ಪ್ರಕಾರ "ಬಹುಪಾಲು ಕಲಾವಿದರಿಗೆ, ತಂತ್ರಜ್ಞರಿಗೆ ಸಿನಿಮಾ 'ಕಲಿತ' ಕಸುಬು ಹೌದು, ಕಲೆಯೂ ಹೌದು. ಛಾಯಾಗ್ರಾಹಕ, ಸಂಕಲನಕಾರ, ನಿರ್ದೇಶಕ, ಸಂಗೀತ ನಿರ್ದೇಶಕ, ನೃತ್ಯ ನಿರ್ದೇಶಕ, ಸೌಂಡ್ ಇಂಜಿನಿಯರ್, ಕಲಾವಿದರು ಎಲ್ಲರೂ ಕೆಲವು ಅಪವಾದಗಳನ್ನು ಬಿಟ್ಟರೆ, ಬಹುಪಾಲು ಮಂದಿ ಸಿನಿಮಾವನ್ನು ಕಸುಬಾಗಿ (ವೃತ್ತಿಯಾಗಿ) ಸ್ವೀಕರಿಸುತ್ತಾರೆ" ಎಂಬುವುದು.

ಸಿನಿಮಾವನ್ನು ಕಲಾವಿದರು ಕಲೆಯೆಂದು ಸ್ವೀಕರಿಸಲಿ ಅಥವಾ ಕಸುಬಾಗಿ ಮಾಡಲಿ ಆದರೆ ಈ ಸಿನಿಮಾದಲ್ಲಿ ಕಲಾವಿದರ ಪಾತ್ರ ಅತ್ಯಂತ ಮಹತ್ವವಾದುದು. ಭಾವನೆಗಳನ್ನು ಅಭಿನಯದ ಮೂಲಕ ವ್ಯಕ್ತಪಡಿಸುವ ಚಾಕಚಕ್ಯತೆ, ಪದಗಳಿಗೆ ಅರ್ಥವನ್ನು ತುಂಬುವ ಹಾಗೂ ಪಾತ್ರಕ್ಕೆ ಅನುಸಾರವಾಗಿ ಬಣ್ಣ ಹಚ್ಚುವ ಕಾರ್ಯಗಳನ್ನು ಅಂತಿಮವಾಗಿ ಪರದೆಯ ಮುಂದೆ ಪ್ರದರ್ಶಿಸುವವನು ಈ ಕಲಾವಿದ. ತನ್ನ ಅದ್ಭುತ ನಟನೆಯ ಮೂಲಕ ಒಂದು ಕ್ಷಣಕ್ಕೆ ಪ್ರೇಕ್ಷಕನನ್ನು ನಗಿಸುವ, ಅಳಿಸುವ, ಮೈಮರೆಸುವ ಮಾಯಾಗಾರನೂ ಹೌದು.

ಪ್ರತಿಯೊಂದು ಸಿನಿಮಾವು ಒಂದು ಕಥೆಯನ್ನು ಹೇಳುತ್ತದೆ ನಿಜ. ಆದರೆ, ಕಥೆಯನ್ನು ಹೇಳುವ ವಿಧಾನದಲ್ಲಿ ಬಹಳಷ್ಟು ವ್ಯತ್ಯಾಸಗಳಿರುತ್ತವೆ. ಆ ಕತೆಗೆ ಅಭಿನಯದ ಮೂಲಕ ನಿಜವಾಗಿಯೂ ಜೀವ ತುಂಬುವವನೇ ಕಲಾವಿದ. ಒಂದು ಸಿನಿಮಾದ ಜೀವಂತಿಕೆಯು ಅಲ್ಲಿಯ ಕಲಾವಿದರನ್ನು ಅವಲಂಬಿತವಾಗಿದೆ. ಸಿನಿಮಾದ ಸೋಲು-ಗೆಲುವು ಕಲಾವಿದನ ಕೈಯಲ್ಲಿದೆ ಎನ್ನಬಹುದು. ಆಯ್ಕೆಗೊಂಡ ಕಥಾವಸ್ತುವು ಸಿನಿಮಾದ ಯಶಸ್ಸಿನಲ್ಲಿ ಎಷ್ಟು ಮುಖ್ಯವೋ ಹಾಗೆಯೇ ಕಲಾವಿದರ ಆಯ್ಕೆ ಹಾಗೂ ಅವರ ಪಾತ್ರವು ಸಿನಿಮಾದಲ್ಲಿ ನಿರ್ಣಾಯಕ ಪಾತ್ರವಹಿಸುತ್ತದೆ. ಪ್ರಧಾನ ಪಾತ್ರಗಳಂತೆ ಸಣ್ಣ ಸಣ್ಣ ಪಾತ್ರಗಳನ್ನು ವಹಿಸುವ ಕಲಾವಿದರು ಕೂಡಾ ಸಿನಿಮಾದ ಅರ್ಥ ಹಾಗೂ ಪ್ರಭಾವವನ್ನು ಬೀರುವಲ್ಲಿ ಮುಖ್ಯವಾಗುತ್ತಾರೆ. ಯಾವುದೇ ಒಂದು ಸಿನಿಮಾ ಇರಲಿ, ಅದು ಯಾವ ರೀತಿಯೇ ಇರಲಿ ಅದಕ್ಕೆ ಯಂತ್ರಶಕ್ತಿ ಹಾಗೂ ಅರ್ಥಶಕ್ತಿ ಬೇಕೇ ಬೇಕು. ಎಲ್ಲೋ ಒಂದು ಕಡೆ ಸಿನಿಮಾದಲ್ಲಿ ನಿರ್ಮಾಪಕನ ನಿಯಂತ್ರಣವಿದೆ ಎನ್ನಬಹುದಾದರೂ ಸಿನಿಮಾದ ಕೇಂದ್ರ ಶಕ್ತಿ ನಿರ್ದೇಶಕ. ಆದರೆ, ಕೊನೆಗೆ ಪರದೆಯ ಮುಂದೆ ಕಲಾವಿದರ ಪ್ರದರ್ಶನವೇ ಸಿನಿಮಾಕ್ಕೆ ಮುಖ್ಯವಾಗುತ್ತದೆ.

"ಪ್ರತ್ಯೇಕ, ಆರಾಮದಾಯಕ ಆಸನಗಳು, ನಿಧಾನವಾಗಿ ಆವರಿಸುವ ಕತ್ತಲು, ಅದರಿಂದಾಗಿ ಸಾವಿರ ಜನರ ನಡುವೆ ಕುಳಿತಿದ್ದರೂ ಸಿಗುವ ಏಕಾಂತ. ಆಗ ನಮ್ಮ ಎದುರಿನಲ್ಲಿ ಬೃಹತ್ ತೆರೆಯ ಮೇಲೆ ಬೆಳಗುವ ಸ್ಪಷ್ಟ ದೃಶ್ಯ, ದೊಡ್ಡದಾದ ಧ್ವನಿ- ನಮ್ಮನ್ನು ಪರವಶರನ್ನಾಗಿ ಮಾಡುತ್ತದೆ; ಮಂತ್ರವಾದಿಯ ವಶೀಕರಣಕ್ಕೆ ಒಳಗಾದ ಬಲಿಪಶುವಿನಂತೆ, ಸಿನಿಮಾ ಪರದೆಯ ಮೇಲೆ ಮೂಡಿದ್ದೆಲ್ಲವನ್ನೂ ನಿಜವೆಂದು ಭಾವಿಸಿ ಅದರೊಂದಿಗೆ ಸೇರಿ ಬಿಡುತ್ತೇವೆ. ಸಿನಿಮಾ ನಮ್ಮ ಮೇಲೆ ಒಟ್ಟು ಪರಿಣಾಮ ಬೀರುತ್ತವೆ". ಎಂಬುವುದು ಅಬ್ದುಲ್ ರೆಹಮಾನ್ ಪಾಷಾ ಅವರ ಮಾತು. ಹೀಗೆ ಪ್ರೇಕ್ಷಕನನ್ನು ಈ ತಲ್ಲೀನತೆಯಲ್ಲಿ ಮುಳುಗಿಸುವಲ್ಲಿ ಕಲಾವಿದನ ಪಾತ್ರ ಪ್ರಮುಖವಾದುದು ಎಂಬುವುದನ್ನು ಮರೆಯುವಂತಿಲ್ಲ.

ತುಳುನಾಡು ಕಲೆಗಳ ತವರು. ಇಲ್ಲಿರುವ ಭೂತರಾಧನೆ, ಯಕ್ಷಗಾನ, ಜನಪದ ಕುಣಿತಗಳನ್ನು ಕಂಡರೆ ಸಾಕು ಕಲಾವಿದರ ದಂಡೇ ನಮ್ಮ ಕಣ್ಣಮುಂದೆ ನಿಲ್ಲುತ್ತವೆ. ಇಂತಹ ಕಲಾವಿದರಿಗೆ ಜನ್ಮ ನೀಡಿದ ಈ ತುಳುನಾಡಿನಲ್ಲಿ ಕಲಾವಿದರಿಗೆ ಕೊರತೆಯಿಲ್ಲ. ಕೆ.ಎನ್. ಟೇಲರ್, ಆನಂದ ಶೇಖರ್, ಸೋಮಶೇಖರ್ ಪುತ್ರನ್, ಸದಾಶಿವ ಸಾಲ್ಯಾನ್, ರೋಹಿದಾಸ್ ಕದ್ರಿ, ರಾಮಚಂದ್ರ ಕೂಳೂರು, ಸಂಜೀವ ದಂಡೆಕೇರಿ, ಸರೋಜಿನಿ ಶೆಟ್ಟಿ,

ಜಯಮಾಲ ಮುಂತಾದ ಅನೇಕ ಕಲಾವಿದರು ತುಳು ಸಿನಿಮಾದಲ್ಲಿ ಬಣ್ಣ ಹಚ್ಚಿದ್ದಾರೆ. ಹೆಚ್ಚಿನ ಕಲಾವಿದರಿಗೆಲ್ಲಾ ನಾಟಕ ರಂಗಭೂಮಿಯೇ ಅಡಿಪಾಯವಾಗಿತ್ತು. ಇಂದಿಗೂ ಸಿನಿಮಾ ಕಲಾವಿದರಲ್ಲಿ ಹೆಚ್ಚಿನವರು ರಂಗಭೂಮಿಯ ಹಿನ್ನಲೆಯಿಂದ ಬಂದವರು.

ತುಳು ಚಿತ್ರರಂಗದಲ್ಲಿ ಸ್ಥಳೀಯ ಕಲಾವಿದರಲ್ಲದೆ ಪರಭಾಷಾ ಕಲಾವಿದರು ಕೂಡ ಬಣ್ಣ ಹಚ್ಚಿದ್ದಾರೆ. ಇದೊಂದು ಸಿನಿಮಾ ತಂತ್ರವೂ ಇರಬಹುದು. ತುಳು ಭಾಷೆಯನ್ನು ತಿಳಿಯದ ಅನ್ಯಭಾಷೆಯ ಹೆಸರಾಂತ ಕಲಾವಿದರನ್ನು ಬಳಸಿ ಸಿನಿಮಾ ನಿರ್ಮಾಣ ಮಾಡಿ ತುಳುಚಿತ್ರಕ್ಕೆ ಇನ್ನಷ್ಟು ಪ್ರಚಾರ ನೀಡುವುದು. ಆದರೆ ಪರಭಾಷಿಕ ಕಲಾವಿದರನ್ನು ಬಳಸಿಕೊಂಡರೂ ಅಂತಹ ದೊಡ್ಡ ಮಟ್ಟದ ಯಶಸ್ಸಿಯನ್ನು ಈ ಚಿತ್ರಗಳು ಕಾಣಲಿಲ್ಲವೆಂದು ಹೇಳಬೇಕು. ಉದಾಹರಣೆಗೆ 'ಬಂಗಾರ್ ಪಟ್ಲೇರ್' ಯಶಸ್ವಿ ಸಿನಿಮಾ ನೀಡಿದ ರಿಚರ್ಡ್ ಕ್ಯಾಸ್ಟಲಿನೊ ಮತ್ತೊಂದು ದಾಖಲೆಗೆ ಮುಂದಾಗಿ ಕೇವಲ 24 ಗಂಟೆಗಳಲ್ಲಿ 'ಸಪ್ಟೆಂಬರ್ 8' ಸಿನಿಮಾವನ್ನು ನಿರ್ಮಾಣ ಮಾಡಿದರು. ಇದೊಂದು ರಾಷ್ಟ್ರೀಯ ಮಟ್ಟದ ದಾಖಲೆಯೂ ಹೌದು. ಚಿತ್ರದಲ್ಲಿ ಶ್ರುತಿ, ಸುನಿಲ್, ಉಮಾಶ್ರೀ, ರಮೇಶ್ ಭಟ್, ಗೀತಾ ಸುರತ್ಕಲ್, ರೋಹಿದಾಸ್ ಕದ್ರಿ, ಆನಂದ ಬೋಳಾರ್ ತಾರಾಗಣದಲ್ಲಿದ್ದಾರೆ. ಇಲ್ಲಿ ಗಮನಿಸಬೇಕಾದ ಅಂಶ ಎಂದರೆ ಈ ಚಿತ್ರದಲ್ಲಿ ನಟಿಸಿರುವ ನಟರು ಹೆಚ್ಚಿನವರು ಕನ್ನಡ ಚಿತ್ರರಂಗದವರು. ಇಂತಹ ಪ್ರಸಿದ್ಧ ಕಲಾವಿದರನ್ನು ಒಳಗೊಂಡಂತಹ ಈ ಚಿತ್ರ ಹೇಳಿಕೊಳ್ಳುವಷ್ಟು ಸಾಧನೆ ಮಾಡಿಲ್ಲ. ಹಾಗೆಯೇ ಟಿ.ಎ. ಶ್ರೀನಿವಾಸ್ ಅವರು ನಿರ್ಮಿಸಿದ 'ಭಾಗ್ಯವಂತೆದಿ' ಚಿತ್ರದಲ್ಲಿ ಕನ್ನಡ, ತಮಿಳು ನಟಿಯಾದ ಸುಮಿತ್ರಾ ಮತ್ತು 'ಬದ್ಕ್‌ದ ಬಿಲೆ' ಚಿತ್ರದಲ್ಲಿ ಕನ್ನಡದ ಖ್ಯಾತ ತಾರೆ ತಾರಾ ಅವರು ನಾಯಕಿಯಾಗಿ ನಟಿಸಿದ್ದರು. ಇದೇ ಚಿತ್ರದಲ್ಲಿ ಪೋಷಕ ನಟಿಯರಾಗಿ ಕನ್ನಡದ ಇಂದಿರಾ ಮತ್ತು ಅನಿತಾ ಅವರು ಅಭಿನಯಿಸಿದ್ದರು.

ಆದರೆ ಇತ್ತೀಚೆಗೆ ಸಿನಿಮಾದ ಪ್ರಚಾರಕ್ಕಾಗಿ ತುಳು ಭಾಷಿಕರಲ್ಲದವರನ್ನು ತುಳು ಸಿನಿಮಾದಲ್ಲಿ ಬಳಸಿಕೊಳ್ಳುವುದು ಸರಿಯೇ? ಎಂಬುವುದನ್ನು ನಾವು ವಿಮರ್ಶಿಸಬೇಕಾಗುತ್ತದೆ. ಜೊತೆಗೆ ಪರಭಾಷಾ ನಟ/ನಟಿಯರನ್ನು ತುಳು ಚಿತ್ರಕ್ಕೆ ಕರೆತಂದರೆ ತುಳುಚಿತ್ರ ನಿರ್ಮಾಣದ ವೆಚ್ಚವೂ ಹೆಚ್ಚಾಗಬಹುದು. ಇಂದು ಅನ್ಯಭಾಷಾ ಚಿತ್ರರಂಗದಲ್ಲಿ ಸೇವೆ ಸಲ್ಲಿಸಿ ಪ್ರಸಿದ್ಧಿ ಪಡೆದ ಕಲಾವಿದರನ್ನು ತುಳು ಸಿನಿಮಾ ಜಗತ್ತಿಗೆ ತಂದು ಅಪರಿಪೂರ್ಣತೆಯನ್ನು ಅನುಭವಿಸಿದ ಪ್ರಸಂಗಗಳು ಇವೆ. ಉದಾಹರಣೆಗೆ 'ಸೂಂಬೆ' ಚಿತ್ರದಲ್ಲಿ ಶ್ರೀನಗರ ಕಿಟ್ಟಿ, 'ಕಾಲಿಪೋಲಿಲು' ಚಿತ್ರದಲ್ಲಿ ಪದ್ಮಜಾ ರಾವ್ ಅವರ ಪಾತ್ರ ಹಾಗೂ 'ಎಕ್ಕಸಕ್ಕ'ದಲ್ಲಿ ಟೆನ್ನಿಸ್‌ಕೃಷ್ಣ ಅವರ ಪಾತ್ರಗಳು ಈ ಚಿತ್ರಗಳಿಗೆ ನ್ಯಾಯ ಒದಗಿಸಲಿಲ್ಲ ಎನ್ನಬಹುದು. ಕಲಾವಿದರನ್ನು ಆಮದು ಮಾಡಿಕೊಳ್ಳುವುದು ತಪ್ಪಲ್ಲ; ಅಂತಹ ಕಲಾವಿದರು ಸಿನಿಮಾಕ್ಕೆ ಅನಿವಾರ್ಯವೇ? ಎಂಬುವುದರ ಕುರಿತು ಚಿತ್ರ ನಿರ್ದೇಶಕರು, ನಿರ್ಮಾಪಕರು ಎಚ್ಚರ ವಹಿಸಿದರೆ ತುಳು ಸಿನಿಮಾ ರಂಗಕ್ಕೆ ಒಳ್ಳೆಯದು.

ಅದಲ್ಲದೆ ನಮ್ಮ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಕಲಾವಿದರು ಅನ್ಯಭಾಷಾ ಚಿತ್ರರಂಗದಲ್ಲಿಯೂ ಸಾಧನೆ ಮಾಡಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರಾದ ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಕನ್ನಡದ ಮೊದಲ ವಾಕ್‌ಚಿತ್ರ 'ವಸಂತಸೇನಾ'ದಲ್ಲಿ

ಅಭಿನಯಿಸಿದ್ದರು. ಡಾ. ಶಿವರಾಮ ಕಾರಂತರ 1930ರಲ್ಲಿ 'ಡೆವಿಲ್ ಲ್ಯಾಂಡ್' ಎನ್ನುವ ಮೂಕಿ ಚಿತ್ರ ನಿರ್ಮಾಣ ಮತ್ತು 'ಡೋಮಿಂಗೊ' ಎನ್ನುವ ಮೂಕಿ ಚಿತ್ರವನ್ನು ಅವರು ನಿರ್ಮಿಸಿದ್ದರು. ಇನ್ನಂತೂ ತುಳುನಾಡಿನಿಂದ ಸ್ಯಾಂಡಲ್‌ವುಡ್, ಕಾಲಿವುಡ್, ಟಾಲಿವುಡ್ ಬಾಲಿವುಡ್‌ಗಳಿಗೆ ಹೋದಂತಹ ಕಲಾವಿದರು ಹಲವಾರು. ಕಲ್ಪನ, ಜಯಮಾಲ, ಪ್ರಕಾಶ್ ರೈ, ಐಶ್ವರ್ಯ ರೈ, ಸುನಿಲ್ ಶೆಟ್ಟಿ, ಶಿಲ್ಪಾ ಶೆಟ್ಟಿ, ಅನುಷ್ಕ ಶೆಟ್ಟಿ, ರಾಧಿಕ, ಸುರೇಶ್ ರೈ, ಭವ್ಯಶ್ರೀ ರೈ ಹೀಗೆ ಕಲಾವಿದರ ದೊಡ್ಡ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಕನ್ನಡ ಹಾಗೂ ಪರಭಾಷಾ ಚಿತ್ರಗಳಿಂದ 'ಡಬ್ಬಿಂಗ್' ಆದ ತುಳು ಸಿನಿಮಾ

ಒಂದು ಪರಿಸರದ, ಭಾಷೆಯ, ಜನಾಂಗದ ಮೇಲೆ ಬೇರೊಂದು ಪರಿಸರದ, ಭಾಷೆಯ, ಜನಾಂಗದ ಪ್ರಭಾವ ಇರುವುದು ಸಹಜ ಪ್ರಕ್ರಿಯೆ. ಹಾಗೆಯೇ ತುಳು ಸಿನಿಮಾದ ಮೇಲೆಯೂ ಕನ್ನಡ ಸಿನಿಮಾದ ಪ್ರಭಾವ-ಪ್ರೇರಣೆಯೂ ಸ್ಪಷ್ಟವಾಗಿ ಕಂಡು ಬರುವಂತಹ ಅಂಶವಾಗಿದೆ. ಯಾವ ನೆಲೆಗಟ್ಟಿನಲ್ಲಿ ಯಾವ ಅಂಶಗಳು ತುಳು ಸಿನಿಮಾದ ಮೇಲೆ ತನ್ನ ಪ್ರಭಾವ-ಪ್ರೇರಣೆ ಬೀರಿವೆ ಎಂಬುವುದನ್ನು ಈ ವಿಭಾಗದಲ್ಲಿ ದಾಖಲಿಸಲಾಗುವುದು. ಉದಾಹರಣೆಗೆ 1991ರಲ್ಲಿ ಕೋಡ್ಲು ರಾಮಕೃಷ್ಣ ಅವರ ನಿರ್ದೇಶನದ 'ರಾತ್ರಿ-ಪಗೆಲ್' ಚಿತ್ರವು ಕನ್ನಡದ 'ಬಿಸಿಲು-ಬೆಳದಿಂಗಳು' ಆಧಾರಿತವಾದವು.

ತುಳು ಚಲನಚಿತ್ರಗಳಲ್ಲಿ ನಾಟಕವನ್ನು ಆಧರಿಸಿದವುಗಳೇ ಬಹುಪಾಲು. ಕನ್ನಡ ಹಾಗೂ ಇತರ ಭಾಷೆಗಳ ಸಾಹಿತ್ಯ ಕೃತಿಗಳ ಪ್ರಭಾವ, ಪ್ರೇರಣೆ ಇದ್ದರೂ, ಬೇರೊಂದು ಸಿನಿಮಾದ 'ಡಬ್ಬಿಂಗ್'ನ ಅವಶ್ಯಕತೆ ಅದಕ್ಕಿರಲಿಲ್ಲ. ಅದರಲ್ಲೂ ಸಮೃದ್ಧವಾದ ತುಳು ರಂಗಭೂಮಿಯೇ ತುಳು ಚಿತ್ರರಂಗಕ್ಕೆ ಒಂದು ನೆಲೆಯಲ್ಲಿ ಆಸರೆಯಾಗಿ ನಿಂತಿತೆನ್ನಬಹುದು.

ಇತ್ತೀಚೆಗೆ ಅಷ್ಟೇ ಬಿಡುಗಡೆಯಾದ 'ಶಟರ್‌ದುಲಯಿ' ತುಳು ಸಿನಿಮಾವು ಎಂಟು ವರ್ಷಗಳ ಹಿಂದೆ ಮಲಯಾಳಂನಲ್ಲಿ ತೆರೆಕಂಡು ಯಶಸ್ವಿಯಾದ 'ಶಟರ್' ಚಿತ್ರದ ರಿಮೇಕ್ ಚಿತ್ರ ಅನ್ನುವುದನ್ನು ಬಿಟ್ಟರೆ ನೇರವಾಗಿ ತುಳುವಿಗೆ 'ಡಬ್ಬಿಂಗ್' ಆದ ಸಿನಿಮಾಗಳು ಇಲ್ಲವೆಂದೇ ಹೇಳಬಹುದು. ಆದರೂ ಪರಭಾಷೆಯ ಹಾಗೂ ಪರಭಾಷಾ ಚಿತ್ರದ ಕತೆಯನ್ನು ಒಳಗೊಂಡ ಸಿನಿಮಾಗಳು ತುಳುವಿನಲ್ಲಿವೆ.

- 'ಬದ್ಕೆರೆ ಬುಡ್ಲೆ' ಸಿನಿಮಾವು ಒರಿಯಾ ಭಾಷೆಯ ಚಿತ್ರದ ಕತೆಯನ್ನು ಒಳಗೊಂಡ ತುಳು ಚಿತ್ರ.
- 'ಪೆಟ್ಟಾಯಿ ಪಿಲಿ' ಸಿನಿಮಾವು ಹಿಂದಿ ಭಾಷೆಯ ಚಿತ್ರದ ಕತೆಯನ್ನು ಒಳಗೊಂಡ ತುಳು ಚಿತ್ರ.
- ಕೋಡ್ಲು ರಾಮಕೃಷ್ಣ ಅವರ ನಿರ್ದೇಶನದ 'ರಾತ್ರೆ ಪಗೆಲ್' ಸಿನಿಮಾವು 'ಅನಾಹುತ' ಎಂಬ ಕನ್ನಡ ಭಾಷೆಯ ಚಿತ್ರದ ಕತೆಯನ್ನು ಒಳಗೊಂಡ ತುಳುಚಿತ್ರ.
- 'ತುಡರ್' ಸಿನಿಮಾವು ತೆಲುಗು ಭಾಷೆಯ ಕಾದಂಬರಿಯ ಕನ್ನಡ ಅನುವಾದ ಕಥೆಯನ್ನು ಒಳಗೊಂಡ ತುಳು ಚಿತ್ರ.

  ಹಾಗೆಯೇ ತುಳುವಿನ ಒಂದೆರಡು ಸಿನಿಮಾಗಳ ಚಿತ್ರಕಥೆಗಳು ಬೇರೆ ಭಾಷೆಗೂ ಅನುವಾದಗೊಂಡಿವೆ.
- 'ದಾರೆದ ಬುಡೆದಿ' ಚಿತ್ರದ ಯಶಸ್ವಿ ಮುಂದೆ 'ಧರ್ಮ ಪತ್ನಿ' ಎಂಬ ಕನ್ನಡ ಚಲನಚಿತ್ರಕ್ಕೆ ಕಾರಣವಾಯಿತು.
- 'ಮದಿಮೆ' ಸಿನಿಮಾವು ಮರಾಠಿ ಭಾಷೆಗೆ ಅನುವಾದಗೊಂಡು ಈಗ ಗುಜರಾತಿ ಭಾಷೆಗೂ ಅನುವಾದಗೊಳ್ಳುತ್ತಿದೆ.

ಸಂಸ್ಕೃತಿಯ ಕನ್ನಡಿಯಾಗಿರಬೇಕಾದ ಸಿನಿಮಾವನ್ನು ಇಂದು 'ಡಬ್ಬಿಂಗ್' ಹಾಳು ಮಾಡುತ್ತಿದೆ ಎಂಬ ಕೂಗಿನ ನಡುವೆಯೂ ಇಂದು ಎಲ್ಲಾ ಚಿತ್ರರಂಗಗಳಲ್ಲಿಯೂ ಸಿನಿಮಾ ಮತ್ತು 'ಡಬ್ಬಿಂಗ್'ನ ನಂಟು ಗಟ್ಟಿಯಾಗುತ್ತಾ ಹೋಗುತ್ತಿದೆ. ಇದು ಒಳ್ಳೆಯದೋ ಅಥವಾ ಕೆಟ್ಟದೋ ಎಂಬುವುದು ಚರ್ಚಿತವಾದ ಅಂಶ.

ತುಳು ಸಿನಿಮಾ ರಂಗದಲ್ಲಿ ಆರೂರು ಪಟ್ಟಾಭಿಯವರ ಪಾತ್ರ

70ರ ದಶಕ ಎಲ್ಲಾ ರೀತಿಯಿಂದಲೂ ಭಾರತೀಯ ಸಿನಿಮಾ ರಂಗ ಹೆಮ್ಮೆಪಟ್ಟುಕೊಳ್ಳಬಹುದಾದ ಸಮಯ. 70ರ ದಶಕದಲ್ಲಿ ಹಿಂದಿಯಲ್ಲಿ ಶ್ಯಾಮ್ ಬೆನಗಲ್, ಗೋವಿಂದ ನಿಹಲಾನಿ, ಕೇತನ್ ಮೆಹ್ತಾ, ಮಣಿಕೌಲ್, ಕುಮಾರ್ ಶಹಾನಿ, ಬೆಂಗಾಲಿ ಸಿನಿಮಾದಲ್ಲಿ ಬುದ್ಧದೇಬ್ ದಾಸ್ ಗುಪ್ತಾ ಮತ್ತು ಗೌತಮ್ ಘೋಷ್ ಮಲಯಾಳಂ ಸಿನಿಮಾದಲ್ಲಿ ಅಡೂರ್ ಗೋಪಾಲಕೃಷ್ಣನ್, ಶಾಜಿ ಎನ್. ಕರುಣ್, ಜಿ. ಅರವಿಂದನ್, ಒರಿಯಾ ಸಿನಿಮಾದಲ್ಲಿ ನೀರದ್ ಮೋಹಾಪಾತ್ರ ಮುಂತಾದ ಅದ್ಭುತ ನಿರ್ದೇಶಕರಿಂದ ಉತ್ತಮ ಚಿತ್ರಗಳು ಬಂದವು. ಅಂತೂ ಈ ದಶಕದ ಸಿನಿಮಾ ತನ್ನ ಕತ್ತಿಯಲಗಿನಷ್ಟೇ ಹರಿತವಾದ ಸಾಮಾಜಿಕ ಕಮೆಂಟರಿಯಿಂದಾಗಿ ಪ್ರೇಕ್ಷಕರ ಮನಗಳ ಮೇಲೆ ಅಚ್ಚೊತ್ತಿತ್ತು.

ಒಂದು ಸಿನಿಮಾ ಗೆಲ್ಲುವುದು ಮೊದಲಾಗಿ ಅದರ ಕತೆಯಿಂದ. ಒಂದು ಹಂತದಲ್ಲಿ ಒಳ್ಳೆಯ ಕತೆಯೇ ಸಿನಿಮಾದ ನಿಜವಾದ ನಾಯಕ. ಆದರೆ ಆ ಕತೆಯನ್ನು ನಿಜವಾಗಿಯೂ ಗೆಲ್ಲಿಸುವವನೇ ನಿರ್ದೇಶಕ. ಕತೆ, ಪಾತ್ರ, ಹಾಡು, ಅಭಿನಯ ಇವುಗಳು ಸಿನಿಮಾಗಳಲ್ಲಿ ವಹಿಸುವ ಪಾತ್ರಕ್ಕಿಂತ ಮಿಗಿಲಾಗಿ ನಿರ್ದೇಶಕನ ಪಾತ್ರ ಸಿನಿಮಾದಲ್ಲಿ ಹೆಚ್ಚಾಗಿರುತ್ತದೆ. ತುಳು ಸಿನಿಮಾ ರಂಗಕ್ಕೆ ಒದಗಿದ ಅಂತಹ ಪರಿಪೂರ್ಣ ನಿರ್ದೇಶಕ ಆರೂರು ಪಟ್ಟಾಭಿ ಅವರು.

ಆರೂರು ಪಟ್ಟಾಭಿ ಅವರು ನಿರ್ದೇಶಿಸಿದ ತುಳು ಸಿನಿಮಾಗಳು:

1. ದಾರೆದ ಬುಡೆದಿ
2. ಪಗೆತ ಪುಗೆ
3. ಬಿಸತ್ತಿ ಬಾಬು
4. ಬಯ್ಯುಮಲ್ಲಿಗೆ
5. ಬೊಳ್ಳಿದೋಟ
6. ಕರಿಯಣಿ ಕಟ್ಟಂದಿನ ಕಂಡನಿ
7. ಭಾಗ್ಯವಂತೆದಿ
8. ಬದ್ಕೆರೆ ಬುಡ್ಲೆ
9. ಸತ್ಯ ಓಲುಂಡು

ಕನ್ನಡದ ಖ್ಯಾತ ನಿರ್ದೇಶಕರಾಗಿದ್ದ ಪಟ್ಟಾಭಿಯವರು ಒಟ್ಟು ತುಳುವಿನಲ್ಲಿ 9 ಚಿತ್ರಗಳನ್ನು ನಿರ್ದೇಶಿಸಿದ ನಿರ್ದೇಶಕ ಎನ್ನುವ ಖ್ಯಾತಿಗೆ ಪಾತ್ರರಾಗಿದ್ದಾರೆ.

ಕೆ.ಎನ್. ಟೇಲರ್ ಹಾಗೂ ನಾರಾಯಣ ಪುತ್ರನ್ ಅವರು ಶರವು ಪಿಕ್ಚರ್ಸ್ ಹೆಸರಿನಲ್ಲಿ ನಿರ್ಮಾಣ ಮಾಡಿದ ತುಳುವಿನ ಎರಡನೇ ಚಿತ್ರವಾದ 'ದಾರೆದ ಬುಡೆದಿ'ಯನ್ನು ನಿರ್ದೇಶಿಸಿದವರು ಆರೂರು ಪಟ್ಟಾಭಿ ಅವರು. ಈ ಚಿತ್ರವು 1971ರ ಮಧ್ಯಭಾಗದಲ್ಲಿ ಮಂಗಳೂರಿನ 'ರೂಪವಾಣಿ' ಚಿತ್ರಮಂದಿರದಲ್ಲಿ ಐದು ವಾರಗಳ ಕಾಲ ಯಶಸ್ವಿ ಪ್ರದರ್ಶನಗೊಂಡಿತು. ಈ ಚಿತ್ರದ ಯಶಸ್ವಿ ಮುಂದೆ 'ಧರ್ಮಪತ್ನಿ' ಎಂಬ ಕನ್ನಡ ಚಲನಚಿತ್ರಕ್ಕೆ ಕಾರಣವಾಯಿತು.

'ದಾರೆದ ಬುಡೆದಿ' ಚಿತ್ರದ ಅತ್ಯಂತ ಯಶಸ್ಸನ್ನು ಕಂಡ ನಟ ಆನಂದ ಶೇಖರ್ ಅವರು ಕೆ.ಎನ್. ಮಹಾಬಲ ಶೆಟ್ಟಿ ಜೊತೆ ಸೇರಿ 'ಪಗೆತ ಪುಗೆ' ಎನ್ನುವ ಚಿತ್ರ ನಿರ್ಮಿಸಿದರು. ಇದು ಸೂರ್ಯ ಚಡಗ ಅವರ 'ಹೆಣ್ಣು-ಹೊನ್ನು-ಮಣ್ಣು' ಕಾದಂಬರಿಯನ್ನು ಆಧರಿಸಿದ ಚಿತ್ರವಿದು. ಕನ್ನಡ ಕಾದಂಬರಿ ಆಧಾರಿತವಾದ ಪ್ರಥಮ ತುಳು ಚಿತ್ರವಿದು. 'ದ್ಯುತಿ ಫಿಲಂಸ್' ಬ್ಯಾನರ್ ಅಡಿಯಲ್ಲಿ ಬಂದಂತಹ ಈ ಸಿನಿಮಾದ ನಿರ್ದೇಶಕರು ಆರೂರು ಪಟ್ಟಾಭಿ. 1972ರಲ್ಲಿ ಸೆಂಟ್ರಲ್ ಚಿತ್ರಮಂದಿರದಲ್ಲಿ ಬಿಡುಗಡೆಯಾಯಿತು.

ಈ ಕಾಲಘಟ್ಟದಲ್ಲಿ ಅಂದರೆ 1971-72 ಈ ಎರಡು ವರ್ಷಗಳ ಕಾಲದಲ್ಲಿ ನಾಲ್ಕು ಚಿತ್ರಗಳು ತೆರೆ ಕಂಡವು. 1972 ಅಕ್ಟೋಬರ್ 6ರಂದು ಮೈಕ್ರೋ ಫಿಲಂಸ್ ಬ್ಯಾನರ್ ಅಡಿಯಲ್ಲಿ ಜ್ಯೋತಿ ಚಿತ್ರಮಂದಿರದಲ್ಲಿ 'ಬಿಸತ್ತಿ ಬಾಬು'ಗೆ ಬಿಡುಗಡೆಯ ಭಾಗ್ಯ ಒದಗಿ ಬಂದಿತು. 77 ದಿನಗಳ ಯಶಸ್ವಿ ಪ್ರದರ್ಶನ ಕಂಡ ಸಲುವಾಗಿ ಆಯೋಜಿಸಿದ ಸಮಾರಂಭದಲ್ಲಿ ಕನ್ನಡದ ಖ್ಯಾತ ನಟ ಡಾ। ರಾಜ್‌ಕುಮಾರ್ ಅವರು ಅತಿಥಿಯಾಗಿ ಭಾಗವಹಿಸಿದ್ದರು. ಇದು ರಮಾನಂದ ಚೂರ್ಯ ಅವರ ನಾಟಕವನ್ನು ಆಧರಿಸಿದ ಚಿತ್ರ. ಎಂ.ವೈ. ಕೋಲಾ ಅವರ ನಿರ್ಮಾಣದಲ್ಲಿ ಮೂಡಿ ಬಂದ ಈ ಚಿತ್ರದ ನಿರ್ದೇಶನವು ಕೂಡಾ ಆರೂರು ಪಟ್ಟಾಭಿ ಅವರದ್ದು.

1974 ಅಕ್ಟೋಬರ್ 18ರಂದು ಏಕಕಾಲದಲ್ಲಿ ಮಂಗಳೂರಿನ 'ಜ್ಯೋತಿ' ಮತ್ತು 'ರಾಮಕಾಂತಿ' ಚಿತ್ರಮಂದಿರದಲ್ಲಿ ಬಿಡುಗಡೆಯಾಗಿ ಯಶಸ್ವಿ ಪ್ರದರ್ಶನ ಕಂಡ 'ಬಯ್ಯಮಲ್ಲಿಗೆ' ಚಿತ್ರವು ಸಂಜೀವ ದಂಡೆಕೇರಿ ಅವರ ಜನಪ್ರಿಯ ನಾಟಕ 'ಬಯ್ಯಮಲ್ಲಿಗೆ' ಆಧಾರಿತವಾದುದು. ಜಯರಾಮ ಫಿಲಂಸ್ ಬ್ಯಾನರ್ ಅಡಿಯಲ್ಲಿ ಮೂಡಿ ಬಂದ ಈ ಚಿತ್ರಕ್ಕೆ ಚಿತ್ರಕಥೆ ಬರೆದು ನಿರ್ದೇಶನ ಮಾಡಿದವರು ಆರೂರು ಪಟ್ಟಾಭಿ.

1977ರಲ್ಲಿ ಮಂಗಳೂರಿನ 'ಸುಚಿತ್ರ' ಚಿತ್ರಮಂದಿರದಲ್ಲಿ ಬಿಡುಗಡೆಯಾದ 'ಬೊಳ್ಳಿದೋಟ' ಚಿತ್ರವೂ 4 ವಾರಗಳ ಕಾಲ ಪ್ರದರ್ಶನಗೊಂಡಿತು. ಪಿ. ಬಾಬು ಮೇಸ್ತ್ರೀ ದಂಡೆಕೇರಿಯವರು ಅರ್ಪಿಸಿದ ಶ್ರೀ ಜಯರಾಮ ಫಿಲಂಸ್‌ನ ಸಂಜೀವ ದಂಡೆಕೇರಿ ಅವರು ನಿರ್ಮಾಪಕರಾಗಿದ್ದ ಈ ಸಿನಿಮಾಕ್ಕೆ ಚಿತ್ರಕಥೆ ಹಾಗೂ ನಿರ್ದೇಶನ ಆರೂರು ಪಟ್ಟಾಭಿ ಅವರದ್ದು. ಇದು ಸಂಜೀವ ದಂಡೆಕೇರಿ ಅವರ 'ಗಂಗರಾಮ' ನಾಟಕವನ್ನು ಆಧರಿಸಿದ್ದು.

'ಕರಿಯಣಿ ಕಟ್ಟಂದಿನ ಕಂಡನಿ' ತುಳುವಿನ ಪ್ರಥಮ ವರ್ಣಚಿತ್ರ. 1978ರಲ್ಲಿ ಮಂಗಳೂರಿನ 'ಪ್ರಭಾತ್' ಚಿತ್ರಮಂದಿರದಲ್ಲಿ ಬಿಡುಗಡೆಯಾಗಿ 12 ವಾರಗಳಷ್ಟು ಕಾಲ ಯಶಸ್ವಿ ಪ್ರದರ್ಶನಗೊಂಡಿತು. ವಿಶೇಷತೆ ಅಂದರೆ ಈ ಚಿತ್ರವನ್ನು ಆರೂರು ಫಿಲಂಸ್ ಮೂಲಕ ಆರೂರು ಪಟ್ಟಾಭಿ ಸಹೋದರರು ನಿರ್ಮಿಸಿದರು. ಸರೋಜಿನಿ ಪಟ್ಟಾಭಿ ಅವರ ಸಂಗೀತ ನಿರ್ದೇಶನವಿರುವ ಈ ಚಿತ್ರವನ್ನು ಆರೂರು ಪಟ್ಟಾಭಿ ಅವರೇ ನಿರ್ದೇಶಿಸಿದರು.

ಕೆ.ಎನ್. ಟೇಲರ್ ಅವರ 'ಕಂಡನಿ ಬುಡೆದಿ' ನಾಟಕದ ಕಥೆಯನ್ನು ಆಧರಿಸಿ ಪಟ್ಟಾಭಿ ಅವರು 'ಭಾಗ್ಯವಂತೆದಿ' ಸಿನಿಮಾವನ್ನು ನಿರ್ದೇಶಿಸಿದರು. ಅಕ್ಟೋಬರ್ 23ರಂದು

ಮಂಗಳೂರಿನ 'ಜ್ಯೋತಿ' ಚಿತ್ರಮಂದಿರದಲ್ಲಿ ಬಿಡುಗಡೆಗೊಂಡು 8 ವಾರಗಳ ಕಾಲ ಯಶಸ್ವಿ ಪ್ರದರ್ಶನಗೊಂಡಿತು. ಅದಲ್ಲದೆ ಈ ಚಿತ್ರವು 1981–82ರಲ್ಲಿ ರಾಜ್ಯ ಸರಕಾರದ ವಿಶೇಷ ಪ್ರಶಸ್ತಿ ಪಡೆದಿದೆ.

ತುಳುವಿನ ಪ್ರಥಮ ಈಸ್ಟ್‌ಮನ್ ವರ್ಣದ ಚಿತ್ರ 'ಬದ್ಕೆರೆ ಬುಡ್ಲೆ'. ಈ ಚಿತ್ರವು ಪ್ರಶಾಂತ ನಂದರವರ 'ಒರಿಯಾ' ಚಿತ್ರದ ಕಥೆಯನ್ನು ಆಧಾರಿತವಾಗಿದ್ದು, ಆರೂರು ಪಟ್ಟಾಭಿ ಅವರು ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. 1983 ಮೇ 13ರಂದು ಮಂಗಳೂರಿನ 'ಜ್ಯೋತಿ' ಚಿತ್ರಮಂದಿರದಲ್ಲಿ ಬಿಡುಗಡೆಗೊಂಡು 11 ವಾರಗಳ ಕಾಲ ಯಶಸ್ವಿ ಪ್ರದರ್ಶನಗೊಂಡಿತು. ಸಾಹಸ ನಿರ್ದೇಶಕರಾದ ರಾಮ್ ಶೆಟ್ಟಿ ಅವರು ಈ ಚಿತ್ರದ ನಿರ್ಮಾಪಕರು.

ಇನ್ನು ಆರೂರು ಪಟ್ಟಾಭಿ ಅವರು ಕೊನೆಯದಾಗಿ ನಿರ್ದೇಶನ ಮಾಡಿದ ತುಳುಚಿತ್ರ 'ಸತ್ಯ ಓಲುಂಡು'. ತುಳು ರಂಗಭೂಮಿಯ ಖ್ಯಾತನಟ ಹಾಗೂ ನಿರ್ದೇಶಕರಾದ ದೇವದಾಸ್ ಕಾಪಿಕಾಡ್ ಅವರ ಪ್ರಸಿದ್ಧ ನಾಟಕ 'ಬಲೆ ಚಾ ಪರ್ಕ' ಕಥೆಯನ್ನು ಆಧಾರಿತವಾಗಿದೆ. 1991 ಆಗಸ್ಟ್ 23ರಂದು ಮಂಗಳೂರಿನ 'ಜ್ಯೋತಿ' ಚಿತ್ರಮಂದಿರದಲ್ಲಿ ಬಿಡುಗಡೆಗೊಂಡು 4 ವಾರಗಳ ಕಾಲ ಪ್ರದರ್ಶನಗೊಂಡಿತು.

ಒಟ್ಟಿನಲ್ಲಿ ಒಂದು ಸಿನಿಮಾದ ಯಶಸ್ಸು ಅದರ ನಿರ್ದೇಶಕರನ್ನು ಅವಲಂಬಿತವಾಗಿರುತ್ತದೆ. ಚಿತ್ರೀಕರಣದ ಪೂರ್ವ ಹಂತದಿಂದ ಹಿಡಿದು ಚಿತ್ರೀಕರಣೋತ್ತರ ಹಂತದವರೆಗೆ ನಿರ್ದೇಶಕನ ಪಾತ್ರ ಬಹಳ ಮುಖ್ಯವಾಗಿರುತ್ತದೆ. ತೆರೆ ಕಂಡಂತಹ ತುಳು ಸಿನಿಮಾಗಳಲ್ಲಿ ಸುಮಾರು 09 ಸಿನಿಮಾಗಳನ್ನು ನಿರ್ದೇಶಿಸಿದ ಆರೂರು ಪಟ್ಟಾಭಿಯವರ ಕೊಡುಗೆಯನ್ನು ತುಳುನಾಡು ಎಂದಿಗೂ ಮರೆಯಲಾಗದು, ಮರೆಯದು.

ತುಳು ಸಿನಿಮಾ ರಂಗದಲ್ಲಿ ಕೆ.ಎನ್. ಟೇಲರ್ ಅವರ ಪಾತ್ರ

ತುಳು ಸಿನಿಮಾ ರಂಗ ಎಂದಿಗೂ ಮರೆಯದಿರುವ ಹೆಸರೆಂದರೆ ಕೆ.ಎನ್. ಟೇಲರ್. ಸುಮಾರು 1970ರ ದಶಕದಲ್ಲಿ 'ಗಣೇಶ ನಾಟಕ ಸಭಾ ಕುಡ್ಲ' ಎಂಬ ಸಂಸ್ಥೆಯಡಿ ಹಲವು ಜನಪ್ರಿಯ ನಾಟಕಗಳನ್ನು ಯಶಸ್ವಿಯಾಗಿ ಪ್ರದರ್ಶನ ನೀಡುತ್ತಾ ರಂಗಭೂಮಿಯಲ್ಲಿ ನಾಯಕ ನಟನಾಗಿ ಮೆರೆಯುತ್ತಿದ್ದವರು ಕೆ.ಎನ್. ಟೇಲರ್. ತುಳುವಿನ ಜನಪ್ರಿಯ ನಾಟಕವನ್ನು 1971ರಲ್ಲಿ 'ದಾರೆದ ಬುಡೆದಿ' ಸಿನಿಮಾವನ್ನಾಗಿಸಿದರು. ಇದು ತುಳು ಭಾಷೆಯ ಎರಡನೇ ಚಿತ್ರ. ಈ ಕಾಲಘಟ್ಟವು ತುಳು ಸಿನಿಮಾ ರಂಗಕ್ಕೆ ಮಹತ್ವದ ತಿರುವು ನೀಡಿತೆನ್ನುವುದು ಮುಂದಿನ ದಿನಗಳಲ್ಲಿ ಸ್ಪಷ್ಟವಾಯಿತು.

"ತುಳು ಸಿನಿಮಾ ಮಾಡಿ ಕಳೆದುಕೊಂಡಿರುವುದೇ ಹೆಚ್ಚು. ಸಿನಿಮಾ ತೆಗೆಯಿರಿ ಎಂದು ಹೇಳುವವರು ಇದ್ದರು. ಆದರೆ ಮಾಡುವವರು ಇಲ್ಲ" ಎನ್ನುವ ಕೆ.ಎನ್. ಟೇಲರ್ ಅವರು ತುಳು ಚಿತ್ರರಂಗದಲ್ಲಿ ಕ್ರಾಂತಿ ಮಾಡಿದವರು. ರಂಗಭೂಮಿಯಿಂದ ನಾಯಕ ನಟನಾಗಿ ಬಂದಂತಹ ಟೇಲರ್ ಅವರು 1974ರಲ್ಲಿ ಚಿತ್ರ ನಿರ್ದೇಶನದ ಕಡೆಗೆ ಒಲವು ತೋರಿಸಿದರು. ಇವರ ಜನಪ್ರಿಯ ನಾಟಕಗಳೇ ತುಳು ಸಿನಿಮಾಗಳಾಗಿವೆ ಎಂಬುವುದಕ್ಕೆ 'ಕಾಸ್‌ದಾಯೆ ಕಂಡನೆ' ಎಂಬ ಸಿನಿಮಾ ಒಂದು ಉತ್ತಮ ನಿದರ್ಶನ.

ಪಡುಬಿದ್ರೆ ಸಮೀಪದ ಕಡಂದಲೆಯಲ್ಲಿ ಮುತ್ತು-ಚಂದ್ರು ದಂಪತಿಗಳ ಪುತ್ರನಾಗಿ 1-09-1939ರಂದು ಜನಿಸಿದ ಕಡಂದಲೆ ನಾರಾಯಣ ಟೇಲರ್ 76 ವರ್ಷಗಳ ಕಾಲ ಬಾಳಿ ಬದುಕಿದ್ದು ಮಾತ್ರವಲ್ಲ, ನಟ, ನಿರ್ದೇಶಕ, ನಿರ್ಮಾಪಕ, ಲೇಖಕನಾಗಿ ತುಳು ರಂಗಭೂಮಿಗೆ ಜೀವ ತುಂಬಿದವರು. ಮಂಗಳೂರಿನ ರಥಬೀದಿಯಲ್ಲಿ ಟೈಲರ್ ವೃತ್ತಿಯನ್ನು ಆರಂಭಿಸಿದ ಇವರು ಮೊದಲು ನಾಟಕಗಳಲ್ಲಿ ನೇಪಥ್ಯ ಕಲಾವಿದರಾಗಿ ಇದ್ದರು. ತಂದೆಯ ನಿಧನದಿಂದ 8ನೇ ತರಗತಿಗೆ ಶಿಕ್ಷಣ ಮೊಟಕುಗೊಳಿಸಿ ಉದ್ಯೋಗದತ್ತ ಮುಖ ಮಾಡಿದರು. ಬಳಿಕ ಉದ್ಯೋಗ ಮಾಡುತ್ತಾ ಮಂಗಳೂರು ಟ್ಯುಟೋರಿಯಲ್ಸ್ ಮೂಲಕ ಮೆಟ್ರಿಕ್ ಪಾಸ್ ಮಾಡಿದರು.

1950ರಲ್ಲಿ 'ಶ್ರೀ ಗಣೇಶ ನಾಟಕ ಸಭಾ ಸಂಸ್ಥೆ' ಕಟ್ಟಿದರು. ಒಂದು ನಾಟಕ ಅಂದರೆ ಅದರ ನಿರ್ದೇಶನ, ಸಂಭಾಷಣೆ, ಗೀತರಚನೆ, ಅಭಿನಯ ಎಲ್ಲದರಲ್ಲೂ ಟೇಲರ್ ಅವರು ಎತ್ತಿದ ಕೈ. ತುಳು ಸಿನಿಮಾವೊಂದಕ್ಕೆ ಜನ್ಮ ನೀಡಬೇಕೆಂಬ ಆಸೆಯು 1970ರಲ್ಲಿ ಅವರಲ್ಲಿ ಚಿಗುರೊಡೆದಿತ್ತು. ಈ ಒತ್ತಾಸೆಯೇ 'ದಾರೆದ ಬುಡೆದಿ' ಸಿನಿಮಾಕ್ಕೆ ಕಾರಣವಾಯಿತು. ಆದರೆ ಇದರ ನಡುವೆಯೇ ಎಸ್.ಆರ್. ರಾಜನ್ ಅವರ ನಿರ್ದೇಶನದ 'ಎನ್ನ ತಂಗಡಿ' ಎಂಬ ತುಳು ಸಿನಿಮಾ ತೆರೆ ಕಂಡು ಪ್ರಥಮ ತುಳುಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.

ಟೇಲರ್ ಅವರು ನಟಿಸಿದ ಹಾಗೂ ದುಡಿದ ಚಿತ್ರಗಳು ಈ ಕೆಳಗಿನಂತಿವೆ :

1. ದಾರೆದ ಬುಡೆದಿ
2. ಪಗೆತ ಪುಗೆ
3. ಬಿಸತ್ತಿ ಬಾಬು
4. ಯಾನ್ ಸನ್ಯಾಸಿ ಆಪೆ
5. ಕಾಸ್‌ದಾಯೆ ಕಂಡನೆ
6. ಏರ್ ಮಲ್ತಿನ ತಪ್ಪು
7. ತುಳುನಾಡ ಸಿರಿ
8. ಸಾವಿರಡೊರ್ತಿ ಸಾವಿತ್ರಿ

ಇವರ 'ನಮ್ಮ ಭಾಗ್ಯ' ಸಿನಿಮಾ ಬಿಡುಗಡೆಯಾಗಿಲ್ಲ. ತುಳುನಾಡಿನ ಪರಂಪರೆಯ ಅನಾವರಣದ ಜೊತೆಗೆ ಗಂಭೀರ ಚಿಂತನೆಯು ಟೇಲರ್ ಅವರ ಸಿನಿಮಾದ ವೈಶಿಷ್ಟ್ಯ. ಪ್ರಸಿದ್ಧ ನಟಿಯರಾದ ಜಯಮಾಲ, ರತ್ನಮಾಲ ಅವರನ್ನು ಚಿತ್ರರಂಗಕ್ಕೆ ಪರಿಚಯಿಸಿದ ಕೀರ್ತಿ ಇವರದು. ಇವರ ಖ್ಯಾತಚಿತ್ರ 'ಬಿಸತ್ತಿ ಬಾಬು'ವಿನಲ್ಲಿ ಕನ್ನಡದಲ್ಲಿ ಆಗಲೇ ಜನಪ್ರಿಯವಾಗಿದ್ದ ನಟಿ ಲೀಲಾವತಿಯನ್ನು ಕರೆತಂದು ತುಳು ಚಿತ್ರರಂಗಕ್ಕೆ ಪರಿಚಯಿಸಿದರು. ಅಲ್ಲದೆ ಈ ಸಿನಿಮಾಕ್ಕೆ 1972–73ರ ಕರ್ನಾಟಕ ರಾಜ್ಯ ಸರಕಾರದ 3ನೇ ಅತ್ಯುತ್ತಮ ಚಲನಚಿತ್ರ ಎಂಬ ಪ್ರಶಸ್ತಿ ದೊರಕಿದ್ದು ಮಾತ್ರವಲ್ಲ, ತುಳು ಚಿತ್ರರಂಗಕ್ಕೆ ರಾಷ್ಟ್ರೀಯ ಮನ್ನಣೆಯನ್ನು ದೊರಕಿಸಿ ಕೊಟ್ಟಿತು. ಜೊತೆಗೆ ಈ ಚಿತ್ರದ 75ನೇ ದಿನದ ಪ್ರದರ್ಶನ ಮಂಗಳೂರಿನ ಜ್ಯೋತಿ ಚಿತ್ರಮಂದಿರದಲ್ಲಿ ನಡೆದಾಗ ಕನ್ನಡದ ವರನಟ ಡಾ। ರಾಜ್ ಕುಮಾರ್ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

1974ರಲ್ಲಿ ಟೇಲರ್ ಅವರು ನಿರ್ದೇಶನದ ಕಡೆ ಒಲವು ತೋರಿ 'ಏರ್ ಮಲ್ತಿನ ತಪ್ಪು' ನಾಟಕವನ್ನು ಅದೇ ಹೆಸರಿನಲ್ಲಿ ಚಿತ್ರವನ್ನಾಗಿಸಿದರು. 1975ರಲ್ಲಿ ತುಳು ಚಿತ್ರರಂಗದಲ್ಲಿ ಯಾವ ಸಿನಿಮಾವು ಬಿಡುಗಡೆಯಾಗಿಲ್ಲ. 1976ರಲ್ಲಿ ಟೇಲರ್ ಅವರು ಗಣೇಶ್ ಇಂಟರ್‌ನ್ಯಾಷನಲ್ ಬ್ಯಾನರ್ ಅಡಿಯಲ್ಲಿ ಗೀತಪ್ರಿಯ ಅವರ ನಿರ್ದೇಶನದಲ್ಲಿ 'ಸಾವಿರಡೊರ್ತಿ ಸಾವಿತ್ರಿ' ಚಿತ್ರವನ್ನು ನಿರ್ಮಾಣ ಮಾಡಿದರು.

1981–82ರಲ್ಲಿ 'ಭಾಗ್ಯವಂತೆದಿ' ಸಿನಿಮಾ ಕೂಡಾ ರಾಜ್ಯ ಸರಕಾರದ ವಿಶೇಷ ಪ್ರಶಸ್ತಿ ಪಡೆಯಿತು. ಟಿ.ಎ. ಶ್ರೀನಿವಾಸ್ ಅವರು 'ನಿರ್ಮಿತಾ ಮೂವೀಸ್' ಬ್ಯಾನರ್ ಅಡಿಯಲ್ಲಿ ನಿರ್ಮಾಣ ಮಾಡಿದ 'ಭಾಗ್ಯವಂತೆದಿ' ಚಿತ್ರಕ್ಕೆ ಚಿತ್ರಕಥೆ, ಸಂಭಾಷಣೆ, ಗೀತಸಾಹಿತ್ಯ ಕೆ.ಎನ್. ಟೇಲರ್ ಅವರದ್ದು. ಕನ್ನಡದ ಅಭಿನಯತಾರೆ ಮಂಜುಳಾ ಅಭಿನಯದಲ್ಲಿ 'ನಮ್ಮ ಭಾಗ್ಯ' ಎಂಬ ತುಳು ಚಿತ್ರದ ಚಿತ್ರೀಕರಣ ನಡೆದಿತ್ತಾದರೂ ಕಾರಣಾಂತರಗಳಿಂದ ಈ ಚಿತ್ರವೂ ತೆರೆ ಕಂಡಿಲ್ಲ.

ಕೆ.ಎನ್. ಟೇಲರ್ ಹಾಗೂ ನಾರಾಯಣ ಪುತ್ರನ್ ಜತೆಯಾಗಿ ನಿರ್ಮಿಸಿದ ಆರೂರು ಪಟ್ಟಾಭಿ ನಿರ್ದೇಶಕರಾದ 'ದಾರೆದ ಬುಡೆದಿ' ಚಿತ್ರ ರೂಪವಾಣಿಯಲ್ಲಿ ಆರು ವಾರಗಳ ಕಾಲ ಪ್ರತಿದಿನ 4 ದೇಖಾವೆಗಳಲ್ಲಿ ಪ್ರದರ್ಶನ ಕಂಡಿತು. ಮೊದಲ ವಾರದಲ್ಲಿ ಒಂದೆರಡು

ದಿನ 5 ದೇಖಾವೆಗಳಲ್ಲಿ ಪ್ರದರ್ಶಿತವಾಯಿತು. ಅಲ್ಲದೆ ಆ ಕಾಲದಲ್ಲಿಯೇ ಮುಂಬಯಿಯಲ್ಲಿ ಪ್ರದರ್ಶಿತವಾದ ಹೆಗ್ಗಳಿಕೆ ಈ ಚಿತ್ರಕ್ಕಿದೆ. 'ಕಾಸ್‌ದಾಯೆ ಕಂಡನೆ' ಎಂಬ ಚಲನಚಿತ್ರದ ಮೂಲಕ ಜಯಮಾಲರನ್ನು ಚಿತ್ರರಂಗಕ್ಕೆ ಪರಿಚಯಿಸಿದವರು ಕೂಡಾ ಟೇಲರ್ ಅವರೇ. ಅಲ್ಲದೆ ಜನಪ್ರಿಯ ನಟಿಯಾದ ಮಿನುಗುತಾರೆ ಕಲ್ಪನಾ ಹಾಗೂ ಆರೂರು ಪಟ್ಟಾಭಿ, ಗೀತಪ್ರಿಯ, ಲೀಲಾವತಿ ಅವರನ್ನು ತುಳುವಿನಲ್ಲಿ ನಟಿಸುವಂತೆ ಮಾಡಿದ್ದ ಶ್ರೇಯ ಇವರದ್ದು.

ಟೇಲರ್ ಅವರ ಗರಡಿಯಿಂದ ಬಂದ ಕಲಾವಿದರು– ಜಯಮಾಲ, ರತ್ನಮಾಲ, ಮಮತಾ ಶೆಣೈ, ಹೇಮಲತಾ, ಶಶಿಕಲಾ ಶೆಟ್ಟಿ, ಸರೋಜಿನಿ ಶೆಟ್ಟಿ, ಜಯಶೀಲ, ಸೋಮಶೇಖರ್ ಪುತ್ರನ್, ರಾಮಚಂದ್ರ ಕೂಳೂರು, ಸದಾಶಿವ ಸಾಲ್ಯಾನ್, ಆನಂದ ಶೇಖರ್, ಬಾಲಕೃಷ್ಣ ಕದ್ರಿ, ರೋಹಿದಾಸ ಕದ್ರಿ, ತಾರಾನಾಥ ಕದ್ರಿ, ಕುಂಬ್ರ ರಘುನಾಥ ರೈ, ಶೇಖರ ಭಂಡಾರಿ, ರಾಘವ ಕೆ. ಉಳ್ಳಾಲ್ ಮುಂತಾದವರು.

ಟೇಲರ್ ತಮ್ಮ ಹಾಸ್ಯ ನಾಟಕಗಳ ಮೂಲಕ ದೇಶದ ಒಳ–ಹೊರಗಿನ ತುಳುವರ ಪ್ರೀತಿಗೆ ಪಾತ್ರರಾಗಿದ್ದರು. ಟೇಲರ್ ಅವರ ಬಹುತೇಕ ಸಿನಿಮಾಗಳು ಅವರದೇ ಆದ 'ಗಣೇಶ ನಾಟಕ ಸಭಾ' ಮೂಲಕ ಜನಪ್ರಿಯತೆ ಗಳಿಸಿದ ಯಶಸ್ವಿ ನಾಟಕವನ್ನು ಆಧರಿಸಿದವು. ಟೇಲರ್ ಅವರು ರಂಗಕರ್ಮಿ ಅನ್ನುವುದಕ್ಕೆ ಅವರ ನಾಟಕಗಳು ಕೂಡಾ ಸಾಕ್ಷಿಯಾಗಿವೆ. ಅವರು ತುಳುನಾಡಿಗೆ ಒಟ್ಟು 17 ತುಳು ನಾಟಕಗಳನ್ನು ಅರ್ಪಿಸಿದ್ದಾರೆ. ಬೊಂಬಾಯಿ ಕಂಡನೆ, ಪುದರ್ ಕೇನಡೆ, ಡಾ. ಶಂಕರ್, ತಮ್ಮಲೆ ಅರುವತ್ತನ ಕೋಲ, ಏರ್ ಮಲ್ತಿನ ತಪ್ಪು, ಶಾಂತಿ, ಕಲ್ಲ್‌ದ ದೇವೆರ್, ಯಾನ್ ಸನ್ಯಾಸಿ ಆಪೆ, ಬಾಡಾಯಿದ ಬಂಗಾರ್, ಕಂಡನೆ ಬುಡೆದಿ, ಇಂದ್ರನ ಆಸ್ತಿ, ಕಲ್ಜಿಗದ ವಿಶ್ವಾಮಿತ್ರ ಮೇನಕೆ, ಏರೆನ್ಲಾ ನಂಬೊಡ್ಚಿ, ದೇವೆರ್ ಕೊರ್ಪೆರ್, ಸೈನಗಾಂಡಲಾ ಸತ್ಯ ಪನ್ಲೆ, ದಾಸುನ ಮದ್ಮೆ. ಇವರ 'ತಮ್ಮಲೆ ಅರುವತ್ತನ ಕೋಲ' ಸುಮಾರು 6,000ಕ್ಕೂ ಅಧಿಕ ಪ್ರದರ್ಶನ ಕಂಡಿದೆ ಎಂದರೆ ಅಚ್ಚರಿಯಾಗದಿರದು!

ಕನ್ನಡಕ್ಕೆ ಡಾ। ರಾಜ್‌ಕುಮಾರ್, ತಮಿಳಿಗೆ ಎಂ.ಜಿ.ಆರ್, ತೆಲುಗಿಗೆ ಎನ್.ಟಿ.ಆರ್., ಮಲಯಾಳಂಗೆ ಪ್ರೇಮ್ ನಜೀರ್ ಹೇಗೆಯೋ ಹಾಗೆಯೇ ತುಳುವಿಗೆ ಕೆ.ಎನ್. ಟೇಲರ್ ಎಂದರೆ ಅತಿಶಯೋಕ್ತಿ ಆಗಲಾರದು. 2013ರವರೆಗೆ ಬಣ್ಣ ಹಚ್ಚಿ ರಂಗ ಪ್ರದರ್ಶನಗೈದು ಒಟ್ಟು 33 ವರ್ಷಗಳ ಕಾಲ ತುಳು ಸಿನಿಮಾ ರಂಗದಲ್ಲಿ ಅನುಪಮ ಸೇವೆ ಸಲ್ಲಿಸಿದ ಇವರು 1994ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 1998ರಲ್ಲಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು. ಹಾಗೂ 'ತುಳು ರಂಗಭೂಮಿಯ ಭೀಷ್ಮ' ಎಂದೇ ಖ್ಯಾತರಾದರು.

ಗಲ್ಫ್ ದೇಶಕ್ಕೆ ತುಳು ರಂಗಭೂಮಿ ಕಲಾವಿದರ ಬಳಗವನ್ನು ಪ್ರಥಮ ಬಾರಿಗೆ ಸಂಘಟಿಸಿದ ಕೀರ್ತಿಯೂ ಇವರಿಗೆ ಸಲ್ಲುತ್ತದೆ. ಸುಮಾರು ಐದೂವರೆ ದಶಕಗಳ ಅವಧಿಯಲ್ಲಿ ನೂರಾರು ಕಲಾವಿದರನ್ನು ರೂಪಿಸಿದವರು ಜೊತೆಗೆ ತುಳು ಸಿನಿಮಾ ರಂಗಕ್ಕೆ ಹೊಸತನವ ನೀಡಿದರು. ಡಾ। ರಾಜ್‌ಕುಮಾರ್ ಅವರಿಂದ ಅಭಿನಯಕ್ಕಾಗಿ ಮುಕ್ತ ಕಂಠದಿಂದ ಪ್ರಶಂಸಿಸಲ್ಪಟ್ಟ ಟೇಲರ್ ಅವರಿಗೆ ಟೇಲರ್ ಅವರೇ ಸಾಟಿ.

ತೆರೆ ಕಾಣದ ಹಾಗೂ ಅಪೂರ್ಣಗೊಂಡಂತಹ ತುಳು ಸಿನಿಮಾಗಳು

ಇಂದು ತುಳು ಚಿತ್ರರಂಗಕ್ಕೆ ಸುಗ್ಗಿಯ ಕಾಲ. ಸಾಲುಸಾಲಿನಲ್ಲಿ ತುಳು ಸಿನಿಮಾಗಳು ತೆರೆಗೆ ಬರುತ್ತಿವೆ. ಇನ್ನಷ್ಟು ಸಿನಿಮಾಗಳು ಮುಹೂರ್ತ ಕಂಡು ಚಿತ್ರೀಕರಣದ ಕಾರ್ಯದಲ್ಲಿದೆ. ಹಾಗೆಯೇ ಪೂರ್ಣಗೊಂಡಂತಹ ಸಿನಿಮಾಗಳು ಬಿಡುಗಡೆಯ ಹೊಸ್ತಿಲಲ್ಲಿ ಕಾಯುತ್ತಾ ನಿಂತಿವೆ. ಆದರೆ ಒಂದೆರಡು ದಶಕಗಳ ಹಿಂದಿನ ಪರಿಸ್ಥಿತಿಯೇ ಬೇರೆಯೇ ಆಗಿತ್ತು. ಸಿನಿಮಾ ನಿರ್ಮಾಣಕ್ಕೆ ಮುಂದಾಗದ ಆ ಕಾಲದಲ್ಲಿ ನಿರ್ಮಾಣವಾದ ಕೆಲವೊಂದು ಸಿನಿಮಾಗಳಿಗೆ ಬಿಡುಗಡೆಯ ಭಾಗ್ಯವೇ ಒದಗಲಿಲ್ಲ. ಅದಲ್ಲದೆ ಕೆಲವೊಂದು ಸಿನಿಮಾಗಳು ಮುಹೂರ್ತಗೊಂಡು ಚಿತ್ರೀಕರಣ ಆರಂಭಿಸಿ ಮಧ್ಯದಲ್ಲಿಯೇ ಯಾವುದೋ ಕಾರಣದಿಂದಾಗಿ ಅಪೂರ್ಣವಾಗಿ ಉಳಿದು ಹೋಗಿವೆ. ಹಿಂದೆ ಸಿನಿಮಾದ ತಂತ್ರಜ್ಞಾನದ ಕಾರ್ಯಗಳಿಗಾಗಿ ಮದ್ರಾಸ್, ಮುಂಬಯಿನಂತಹ ನಗರಗಳನ್ನು ಅವಲಂಬಿಸಬೇಕಾಗಿತ್ತು. ಇದರ ವೆಚ್ಚವೇ ಸಿನಿಮಾಕ್ಕೆ ದೊಡ್ಡ ಸಮಸ್ಯೆಯಾಗುತಿತ್ತು. ಹಾಗಾಗಿ ಈ ಕಾರಣದಿಂದಾಗಿಯೂ ಚಿತ್ರೀಕರಣವಾದರೂ ತೆರೆ ಕಾಣದೇ ಹಾಗೆಯೇ ಉಳಿದುಕೊಂಡ ಸಿನಿಮಾಗಳು ತುಳುವಿನಲ್ಲಿವೆ. ಇನ್ನಿತರ ಕಾರಣಗಳಿಂದ ಕೆಲವೊಂದು ಅಪೂರ್ಣಗೊಂಡಂತಹ ಸಿನಿಮಾಗಳ ಪಟ್ಟಿ ಹೀಗಿದೆ.

1. ಸರ್ಪ ಸಂಕಲೆ
2. ಕುಂಕುಮ ಸಾಕ್ಷಿ
3. ಪಿಂಗಾರದ ಪೂ
4. ನಮ್ಮ ಭಾಗ್ಯ
5. ಪೂಜೆದ ಪೂ
6. ಮೋಕೆದ ಬಿಲೆ
7. ಪೊಣ್ಣ ಮನಸ್
8. ಮಾರಿಗಡು

ತೆರೆ ಕಂಡರೂ ಯಶಸ್ಸನ್ನು ಕಾಣದ ತುಳು ಸಿನಿಮಾಗಳು

ಸಿನಿಮಾದಿಂದಾಗಿ ಎಲ್ಲಾ ಕಲೆಗಳು ಕುಂಠಿತಗೊಳ್ಳುತ್ತಿವೆ, ನಶಿಸುತ್ತಿವೆ ಎಂಬ ಅಪವಾದಗಳಿದ್ದರೂ ಸಿನಿಮಾವನ್ನು ಒಂದು ಪ್ರಭಾವಿ ಮನರಂಜನಾ ಮಾಧ್ಯಮವೆಂದು ಒಪ್ಪಲೇಬೇಕಾಗುತ್ತದೆ. ಆದರೆ ತುಳು ಸಿನಿಮಾಗಳು ಪರಿಣಾಮಕಾರಿ ಮಾಧ್ಯಮವಾಗುವಲ್ಲಿ ಎಡವಿವೆ. ಒಂದು ಒಳ್ಳೆಯ ಚಿತ್ರತಂಡದ ಕೊರತೆ ಸದಾ ತುಳು ಚಿತ್ರರಂಗಕ್ಕೆ ಎದುರಾಗುತ್ತಾ ಬಂದಿದೆ. ಚಿತ್ರ ನಿರ್ಮಾಪಕನಿಗೆ ಸಿನಿಮಾ ರಂಗದ ಬಗ್ಗೆ ಒಳ್ಳೆಯ ಅಭಿರುಚಿ ಇದ್ದರೆ ಆತ ಖಂಡಿತವಾಗಿಯೂ ಒಳ್ಳೆಯ ನಿರ್ದೇಶಕ, ಕತೆಗಾರನನ್ನು ಹುಡುಕುತ್ತಾನೆ. ಇದರಿಂದಾಗಿ ಒಂದು ಒಳ್ಳೆಯ ಚಿತ್ರವೊಂದು ಮೂಡಿಬರಲು ಸಾಧ್ಯ.

ಆರಂಭದ ಎರಡು-ಮೂರು ದಶಕಗಳಲ್ಲಿ ತುಳು ಸಿನಿಮಾ ನಡೆದು ಬಂದ ಹಾದಿಯನ್ನು ಕಂಡಾಗ ವರ್ಷಕ್ಕೆ ಒಂದರಂತೆ ಸಿನಿಮಾವು ತಯಾರಾಗಲಿಲ್ಲ. ಆಗಿನ ಕಾಲದ ತುಳು ಚಿತ್ರರಂಗವನ್ನು ನಾವು 'ಉದ್ಯಮ'ವೆಂದು ಕರೆಯಲು ಸಾಧ್ಯವಿಲ್ಲ. ಉದ್ಯಮವೆಂದರೆ ಅಲ್ಲಿ ಲಾಭ-ನಷ್ಟದ ಲೆಕ್ಕಚಾರಗಳು ಇರುತ್ತದೆ. ಆದರೆ ಆ ಕಾಲಘಟ್ಟದಲ್ಲಿ ಚಿತ್ರರಂಗದಲ್ಲಿ ನಷ್ಟವನ್ನು ಬಿಟ್ಟು ಲಾಭದ ಮಾತು ಲೆಕ್ಕಕ್ಕೆ ಇರುತ್ತಿರಲಿಲ್ಲ. ತುಳುಚಿತ್ರಕ್ಕೆ ಹಣ ಹಾಕುವವರು 'ಮೂರ್ಖರು' ಎಂಬ ಕಾಲವೂ ಅದಾಗಿತ್ತು. ಹಾಕಿದರೂ ಹಲವಾರು ಕಷ್ಟನಷ್ಟಗಳನ್ನು ಎದುರಿಸಬೇಕಾಗಿತ್ತು.

ನಿರ್ಮಾಣವಾದ ಚಿತ್ರಗಳ ಸೋಲು-ಗೆಲುವು ಮುಖ್ಯವಾಗಿ ಪ್ರೇಕ್ಷಕನನ್ನು ಅವಲಂಬಿಸಿದೆ ಎಂಬ ಮಾತಿದ್ದರೂ, ಸಿನಿಮಾದ ಆಂತರಿಕ ಕಾರ್ಯಕ್ಷೇತ್ರಗಳ ಕಾರಣವೂ ಅಷ್ಟೇ ಇದೆ. ಚಿತ್ರಗಳು ತಾಂತ್ರಿಕ ಗುಣಮಟ್ಟವನ್ನು ತಲುಪದೇ ಇದ್ದಲ್ಲಿ ಅಂತಹ ಚಿತ್ರಗಳನ್ನು ಪ್ರೇಕ್ಷಕ ಹೇಗೆ ಒಪ್ಪಿಕೊಳ್ಳಬಲ್ಲ? ತೆರೆಗೆ ಬಂದಂತಹ ಹೆಚ್ಚಿನ ತುಳು ಸಿನಿಮಾಗಳು ಸೋಲಲು ಮುಖ್ಯ ಕಾರಣವೇ ತಂತ್ರಜ್ಞಾನದ ಬಳಕೆ. ಅನುಭವದ ಕೊರತೆ ಇರುವ ಹಾಗೂ ಹೊಸತನವಿರದ ನಿರ್ದೇಶಕ ಸಿನಿಮಾದಲ್ಲಿ ತಂತ್ರಜ್ಞಾನವನ್ನು ಹೇಗೆ ಬಳಸಬೇಕೆಂಬುವುದರಲ್ಲಿ ಸೋಲುತ್ತಾನೆ. ಇದರ ಪರಿಣಾಮ ಚಿತ್ರದ ಮೇಲೂ ಬೀರುತ್ತದೆ. ಆದರೆ ಇಂದು ಸ್ವಲ್ಪ ಮಟ್ಟಿಗೆ ತುಳು ಸಿನಿಮಾಗಳ ತಂತ್ರಜ್ಞಾನ ಕನ್ನಡ, ಮಲಯಾಳಂ ಸಿನಿಮಾಗಳಿಗೆ ಹತ್ತಿರವಾಗುವಂತಿದೆ. ಕಲಾವಿದರನ್ನು ಆಮದು ಮಾಡಿಕೊಂಡ ಹಾಗೆಯೇ ಸಿನಿಮಾದ ಛಾಯಾಗ್ರಹಣದಿಂದ ಹಿಡಿದು ಎಲ್ಲಾ ವರ್ಗಕ್ಕೂ ಪರಭಾಷಾ ಸಿನಿಮಾದಲ್ಲಿ ನುರಿತ ತಂತ್ರಜ್ಞರನ್ನು ತುಳುಚಿತ್ರರಂಗ ಬಳಸಿಕೊಳ್ಳುತ್ತಿದೆ.

ತೆರೆ ಕಂಡಂತಹ, ಕಾಣುತ್ತಿರುವ ಎಷ್ಟೋ ಸಿನಿಮಾಗಳು ರಂಗಭೂಮಿಯ ಛಾಯೆಯಿಂದ ಹೊರಬರಲಾಗದೇ ಇರುವುದು. ಬಿಡುಗಡೆಯಾದ ಸಿನಿಮಾಗಳಲ್ಲಿ ಅರ್ಧದಷ್ಟು ನಾಟಕವನ್ನು ಆಧಾರಿತವಾದುವು. ಇದರಲ್ಲಿ ಹೆಚ್ಚಿನ ಸಿನಿಮಾಗಳು ನಾಟಕವನ್ನು ಪರದೆಯ ಮೇಲೆ ಯಥಾವತ್ತಾಗಿ ಅನುಸರಿಸಿದಂತಿತ್ತು. ಇನ್ನೂ ಕೆಲವು ಕನ್ನಡ, ಮಲಯಾಳಂ, ಹಿಂದಿ ಮುಂತಾದ ಭಾಷೆಗಳ ಸಿನಿಮಾಗಳ ಅನುಕರಣೆ ಮಾಡಲು ಹೋಗಿ ಸೋತು ಹೋಯಿತು. ಹಾಗಾಗಿ ತುಳು ಸಿನಿಮಾಕ್ಕೆ ಅದರದ್ದೇ ಆದ 'ಫಾರ್ಮುಲ' ಬಳಸುವ ಅನಿವಾರ್ಯತೆ ಇದೆ.

ಹೆಚ್ಚಿನ ತುಳು ಸಿನಿಮಾಗಳು ಸೋಲಲು 'ಸೀಮಿತ ಮಾರುಕಟ್ಟೆ' ಎಂಬ ಕಾರಣವನ್ನು ಎಲ್ಲರೂ ಕೊಡುತ್ತಾರೆ. ಆದರೆ ಇದರೊಂದಿಗೆ ನಾವು ಹೊರ ಪ್ರಪಂಚದಲ್ಲಿ ಕಾಣುವ ರಾಜಕೀಯವು ಸಿನಿಮಾರಂಗಕ್ಕೂ ಪ್ರವೇಶಿಸಿರುವುದು ಒಟ್ಟು ತುಳು ಚಿತ್ರರಂಗಕ್ಕೆ ಮಾರಕವಾಗಿದೆ. ಇದರಿಂದಾಗಿ ಚಿತ್ರದ ಜೊತೆಗೆ ಚಿತ್ರರಂಗವೂ ಸೋಲುವಂತಾಗಿದೆ. ಹಾಗೆಯೇ ಒಂದು ಒಳ್ಳೆಯ ಸಿನಿಮಾದ ಯೋಜನೆಗೆ ಮುಂದಾದರೂ ಅದು ಬಂಡವಾಳದ ಕೊರತೆಯಿಂದ ನರಳುತ್ತದೆ. ಒಂದು ವೇಳೆ ನಿರ್ಮಾಣವಾದರೂ ಬಿಡುಗಡೆಯ ಸಂದರ್ಭದಲ್ಲಿ ಚಿತ್ರಮಂದಿರ ಸಿಗದೇ ಸೋತು ಹೋಗುತ್ತದೆ. ತುಳುನಾಡಿನ ಭಾಗವಾದ ಕಾಸರಗೋಡಿನ ಚಿತ್ರಮಂದಿರಗಳಿಗೆ ಇಂದು ತುಳು ಸಿನಿಮಾಗಳೇ ಬೇಡವಾಗಿದೆ. ಹಾಗೆಯೇ ಸಿನಿಮಾ ರಂಗದ, ತುಳುನಾಡಿನ ಸಂಸ್ಕೃತಿಯ ಬಗ್ಗೆಗಿನ ಪ್ರಾಥಮಿಕ ಜ್ಞಾನ, ಅನುಭವ ಇಲ್ಲದವರೂ ಸಿನಿಮಾ ಮಾಡಲು ಮುಂದಾಗಿ ಸ್ವತಃ ವೈಫಲ್ಯವನ್ನು ಅನುಭವಿಸುವುದರ ಜೊತೆಗೆ ತುಳು ಚಿತ್ರರಂಗಕ್ಕೂ ಹಿನ್ನಡೆಯಾಗುವಂತೆ ಮಾಡಿದರು.

ಸಾಮಾನ್ಯವಾಗಿ ಎಲ್ಲಾ ಸಿನಿಮಾಗಳು ನಾಯಕ ಪಾತ್ರಗಳನ್ನು ಅವಲಂಬಿಸಿಕೊಂಡಿರುವುದು. ಆದರೆ ನಮ್ಮ ತುಳು ಚಿತ್ರರಂಗವನ್ನು ನಾವು ಮೇಲ್ನೋಟಕ್ಕೆ ಗಮನಿಸಿದಾಗ ಇದು ಹಾಸ್ಯ ಪಾತ್ರಗಳಿಗೆ ಹೆಚ್ಚು ಅಂಟಿಕೊಂಡಿದೆ ಎನ್ನಬಹುದು. ನಮ್ಮ ತುಳು ಸಿನಿಮಾಗಳಲ್ಲಿ ನಾಯಕ, ನಾಯಕಿ, ಕತೆಗಿಂತ ಇಲ್ಲಿ ಹಾಸ್ಯ ಪಾತ್ರಗಳಿಗೆಯೇ ಹೆಚ್ಚಿನ ಪ್ರಾಧಾನ್ಯತೆ ದೊರಕಿದೆ. ಕೆಲವೊಂದು ಸಿನಿಮಾಗಳಲ್ಲಿ ಕೇವಲ ಘಟನೆ, ಹಾಸ್ಯಗಳು ಇವೆಯೇ ಹೊರತು ಕತೆ ಎಲ್ಲಿದೆ ಎಂಬುವುದನ್ನು ಸ್ವತಃ ಪ್ರೇಕ್ಷಕನೇ ಹುಡುಕಬೇಕಾಗುವುದು. ಈ ನೆಲೆಯಲ್ಲಿ ಕತೆಯನ್ನು ಕಟ್ಟಿಕೊಡುವ ಸಿನಿಮಾಗಳು ಇಂದು ಕಡಿಮೆಯಾಗುತ್ತಿವೆ. ಸೃಜನಶೀಲತೆಗೆ ವೇದಿಕೆಯನ್ನು ಒದಗಿಸುವ ಕಾರ್ಯ ತುಳು ಸಿನಿಮಾದಲ್ಲಿ ಆಗಬೇಕು. ಇಂದು ಹಾಸ್ಯವೇ ಸಿನಿಮಾದ ಮೂಲ ಬಂಡವಾಳ ಎಂಬಂತಹ ಪರಿಸ್ಥಿತಿಯನ್ನು ತುಳು ಚಿತ್ರೋದ್ಯಮ ತಾನೇ ನಿರ್ಮಿಸಿಕೊಂಡಂತಿದೆ.

ಈ ಆಧುನಿಕ ಯುಗದಲ್ಲಿ ಮನುಷ್ಯನಿಗೆ ಕೈಗೆಟಕುವ ಸೌಲಭ್ಯ-ಸವಲತ್ತುಗಳಿದ್ದರೂ ಅಷ್ಟೇ ಒತ್ತಡಗಳಿಂದ ಬದುಕುತ್ತಿದ್ದಾನೆ. ಪ್ರತಿಯೊಂದು ಸಂದರ್ಭಗಳಲ್ಲಿ ಈ ಒತ್ತಡಗಳಿಂದ ಹೊರಬರಲು ಕಾಯತ್ತಿರುತ್ತಾನೆ. ಏಕೆಂದರೆ ದಿನನಿತ್ಯ ಕೆಲಸ ಮಾಡಿ ದಣಿದು, ಯಾಂತ್ರಿಕ ಜೀವನ ನಡೆಸುತ್ತಿರುವಾಗ ಅವನಿಗೂ ಹಾಸ್ಯ ಅತ್ಯವಶ್ಯಕವಾಗಿದೆ. ಅದನ್ನು ಮಾಧ್ಯಮಗಳಲ್ಲಿಯೂ ಬಯಸುವುದು ಸಹಜ. ಆ ನೆಲೆಯಲ್ಲಿ ಚಿತ್ರಗಳಲ್ಲಿ ಹಾಸ್ಯ ಸನ್ನಿವೇಶಗಳನ್ನು ನಿರ್ದೇಶಕನು ಸಂದರ್ಭೋಚಿತವಾಗಿ ಜೋಡಿಸಿಕೊಂಡು ಹೋಗುತ್ತಾನೆ. ಪ್ರಾರಂಭದ ದಿನಗಳಲ್ಲಿ ಜನರ ಜೀವನ ಯಾಂತ್ರಿಕವಾಗಿರಲಿಲ್ಲ. ಸಮಾಜದ ಜನ ಆಗ ಸುಖ, ಶಾಂತಿ, ನೆಮ್ಮದಿ, ಸಂತೋಷದಿಂದ ಇದ್ದರು. ಹಾಗಾಗಿ ಚಿತ್ರಗಳಲ್ಲಿ ಹಾಸ್ಯಕ್ಕೆ ಪ್ರಾಮುಖ್ಯತೆಯನ್ನು ಅಷ್ಟಾಗಿ ಕೊಡುತ್ತಿರಲಿಲ್ಲ. ಆದರೆ ಈಗ ನಗರೀಕರಣ, ಔದ್ಯೋಗಿಕರಣಗಳಿಂದಾಗಿ ಜನರಿಗೆ ಜೀವನದಲ್ಲಿ ನಗುವೆಂಬುದೇ ಇಲ್ಲದಂತಾಗಿದೆ. ಅದನ್ನು ಅರಸುತ್ತಾ ಚಿತ್ರಮಂದಿರಗಳಿಗೆ ಬರುತ್ತಾರೆ.

ನಮ್ಮ ತುಳುವರು ಹಾಸ್ಯ ಪ್ರವೃತ್ತಿಯುಳ್ಳವರು. ಹಾಗಂತ ಸಾಲು-ಸಾಲು ಹಾಸ್ಯ ಸಿನಿಮಾಗಳು ವಿಜೃಂಭಿಸುತ್ತಿರುವುದು ಜೊತೆಗೆ ಅದೇ ತಲೆ, ಅದೇ ಮುಖಗಳು

ಪುನರಾವರ್ತನೆಯಾಗುತ್ತಿರುವುದು, ಹೊಸ ಮುಖಗಳಿಗೆ ಅವಕಾಶವಿಲ್ಲದಿರುವುದು ಇವೆಲ್ಲ ಒಂದು ರೀತಿಯಲ್ಲಿ ಪ್ರೇಕ್ಷಕನಲ್ಲಿ ನಿರಾಶೆ ತಂದಿದೆಯೆನೋ..? ಎಲ್ಲೋ ಒಂದು ಕಡೆ ಕಾಮಿಡಿಗಳು ಚಿತ್ರದ ಗಂಭೀರತೆಗೆ ಹಾಗೂ ಚಿತ್ರದ ಆಶಯಕ್ಕೆ ಧಕ್ಕೆ ತಂದು ಬಿಡುವ ಅಪಾಯವಿದೆ. ಅತಿಯಾದ ಹಾಸ್ಯವು ಕೆಲವೊಮ್ಮೆ ಚಿತ್ರದ ಕತೆಯನ್ನು, ಮೌಲ್ಯವನ್ನೇ ನುಂಗಿಬಿಡುವ ಸಾಧ್ಯತೆ ಇರಬಹುದು. ಹಾಗಾಗಿ ಒಟ್ಟು ಸಿನಿಮಾದಲ್ಲಿ ಹೊಸತನಕ್ಕೆ ನಿರ್ದೇಶಕರು ಮನಸ್ಸು ಮಾಡಬೇಕು.

ಇಂದು ಸಿನಿಮಾವನ್ನು ನಿರ್ಮಿಸುವ, ನಿಯಂತ್ರಿಸುವ ಶಕ್ತಿಗಳು ಸಿನಿಮಾಗಳಲ್ಲಿ ಹೆಣ್ಣನ್ನು ಹೇಗೆ ಬಿಂಬಿಸುತ್ತವೆ ಎಂಬುವುದನ್ನು ಹೇಳುವುದಕ್ಕಿಂತ ಚಿತ್ರ ನೋಡಿ ತಿಳಿದುಕೊಳ್ಳುವುದು ಒಳ್ಳೆಯದು. ನಮ್ಮ ಸಮಾಜದಲ್ಲಿ ವಿವಿಧ ವರ್ಗಗಳು, ವಿವಿಧ ಅಭಿರುಚಿಗಳು ಇರುವುದರಿಂದ ಅದಕ್ಕನುಗುಣವಾದ ಸಿನಿಮಾಗಳು ನಿರ್ಮಾಣವಾಗುವುದು ಸಹಜ. ಆದರೆ ತುಳು ಸಿನಿಮಾ ಜಗತ್ತಿನಲ್ಲಿ ಹೆಣ್ಣಿಗೆ ಗೌರವದ ಸ್ಥಾನವನ್ನು ನೀಡಲಾಗಿದೆ. ಆಕೆಯ ಬದುಕು ಬವಣೆಗಳನ್ನು ಬಿಚ್ಚಿಡುವ ಪ್ರಯತ್ನವನ್ನು ಕೆಲವೊಂದು ಸಿನಿಮಾಗಳು ಮಾಡಿವೆ. ಹೆಣ್ಣನ್ನು ಅಶ್ಲೀಲ ನೆಲೆಯಲ್ಲಿ ಬಿಂಬಿಸುವ ಪ್ರಯತ್ನವೂ ಮಾಡಿಲ್ಲ ಹಾಗೂ ಅಶ್ಲೀಲತೆಗಳನ್ನು ತುಳು ಸಿನಿಮಾದಲ್ಲಿ ತುರುಕಿಸುವ ಅವಶ್ಯಕತೆಯೂ ಇಲ್ಲ. ಸಾಮಾನ್ಯವಾಗಿ ಗಮನಿಸುವುದಾದರೆ ಅಶ್ಲೀಲತೆಯು ಅಸಹ್ಯ ಅನಿಸುವಷ್ಟು ಅಥವಾ ಅದನ್ನು ಬಿಂಬಿಸುವಂತಹ ಸಿನಿಮಾಗಳು ಇಲ್ಲವೇ ಇಲ್ಲ ಎಂದು ಹೇಳಬಹುದು. ಆದರೆ ಇಂದಿನ ಸಿನಿಮಾಗಳು ಈ ಮಾರ್ಗವನ್ನು ಬಿಟ್ಟು ಆಕೆಯನ್ನು ಪ್ರಚಾರದ ಸರಕನ್ನಾಗಿಸುವ ಪ್ರಯತ್ನದಲ್ಲಿದೆ.

ಎಲ್ಲೋ ಒಂದು ಕಡೆಯಲ್ಲಿ ತುಳುವಿನಲ್ಲಿ ನಿರ್ಮಾಣವಾದ ಕಲಾತ್ಮಕ ಚಿತ್ರಗಳಿಗೆ ಪ್ರೇಕ್ಷಕನ ನಿರಾಶದಾಯಕ ಪ್ರತಿಕ್ರಿಯೆಗಳಿಂದ ಆ ಚಿತ್ರಗಳು ಸೋಲುವಂತಾಯಿತು. ಹಾಗಾಗಿ ಮಾರುಕಟ್ಟೆಯ ದೃಷ್ಟಿಯಿಂದ ಸ್ಯಾಂಡಲ್‌ವುಡ್, ಬಾಲಿವುಡ್‌ಗಳಂತೆಯೇ ನಮ್ಮಲ್ಲಿಯೂ ಇತ್ತೀಚೆಗೆ ಸಿನಿಮಾಗಳಲ್ಲಿ 'ಐಟಂ ಸಾಂಗ್' ಅನ್ನು ಅವಶ್ಯಕತೆಯಿಲ್ಲದಿದ್ದರೂ ಅನಿವಾರ್ಯವಾಗಿ ತುರುಕಿಸಲಾಗುತ್ತಿದೆ. ಇಂತಹ ಅನುಕರಣೆಗಳು ಅಥವಾ ತಂತ್ರಗಳು ಚಿತ್ರವನ್ನು ಗೆಲ್ಲಿಸುತ್ತವೆ ಎಂಬುವುದು ಮೂರ್ಖತನ.

ಕನ್ನಡ ಚಿತ್ರರಂಗಕ್ಕೆ ತಮಿಳು, ತೆಲುಗು, ಹಿಂದಿಯಂತಹ ಚಿತ್ರರಂಗದಿಂದ ತೀವ್ರ ಮಟ್ಟದ ಸ್ಪರ್ಧೆ ಇದ್ದ ಹಾಗೆಯೇ ತುಳು ಚಿತ್ರರಂಗವು ಕೂಡ ಕನ್ನಡ, ಹಿಂದಿಯಂತಹ ಚಿತ್ರರಂಗದಿಂದ ಹೆಚ್ಚಿನ ಸ್ಪರ್ಧೆಯನ್ನು ಎದುರಿಸುತ್ತಿದೆ. ಆದರೂ ತುಳು ಸಿನಿಮಾಗಳು ಅನ್ಯಭಾಷಾ ಚಿತ್ರಗಳ ಜೊತೆ ಸ್ಪರ್ಧಿಸುವುದಕ್ಕಿಂತ ಇಂದು ಅದೇ ತುಳು ಚಿತ್ರಗಳೊಂದಿಗೆ ಸ್ಪರ್ಧಿಸಬೇಕಾದ ಅನಿವಾರ್ಯತೆ ಒದಗಿ ಬಂದಿದೆ. ಚಿತ್ರ ಬಿಡುಗಡೆ ಹಾಗೂ ಚಿತ್ರಮಂದಿರದ ಆಯ್ಕೆಯಲ್ಲೂ ಈ ಸ್ಪರ್ಧೆ ಮುಂದುವರಿಯುತ್ತಾ ಹೋಗುತ್ತದೆ.

ತುಳುವರಿಗೆ ತಮ್ಮ ಬಗ್ಗೆ ಇರುವ ಕೀಳರಿಮೆ ಹಾಗೂ ಸಿನಿಮಾ ಕ್ಷೇತ್ರಕ್ಕೆ ಸಂಬಂಧಪಟ್ಟ ಅಕಾಡೆಮಿ, ಮಂಡಳಿಗಳು ತೋರುವ ನಿರ್ಲಕ್ಷ್ಯಗಳು ಕೂಡ ತುಳುವಿನಲ್ಲಿ ನಿರ್ಮಾಣವಾದಂತಹ ಗುಣಾತ್ಮಕವಾದ ಸಿನಿಮಾಗಳನ್ನು ಪ್ರೋತ್ಸಾಹಿಸದಂತಾದವು. ಇನ್ನು ಕಲಾವಿದರಲ್ಲಿ ಇರುವ ಅಭಿನಯದ ಕೊರತೆ ಮತ್ತು ನಾಟಕದ ನಟನೆಯನ್ನು

ಯಥಾವತ್ತಾಗಿ ಸಿನಿಮಾ ಪರದೆಗೂ ನಕಲು ಹೊಡೆಯುವ ಪ್ರಯತ್ನ ಸಿನಿಮಾಕ್ಕೆ ಜನಪ್ರಿಯತೆಯನ್ನು ಗಳಿಸಿಕೊಡುವಲ್ಲಿ ವಿಫಲವಾದವು. ಇನ್ನು ಪಾತ್ರಗಳು 'ಅತಿಯಾದ ನಟನೆ'ಗೆ ಮುಂದಾದದ್ದು ಚಿತ್ರದ ಸೋಲಿಗೆ ಕಾರಣವೆನ್ನಬಹುದು.

ತುಳುವಿನಲ್ಲಿ ಇರುವ ಜಾನಪದ ವಿದ್ವಾಂಸರನ್ನು, ಸಾಹಿತಿಗಳನ್ನು ಸಮರ್ಪಕವಾಗಿ ತುಳು ಚಿತ್ರರಂಗ ಬಳಸಿಲ್ಲ ಹಾಗೂ ಬಳಸುತ್ತಿಲ್ಲ. ಇದಕ್ಕೆ ಉದಾಹರಣೆ ಎಂಬಂತೆ ಇಂದು ಬರುತ್ತಿರುವ ಸಿನಿಮಾಗಳ ಸಾಹಿತ್ಯ, ಸಂಭಾಷಣೆಯನ್ನು ಕಂಡಾಗ ಅರ್ಥವಾಗುತ್ತದೆ. ಒಂದು ಸಿನಿಮಾವನ್ನು ಹಾಡುಗಳು ಗೆಲ್ಲಿಸುತ್ತವೆ ಎಂಬುವುದನ್ನು ನಾವು ಹಿಂದಿನ ತುಳು, ಕನ್ನಡ ಸಿನಿಮಾಗಳಲ್ಲಿ ಕಂಡಿದ್ದೇವೆ. ಹಾಗಾಗಿ ಹಾಡುಗಳು ಸಾಂದರ್ಭಿಕವಾಗಿದ್ದು, ಅದರಲ್ಲಿನ ಸಾಹಿತ್ಯವು ಅರ್ಥವತ್ತಾಗಿ ಇರುವಂತೆ ಒತ್ತು ನೀಡಬೇಕು. ಇಂದಿನ ಹಾಡುಗಳಲ್ಲಿ ಸಾಹಿತ್ಯ ಇದೆಯೋ? ಇಲ್ಲವೋ? ಎಂಬಂತಾಗಿದೆ. ಇದ್ದರೂ ಅಲ್ಲಿ ತುಳು ಪದಗಳನ್ನು ಲೆಕ್ಕ ಮಾಡಿ ಬಳಸಿದಂತಿದೆ.

ಕಾಲಕಾಲಕ್ಕೆ ಸಮಾಜ ಬದಲಾದ ಹಾಗೆ ಸಿನಿಮಾದ ಕಥಾವಸ್ತುಗಳು ಬದಲಾಗುತ್ತಾ ಹೋಗುವುದು ಸಹಜ. ಸುಮಾರು 80–90ರ ದಶಕದ ಯಾವುದೋ ಸಾಮಾಜಿಕ ಸಮಸ್ಯೆಯನ್ನು ಪ್ರಸ್ತುತ ಸಂದರ್ಭದಲ್ಲಿ ಸಿನಿಮಾ ಮಾಡಲು ಹೋದರೆ ಗೆಲುವು ಕಷ್ಟವಾಗಬಹುದು. ಹಾಗಾಗಿ ಆಯಾ ಸಂದರ್ಭ, ಸನ್ನಿವೇಶಗಳಿಗೆ ಅನುಗುಣವಾಗಿ ಚಿತ್ರಕಥೆಯನ್ನು ಸಿನಿಮಾ ಒಳಗೊಂಡಿರಬೇಕು. ಆದರೆ ಐತಿಹಾಸಿಕ ಚಿತ್ರಗಳಿಗೆ ಈ ಕಾಲದ ಮಿತಿ ಇಲ್ಲ. 'ಕಾಂತಬಾರೆ–ಬುದಬಾರೆ', 'ರಾಣಿ ಅಬ್ಬಕ್ಕ'ನ ಕುರಿತಾದ ಗುಣಮಟ್ಟದ ಸಿನಿಮಾ ಮಾಡಿದರೆ ಜನ ಖಂಡಿತವಾಗಿ ಒಪ್ಪುವರು.

ನಾಟಕಗಳು, ಯಕ್ಷಗಾನಗಳು ಹಾಗೂ ಇನ್ನಿತರ ಜನಪ್ರಿಯ ಮನರಂಜನಾ ಪ್ರಕಾರಗಳು ಒಂದು ಕಾಲದಲ್ಲಿ ಸಿನಿಮಾಗಳ ಬೆಳವಣಿಗೆಯ ವೇಗಕ್ಕೆ ತಡೆ ಒಡ್ಡಿರಬಹುದು. ಇಂದು ಹೇಗೆ ಸಿನಿಮಾವು ರಂಗಭೂಮಿಯ ಮೇಲೆ ಪ್ರಭಾವ ಬೀರಿದೆಯೋ ಹಾಗೆಯೇ ಹಿಂದೆ ರಂಗಭೂಮಿಯು ಪ್ರಭಾವದಿಂದ ಸಿನಿಮಾವು ಕಳೆಗುಂದಿರಬಹುದು. ಇನ್ನು ರಂಗಭೂಮಿಯಲ್ಲಿ ಬೆಳೆದು ಬಂದಂತಹ ಹಾಗೂ ನಮ್ಮಲ್ಲಿಯೇ ಹುಟ್ಟಿ ಬೆಳೆದ ಅನೇಕ ವಿಶಿಷ್ಟ ಕಲಾವಿದರು ದೂರದ ಊರುಗಳಿಗೆ ಅಥವಾ ಅನ್ಯಭಾಷಾ ಚಿತ್ರರಂಗಕ್ಕೆ ವಲಸೆ ಹೋಗಿರುವುದರಿಂದ ತುಳು ಸಿನಿಮಾರಂಗ ಆ ಕಲಾವಿದರ ಸೇವೆಯಿಂದ ವಂಚಿತವಾಯಿತು ಎನ್ನಬಹುದು.

ಮಂಗಳೂರು ನಗರದಲ್ಲಿ ಹೆಚ್ಚಲ್ಲವೆಂದರೂ ಕೆಲವು ಸಿನಿಮಾ ಮಂದಿರಗಳಿವೆ. ಆದರೆ ಇನ್ನಿತರ ನಗರ, ಗ್ರಾಮೀಣ ಪ್ರದೇಶಗಳಲ್ಲಿ ಸಿನಿಮಾ ಮಂದಿರಗಳ ಕೊರತೆಯು ಪ್ರಮುಖ ಕಾರಣವೆನ್ನಬಹುದು. ಕರಾವಳಿಗರು ಬಹುಭಾಷಿಗರು. ತುಳು ನಮ್ಮ ವ್ಯಾವಹಾರಿಕ ಭಾಷೆಯಾದರೂ ಇಲ್ಲಿ ಬ್ಯಾರಿ, ಕೊಂಕಣಿ, ಮಲಯಾಳಂ, ಕನ್ನಡ ಮಾತನಾಡುವ ಹಲವು ಭಾಷಿಕರಿದ್ದಾರೆ. ಹಾಗಾಗಿ ಸಾಮಾನ್ಯವಾಗಿ ಈ ಭಾಷೆಗಳನ್ನು ಮಾತನಾಡಲು ಸಾಧ್ಯವಾಗದಿದ್ದರೂ ಅರ್ಥ ಮಾಡಿಕೊಳ್ಳುವಷ್ಟು ಬುದ್ಧಿವಂತರು ನಮ್ಮ ತುಳುವರು. ಈ ರೀತಿಯ ಬಹುಭಾಷಾ ಪ್ರೇಮವು ಅನ್ಯಭಾಷಾ ಸಿನಿಮಾಗಳನ್ನು ನೋಡುವಂತೆ ಮಾಡಿ ನಮ್ಮ ತುಳು ಸಿನಿಮಾಕ್ಕೆ ಇದರಿಂದ ಸ್ವಲ್ಪ ಮಟ್ಟಿಗೆ ಹಿನ್ನಡೆಯಾಗುವಂತೆ ಮಾಡಿತು

ಎನ್ನಬಹುದು.

ಸಿನಿಮಾ ಅಂದ ಮೇಲೆ ಸೋಲು–ಗೆಲುವು ಸಹಜ. ಆದರೆ ತಾನು ನಡೆದು ಬಂದ ಈ ಇತಿಹಾಸವನ್ನು ಕಂಡು ತುಳು ಚಿತ್ರರಂಗ ಏನನ್ನಾದರೂ ಕಲಿಯಬೇಕು. ತುಳು ಚಿತ್ರಗಳೆಲ್ಲ ಗೆಲ್ಲುತ್ತಿವೆ ಎಂದು ಅತಿ ಉತ್ಸಾಹದಿಂದ ಬಂದು ಸಿನಿಮಾ ಮಾಡಿ ಸೋತವರು ಇದ್ದಾರೆ. ಸಿನಿಮಾ, ಚಿತ್ರರಂಗದ ಬಗ್ಗೆ ಚೆನ್ನಾಗಿ ತಿಳಿದು ಸಿನಿಮಾವನ್ನು ಒಂದು ವೃತ್ತಿಯಾಗಿ, ಆ ವೃತ್ತಿಯ ಬಗ್ಗೆ ಒಂದಿಷ್ಟು ಪ್ರೀತಿ, ಕಾಳಜಿ ಮೂಡಿಸಿಕೊಂಡು ನಂತರ ಚಿತ್ರ ನಿರ್ಮಾಣ ಮಾಡಿದರೆ ಅದೊಂದು ಒಳ್ಳೆಯ ಸಿನಿಮಾವಾಗಬಹುದು, ಮಾತ್ರವಲ್ಲ ಗೆಲ್ಲಬಹುದು.

ರಾಜ್ಯ, ರಾಷ್ಟ್ರ ಪ್ರಶಸ್ತಿ ಪಡೆದ ತುಳು ಸಿನಿಮಾಗಳು

ವಿಶ್ವದಲ್ಲಿಯೇ ಅತಿ ಹೆಚ್ಚು ಸಿನಿಮಾ ನಿರ್ಮಾಣವಾಗುವುದು ಅಮೆರಿಕಾದಲ್ಲಿ. ಎರಡನೇ ಸ್ಥಾನದಲ್ಲಿ ಭಾರತ ಹಾಗೂ ಫ್ರಾನ್ಸ್ ಇವೆ. ವರ್ಷಕ್ಕೆ ಕಡಿಮೆಯೆಂದರೂ ಭಾರತದಲ್ಲಿ 1000ದಷ್ಟು ಸಿನಿಮಾಗಳು ತಯಾರಾಗುತ್ತವೆ. ಸುಮಾರು 90 ದೇಶಗಳಲ್ಲಿ ಭಾರತೀಯ ಸಿನಿಮಾಗಳು ಪ್ರದರ್ಶನವಾಗುತ್ತಿವೆ. ಭಾರತೀಯ ಚಲನಚಿತ್ರರಂಗಕ್ಕೆ ನೂರು ವರ್ಷ ತುಂಬಿದ ಸಂಭ್ರಮಾಚರಣೆಯಲ್ಲಿ ನಾವಿದ್ದರೂ, ಪ್ರಾದೇಶಿಕ ಭಾಷೆಯ ಸಿನಿಮಾಗಳು ತಾರತಮ್ಯದಿಂದ ಕಡೆಗಣಿಸಲ್ಪಟ್ಟಿವೆ ಎಂಬ ನೋವು, ಕೂಗು ಇಂದಿಗೂ ಹಾಗೆಯೇ ಇದೆ. ಈ ಮಧ್ಯೆಯೂ ನೂರರ ಗಡಿ ದಾಟದ ತುಳು ಚಿತ್ರರಂಗದಲ್ಲಿ ಅನೇಕ ಸಿನಿಮಾಗಳು ರಾಜ್ಯ, ರಾಷ್ಟ್ರ ಪ್ರಶಸ್ತಿ ಪಡೆದಿವೆ ಎಂಬುವುದು ಹೆಗ್ಗಳಿಕೆ. ಇನ್ನು ಹೆಚ್ಚಿನ ಸಿನಿಮಾಗಳಿಗೆ ಸರಕಾರದ ಸಹಾಯಧನವೂ ದೊರೆತಿದೆ. ಹಾಗಂತ ನಮ್ಮ ತುಳುವರು ಎಂದಿಗೂ ಪ್ರಶಸ್ತಿಯನ್ನು ಓಲೈಸಿಕೊಂಡು ಸಿನಿಮಾ ಮಾಡಿದವರಲ್ಲ. ನಿರ್ಮಾಣವಾದ ಒಂದು ಚಿತ್ರ ಜನ–ಮನ ಗೆದ್ದು ಯಶಸ್ಸನ್ನು ಕಂಡರೆ ಅದೇ ಆ ಚಿತ್ರಕ್ಕೆ, ಕಲಾವಿದರಿಗೆ ದೊರಕಿದ ನಿಜವಾದ ಪ್ರಶಸ್ತಿ. ತುಳುಚಿತ್ರದ ಬಗ್ಗೆ ಸರಕಾರ, ಮಂಡಳಿಗಳು ಕೆಲವೊಮ್ಮೆ ಅಸಡ್ಡೆ ತೋರಿದರೂ ಒಳ್ಳೆಯ ಸಿನಿಮಾಗಳಿಗೆ ತುಳು ಪ್ರೇಕ್ಷಕ ಎಂದೂ ಮೋಸ ಮಾಡಿಲ್ಲ. ಸಿನಿಮಾವನ್ನು ಪ್ರಶಸ್ತಿಯ ಮೆಟ್ಟಿಲ ಹತ್ತಿರ ಕೊಂಡೊಯ್ಯುವಲ್ಲಿ ಆತನ ಪಾತ್ರವನ್ನು ಮರೆಯುವಂತಿಲ್ಲ. ಅಂತಹ ಪ್ರಶಸ್ತಿ, ಪುರಸ್ಕಾರ ಪಡೆದಂತಹ ತುಳು ಸಿನಿಮಾಗಳ ವಿವರಗಳು ಹೀಗಿವೆ.

- ಆರೂರು ಪಟ್ಟಾಭಿ ನಿರ್ದೇಶನದ 'ಬಿಸತ್ತಿ ಬಾಬು' ಕರ್ನಾಟಕ ರಾಜ್ಯದ 3ನೇ ಅತ್ಯುತ್ತಮ ಚಿತ್ರ ಪ್ರಶಸ್ತಿ ಪಡೆದ ತುಳುಚಿತ್ರ. ಜೊತೆಗೆ ಸರಕಾರದ ಪ್ರಶಸ್ತಿ ಪಡೆದ ಮೊದಲ ತುಳು ಸಿನಿಮಾ.
- ವಿಶುಕುಮಾರ್ ನಿರ್ದೇಶನದ 'ಕೋಟಿ ಚೆನ್ನಯ' 1973–74ನೇ ಸಾಲಿನ ರಾಜ್ಯದ ನಾಲ್ಕನೇ ಅತ್ಯುತ್ತಮ ಚಿತ್ರ ಎಂದು ಪುರಸ್ಕಾರ ಪಡೆದ ತುಳುಚಿತ್ರ.
- ಆರೂರು ಪಟ್ಟಾಭಿ ಅವರು ನಿರ್ದೇಶಿಸಿದ 'ಭಾಗ್ಯವಂತೆದಿ' ಸಿನಿಮಾಕ್ಕೆ ರಾಜ್ಯ ಉತ್ತಮ ಪ್ರಾದೇಶಿಕ ಭಾಷಾ ತುಳುಚಿತ್ರ ಎಂಬ ಪ್ರಶಸ್ತಿ ಲಭಿಸಿದೆ.
- ರಿಚರ್ಡ್ ಕ್ಯಾಸ್ಟಲಿನೊ ಅವರ 'ಬಂಗಾರ್ ಪಟ್ಲೇರ್' ಸಿನಿಮಾವು ರಾಷ್ಟ್ರೀಯ ಉತ್ತಮ ಪ್ರಾದೇಶಿಕ ಭಾಷಾ ಚಲನಚಿತ್ರ ಪ್ರಶಸ್ತಿ ಪಡೆದ ಪ್ರಥಮ ಸಿನಿಮಾಸ್ಕೋಪ್ ತುಳುಚಿತ್ರ. ಮಾತ್ರವಲ್ಲ ಅತಿ ಹೆಚ್ಚು ಪ್ರಶಸ್ತಿ, ಪುರಸ್ಕಾರಗಳನ್ನು ಪಡೆದ ತುಳು ಚಿತ್ರ.
- ಮಣಿ ಮುರುಗನ್ ಅವರ ನಿರ್ದೇಶನದ 'ಬದ್‌ಕ್‌ದ ಬಿಲೆ' ತುಳು ಸಿನಿಮಾವು ಕರ್ನಾಟಕ ರಾಜ್ಯ ಸರಕಾರದ ವಿಶೇಷ ಪುರಸ್ಕಾರ ಪಡೆದಿರುವುದು ಮಾತ್ರವಲ್ಲ, 1999ರಲ್ಲಿ ಭಾರತೀಯ ಪನೋರಮಾ ವಿಭಾಗದಲ್ಲಿ ಸ್ಪರ್ಧಿಸಿದ ತುಳು ಚಿತ್ರವೂ ಹೌದು.

- ಕೃಷ್ಣಪ್ಪ ಉಪ್ಪೂರು ಅವರ ನಿರ್ದೇಶನದ 'ಮಾರಿಬಲೆ' ಸಿನಿಮಾವು ಕರ್ನಾಟಕ ರಾಜ್ಯ ಸರಕಾರದ ಸಾಮಾಜಿಕ ಕಳಕಳಿಯ ಉತ್ತಮ ಚಲನಚಿತ್ರವೆಂದು ಹಾಗೂ ಬಂಗಾರದ ಪದಕ ಪಡೆದ ತುಳು ಚಿತ್ರ.
- ಕೋಡ್ಲು ರಾಮಕೃಷ್ಣ ಅವರು ನಿರ್ದೇಶಿಸಿದ 'ತುಡರ್' ಚಿತ್ರಕ್ಕೆ ರಾಜ್ಯ ಸರಕಾರದ ಉತ್ತಮ ಪ್ರಾದೇಶಿಕ ಭಾಷಾ ಚಲನಚಿತ್ರ ಪ್ರಶಸ್ತಿ ಲಭಿಸಿದೆ.
- ಪ್ರವೀಣ್ ತೊಕ್ಕೊಟ್ಟು ಅವರ ನಿರ್ದೇಶನದ 'ಕಡಲಮಗೆ' ಸಿನಿಮಾಕ್ಕೆ 2005–06ನೇ ಸಾಲಿನ ರಾಜ್ಯ ಉತ್ತಮ ಪ್ರಾದೇಶಿಕ ಭಾಷಾ ಪ್ರಶಸ್ತಿ ಲಭಿಸಿದೆ.
- ನವದೆಹಲಿಯಲ್ಲಿ 2006ರಲ್ಲಿ ನಡೆದ ಓಸಿಯನ್ ಫಿಲ್ಮ್ ಫೆಸ್ಟಿವಲ್‌ನಲ್ಲಿ 'ಸುದ್ಧ' ಉತ್ತಮ ಭಾರತೀಯ ಸಿನಿಮಾ ಎಂಬ ಪ್ರಶಸ್ತಿಗೆ ಭಾಜನವಾಯಿತು.
- ಆನಂದ ಪಿ. ರಾಜು ಅವರ ನಿರ್ದೇಶನದ ಮೇ 5, 2006ರಂದು ಬಿಡುಗಡೆಯಾದ 'ಕೋಟಿ ಚೆನ್ನಯ' ಸಿನಿಮಾಕ್ಕೆ 2007ರ ರಾಷ್ಟ್ರೀಯ ಉತ್ತಮ ಪ್ರಾದೇಶಿಕ ಭಾಷಾ ಚಲನಚಿತ್ರ ಎಂಬ ಪ್ರಶಸ್ತಿ ಲಭಿಸಿದೆ.
- ರಿಚರ್ಡ್ ಕ್ಯಾಸ್ಟಲಿನೊ ಅವರ ನಿರ್ದೇಶನದ 'ಬದಿ' ಚಿತ್ರವು 2006–07ನೇ ಸಾಲಿನ ಕರ್ನಾಟಕ ರಾಜ್ಯ ಉತ್ತಮ ಪ್ರಾದೇಶಿಕ ಭಾಷಾ ಚಲನಚಿತ್ರ ಪ್ರಶಸ್ತಿ ಪಡೆದಿದೆ.
- ಶ್ರೀನಿವಾಸ್ ಕೌಶಿಕ್ ಅವರ ನಿರ್ದೇಶನದ 'ಬಿರ್ಸೆ' ಚಿತ್ರವು 2007–08ನೇ ಸಾಲಿನ ಕರ್ನಾಟಕ ರಾಜ್ಯದ ಉತ್ತಮ ಪ್ರಾದೇಶಿಕ ಭಾಷಾ ಚಲನಚಿತ್ರ ಎಂಬ ಪ್ರಶಸ್ತಿ ಪಡೆದಿದೆ.
- ಶಿವಧ್ವಜ್ ನಿರ್ದೇಶನದ 'ಗಗ್ಗರ' ಚಿತ್ರವು 2008ನೇ ಸಾಲಿನ ರಾಷ್ಟ್ರೀಯ ಉತ್ತಮ ಪ್ರಾದೇಶಿಕ ಭಾಷಾ ಚಲನಚಿತ್ರ ಎಂಬ ಪ್ರಶಸ್ತಿ ಪಡೆದಿದೆ.
- ಹ.ಸೂ. ರಾಜಶೇಖರ್ ನಿರ್ದೇಶನದ 'ರಿಕ್ಷಾ ಡ್ರೈವರ್' ಚಿತ್ರವು 2013ನೇ ಸಾಲಿನ ರಾಷ್ಟ್ರೀಯ ಉತ್ತಮ ಪ್ರಾದೇಶಿಕ ಭಾಷಾ ಚಲನಚಿತ್ರ ಎಂಬ ಪ್ರಶಸ್ತಿ ಪಡೆದಿದೆ.

ಇತ್ತೀಚೆಗೆ ತುಳು ಸಾಹಿತ್ಯ ಅಕಾಡೆಮಿ, ತುಳುಕೂಟ, V4, ರೆಡ್ ಎಫ್‌ಎಮ್‌ನಂತಹ ಮಾಧ್ಯಮಗಳು ಹಾಗೂ ಹಲವಾರು ಸಂಘಸಂಸ್ಥೆಗಳು ತುಳು ಸಿನಿಮಾ ಕಲಾವಿದರನ್ನು ಪ್ರಶಸ್ತಿ, ಪುರಸ್ಕಾರಗಳಿಂದ ಪ್ರೋತ್ಸಾಹಿಸುವ ಕಾರ್ಯವನ್ನು ಗೈಯುತ್ತಿರುವುದು ತುಳು ಸಿನಿಮಾ ರಂಗದ ಬೆಳವಣಿಗೆಯ ವಿಚಾರದಲ್ಲಿ ಮಹತ್ತರವಾದುದು.

ತುಳು ಸಿನಿಮಾ ಸಾಧಕರ ಸಂದರ್ಶನ

ತುಳು ಸಿನಿಮಾ ಹಾಗೂ ಕಲಾವಿದರ ಬಗ್ಗೆಗಿರುವ ಸಾಹಿತ್ಯದ ಕೊರತೆ ಬಹಳಷ್ಟಿದೆ. ತುಳು ಸಾಹಿತ್ಯ, ನಾಟಕ, ಜನಪದ ಪ್ರಕಾರಗಳ ಬಗ್ಗೆ ಸಿಗುವ ಮಾಹಿತಿಗಳಿಗೆ ಹೋಲಿಸಿದರೆ ತುಳು ಸಿನಿಮಾದ ವಿವರವಾದ ಮಾಹಿತಿಗಳು, ವಿಮರ್ಶಾತ್ಮಕ ಬರಹಗಳು ದೊರೆಯುವುದಿಲ್ಲ. ಒಂದಿಷ್ಟು ಕಿರು ಲೇಖನಗಳನ್ನು ಬಿಟ್ಟರೆ ಹೆಚ್ಚಿನ ಕೃತಿಗಳು ಬೆಳಕಿಗೆ ಬಂದಿಲ್ಲ. ಟಿ.ಎ. ಶ್ರೀನಿವಾಸ್ ಅವರ 'ಚಿತ್ರಭಾರತಿ–35' ಮತ್ತು ತಮ್ಮ ಲಕ್ಷ್ಮಣ ಅವರ 'ತುಳು ಭಾಷೆಯ ಸುವರ್ಣ ಚಿತ್ರಗಳು' ಎಂಬ ಎರಡು ಕೃತಿಗಳು ತುಳು ಸಿನಿಮಾಗಳ ಚಿತ್ರಕಥೆ, ಚಿತ್ರ ಬಿಡುಗಡೆ ಹಾಗೂ ಇನ್ನಿತರ ಮಾಹಿತಿಗಳನ್ನು ತಿಳಿಯಲು ಸಹಾಯಕವಾಗುತ್ತವೆ. ಆದರೂ ತುಳು ಸಿನಿಮಾ ಅಧ್ಯಯನಕ್ಕೆ ಬೇಕಾದ 'ಸಾಹಿತ್ಯ ಸಂಪನ್ಮೂಲ'ದ ಕೊರತೆಯು ಬಹಳಷ್ಟು ಕಾಡುತ್ತದೆ. ಆದರೆ ಈ ಕೊರತೆಯನ್ನು ನಾನು ನಡೆಸಿದಂತಹ ತುಳು ಚಿತ್ರರಂಗದ ಹಿರಿಯ ಸಾಧಕರ ಹಾಗೂ ಉದಯೋನ್ಮುಖ ಪ್ರತಿಭೆಗಳ ಸಂದರ್ಶನಗಳು ಅಲ್ಪ ಪ್ರಮಾಣದಲ್ಲಿ ಸರಿದೂಗಿಸುವತ್ತ ಸಹಕಾರಿಯಾದವು.

1971ರಿಂದ ಆರಂಭವಾದ ತುಳು ಸಿನಿಮಾ ರಂಗದ ಇತಿಹಾಸದಲ್ಲಿ ಹಲವಾರು ಸಾಧಕರು ತಮ್ಮನ್ನು ತಾವು ಸಿನಿಮಾ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಸೇವೆ ಸಲ್ಲಿಸಿರುತ್ತಾರೆ. ನಟನೆ, ನಿರ್ದೇಶನ, ನಿರ್ಮಾಣ, ಚಿತ್ರಕತೆ, ಸಂಭಾಷಣೆ, ಸಂಗೀತ ನಿರ್ದೇಶನ, ಗೀತಸಾಹಿತ್ಯ, ಛಾಯಾಗ್ರಹಣ, ಸಂಕಲನ ಹೀಗೆ ಸಿನಿಮಾದ ಇನ್ನು ಹತ್ತು ಹಲವು ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸಿ ಚಿತ್ರರಂಗದ ಏಳ್ಗೆಗಾಗಿ ಶ್ರಮಿಸಿದ್ದಾರೆ. ಇಂದು ನಟನೆಗೆ, ಗೀತಸಾಹಿತ್ಯಕ್ಕೆ ಮುಂತಾದ ಸಿನಿಮಾದ ಹಲವು ಕ್ಷೇತ್ರಗಳಿಗೆ ಸಂಭಾವನೆ ರೂಪ ಸಲ್ಲುತ್ತಿದೆ. ಆದರೆ ಹಿಂದೆ ತಾಂತ್ರಿಕ ಕ್ಷೇತ್ರವನ್ನು ಬಿಟ್ಟರೆ ಉಳಿದ ಯಾವುದಕ್ಕೂ ಸಂಭಾವನೆ ಇರಲಿಲ್ಲ, ಕೊಟ್ಟರೂ ಪಡೆಯುತ್ತಿರಲಿಲ್ಲ. ಅಂತಹ ನಿಸ್ವಾರ್ಥ, ಹೃದಯ ವೈಶಾಲ್ಯತೆಯ ಅನೇಕ ಸಿನಿಮಾ ಸಾಧಕರು ಇದ್ದರು. ಜೊತೆಗೆ ಸಾಮಾಜಿಕ ಕಳಕಳಿ, ಸಂಸ್ಕೃತಿಯ ಬಗ್ಗೆ ಒಲವು ತೋರುತ್ತಿದ್ದರು.

ಸಿನಿಮಾ ಒಂದು ಸಾಮೂದಾಯಿಕ ಕಲೆ ಆದ್ದರಿಂದ ಇಲ್ಲಿ ಎಲ್ಲವೂ ಮುಖ್ಯವೇ. ನಾಯಕನಿಂದ ಹಿಡಿದು ಚಾಲಕನವರೆಗೆ ಎಲ್ಲರೂ ಪ್ರಧಾನರೇ. ತೆರೆಯ ಮುಂದೆ ನಾವು ಕಾಣುವಂತಹ ಮಂದಿಗಿಂತ ಇನ್ನೂ ಹೆಚ್ಚಿನ ವರ್ಗ ತೆರೆಯ ಹಿಂದೆ ಕಾರ್ಯ ನಿರ್ವಹಿಸುತ್ತದೆ. ಈ ನನ್ನ ಅಧ್ಯಯನದಲ್ಲಿ ಅವೆಲ್ಲವನ್ನೂ ಹಿಡಿದಿಡಲು ಸಾಧ್ಯವಾಗದಿದ್ದರೂ ಸಿನಿಮಾದಲ್ಲಿ ಪ್ರಧಾನ ಪಾತ್ರವಹಿಸುವ ನಿರ್ದೇಶಕ, ನಿರ್ಮಾಪಕ, ನಟ, ಸಂಭಾಷಣೆಗಾರ, ಗೀತಸಾಹಿತ್ಯ ರಚನೆಕಾರ ಮುಂತಾದ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಿದ ಹಾಗೂ ನಿರ್ವಹಿಸುತ್ತಿರುವ ಹಿರಿಯ ಮತ್ತು ಯುವ ಸಾಧಕರನ್ನು ಸಂದರ್ಶಿಸಿ ನನ್ನ ಅಧ್ಯಯನದ ಕುರಿತಾಗಿ ಮಾಹಿತಿಗಳನ್ನು ದಾಖಲಿಸಿದ್ದೇನೆ.

ವಿಶುಕುಮಾರ್, ಕೆ.ಎನ್. ಟೇಲರ್, ಆನಂದ ಶೇಖರ್, ಆರೂರು ಪಟ್ಟಾಭಿ, ಬಿ. ಚರಣ್ ಕುಮಾರ್, ಪಿ.ಎಸ್. ರಾವ್, ರಾಮ ಕಿರೋಡಿಯನ್, ಮಚ್ಚೇಂದ್ರನಾಥ್ ಪಾಂಡೇಶ್ವರ, ಅಮೃತ ಸೋಮೇಶ್ವರ, ಟಿ.ಎ. ಶ್ರೀನಿವಾಸ್, ಸಂಜೀವ ದಂಡೆಕೇರಿ, ಎಂ.

ಕೆ. ಸೀತರಾಮ ಕುಲಾಲ್, ವಿ.ಜಿ. ಪಾಲ್, ಕಾಸರಗೋಡು ಚಿನ್ನಾ, ರಿಚರ್ಡ್ ಕ್ಯಾಸ್ಟಲಿನೊ, ಸದಾಶಿವ ಸಾಲಿಯಾನ್, ಲೀಲಾವತಿ, ಜಯಮಾಲ, ಸರೋಜಿನಿ ಶೆಟ್ಟಿ, ಜಯಶೀಲ, ಸೋಮಶೇಖರ್ ಪುತ್ರನ್, ಬಾಲಕೃಷ್ಣ ಕದ್ರಿ, ರೋಹಿದಾಸ್ ಕದ್ರಿ, ವಿಜಯ್‌ಕುಮಾರ್ ಕೊಡಿಯಾಲ್‌ಬೈಲ್, ದೇವದಾಸ್ ಕಾಪಿಕಾಡ್, ಅರವಿಂದ ಬೋಳಾರ್, ಗೋಪಿನಾಥ ಭಟ್, ಲಕ್ಷ್ಮಣ ಕುಮಾರ್ ಮಲ್ಲೂರು, ಸಾಯಿಕೃಷ್ಣ ಕುಡ್ಲ, ಅರ್ಜುನ್ ಕಾಪಿಕಾಡ್ ಮುಂತಾದ ಹಲವು ನಟ-ನಟಿಯರು ನಿರ್ದೇಶಕರು, ನಿರ್ಮಾಪಕರು, ಸಂಗೀತ ನಿರ್ದೇಶಕರು, ಕತೆ-ಸಾಹಿತ್ಯ-ಸಂಭಾಷಣೆಗಾರರು ಇದಲ್ಲದೆ ಸಿನಿಮಾ ಕ್ಷೇತ್ರದಲ್ಲಿ ಇನ್ನಿತರ ಕಾರ್ಯಗಳಲ್ಲಿ ಸೇವೆ ಸಲ್ಲಿಸಿದ, ಸಲ್ಲಿಸುತ್ತಿರುವ ಅನೇಕ ಸಾಧಕರಿದ್ದಾರೆ. ಕೆಲವು ಮಹನೀಯರು ಇಂದು ನಮ್ಮೊಡನೆ ಇಲ್ಲ. ಆದರೆ ಅವರ ಕಲಾಸೇವೆಯನ್ನು ಸ್ಮರಿಸುತ್ತಾ, ನಮ್ಮೊಡನೆ ಇರುವ ಹಾಗೂ ತುಳು ಸಿನಿಮಾ ರಂಗದಲ್ಲಿ ಕಾರ್ಯಗೈದಿರುವ ಹಿರಿಯ ಸಾಧಕರನ್ನು, ಕಾರ್ಯಗೈಯುತ್ತಿರುವ ಉದಯೋನ್ಮುಖ ಪ್ರತಿಭೆಗಳನ್ನು ಸಂದರ್ಶಿಸಿ ತುಳು ಸಿನಿಮಾದ ಕುರಿತಾದ 'ಹಿನ್ನೋಟ-ಮುನ್ನೋಟ'ವನ್ನು ಜೊತೆಗೆ ಅವರ ಅನುಭವದ ವಿಚಾರಗಳನ್ನು ನನ್ನ ಈ ಅಧ್ಯಯನದಲ್ಲಿ ದಾಖಲಿಸಿದ್ದೇನೆ.

ಸದಾನಂದ ಸುವರ್ಣ

ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿಯಲ್ಲಿ 24-12-1931ರಂದು ಜನಿಸಿದ ಸದಾನಂದ ಸುವರ್ಣರು ಮುಂಬೈಗೆ ವಲಸೆ ಹೋದರೂ ಕನ್ನಡ ರಂಗಭೂಮಿಯ ಜೊತೆಗೆ ತುಳು ರಂಗಭೂಮಿಗೆ ಅಪಾರ ಸೇವೆ ಸಲ್ಲಿಸಿದ ಹಿರಿಯ ರಂಗಕರ್ಮಿ. ಇಂದು ತುಳು ಮಾತ್ರವಲ್ಲ ಇತರ ಭಾಷಾ ಚಿತ್ರರಂಗದಲ್ಲಿ ಇರುವ ಕೆಲವು ಖ್ಯಾತ ನಟರು ಇವರ ಶಿಷ್ಯರೆಂಬುವುದೇ ಹೆಮ್ಮೆ.

ಅತ್ಯುತ್ತಮ ಚಲನಚಿತ್ರ ಎಂದು 'ಸ್ವರ್ಣ ಕಮಲ' ರಾಷ್ಟ್ರ ಪ್ರಶಸ್ತಿ ಪಡೆದ 'ಘಟಶ್ರಾದ್ಧ' ಕನ್ನಡ ಸಿನಿಮಾದ ನಿರ್ಮಾಪಕರಾಗಿದ್ದ ಇವರು ತಬರನ ಕತೆ, ಮನೆ, ಕೌರ್ಯ ಮುಂತಾದ ಚಿತ್ರಗಳ ನಿರ್ವಾಹಕ ನಿರ್ಮಾಪಕರಾಗಿ ಕಾರ್ಯ ನಿರ್ವಹಿಸಿದ ಇವರು 90ರ ದಶಕದಲ್ಲಿ ತಮ್ಮ ಸ್ವರಚಿತ 'ಗುಡ್ಡೆದ ಬೂತ' ತುಳು ನಾಟಕವನ್ನು ಆಧರಿಸಿ ಕೆಲವು ಬದಲಾವಣೆಗಳೊಂದಿಗೆ ಕನ್ನಡದಲ್ಲಿ ಚಿತ್ರಕತೆ ರಚಿಸಿ ನಿರ್ದೇಶಿಸಿದ ಟೆಲಿಚಿತ್ರ 'ಗುಡ್ಡದ ಭೂತ' ಇವರಿಗೆ ಅಪಾರ ಜನಮನ್ನಣೆಯನ್ನು ತಂದುಕೊಟ್ಟಿತು. ರಂಗಭೂಮಿ ಮತ್ತು ಚಲನಚಿತ್ರ ಮಾಧ್ಯಮದ ಕುರಿತು ಆಳವಾದ ಹಿಡಿತವಿರುವ ಇವರು ತುಳು ಸಿನಿಮಾ ರಂಗದ ಕುರಿತಾಗಿ ತೆರೆದಿಟ್ಟ ವಿಚಾರಧಾರೆ ಹೀಗಿವೆ.

ತುಳು ಸಿನಿಮಾಗಳು ಕಲಾತ್ಮಕತೆಯಿಂದ ದೂರವಾಗುತ್ತಿದೆಯಲ್ಲ?

ರಂಗಭೂಮಿ, ಸಾಹಿತ್ಯದಲ್ಲಿ ಎರಡು ವರ್ಗ ಇದೆ. ವ್ಯಾಪಾರ ಹಾಗೂ ಕಲಾತ್ಮಕ ಎಂದು. ಕಲಾತ್ಮಕ ಚಿತ್ರಕ್ಕೆ ಒತ್ತು ಕೊಡಿ ಆದರೆ ಹಣ ಕಳೆದುಕೊಳ್ಳಬಾರದು. ಗುಣಮಟ್ಟ, ಕಲಾತ್ಮಕತೆ ದೃಷ್ಟಿ ಇದ್ದರೆ ಸಿನಿಮಾ ಚೆನ್ನಾಗಿ ಬರುತ್ತದೆ. ಕೇವಲ ಪ್ರಚಾರ, ಹಣಕ್ಕಾಗಿ ಸಿನಿಮಾ ಮಾಡಬಾರದು. ಈಗಿನ ಚಿತ್ರಗಳನ್ನು ಒಳ್ಳೆಯ ಚಿತ್ರಗಳು ಎಂದು ಹೇಳುವುದಕ್ಕಿಂತ ಮನರಂಜನೆ ಚಿತ್ರಗಳು ಎನ್ನಬಹುದು.

ಕನ್ನಡದ ಶ್ರೇಷ್ಠ ಚಿತ್ರವಾದ 'ರಂಗಿತರಂಗ'ದಲ್ಲಿ ನಿಮ್ಮ ಗುಡ್ಡೆದ ಬೂತದ 'ಡೆನ್ನನ ಡೆನ್ನನ' ಹಾಡನ್ನು ಬಳಸಲಾಗಿದೆ. ಇದರ ಕುರಿತಾಗಿ ಮಾಹಿತಿ ನೀಡುವಿರಾ?

ನಾನು 'ಗುಡ್ಡೆದ ಬೂತ'ವನ್ನು ಸಿನಿಮಾ ಮಾಡಲು ಹೊರಟವ. ಆದರೆ ಕೊನೆಗೆ ನಾಟಕ ಮಾಡಿದೆ. ಇದರಲ್ಲಿನ 'ಡೆನ್ನನ ಡೆನ್ನನ' ಹಾಡನ್ನು ಸಿನಿಮಾದಲ್ಲಿ ಬಳಸಬೇಕು ಎಂಬ ಆಸೆ ಮೊದಲೇ ಇತ್ತು. ಈ ಹಾಡನ್ನು ನಾನು ಉಡುಪಿಯ 'ಆರ್‌ಆರ್‌ಸಿ'ಗೆ ಹೋಗಿ ಅಲ್ಲಿದ್ದ ಕೆಲವೊಂದು ಜನಪದ ಹಾಡುಗಳನ್ನು ಕೇಳಿ ರಾಗ ಸಂಯೋಜನೆಯನ್ನು ಸ್ವಲ್ಪ ಬದಲಿಸಿ ಸಾಹಿತ್ಯವನ್ನು ಬರೆದೆ. ಇತ್ತೀಚೆಗೆ 'ರಂಗಿತರಂಗ'ದ ಸಿನಿಮಾದವರು ಬಂದು ನನ್ನಲ್ಲಿ ಈ ಹಾಡಿನ ಹಕ್ಕನ್ನು ಕೇಳಿದಾಗ ಕೊಟ್ಟುಬಿಟ್ಟೆ.

ನಮ್ಮ ಕನ್ನಡ ಸಿನಿಮಾ ರಂಗದಲ್ಲಿ ಈಗ ಹೊಸತನದ ಕತೆ, ಹೊಸತಂಡ ಒಂದು ಒಳ್ಳೆಯ ಭರವಸೆ ಮೂಡಿಸುತ್ತಿರುವ ಸಂದರ್ಭದಲ್ಲಿ ತುಳು ಚಿತ್ರರಂಗ ಬಡವಾಗುತ್ತಿದೆ ಎಂದೆನಿಸುವುದಿಲ್ಲವೇ?

ಇವತ್ತು ಸಿನಿಮಾದ ಮುಖ್ಯ ಆಕರ್ಷಣೆ ಮನರಂಜನೆ ನೀಡುವುದು ಮತ್ತು ದುಡ್ಡು ಮಾಡುವುದು. ಒಂದು ಒಳ್ಳೆಯ ಸಿನಿಮಾಕ್ಕೆ ಇರುವ ಪ್ರೇಕ್ಷಕ ವರ್ಗ ಕೂಡಾ ಸೀಮಿತವಾಗಿದೆ. ಸಿನಿಮಾದ ತಾಂತ್ರಿಕತೆಯಲ್ಲಿ, ಪ್ರೇಕ್ಷಕರಲ್ಲಿ ಬಹಳ ಬದಲಾವಣೆಗಳು ಆಗಬೇಕಾಗಿದೆ.

"ಯಾವ ಮಾಧ್ಯಮ ಬಂದರೂ ರಂಗಭೂಮಿಗೆ ಅಳಿವಿಲ್ಲ ಅದೊಂದು ಜೀವಂತ ಪ್ರಕ್ರಿಯೆ" ಎಂದು ನೀವು ಹೇಳಿದ್ದೀರಿ. ಆದರೆ ಸಿನಿಮಾ ಮಾಧ್ಯಮವು ರಂಗಭೂಮಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆಯಲ್ಲ?

ರಂಗಭೂಮಿ ಅದೊಂದು ಜೀವಂತ ಪ್ರಕ್ರಿಯೆ. ಆದರೆ ಸಿನಿಮಾಗಳು ಮಾಡಿದ್ದನ್ನು ತೋರಿಸುತ್ತವೆ ಅಷ್ಟೇ. ಆದರೂ ಸಿನಿಮಾ ಮಾಧ್ಯಮದಿಂದ ರಂಗಭೂಮಿಯ ಮೇಲೆ ವ್ಯತಿರಿಕ್ತ ಪರಿಣಾಮ ಆಗಿದೆ ಅನ್ನುವುದನ್ನು ಎಲ್ಲರೂ ಒಪ್ಪಿಕೊಂಡರೂ, ರಂಗಭೂಮಿಯ ಬೇರು ಕೂಡಾ ಅಷ್ಟೇ ಗಟ್ಟಿಯಾಗಿದೆ ಎಂಬುವುದನ್ನು ತಿಳಿಯಬೇಕು.

ಜಗತ್ತಿನ ಅತ್ಯುತ್ತಮ 100 ಸಿನಿಮಾಗಳಲ್ಲಿ ಒಂದಾದ 'ಘಟಶ್ರಾದ್ಧ'ದಂತಹ ಸಿನಿಮಾ ಮಾಡಿರುವ ನೀವು ತುಳುವಿನಲ್ಲಿ ಒಂದು ಒಳ್ಳೆಯ ಸಿನಿಮಾವನ್ನು ಮಾಡಬಹುದಿತ್ತಲ್ವ?

ತುಳು ಸಿನಿಮಾ ರಂಗದ ಒಳಗಿನ ಅರಿವು ಎಲ್ಲ ನನಗೆ ಗೊತ್ತಿದ್ದರಿಂದ ನಾನು ಸಿನಿಮಾ ಮಾಡಲು ಮುಂದಾಗಿಲ್ಲ. ಜೊತೆಗೆ ನನ್ನ ಆಸಕ್ತಿ ನಾಟಕದ ಮೇಲಿದ್ದರಿಂದ ತುಳು ಸಿನಿಮಾ ಮಾಡುವಂತಹ ಪ್ರಯತ್ನಕ್ಕೆ ಕೈ ಹಾಕಲಿಲ್ಲ.

ಒಂದು ವೇಳೆ ನೀವು ತುಳು ಸಿನಿಮಾಕ್ಕೆ ಮುಂದಾದರೆ ಯಾರ ಕೃತಿಯನ್ನು ಆಯ್ಕೆ ಮಾಡುವಿರಿ?.

ಒಂದು ಸಾಹಿತ್ಯ ಕೃತಿಯನ್ನು ಸಿನಿಮಾಕ್ಕೆ ಕಥಾವಸ್ತುವಾಗಿ ಬಳಸುವುದು ತುಂಬಾ ಕಷ್ಟ. ಹೀಗೆ ಬಳಸಿದರೂ ಕೆಲವು ಆಯಾಮಗಳನ್ನು ಬದಲಿಸಬೇಕಾಗುತ್ತದೆ. ಉದಾ: ಕನ್ನಡದಲ್ಲಿ ಡಾ. ಯು. ಆರ್. ಅನಂತಮೂರ್ತಿ ಅವರ ಕೃತಿಯನ್ನು ಸಿನಿಮಾ ಮಾಡಿದೆ. ಹಾಗೆಯೇ ಇನ್ನು ಕೆಲವು ಲೇಖಕರು ತಮ್ಮ ಕೃತಿಯ ತಿದ್ದುವಿಕೆಗೆ ಒಪ್ಪುವುದಿಲ್ಲ. ವಿಶುಕುಮಾರ್ ಅವರಲ್ಲಿ ಒಳ್ಳೆಯ ಕಾದಂಬರಿ ಇತ್ತು. ಆದರೆ ಅವರು ಅದನ್ನು ಕನ್ನಡದಲ್ಲಿ ಚಿತ್ರ ಮಾಡಿದರು. ಶಿವರಾಮ ಕಾರಂತರ ಕಾದಂಬರಿಯನ್ನು ಸಿನಿಮಾ ಮಾಡಬಹುದು.

ನೀವು ತುಳು ಸಿನಿಮಾ ಮಾಡದಿದ್ದರೂ ನಿಮ್ಮ ಅನೇಕ ಶಿಷ್ಯವರ್ಗ ಚಿತ್ರರಂಗದಲ್ಲಿ ಇದ್ದಾರೆ. ಅವರ ಕುರಿತಾಗಿ ವಿವರಿಸಿ

ನನ್ನ ನಾಟಕ ಗರಡಿಯಲ್ಲಿ ಗೋಪಿನಾಥ ಭಟ್, ಲಕ್ಷ್ಮಣ ಕುಮಾರ್ ಮಲ್ಲೂರು, ಚಂದ್ರಹಾಸ ಉಳ್ಳಾಲ್ ಹೀಗೆ ಅನೇಕ ಕಲಾವಿದರು ಬೆಳೆದು ಬಂದಿದ್ದಾರೆ. ನನ್ನ 'ಗುಡ್ಡೆದ ಭೂತ'ದಲ್ಲಿ ವಿನಯ ಪ್ರಸಾದ್ ಅವರ ಸಹೋದರನನ್ನು ನಾಯಕನಾಗಿ ಮಾಡುವ ಯೋಜನೆಯಿತ್ತು. ಆದರೆ ಗಿರೀಶ್ ಕಾಸರವಳ್ಳಿಯ ಸಲಹೆಯ ಮೇರೆಗೆ ಪ್ರಕಾಶ್ ರೈ

ಅವರಿಗೆ ಅವಕಾಶ ನೀಡಿದೆ. ಇಲ್ಲಿ ತೋರಿದ ನಟನಾ ಸಾಮರ್ಥ್ಯ ಮುಂದೆ ಅವರನ್ನು ಜನಪ್ರಿಯ ನಟನಾಗುವಲ್ಲಿ ಸಹಾಯಕವಾಯಿತು.

ನಿಮ್ಮ ಪ್ರಕಾರ ಸಿನಿಮಾ ಅಂದರೆ ಏನು?

ಸಿನಿಮಾ ಅಂದರೆ ಚಲಿಸುವ ಚಿತ್ರಗಳು. ಆದರೆ ಕೆಲವರು ಸಿನಿಮಾ ಅಂದರೆ ಒಂದು ಒಳ್ಳೆಯ ಉದ್ಯಮ ಎಂದು ತಿಳಿದಿದ್ದಾರೆ. ಒಂದು ಕಾಲದಲ್ಲಿ ಸಿನಿಮಾ ಕುತೂಹಲ, ಆಶ್ಚರ್ಯ, ಅದ್ಭುತವಾಗಿತ್ತು. ಆದರೆ ಈಗ ಅದೊಂದು ಉದ್ಯಮದತ್ತ ಕೇಂದ್ರೀಕೃತವಾಗುತ್ತಿರುವುದು ದುರಂತ. ಮನರಂಜನೆಯ ಜೊತೆಗೆ ಮನೋವಿಕಾಸಕ್ಕೂ ಸಿನಿಮಾ ಕಾರಣ ಆಗಬೇಕು

ಎಂ.ಕೆ. ಸೀತರಾಮ ಕುಲಾಲ್

'ಮೋಕೆದ ಸಿಂಗಾರಿ.. ಉಂತುದೆ ವೈಯಾರಿ' ಈ ಹಾಡಿನ ಸಾಲುಗಳನ್ನು ಒಂದು ಕಾಲದಲ್ಲಿ ಕೇಳದವರು ಹಾಗೂ ಹಾಡದವರು ತುಳುನಾಡಿನಲ್ಲಿ ಇರಲಿಲ್ಲವೆಂದರೂ ಅತಿಶಯೋಕ್ತಿಯಾಗದು. ಸಿನಿಮಾದ ಹೆಸರು, ಕತೆ ಗೊತ್ತಿರದಿದ್ದರೂ ಒಂದು ಕಾಲದಲ್ಲಿ ತುಳು ಹಾಡುಗಳನ್ನು ಮಾತ್ರ ಜನರು ಸರಾಗವಾಗಿ ಹಾಡುವಂತೆ ಮಾಡಿದವರು ಎಂ.ಕೆ. ಸೀತರಾಮ ಕುಲಾಲ್.

ಬಂಟ್ವಾಳ ತಾಲೂಕಿನ ಕೊಳ್ನಾಡು ಎಂಬ ಪುಟ್ಟ ಗ್ರಾಮದಲ್ಲಿ 1940ರಲ್ಲಿ ಜನಿಸಿದ ಇವರು ಬಾಲ್ಯದಲ್ಲಿಯೇ ನಾಟಕ ಹಾಗೂ ಸಾಹಿತ್ಯದತ್ತ ಒಲವು ತೋರಿದವರು. ಕನ್ನಡ, ತುಳುವಿನಲ್ಲಿ ಒಟ್ಟು 69 ನಾಟಕಗಳನ್ನು ರಚಿಸಿರುವ ಇವರ 'ಮಣ್ಣ್‌ದ ಮಗಲ್ ಅಬ್ಬಕ್ಕ' ಯಶಸ್ವಿ ತುಳು ನಾಟಕ. ಒಟ್ಟು 12 ತುಳು ಸಿನಿಮಾಕ್ಕೆ 26 ಹಾಡುಗಳನ್ನು ಬರೆದಿರುವ ಇವರ ಹಾಡುಗಳನ್ನು ಎಂದಿಗೂ ಮರೆಯುವಂತಿಲ್ಲ. ಯಾವುದೇ ಹಾಡಿಗೂ ಇಂದಿನವರೆಗೂ ಸಂಭಾವನೆಯನ್ನು ಇವರು ಪಡೆದಿಲ್ಲ ಎಂಬುವುದು ಅಭಿಮಾನದ ಸಂಗತಿ. ತುಳು, ಕನ್ನಡ ನಾಟಕಗಳಿಗೆ 350ಕ್ಕೂ ಮೀರಿ ಹಾಡುಗಳನ್ನು ರಚಿಸಿರುವ ಇವರ 'ತುಳುವ ಮಲ್ಲಿಗೆ' ಧ್ವನಿ ಸುರುಳಿ ಜನಪ್ರಿಯವಾಗಿದೆ. ಇವರ 'ಸತ್ಯೋನೆ ದೇವೆರ್' ನಾಟಕವನ್ನು ಆಧರಿಸಿದ 'ಉಡಲ್ದ ತುಡರ್' ತುಳು ಸಿನಿಮಾದ ಚಿತ್ರಕಥೆ, ಸಂಭಾಷಣೆಗೆ ಹಲವಾರು ಪ್ರಶಸ್ತಿಗಳು ಸಂದಿವೆ. ತುಳುರತ್ನ, ಪೆರ್ಮೆದ ತುಳುವೆ, ತುಳುಸಿರಿ ಮುಂತಾದ ಪ್ರಶಸ್ತಿ ಪುರಸ್ಕಾರಕ್ಕೆ ಪಾತ್ರರಾದ ಇವರ ಕೊಡುಗೆಯನ್ನು ಮರೆಯಲಾಗದು. ಪ್ರಸ್ತುತ ಸಂದರ್ಭದಲ್ಲಿ ತುಳು ಸಿನಿಮಾದ ಕುರಿತು ಹಾಗೂ ಅದರಲ್ಲಿ ಬಳಕೆಯಾಗುವ ಸಾಹಿತ್ಯದ ಕುರಿತಾಗಿ ಎಂ.ಕೆ. ಸೀತರಾಮ ಕುಲಾಲ್ ಹೀಗೆನ್ನುತ್ತಾರೆ.

ತುಳು ಸಿನಿಮಾ ತುಳು ಸಂಸ್ಕೃತಿಯ ಅಭಿವ್ಯಕ್ತಿಯ ಮಾಧ್ಯಮವಾಗಲು ಸಾಧ್ಯ ಇದೆಯಾ?

ಇಂದಿನ ಯಾವ ಸಿನಿಮಾದಲ್ಲಿ ಅಂತಹ ಕಲಾತ್ಮಕತೆ ಇದೆ? ನಮ್ಮ ಸಂಸ್ಕೃತಿಗೆ ಈ ಸಿನಿಮಾಗಳು ಪೂರಕವಾಗಿಲ್ಲ. 'ಸಂಸ್ಕೃತಿ' ಎಂದರೆ ನಮ್ಮ ಜನರಲ್ಲಿ ಕೇವಲ ಜಾತ್ರೆ, ಕೋಲ, ಕಂಬಳ ಎಂಬ ತಪ್ಪು ಕಲ್ಪನೆಯಿದೆ. ಸಂಸ್ಕೃತಿ ಎಂದರೆ ನಮ್ಮ ಜೀವನದ ಒಳ್ಳೆಯ ಮಾರ್ಗ ಅಷ್ಟೇ. ನನ್ನ ಮಟ್ಟಿಗೆ ತುಳು ಸಿನಿಮಾಗಳು ತುಳು ಸಂಸ್ಕೃತಿಯ ಅಭಿವ್ಯಕ್ತಿಯ ಮಾಧ್ಯಮವಾಗಿಲ್ಲ.

ತುಳುನಾಡಿನಲ್ಲಿ ತುಳು ಸಿನಿಮಾ ನಿರ್ಮಾಣವಾಗುವ ಮೊದಲು ಯಾವ ಭಾಷಾ ಸಿನಿಮಾದ ಪ್ರಭಾವ ಇತ್ತು?

ತುಳುನಾಡಿನಲ್ಲಿ ತುಳು ಪ್ರಧಾನ ಭಾಷೆಯಾದರೂ ಇಲ್ಲಿ ಕನ್ನಡ, ಕೊಂಕಣಿ, ಬ್ಯಾರಿ, ಮಲಯಾಳಂ ಹಾಗೂ ಹಿಂದಿ ಭಾಷಿಕರೂ ಸ್ವಲ್ಪ ಮಟ್ಟಿಗೆ ಇದ್ದಾರೆ. ಒಂದು ಭಾಷೆಯನ್ನು ಮಾತನಾಡದಿದ್ದರೂ ಅದನ್ನು ಅರ್ಥ ಮಾಡಿಕೊಳ್ಳುವ ವರ್ಗ ಹೆಚ್ಚಿದ್ದಾರೆ. ಹಾಗಾಗಿ ತುಳು ಸಿನಿಮಾ ನಿರ್ಮಾಣಕ್ಕಿಂತ ಮೊದಲೇ ಕನ್ನಡ, ತಮಿಳು ಹಾಗೂ ಹಿಂದಿ ಸಿನಿಮಾಗಳ ಪ್ರಭಾವ ಇಲ್ಲಿ ಹೆಚ್ಚಿತ್ತು.

ನಿಮ್ಮ 'ಸತ್ಯೊನೆ ದೇವೆರ್' ನಾಟಕ ಆಧರಿಸಿ 'ಉಡಲ್ದ ತುಡರ್' ಸಿನಿಮಾ ನಿರ್ಮಾಣವಾಯಿತು. ಚಿತ್ರಕಥೆಗಾಗಿ ಮೂಲಕೃತಿಯನ್ನು ತಿದ್ದುವುದನ್ನು ನೀವು ಒಪ್ಪಿದ್ದೀರಾ?

ಕೃತಿಕಾರನ ಮೂಲಕೃತಿಯನ್ನು ನೇರವಾಗಿ ಸಿನಿಮಾಕ್ಕೆ ಅಳವಡಿಸುವುದು ಅಸಾಧ್ಯ. ಒಂದಿಷ್ಟು ಬದಲಾವಣೆ ಮಾಡುವುದು ಸಹಜ. ಆದರೆ ಕೃತಿಯ ಆಶಯಕ್ಕೆ ಚ್ಯುತಿ ಬರಬಾರದು ಅಷ್ಟೇ. 'ಉಡಲ್ದ ತುಡರ್' ಸಿನಿಮಾದಲ್ಲಿ ನನ್ನ ಮೂಲಕೃತಿಗೆ ಧಕ್ಕೆಯಾಗದ ರೀತಿಯಲ್ಲಿ ಸ್ವಲ್ಪಮಟ್ಟಿನ ಬದಲಾವಣೆ ಮಾಡಲಾಗಿದೆ ಅದನ್ನು ನಾನು ಒಪ್ಪಿದ್ದೇನೆ.

'ಮೋಕೆದ ಸಿಂಗಾರಿ', 'ಪಕ್ಕಿಲು ಮೂಜಿ ಒಂಜೆ ಗೂಡುಡ್' ಮುಂತಾದ ಪ್ರಸಿದ್ಧ ತುಳು ಹಾಡುಗಳನ್ನು ನೀಡಿದ ನಿಮಗೆ ಪ್ರೇರಣೆ ಏನು?

ನಾನು ನಿಜವಾಗಿಯೂ ಕನ್ನಡ ನಾಟಕ ಬರೆಯುತ್ತಿದ್ದವನು. ನಂತರದಲ್ಲಿ ತುಳು ನಾಟಕಕ್ಕೆ ಪದ್ಯ ಬರೆಯಲು ಆರಂಭಿಸಿದೆ. ಅದಕ್ಕೆ ಕಾರಣ ರಾಮ ಕಿರೋಡಿಯನ್. ಅವರೇ ನನಗೆ ಪ್ರೇರಣೆ. ಹೀಗೆ ಬರೆಯುತ್ತಾ ತುಳುನಾಡಿನ ಸೊಗಡಿನ ಅರಿವನ್ನು ಮೈಗೂಡಿಸಿಕೊಂಡು ಹಾಡಿನ ರಚನೆಗೆ ಮುಂದಾಗುತ್ತಿದ್ದೆ.

ಇಂದಿನ ಸಿನಿಮಾ ಹಾಡುಗಳ ಸಾಹಿತ್ಯ ಮನಸ್ಸಿಗೆ ಹತ್ತಿರವಾಗುತ್ತಿಲ್ಲ ಏಕೆ?

ಇಂದು ಕಥಾವಸ್ತುವಿಗೆ ಪೂರಕವಾದ ಸಿನಿಮಾದ ಹಾಡು ಇಲ್ಲ. ಆದರೂ ಕೆಲವೊಂದು ಚಿತ್ರಗಳಲ್ಲಿ ಹಾಡುಗಳು ಅರ್ಥಪೂರ್ಣವಾಗಿದೆ. ಹಿಂದೆ ಚಿತ್ರದ ಕತೆ ಓದದೆ ಹಾಡಿನ ರಚನೆ ಮಾಡುತ್ತಾ ಇರಲಿಲ್ಲ. ಆದರೆ ಈಗ ಚಿತ್ರೀಕರಣದ ಸನ್ನಿವೇಶದಲ್ಲಿಯೇ ಹಾಡುಗಳ ರಚನೆ ಆಗುತ್ತದೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ.

ಒಂದು ಚಿತ್ರಕ್ಕೆ ಹಾಡುಗಳು ಅನಿವಾರ್ಯವೇ? ಈ ಹಾಡುಗಳು ಸಿನಿಮಾವನ್ನು ಗೆಲ್ಲಿಸಲು ಸಹಾಯಕವೋ?

ನಾಟಕದ ಪ್ರೇರಣೆಯಿಂದ ಸಿನಿಮಾದಲ್ಲಿ ಕೂಡಾ ಹಾಡುಗಳು ಬಳಕೆಯಾದವು. ಮನರಂಜನೆಯ ದೃಷ್ಟಿಯಲ್ಲಿ ಸಿನಿಮಾಕ್ಕೆ ಹಾಡುಗಳು ಅನಿವಾರ್ಯ. ಆದರೆ ಒಂದು ಸಿನಿಮಾಕ್ಕೆ ಇಂತಿಷ್ಟೇ ಹಾಡುಗಳು ಇರಬೇಕೆಂಬ ನಿಯಮ ಬೇಡ. ಹಾಡುಗಳು ಕೂಡ ತುಳು ಸಿನಿಮಾಗಳನ್ನು ಗೆಲ್ಲಿಸಿವೆ. ಉದಾ: ಬಯ್ಯಮಲ್ಲಿಗೆ, ಬೊಳ್ಳಿದೋಟ ಉಡಲ್ದ ತುಡರ್ ಇತ್ಯಾದಿ.

ನಿಮ್ಮ ಹಾಡಿನ ನಿರ್ಮಾಣಕ್ಕೆ ನಿಮ್ಮ ಓದು ಕಾರಣವೋ? ಅಥವಾ ತುಳುವಿನ ಜನಪದ ಸಾಹಿತ್ಯದ ಪ್ರೇರಣೆಯೋ?

ಓದಿನ ಪ್ರಭಾವ ಸ್ವಲ್ಪ ಮಟ್ಟಿಗೆ ಇದೆ ಎನ್ನಬಹುದು. ಹಾಗೆಯೇ ಭಾವನೆಯಿಂದ ಕೂಡಾ ಬರೆದಿದ್ದೇನೆ. ಜನಪದದ ಪ್ರಭಾವ ನನ್ನ ನಾಟಕಕ್ಕೆ ಇದೆ, ಸಿನಿಮಾಕ್ಕೆ ಇಲ್ಲ.

ಸಿನಿಮಾ ರಂಗದಲ್ಲಿ ನಟಿಸಲು ಅವಕಾಶಗಳು ಬರಲಿಲ್ಲವೇ?

ಆ ಕಾಲದಲ್ಲಿ ಅವಕಾಶಗಳು ತುಂಬಾ ಇತ್ತು. 'ದಾರೆದ ಬುಡೆದಿ' ಸಿನಿಮಾದಲ್ಲಿ ಒಂದು ಸಣ್ಣ ಪಾತ್ರ ಮಾಡಿದ್ದೇನೆ. ಸಿನಿಮಾ ರಂಗಕ್ಕೆ ನನ್ನನ್ನು ಎಳೆಯಲು ತುಂಬಾ ಪ್ರಯತ್ನಿಸಿದರು. 'ಉಡಲ್ದ ತುಡರ್' ಚಿತ್ರಕ್ಕೆ ನಾಯಕ ಪಾತ್ರ ಮಾಡಲು ಒತ್ತಾಯವಿತ್ತು. ಆದರೆ ನಾನೇ ಮನಸ್ಸು ಮಾಡಿಲ್ಲ. ಏಕೆಂದರೆ ಆ ಕಾಲದಲ್ಲಿ ನನ್ನ ವೃತ್ತಿ ಬೇರೆಯಾಗಿತ್ತು. ಇಂದು ಸಿನಿಮಾಕ್ಕೆ ಹಣ ಹಾಕಿದವರೇ ನಾಯಕ/ನಾಯಕಿಯಾಗಿ ನಟಿಸುವ ಪರಂಪರೆ ಬೆಳೆಯುತ್ತಿದೆ.



ಡಾ. ವಾಮನ ನಂದಾವರ

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ನಂದಾವರದಲ್ಲಿ ಜನಿಸಿದ ಡಾ. ವಾಮನ ನಂದಾವರ ಅವರು ತುಳು ಭಾಷೆಯ ಜಾನಪದ ಸಂಶೋಧಕರಲ್ಲಿ ಪ್ರಮುಖರು. ಸೃಜನಶೀಲ ಬರವಣಿಗೆಯಲ್ಲಿ ತೊಡಗಿಸಿಕೊಂಡ ಇವರ ಹಲವಾರು ಬರಹಗಳು ಈಗಾಗಲೇ ಪತ್ರಿಕೆಗಳಲ್ಲಿ, ಕೃತಿಗಳಲ್ಲಿ ಬೆಳಕು ಕಂಡಿವೆ. ತುಳು ಭಾಷೆಯಲ್ಲಿ ತುಳು ಒಗಟುಗಳ ಸಂಕಲನ 'ಓಲೆ ಪಟಾಕಿ', ತುಳು ಜಾನಪದ ಅಧ್ಯಯನ ಪ್ರಬಂಧ 'ಸಿಂಗದನ', ತುಳು ಜಾನಪದ ಪ್ರಬಂಧಗಳಾದ 'ತುಳುವೆರೆ ಕುಸಾಲ್ ಕುಸೆಲ್' ಹಾಗೂ ಮಕ್ಕಳ ಕತೆ, 'ಕೋಟಿ ಚೆನ್ನಯ' ಮುಂತಾದ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಅದಲ್ಲದೆ ಇಂದು ಕೂಡ ತುಳು ಪಠ್ಯಪುಸ್ತಕ ಸಮಿತಿ, ತುಳು ಜಾನಪದ ಪತ್ರಿಕೆ, ತುಳು ನಿಘಂಟು ಯೋಜನೆ ಮತ್ತು ಇನ್ನಿತರ ತುಳು ಸಂಘಸಂಸ್ಥೆಗಳಲ್ಲಿ ಸಕ್ರಿಯವಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ತುಳುನಾಡಿನ ವೀರಪುರುಷರಾದ 'ಕೋಟಿ ಚೆನ್ನಯ'ರ ಕುರಿತಾಗಿ ಎರಡನೇ ಬಾರಿಗೆ ನಿರ್ಮಿಸಿದ ತುಳು ಸಿನಿಮಾಕ್ಕೆ ಸಾಹಿತ್ಯ, ಸಂಭಾಷಣೆ ಬರೆದ ಇವರು ತುಳುವಿನಲ್ಲಿ ಬಿಡುಗಡೆಗೊಂಡಂತಹ ಹೆಚ್ಚಿನ ಧ್ವನಿಸುರುಳಿಗೆ ಗೀತರಚನೆ ಮಾಡಿದ್ದಾರೆ. ಇಂದಿನ ತುಳು ಸಿನಿಮಾದ ಸಾಹಿತ್ಯ-ಸಂಭಾಷಣೆಯ ಬಗ್ಗೆ ಇವರ ಮಾತುಗಳು ಹೀಗಿವೆ :

ಸಂಭಾಷಣೆ ಬರೆಯುವಾಗ ಸಾಮಾನ್ಯವಾಗಿ ನೀವು ಯಾವ ಪ್ರಾದೇಶಿಕ ತುಳುವನ್ನು ಆಯ್ಕೆ ಮಾಡುತ್ತೀರಿ?

ತುಳು ಭಾಷೆಯ ಬಳಕೆಯಲ್ಲಿ ಪ್ರಾದೇಶಿಕವಾಗಿ ಸ್ವಲ್ಪ ಪ್ರಮಾಣದ ವ್ಯತ್ಯಾಸಗಳಿರಬಹುದು. ಆದರೆ ಅದು ಎಲ್ಲರಿಗೂ ಅರ್ಥವಾಗುವಂತಿದೆ. ನಾನು ಸಿನಿಮಾಕ್ಕೆ ಬರೆದ ಸಂಭಾಷಣೆ ಅಥವಾ ಗೀತಸಾಹಿತ್ಯದಲ್ಲಿ ಬಂಟ್ವಾಳದ ಕಡೆ ಬಳಸುವ ತುಳುವನ್ನು ಬಳಸಿದ್ದೇನೆ. ಏಕೆಂದರೆ ನನ್ನ ತಾಯಿ ನಂದಾವರದವರು. ತಂದೆಯವರು ಬಂಟ್ವಾಳ ತಾಲೂಕಿನ ಬಾಳೆಪುಣಿಯವರು. ಹಾಗಾಗಿ ನನ್ನ ಬರವಣಿಗೆಯ ಶೈಲಿಯಲ್ಲಿ ಬಂಟ್ವಾಳದ ಪ್ರಾದೇಶಿಕ ತುಳುವಿದೆ.

ನೀವು ತುಳುವಿನ ಯಾವ ಚಿತ್ರಕ್ಕೆ ಸಂಭಾಷಣೆ, ಗೀತಸಾಹಿತ್ಯ ಬರೆದಿದ್ದೀರಿ?

ನಾನು ಸಂಭಾಷಣೆ ಹಾಗೂ ಗೀತಸಾಹಿತ್ಯ ಬರೆದಿರುವುದು 2006ರಲ್ಲಿ ಬಿಡುಗಡೆಯಾದಂತಹ 'ಕೋಟಿ ಚೆನ್ನಯ' ಸಿನಿಮಾಕ್ಕೆ ಮಾತ್ರ.

'ಕೋಟಿ ಚೆನ್ನಯ' ಸಿನಿಮಾದ ನಂತರ ಬೇರೆ ಯಾವುದೇ ಐತಿಹಾಸಿಕ ಚಿತ್ರ ತುಳುವಿನಲ್ಲಿ ನಿರ್ಮಾಣ ಆಗಲಿಲ್ಲ ಏಕೆ?

ನಮ್ಮ ಜನರು ಸಿನಿಮಾವೆಂದರೆ 'ಪ್ರೀತಿ-ಪ್ರೇಮ-ಹೊಡೆದಾಟ' ಎಂದಷ್ಟೇ ತಿಳಿದುಕೊಂಡಿದ್ದಾರೆ. ಹಾಗಾಗಿ ಐತಿಹಾಸಿಕ ಸಿನಿಮಾಕ್ಕೆ ಕೈ ಹಾಕಲು ನಿರ್ಮಾಪಕರು ಧೈರ್ಯ ಮಾಡುತ್ತಿಲ್ಲ. ಮಾಡುವುದಿದ್ದರೂ 'ಕಾಂತಬಾರೆ-ಬುದಬಾರೆ' 'ರಾಣಿ ಅಬ್ಬಕ್ಕ'ನ ಬಗ್ಗೆಯೂ ಮಾಡಬಹುದು.

'ರಾಣಿ ಅಬ್ಬಕ್ಕ'ನ ಕುರಿತು ಜಯಾಮಾಲ ಅವರು ಸಿನಿಮಾ ಮಾಡುತ್ತೇನೆ ಎಂದು ಹೇಳಿಕೆ ನೀಡಿದರು. ಆದರೆ ಆ ಸಿನಿಮಾ ಇಲ್ಲಿಯವರೆಗೆ ನಿರ್ಮಾಣ ಆಗಿಲ್ಲವೇಕೆ?

ಐತಿಹಾಸಿಕ ಅಥವಾ ಚಾರಿತ್ರಿಕ ಸಿನಿಮಾಗಳನ್ನು ನಿರ್ಮಿಸುವುದು ಒಂದು ಸವಾಲಿನ ಕೆಲಸ. ಅಂತಹ ಸಿನಿಮಾದ ಯೋಜನೆಯ ಕನಸನ್ನು ಕಂಡದ್ದು ಸಂತಸದ ವಿಚಾರ. ಯಾವುದೋ ಕಾರಣದಿಂದ ಅದು ಸ್ಥಗಿತಗೊಂಡಿರಬಹುದು. ಆದರೆ ಬೇರೆ ಯಾರೂ ಕೂಡಾ ಈ ಚಿತ್ರ ನಿರ್ಮಾಣಕ್ಕೆ ಮುಂದಾಗದಿರುವುದು ದುರಂತ.

ನಾವು ಮಾತನಾಡುವ ತುಳು ಭಾಷೆಗೂ ಮತ್ತು ಸಿನಿಮಾದ ತುಳು ಭಾಷೆಗೂ ಸ್ವಲ್ಪಮಟ್ಟಿನ ವ್ಯತ್ಯಾಸವಿದೆ. ಇದು ಭಾಷೆಗೆ ಮಾರಕವೇ?

ಮಾರಕವೆಂದು ಹೇಳಲು ಸಾಧ್ಯವಿಲ್ಲ. ಆದರೆ ಸಿನಿಮಾದಲ್ಲಿ ಭಾಷೆಗೆ ಒತ್ತು ಕೊಡಬೇಕು. ಉದಾ: ಉಡುಪಿ ತುಳುವಿನಲ್ಲಿ ಕನ್ನಡದ ಪ್ರಭಾವ ಬಹಳವಿದೆ. ಹಾಗೆಯೇ ಪುತ್ತೂರು, ಕಾಸರಗೋಡು ತುಳುವಿನಲ್ಲಿ ಮಲಯಾಳಂನ ಪ್ರಭಾವ ಕಾಣುತ್ತೇವೆ. ಗ್ರಂಥಸ್ಥವಾದ ತುಳುವನ್ನು ಸಿನಿಮಾದಲ್ಲಿ ಬಳಕೆ ಮಾಡುವುದು ಅಸಾಧ್ಯ. ಆದರೂ ಸಂಭಾಷಣೆಯಲ್ಲಿ ಸರಳವಾದ ತುಳು ಭಾಷೆಯನ್ನು ಬಳಸಿಕೊಂಡರೆ ಒಳ್ಳೆಯದು.

ಒಂದು ಸಿನಿಮಾದ ಗೀತರಚನೆಯ ಸಂದರ್ಭದಲ್ಲಿ ನೀವು ಅನುಸರಿಸುವ ಮಾರ್ಗವೇನು?

ಗೀತರಚನೆಕಾರನು ಒಂದು ಸಿನಿಮಾದ ಪೂರ್ಣ ಕಥಾವಸ್ತುವನ್ನು ತಿಳಿದುಕೊಳ್ಳಬೇಕು. ಅದು ಅವನ ಜವಾಬ್ದಾರಿಯೂ ಕೂಡಾ ಹೌದು. ಈ ನಿಯಮವನ್ನು ನಾನೂ ಅನುಸರಿಸುತ್ತಿದ್ದೆ. ಆದರೆ ಇತ್ತೀಚೆಗೆ ಗೀತರಚನಾಕಾರನು ಕೇವಲ ಸಂದರ್ಭವನ್ನು ತಿಳಿದುಕೊಂಡು ಅವಸರದಲ್ಲಿ ಸಾಹಿತ್ಯ ಬರೆಯುತ್ತಾನೆ. ಹಾಗಾಗಿ ಕೆಲವೊಮ್ಮೆ ಹಾಡುಗಳು ಜನರನ್ನು ತಲುಪುವಲ್ಲಿ ಸೋಲುತ್ತವೆ.

ಒಂದು ಸಿನಿಮಾದ ಹಾಡಿಗೆ ಸಾಹಿತ್ಯ ರಚನೆ ಮಾಡುವಾಗ ಮೊದಲೇ ನೀವು ಸಾಹಿತ್ಯ ಬರೆಯುತ್ತೀರ? ಅಥವಾ ರಾಗ ಸಂಯೋಜನೆಗೆ ಅನುಗುಣವಾಗಿ ಸಾಹಿತ್ಯ ರಚನೆ ಮಾಡುತ್ತೀರ?

'ಕೋಟಿ ಚೆನ್ನಯ' ಸಿನಿಮಾದ ಹಾಡಿಗೆ ಸಾಹಿತ್ಯ ಬರೆಯಲು ವಿ. ಮನೋಹರ್ ಮೊದಲು ರಾಗ ಸಂಯೋಜನೆ ಕೊಟ್ಟರು. ಅದಕ್ಕೆ ಅನುಗುಣವಾಗಿ ನಾನು 'ಓ ಬಾಲೆ ಕೇದಗೆ' ಗೀತೆ ಬರೆದೆನು. ಕೆಲವೊಮ್ಮೆ ರಾಗ ಸಂಯೋಜನೆಯ ಅನುಗುಣವಾಗಿ ಸಾಹಿತ್ಯ ರಚಿಸಬೇಕಾಗುತ್ತದೆ.

ನಿಮಗೆ ಬಹಳ ಇಷ್ಟವಾದ ತುಳು ಸಿನಿಮಾ ಹಾಡಿನ ಸಾಹಿತ್ಯ ಯಾವುದು?

ವಿಶುಕುಮಾರ್ ಅವರ 'ಕೋಟಿ ಚೆನ್ನಯ' ಸಿನಿಮಾಕ್ಕೆ ಡಾ. ಬಿ.ಎ. ವಿವೇಕ ರೈ ಅವರು ಬರೆದ 'ಎಕ್ಕಸಕ್ಕ ಎಕ್ಕಸಕ್ಕ' ಹಾಡಿನ ಸಾಹಿತ್ಯ ನನಗೆ ತುಂಬಾ ಇಷ್ಟವಾದುದು.

ಇತ್ತೀಚಿನ ದಿನಗಳಲ್ಲಿ ಗೀತರಚನೆ, ಸಂಭಾಷಣೆಯಲ್ಲಿ ಹಲವಾರು ಹೊಸ ಪ್ರತಿಭೆಗಳು ಬೆಳಕಿಗೆ ಬರುತ್ತಿದ್ದಾರೆ. ಅವರಿಗೆ ನಿಮ್ಮ ಸಲಹೆ ಏನು?

ಅವಕಾಶ ಸಿಕ್ಕಿದ ತಕ್ಷಣಕ್ಕೆ ಚಿತ್ರಕ್ಕೆ ಗೀತರಚನೆ ಮಾಡುವುದು, ಸಂಭಾಷಣೆ ಬರೆಯುವುದು ಒಳ್ಳೆಯದು ಅಲ್ಲ. ಮೊದಲು ಚಿತ್ರದ ವಸ್ತುವಿಷಯದ ಕುರಿತಾಗಿ ಪೂರ್ಣವಾಗಿ ತಿಳಿದುಕೊಳ್ಳಬೇಕು. ಅದಲ್ಲದೆ ಸಾಹಿತ್ಯದ ಓದಿನ ಜ್ಞಾನವನ್ನು, ಅನುಭವವನ್ನು ಮೈಗೂಡಿಸಿಕೊಳ್ಳಬೇಕು. ಅವಸರದ ಸಾಹಿತ್ಯ ಸಿನಿಮಾಕ್ಕೆ ಸೂಕ್ತ ಅಲ್ಲ.

ಟಿ.ಎ. ಶ್ರೀನಿವಾಸ್

ತುಳುವಿನ ಮೊದಲ ಚಿತ್ರ ನಾವೆಲ್ಲ ತಿಳಿದಂತೆ 1971ರಲ್ಲಿ ಬಿಡುಗಡೆಗೊಂಡಂತಹ 'ಎನ್ನ ತಂಗಡಿ'. ಇದರ ನಿರ್ಮಾಣ ಮತ್ತು ಹಂಚಿಕೆ ಮಾಡಿದವರು ಟಿ.ಎ. ಶ್ರೀನಿವಾಸ್ ಅವರು. 1970ರಲ್ಲಿ 'ಚಿತ್ರ ಭಾರತಿ' ಸಂಸ್ಥೆಯನ್ನು ಸ್ಥಾಪಿಸಿ ಅದರ ಮೂಲಕ ತುಳುವಿನಲ್ಲಿ ಹೆಚ್ಚು ಚಿತ್ರಗಳನ್ನು ಹಂಚಿಕೆ ಮಾಡಿದ್ದು ಮಾತ್ರವಲ್ಲ, 'ಭಾಗ್ಯವಂತೆದಿ' (1981) ಮತ್ತು 'ಬದ್‌ಕ್‌ದ ಬಿಲೆ' (1994) ಎಂಬ ಎರಡು ಚಿತ್ರಗಳನ್ನು ನಿರ್ಮಾಣ ಮಾಡಿದ್ದಾರೆ. 'ಭಾಗ್ಯವಂತೆದಿ' ಸಿನಿಮಾಕ್ಕೆ ಕರ್ನಾಟಕ ರಾಜ್ಯ ಸರಕಾರದ ಉತ್ತಮ ತುಳುಚಿತ್ರ ಪ್ರಶಸ್ತಿಯೂ ಲಭಿಸಿದೆ. ತುಳುಚಿತ್ರಕ್ಕೆ ಭದ್ರವಾದ ಬುನಾದಿಯನ್ನು ಹಾಕಿಕೊಡುವಲ್ಲಿ ಶ್ರಮಿಸಿದ ಟಿ.ಎ. ಶ್ರೀನಿವಾಸ್ ಅವರು ತುಳು ಚಿತ್ರಗಳಿಗೆ ಇರುವ ಸೀಮಿತ ಮಾರುಕಟ್ಟೆಯಿಂದಾಗಿ ಅಪಾರ ನಷ್ಟಗಳನ್ನು ಅನುಭವಿಸಬೇಕಾಯಿತು. ಆದರೂ ಹಲವು ತುಳು ಚಿತ್ರಗಳಿಗೆ ಆರ್ಥಿಕ ಸಹಾಯ ನೀಡಿರುವುದು ಹೆಗ್ಗಳಿಕೆಯ ವಿಚಾರ.

ಎನ್ನ ತಂಗಡಿ, ಪಗೆತ ಪುಗೆ, ಬಿಸತ್ತಿ ಬಾಬು, ಏರ್ ಮಲ್ತಿನ ತಪ್ಪು, ಬಯ್ಯಮಲ್ಲಿಗೆ, ಯಾನ್ ಸನ್ಯಾಸಿ ಆಪೆ, ಕಾಸ್‌ದಾಯೆ ಕಂಡನೆ, ಸಾವಿರಡೊರ್ತಿ ಸಾವಿತ್ರಿ, ಭಾಗ್ಯವಂತೆದಿ ಮತ್ತು ಬದ್‌ಕ್‌ದ ಬಿಲೆ ಮುಂತಾದ ಪ್ರಮುಖ ಚಿತ್ರಗಳ ಹಂಚಿಕೆದಾರರಾಗಿದ್ದರು. ಅಲ್ಲದೆ ದಾರೆದ ಬುಡೆದಿ, ತುಳುನಾಡ ಸಿರಿ, ಉಡಲ್ದ ತುಡರ್, ರಾತ್ರೆ ಪಗೆಲ್, ನ್ಯಾಯೊಗಾದ್ ಜಿಂದಾಬಾದ್, ತುಡರ್ ಈ ಚಿತ್ರಗಳ ನಿರ್ಮಾಪಕರುಗಳಿಗೆ ಸಹಾಯಹಸ್ತ ಚಾಚಿದ್ದರು. ಕಳೆದ ನಾಲ್ಕು ದಶಕಗಳಿಂದ ಸಿನಿಮಾ ರಂಗದ ಚಿತ್ರ ನಿರ್ಮಾಣ, ಚಿತ್ರ ಹಂಚಿಕೆ ಹಾಗೂ ಚಿತ್ರ ಪ್ರದರ್ಶನ ಈ ಮೂರು ವಿಭಾಗಗಳಲ್ಲಿ ಇವರು ಸೇವೆ ಸಲ್ಲಿಸುತ್ತಿದ್ದಾರೆ. ಜೊತೆಗೆ ಪ್ರಸ್ತುತ 'ತುಳುಚಿತ್ರ ನಿರ್ಮಾಪಕರ ಸಂಘ'ದ ಅಧ್ಯಕ್ಷರಾಗಿರುವ ಇವರಿಗೆ ಹಲವಾರು ಪ್ರಶಸ್ತಿ, ಗೌರವ ಪುರಸ್ಕಾರ ಸಂದಿವೆ. ತುಳು ಸಿನಿಮಾದ ಬಗ್ಗೆ ಏಳು-ಬೀಳುಗಳನ್ನು ಕಂಡಂತಹ ಇವರ ಅನುಭವದ ವಿಚಾರಗಳು ಹೀಗಿವೆ:

1971ರಿಂದ 2000ದವರೆಗೆ ಬೆರಳೆಣಿಕೆಯ ತುಳು ಸಿನಿಮಾಗಳು ಬಂದಿವೆ. ಆದರೆ ಅವುಗಳ ದಾಖಲೀಕರಣ ಸಮರ್ಪಕವಾಗಿಲ್ಲ ಏಕೆ?

ಅಂದಿನ ಕಾಲದಲ್ಲಿ ಸಿನಿಮಾಕ್ಕೆ ಅಂತಹ ಮಹತ್ವ ಇರಲಿಲ್ಲ. ಚಿತ್ರ ನಿರ್ಮಾಣ ಮಾಡಿದವರು ಚಿತ್ರರಂಗಕ್ಕೆ ಬೆನ್ನು ಹಾಕುವ ಸಂದರ್ಭವಿತ್ತು. ಅದಲ್ಲದೆ ನಿರ್ಮಾಣವಾದ ಸಿನಿಮಾಗಳನ್ನು ದಾಖಲಿಸಿ ಸಂರಕ್ಷಿಸುವ ವ್ಯವಸ್ಥೆ ಕೂಡಾ ಇರಲಿಲ್ಲ. ಸಮರ್ಪಕವಾದ ತಂತ್ರಜ್ಞಾನದ ಸೌಕರ್ಯಗಳಿಲ್ಲದ ಕಾರಣ ದಾಖಲಿಸಿದರೂ ಹೆಚ್ಚು ಸಮಯ ಉಳಿಯುತ್ತಿರಲಿಲ್ಲ. ಕೆ.ಎನ್. ಟೇಲರ್ ಅವರ ಚಿತ್ರದ ಒಂದು ಪ್ರತಿಯೂ ನಮ್ಮಲ್ಲಿಲ್ಲ ಅನ್ನುವುದೇ ದುರಂತ.

1971ರಲ್ಲಿ 'ಎನ್ನ ತಂಗಡಿ' ಹಾಗೂ 1972ರಲ್ಲಿ 'ದಾರೆದ ಬುಡೆದಿ' ಸಿನಿಮಾ ತಯಾರಾಗಿ ಬಿಡುಗಡೆಯ ಸಂದರ್ಭದಲ್ಲಿ ಗೊಂದಲ ಉಂಟಾಗಿದ್ದು ನಿಜವೇ?

ಚಿತ್ರರಂಗದಲ್ಲಿ ನಾವು ಈಗ ಕಾಣುತ್ತಿರುವ ಸ್ಪರ್ಧೆ ಹಿಂದೆ ಇರಲಿಲ್ಲ. ತುಳು ಭಾಷೆಯ ಮೊದಲ ಸಿನಿಮಾ ನಮ್ಮದಾಗಬೇಕು ಎಂಬ ಮಹಾದಾಸೆಯಿಂದ 'ಎನ್ನ ತಂಗಡಿ' ಮತ್ತು 'ದಾರೆದ ಬುಡೆದಿ' ಸಿನಿಮಾದ ವಿಚಾರದಲ್ಲಿ ಒಂದಿಷ್ಟು ಗೊಂದಲಗಳು ಸೃಷ್ಟಿಯಾಗಿತ್ತು.

ಕೆಲವೊಂದು ಸಂದರ್ಭಗಳಲ್ಲಿ ಎರಡು-ಮೂರು ತುಳು ಚಿತ್ರಗಳು ಏಕಕಾಲದಲ್ಲಿ ಬಿಡುಗಡೆಯಾಗುವುದರಿಂದ ಚಿತ್ರರಂಗಕ್ಕೆ ತೊಡಕಾಗುವುದಿಲ್ಲವೇ?

ಚಿತ್ರರಂಗದಲ್ಲಿ ಒಂದು ರೀತಿಯ ಆರೋಗ್ಯಕರ ಸ್ಪರ್ಧೆ ಇರಬೇಕು. ಆದರೆ ಇವತ್ತು ನಮ್ಮ ನಿರ್ಮಾಪಕರಲ್ಲಿ ಹೊಂದಾಣಿಕೆಯ ಕೊರತೆ ಇದೆ. ಎಲ್ಲರೂ ಹಣ ಹಾಕಿ ಆ ಹಣವನ್ನು ಬೇಗ ತೆಗೆಯುವ ಅವಸರದಲ್ಲಿದ್ದಾರೆ. ಚಿತ್ರವನ್ನು ಎಲ್ಲರೂ ನೋಡುವಂತಿರಬೇಕಾದರೆ ಒಂದು ಚಿತ್ರ ಬಿಡುಗಡೆಯಾಗಿ ಕನಿಷ್ಠ ನಾಲ್ಕು ವಾರಗಳ ನಂತರ ಇನ್ನೊಂದು ಚಿತ್ರ ಬಿಡುಗಡೆಯಾಬೇಕು.

ತುಳುನಾಡು ತುಳುಭಾಷಿಕರ ಊರಾದರೂ ಇಲ್ಲಿ ಹಲವಾರು ಭಾಷಿಕರು ಇದ್ದ ಕಾರಣ ಅನ್ಯಭಾಷಾ ಚಿತ್ರಗಳು ಬಿಡುಗಡೆಯಾಗುವ ಸಂದರ್ಭದಲ್ಲಿ ತುಳುಚಿತ್ರಕ್ಕೆ ಚಿತ್ರಮಂದಿರದ ಸಮಸ್ಯೆ ಎದುರಾಗುವುದಿಲ್ಲವೇ?

ಅನ್ಯಭಾಷೆಯ ಚಿತ್ರದಿಂದ ತುಳುಚಿತ್ರಕ್ಕೆ ಸಮಸ್ಯೆಯಾಗಿದೆ. ಒಂದನೆಯದಾಗಿ ಇಲ್ಲಿರುವ ಸೀಮಿತ ಚಿತ್ರಮಂದಿರಗಳನ್ನು ಮಾತ್ರ ತುಳು ಸಿನಿಮಾಗಳು ಅವಲಂಬಿಸುವ ಅನಿವಾರ್ಯತೆ ಇತ್ತು. ಎರಡನೆಯದಾಗಿ ತುಳು ಭಾಷೆಯ ಚಿತ್ರ ಬಿಡುಗಡೆಯ ಸಂದರ್ಭದಲ್ಲಿ ಬೇರೆ ಭಾಷೆಯ ಚಿತ್ರಗಳು ಬಿಡುಗಡೆಯಾದಗೆ ಪ್ರೇಕ್ಷಕರು ಹಂಚಿ ಹೋಗುವ ಅಪಾಯವೂ ಇತ್ತು. ಈ ನೆಲೆಯಲ್ಲಿ ತುಳುಚಿತ್ರಕ್ಕೆ ಅನ್ಯಭಾಷಾ ಚಿತ್ರದಿಂದ ಸಮಸ್ಯೆಯಾಗಿದೆ ಎಂಬುವುದನ್ನು ಒಪ್ಪಬೇಕಾಗುತ್ತದೆ.

ಚಿತ್ರ ಬಿಡುಗಡೆಯಲ್ಲಿ ಸ್ಪರ್ಧೆ ತೋರುವವರು ಚಿತ್ರದ ಗುಣಮಟ್ಟದಲ್ಲಿ ತೋರಿದರೆ ಒಳ್ಳೆಯದಲ್ಲವೇ?

ಖಂಡಿತ ಒಳ್ಳೆಯದು. ಆದರೆ ಎಲ್ಲರಿಗೂ ಅವರವರ ಪ್ರತಿಷ್ಠೆ ಮುಖ್ಯ. 'ನಮಗಾಗಿ ಚಿತ್ರೋದ್ಯಮ ಅಲ್ಲ, ಚಿತ್ರೋದ್ಯಮಕ್ಕಾಗಿ ನಾವು' ಎಂಬುವುದನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು. ಕಡಿಮೆ ಅವಧಿಯಲ್ಲಿ ಒಂದು ಸಾಧಾರಣ ಸಿನಿಮಾ ಮಾಡುವುದರ ಬದಲು ಹೆಚ್ಚು ಸಮಯವನ್ನು ತೆಗೆದುಕೊಂಡು ಒಂದು ಒಳ್ಳೆಯ ಸಿನಿಮಾ ನೀಡುವತ್ತ ಗಮನವಹಿಸಬೇಕು.

ತುಳು ಚಿತ್ರರಂಗದಲ್ಲಿ ಎಲ್ಲವೂ ಸರಿಯಿಲ್ಲ ಅನ್ನುವ ಮಾತು ತುಳು ಚಿತ್ರರಂಗದ ಒಳಗೂ ಇದೆ, ಹೊರಗೂ ಇದೆ. ನಿಮ್ಮ ಪ್ರತಿಕ್ರಿಯೆ ಏನು?

ಜನಸಾಮಾನ್ಯರಲ್ಲಿ ಈ ರೀತಿಯ ಅಭಿಪ್ರಾಯ ಇರಬಹುದು. ಇಲ್ಲವೇ ಇಲ್ಲ ಎಂದು

ಕೂಡಾ ಹೇಳುವುದಿಲ್ಲ. ಆದರೆ ಚಿತ್ರೋದ್ಯಮಕ್ಕೆ ಹೊಡೆತ ಬೀಳುವಂತಹ ಯಾವ ಸ್ಥಿತಿಯೂ ತುಳು ಚಿತ್ರರಂಗದಲ್ಲಿ ಇಲ್ಲ. ಕಲಹ, ವೈಮನಸ್ಸುಗಳು ವಿಪರೀತಕ್ಕೆ ಹೋದಲ್ಲಿ ಮಾತ್ರ ಅದು ತುಳುಚಿತ್ರರಂಗದ ಬೆಳವಣಿಗೆಗೆ ಅಡ್ಡಿಯಾಗಲಿದೆ.

ನೀವೊಬ್ಬ ಸಂಸ್ಥೆಯ ಮಾಲಕರು, ನಿರ್ಮಾಪಕರು ಆಗಿದ್ದು ತುಳುವಿನಲ್ಲಿ ಪೌರಾಣಿಕ, ಐತಿಹಾಸಿಕ ಚಿತ್ರ ನಿರ್ಮಾಣಕ್ಕೆ ಏಕೆ ಮುಂದಾಗಿಲ್ಲ?

ತುಳುವಿನಲ್ಲಿ ಪೌರಾಣಿಕ, ಐತಿಹಾಸಿಕ ಚಿತ್ರ ನಿರ್ಮಾಣಕ್ಕೆ ದೊಡ್ಡ ಮಟ್ಟದ ಬಜೆಟ್ ಬೇಕಾಗುತ್ತದೆ. ಅಲ್ಲದೆ ನಾನು ಸಿನಿಮಾಗಳ ಹಂಚಿಕೆಗಾಗಿ ಒತ್ತು ಕೊಡುತ್ತಿದ್ದವನು. ಒಂದು ವೇಳೆ ಅಂತಹ ಚಿತ್ರವನ್ನು ನಿರ್ಮಾಣ ಮಾಡಲು ಯಾರಾದರೂ ಮುಂದೆ ಬಂದಿದ್ದಲ್ಲಿ ನಾನು ಖಂಡಿತವಾಗಿ ಸಹಕಾರ ಕೊಡುತ್ತಿದ್ದೆ.

ಪ್ರಸ್ತುತ ತುಳು ಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷರಾದ ನಿಮ್ಮ ಮುಂದಿನ ಯೋಚನೆ, ಯೋಜನೆಗಳೇನು?

ಚಿತ್ರ ಬಿಡುಗಡೆಗಾಗಿ ನಡೆಯುವ ಸ್ಪರ್ಧೆಯನ್ನು ಕಡಿಮೆ ಮಾಡುವುದು. ಒಂದು ತುಳು ಚಿತ್ರ ಬಿಡುಗಡೆಯಾದ ಇಂತಿಷ್ಟು ಕಾಲಾವಧಿಯ ನಂತರ ಇನ್ನೊಂದು ಚಿತ್ರಕ್ಕೆ ಬಿಡುಗಡೆಗೆ ಅವಕಾಶ ನೀಡುವುದು. ಹೊಸತಾಗಿ ಬಂದಂತಹ ಎಲ್ಲಾ ನಿರ್ಮಾಪಕ, ನಿರ್ದೇಶಕರುಗಳಿಗೆ ಮೊದಲಾಗಿ ತುಳು ಚಿತ್ರರಂಗದ ಬಗ್ಗೆ ಸಮರ್ಪಕ ಮಾಹಿತಿ ನೀಡಿ, ಗುಣಾತ್ಮಕ ಚಿತ್ರಗಳಿಗೆ ಹೆಚ್ಚು ಒತ್ತು ನೀಡುವುದು.

ಡಾ. ಸಂಜೀವ ದಂಡೆಕೇರಿ

ವೃತ್ತಿಯಲ್ಲಿ ಆಯುರ್ವೇದ ವೈದ್ಯರಾದ ಡಾ. ಸಂಜೀವ ದಂಡೆಕೇರಿ ಓರ್ವ ನಟ, ನಿರ್ದೇಶಕ ಹಾಗೂ ನಿರ್ಮಾಪಕರು. ತುಳು, ಕನ್ನಡದಲ್ಲಿ ಒಟ್ಟು 26 ನಾಟಕಗಳನ್ನು ರಚಿಸಿರುವ ಇವರ ಮೊದಲ ತುಳು ನಾಟಕ 'ಕಲ್ಪಂದಿ ತಿಮ್ಮೆ' (1962). ಸುಮಾರು 16ನೇ ವಯಸ್ಸಿನಲ್ಲಿ ಈ ನಾಟಕದ ರಚನೆ ಮಾಡಿದ ದಂಡೇಕೇರಿ ಅವರ ಪ್ರಕಟಿತ ತುಳು ನಾಟಕಗಳು ಬಯ್ಯಮಲ್ಲಿಗೆ, ಸರಸ್ವತಿ, ಬೊಳ್ಳಿ ಮೂಡುಂಡು, ಪಾದಕಾಣಿಕೆ, ರಾಧ–ಕೃಷ್ಣ ಮತ್ತು ಗಂಗಾರಾಮ್. 'ಬಯ್ಯಮಲ್ಲಿಗೆ' ನಾಟಕವು ಕಳೆದ 46 ವರ್ಷಗಳಿಂದ ದೇಶ ವಿದೇಶಗಳಲ್ಲಿ ಸುಮಾರು 28 ಸಾವಿರ ಪ್ರದರ್ಶನ ಕಂಡಿದೆ. ಅದಲ್ಲದೆ ಕನ್ನಡ, ಮರಾಠಿ, ಇಂಗ್ಲಿಷ್, ಕೊಂಕಣಿಗೆ ಭಾಷಾಂತರವಾಗಿದೆ.

ಶ್ರೀ ಜಯರಾಮ್ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ 1975ರಲ್ಲಿ ನಿರ್ಮಾಣವಾದ 'ಬಯ್ಯಮಲ್ಲಿಗೆ' ಮಂಗಳೂರು ನಗರದ 'ಜ್ಯೋತಿ' ಹಾಗೂ 'ರಾಮಕಾಂತಿ' ಚಿತ್ರಮಂದಿರದಲ್ಲಿ ಏಕಕಾಲಕ್ಕೆ ಬಿಡುಗಡೆಯಾಗಿತ್ತು. ಬಳಿಕ 1977ರಲ್ಲಿ 'ಬೊಳ್ಳಿದೋಟ' ಸಿನಿಮಾವನ್ನು ನಿರ್ಮಿಸಿದರು. ಇತ್ತೀಚೆಗೆ ನಡೆದ ತುಳು ಚಿತ್ರೋತ್ಸವದಲ್ಲಿ 'ಜೀವಮಾನ ಪ್ರಶಸ್ತಿ' ಪಡೆದ ಇವರಿಗೆ ಇನ್ನು ಹಲವಾರು ಗೌರವ, ಪುರಸ್ಕಾರ ಲಭಿಸಿವೆ. ತುಳು ಸಿನಿಮಾ ರಂಗದ ಬಗ್ಗೆ ದಂಡೆಕೇರಿ ಅವರ ಜೊತೆ ಮಾತನಾಡಿದಾಗ ಒಂದಿಷ್ಟು ವಿಚಾರಗಳನ್ನು ಹಂಚಿಕೊಂಡರು.

ತುಳು ಸಿನಿಮಾ ರಂಗದಿಂದ ವಿಶ್ವದಲ್ಲೆಡೆ ತುಳು ಭಾಷೆ ಪಸರಿಸಿದೆ ಎನ್ನುವ ಮಾತನ್ನು ಒಪ್ಪಬಹುದೆ?

ಕೇವಲ ತುಳು ಸಿನಿಮಾ ರಂಗದಿಂದಲೇ ವಿಶ್ವದೆಲ್ಲೆಡೆ ತುಳು ಭಾಷೆ ಪಸರಿಸಿದೆ ಎಂದು ಒಪ್ಪುವುದು ಕಷ್ಟ. ತುಳು ನಾಟಕ, ಯಕ್ಷಗಾನ, ಕುಣಿತ, ಪಾಡ್ದನ ಮುಂತಾದ ಪ್ರಕಾರಗಳು ಕೂಡಾ ಕಾರಣ. ಆದರೆ ಸಿನಿಮಾದ ಮೂಲಕ ಏಕಕಾಲಕ್ಕೆ ಸುಲಭವಾಗಿ ಒಂದು ಭಾಷೆ ಜನರನ್ನು ತಲುಪಬಹುದಷ್ಟೇ.

ದಂಡೆಕೇರಿ ಎಂದರೆ ಬಯ್ಯಮಲ್ಲಿಗೆ, ಬಯ್ಯಮಲ್ಲಿಗೆ ಎಂದರೆ ದಂಡೆಕೇರಿ ಎಂದು ಪ್ರಸಿದ್ಧರಾಗಿದ್ದೀರಿ. ಇದು ನಿಮ್ಮ ಬೇರೆ ನಾಟಕಗಳ, ಸಿನಿಮಾಗಳ ಮೇಲೆ ಪರಿಣಾಮ ಬೀರಿದೆಯೇ?

ಒಂದು ಒಳ್ಳೆಯ ಕೃತಿ, ನಾಟಕ ಅಥವಾ ಸಿನಿಮಾವೇ ಆಗಲಿ ಜನ ಅದನ್ನು ಸದಾ ಕಾಲ ಒಪ್ಪುತ್ತಾರೆ ಅನ್ನುವುದಕ್ಕೆ ನನ್ನ 'ಬಯ್ಯಮಲ್ಲಿಗೆ'ಯೇ ಸಾಕ್ಷಿ. ಆದರೆ ಇದರಿಂದ

ನನ್ನ ಇತರ ನಾಟಕಗಳಿಗೆ, ಸಿನಿಮಾಗಳಿಗೆ ಯಾವುದೇ ಪರಿಣಾಮ ಉಂಟಾಗಿಲ್ಲ. ಬದಲಾಗಿ ಜನರು ನನ್ನನ್ನು ಇನ್ನಷ್ಟು ಪ್ರೋತ್ಸಾಹಿಸಿದರು. ಅಲ್ಲದೆ 'ಬಯ್ಯಮಲ್ಲಿಗೆ'ಯಿಂದಾಗಿ ನನ್ನ ಕೃತಿ, ನಾಟಕ, ಸಿನಿಮಾಗಳಿಗೆ ಇನ್ನಷ್ಟು ಪ್ರಚಾರ, ಬೆಂಬಲ ದೊರೆಯಿತು.

'ಬಯ್ಯಮಲ್ಲಿಗೆ' ಕಥಾವಸ್ತು ಹುಟ್ಟಿಕೊಳ್ಳಲು ಕಾರಣವಾದ ಸಂದರ್ಭವನ್ನು ತಿಳಿಸಿ

'ಬಯ್ಯಮಲ್ಲಿಗೆ' ಕಥಾವಸ್ತು ಕಾಲ್ಪನಿಕವಲ್ಲ. ಇದು ಮಂಗಳೂರು ಪರಿಸರದ 'ಬಜಾಲ್' ಎಂಬಲ್ಲಿ ನಡೆದಂತಹ ನೈಜ ಘಟನೆ. ನನಗೆ ಈ ಕತೆಯನ್ನು ಒಬ್ಬರು ಶೆಟ್ಟಿಯವರು ಹೇಳಿದರು. ಅದನ್ನೇ ನನ್ನ ಚಿತ್ರಕ್ಕೆ ಬಳಸಿಕೊಂಡೆ.

ಸಂಖ್ಯೆಗಳ ದೃಷ್ಟಿಯಿಂದ ನೋಡಿದಾಗ ತುಳು ಸಿನಿಮಾ ರಂಗದ ವೇಗ ಇಂದು ಹೆಚ್ಚಾಗುತ್ತಿದೆ ಎಂದೆನಿಸುತ್ತದೆಯಲ್ಲವೇ?

1970–80ರ ಕಾಲದಲ್ಲಿ ಸಿನಿಮಾ ಮಾಡಲು ಬಹಳ ಕಷ್ಟವಿತ್ತು. ಬ್ಯಾಂಕಿನವರು ಸಾಲ ಕೊಡುತ್ತಿರಲಿಲ್ಲ. ಸಿನಿಮಾ ತೆಗೆಯಬೇಕೆಂಬ ಆಸಕ್ತಿ ಇದ್ದವನಲ್ಲಿ ಹಣ ಇರಲಿಲ್ಲ. ಹಣ ಇದ್ದವನಿಗೆ ಆಸಕ್ತಿ ಇರಲಿಲ್ಲ. ಹೀಗೆ ಆಗಲ್ಲ, ಹಣ ಇದ್ದವ ಸಿನಿಮಾ ತೆಗೆಯುತ್ತಾನೆ. ಅವನು ಹೆಸರಿಗಾಗಿ, ಪ್ರತಿಷ್ಠೆಗಾಗಿ ಅಥವಾ ಇನ್ಯಾವ ಕಾರಣಕ್ಕಾಗಿ ಸಿನಿಮಾ ಮಾಡುತ್ತಾನೆ ಎಂಬುವುದು ಗೊತ್ತಿಲ್ಲ. ಅಂತು ಸಿನಿಮಾಗಳು ಮಾತ್ರ ಬಿಡುಗಡೆಗಾಗಿ ಸಾಲಿನಲ್ಲಿ ನಿಂತಿವೆ. ಕೇವಲ ಸಂಖ್ಯೆಯನ್ನು ಪರಿಗಣಿಸಿದರೆ ಸಾಲದು ಚಿತ್ರಗಳ ಗುಣಮಟ್ಟದ ಕಡೆಗೂ ದೃಷ್ಟಿ ಹಾಯಿಸಿದರೆ ಒಳ್ಳೆಯದು.

ನಾಟಕಗಳು, ಸಿನಿಮಾಗಳು ಇವುಗಳಲ್ಲಿ ಪ್ರೇಕ್ಷಕನ ಮೇಲೆ ಹೆಚ್ಚು ಪರಿಣಾಮಕಾರಿ ಬೀರುವ ಮಾಧ್ಯಮ ಯಾವುದು?

ನನ್ನ ಪ್ರಕಾರ ನಾಟಕ ಪ್ರೇಕ್ಷಕನ ಮೇಲೆ ಹೆಚ್ಚು ಪರಿಣಾಮಕಾರಿ ಬೀರುವ ಮಾಧ್ಯಮ ಎನ್ನಬಹುದು. ಏಕೆಂದರೆ ಒಂದು ಸಿನಿಮಾ ಒಂದು ಕಾಲಘಟ್ಟದಲ್ಲಿ ಮಾತ್ರ ಪ್ರಚಾರದಲ್ಲಿ ಇರುತ್ತದೆ. ಆದರೆ ನಾಟಕ ಇದಕ್ಕೆ ತದ್ವಿರುದ್ಧ. ನಾಟಕಕ್ಕೆ ಇಂತಹ ಯಾವುದೇ ಕಾಲಮಿತಿ ಇರುವುದಿಲ್ಲ.

ತುಳು ಭಾಷೆ ಸಿನಿಮಾದ ಯಶಸ್ಸಿನಲ್ಲಿ ಅನ್ಯಭಾಷಿಕರ ಪಾತ್ರ ಇದೆಯೇ?

ಖಂಡಿತ ಇದೆ. ತುಳು ಸಿನಿಮಾ ಕೇವಲ ತುಳು ಭಾಷಿಕರು ಮಾತ್ರ ನೋಡುವುದಿಲ್ಲ. ಬ್ಯಾರಿ, ಕೊಂಕಣಿ, ಕನ್ನಡ ಭಾಷಿಕರು ಕೂಡಾ ನೋಡುತ್ತಾರೆ. ಏಕೆಂದರೆ ಇಲ್ಲಿರುವ ಹೆಚ್ಚಿನವರ ವ್ಯಾವಹಾರಿಕ ಭಾಷೆ ತುಳು ಆದ ಕಾರಣ ಎಲ್ಲರಿಗೂ ಅರ್ಥವಾಗುತ್ತದೆ.

ತುಳು ಸಿನಿಮಾಗಳಿಗೆ ಸರಕಾರದ ಪ್ರೋತ್ಸಾಹ ಹೇಗಿದೆ?

ಮೊದಲಿಗೆ ಅಂತಹ ಸಹಕಾರ ಸರಕಾರದಿಂದ ಸಿಗುತ್ತಿರಲಿಲ್ಲ. 1984ರಲ್ಲಿ 50,000 ರೂಪಾಯಿ ಸಹಾಯಧನ ನೀಡುತಿತ್ತು. ಅದಲ್ಲದೆ ಹಿಂದೆ ಎಲ್ಲ ಚಿತ್ರಗಳಿಗೆ ಪ್ರೋತ್ಸಾಹ ಧನ ಸಿಗುತಿತ್ತು. ಈಗ ಎಲ್ಲ ಚಿತ್ರಗಳಿಗೆ ಸಹಾಯಧನ ಸಿಗುತ್ತದೆಯೋ? ಇಲ್ಲವೋ? ಎಂಬುವುದು ಗೊತ್ತಿಲ್ಲ.

ಇತ್ತೀಚಿನ ತುಳು ಚಿತ್ರಗಳಿಗೆ ಕತೆ, ಸಂಭಾಷಣೆ, ಗೀತ ಸಾಹಿತ್ಯ ಬರೆಯುವ ಅವಕಾಶ ಸಿಕ್ಕಿದೆಯಾ?

ಸಿನಿಮಾ ರಂಗಕ್ಕೆ ನನ್ನಿಂದ ಆದಷ್ಟು ಸೇವೆಯನ್ನು ಸಲ್ಲಿಸಿದ್ದೇನೆ. ಇತ್ತೀಚೆಗೆ ನನ್ನದೇ ಆದ 'ಬಯ್ಯಮಲ್ಲಿಗೆ' ಟೆಲಿಫಿಲ್ಮ್‌ಗೆ ಸಾಹಿತ್ಯ ಸಂಭಾಷಣೆ ಬರೆದಿದ್ದೇನೆ. ಬೇರೆ ಅಂತಹ ಅವಕಾಶ ಸಿಗಲಿಲ್ಲ. ಸಾಧ್ಯವಾದಲ್ಲಿ ನಾನೇ ಒಂದು ಸಿನಿಮಾ ತಯಾರಿಸುವ ಪ್ರಯತ್ನದಲ್ಲಿದ್ದೇನೆ.

ನಿಮ್ಮ ಸಿನಿಮಾವನ್ನು ಬಿಟ್ಟು ನೀವು ಮೆಚ್ಚಿದಂತಹ ಅತ್ಯುತ್ತಮ ತುಳುಚಿತ್ರ ಯಾವುದು?

'ಬಂಗಾರ್ ಪಟ್ಲೇರ್', 'ಬಿಸತ್ತಿ ಬಾಬು' ಹಾಗೂ 'ಕೋಟಿ ಚೆನ್ನಯ' ನಾನು ಮೆಚ್ಚಿದ ಅತ್ಯುತ್ತಮ ತುಳು ಚಿತ್ರಗಳು. ಈ ಸಿನಿಮಾಗಳನ್ನು ನನಗೆ ಮಾತ್ರವಲ್ಲ ಒಮ್ಮೆ ನೋಡಿದವನಿಗೆ ಮತ್ತೆ ಮತ್ತೆ ನೋಡುವ ಎಂದು ಮನಸ್ಸಾಗುತ್ತದೆ.

ತುಳು ಸಿನಿಮಾ ಕ್ಷೇತ್ರದಲ್ಲಿ ಮರೆಯಲಾರದ ಅನುಭವ, ಘಟನೆ ಇದೆಯೇ?

ನನ್ನ 'ಬಯ್ಯಮಲ್ಲಿಗೆ' ಸಿನಿಮಾದಲ್ಲಿ ಆ ಕಾಲದಲ್ಲಿ ಪ್ರಸಿದ್ಧ ನಟಿಯಾದ ಪಂಡರಿಬಾಯಿ ಅವರಿಂದ ಪಾತ್ರ ಮಾಡಿಸಬೇಕೆಂಬ ಮಹಾದಾಸೆಯಿತ್ತು. ನಾನು ದೂರವಾಣಿಯಲ್ಲಿ ಅವರನ್ನು ಕೇಳಿಕೊಂಡಾಗ ಅವರು ಒಪ್ಪಿ "ಖಂಡಿತ ಮಾಡುತ್ತೇನೆ. ನೀವು ಯಾವ ಸಂಭಾವನೆಯನ್ನು ಕೊಡುವುದು ಬೇಡ. ನನಗೆ ರೈಲಿನ ವೆಚ್ಚವನ್ನು ಕೊಟ್ಟರೆ ಸಾಕು" ಎಂದು ಹೇಳಿದಾಗ ನನಗಾದ ಸಂತೋಷ ಹೇಳಲು ಅಸಾಧ್ಯ. ಇಂದಿಗೂ ಆ ಘಟನೆ ಅಚ್ಚಳಿಯದ ಹಾಗೆ ನನ್ನಲ್ಲಿದೆ.

ರಿಚರ್ಡ್ ಕ್ಯಾಸ್ಟಲಿನೊ

"ತುಂಬಾ ಒಳ್ಳೆಯ ಸಿನಿಮಾ ಮಾಡಿದ್ದೀರಿ. ನಿಮ್ಮಂಥವರು ಕನ್ನಡ ಚಿತ್ರರಂಗಕ್ಕೆ ಬರಬೇಕು, ಬನ್ನಿ" ಎಂದು ಕನ್ನಡದ ವರನಟ ರಾಜ್‌ಕುಮಾರ್ ಅವರಿಂದ ಪ್ರಶಂಸೆಗೆ ಒಳಗಾದ ರಿಚರ್ಡ್ ಕ್ಯಾಸ್ಟಲಿನೊ ನಮ್ಮ ತುಳುವರು ಎಂಬುವುದೇ ಅಭಿಮಾನದ ಸಂಗತಿ. ಮೇ 3, 1944ರಂದು ಬಂಟ್ವಾಳದಲ್ಲಿ ಜನಿಸಿದ ಇವರು ತುಳು, ಕೊಂಕಣಿ, ಕೊಡವ, ಕನ್ನಡ ಭಾಷೆಯಲ್ಲಿ ಚಿತ್ರ ನಿರ್ಮಾಣ ಮಾಡಿದವರು.

1976ರಲ್ಲಿ 'ಬೊಳ್ಳಿದೋಟ' ಚಿತ್ರದ ಮೂಲಕ ತುಳುಚಿತ್ರರಂಗನ್ನು ಪ್ರವೇಶಿಸಿದ ರಿಚರ್ಡ್ ಅವರು ತುಳುವಿನಲ್ಲಿ ನ್ಯಾಯೊಗಾದ್ ಎನ್ನ ಬದ್‌ಕ್, ಬಂಗಾರ್ ಪಟ್ಲೇರ್, ಸಪ್ಟೆಂಬರ್ 8, ಬದಿ ಚಿತ್ರಗಳನ್ನು ನಿರ್ಮಿಸಿದ್ದಾರೆ. ಇವರ 'ಬಂಗಾರ್ ಪಟ್ಲೇರ್' ಅತ್ಯುತ್ತಮ ಪ್ರಾದೇಶಿಕ ಪ್ರಶಸ್ತಿ ಪಡೆದಿರುವುದು ಮಾತ್ರವಲ್ಲ 105 ದಿನಗಳ ಕಾಲ ಯಶಸ್ವಿ ಪ್ರದರ್ಶನವನ್ನು ಕಂಡಿದೆ. ಒಂಭತ್ತು ಕ್ಯಾಮೆರಾ–ಒಂಭತ್ತು ಯೂನಿಟ್ ಬಳಸಿ ಕೇವಲ ಇಪ್ಪತ್ತನಾಲ್ಕು ತಾಸುಗಳಲ್ಲಿ ನಿರ್ಮಿಸಿದ 'ಸಪ್ಟೆಂಬರ್ 8' ಸಿನಿಮಾದಲ್ಲಿ ಕನ್ನಡ ಜ್ಞಾನಪೀಠ ಪುರಸ್ಕೃತ ಡಾ. ಶಿವರಾಮ ಕಾರಂತರು ಬಣ್ಣ ಹಚ್ಚಿದ್ದಾರೆ. ಹಾಗೆಯೇ 'ಬದಿ' ಚಿತ್ರಕ್ಕೂ ಕರ್ನಾಟಕ ರಾಜ್ಯ ಸರಕಾರದ ಅತ್ಯುತ್ತಮ ಪ್ರಾದೇಶಿಕ ಪ್ರಶಸ್ತಿ ದೊರೆತಿದೆ.

'ನಮ್ಮ ರಾಜ್ಯದಲ್ಲಿ ಪ್ರಾದೇಶಿಕ ಭಾಷಾ ಚಿತ್ರಗಳಿಗೆ ಸೂಕ್ತ ಮಾನ್ಯತೆ ದೊರೆಯುತ್ತಿಲ್ಲ' ಎಂಬ ನೋವನ್ನು ತೋಡಿಕೊಳ್ಳುವ ಜೊತೆಗೆ ಚಲನಚಿತ್ರ ಅಕಾಡೆಮಿ, ಸಬ್ಸಿಡಿ ಸಮಿತಿ, ಪ್ರಶಸ್ತಿ ಆಯ್ಕೆ ಸಮಿತಿ ಸೇರಿದಂತೆ ವಿವಿಧ ಸಮಿತಿಗಳಲ್ಲಿ ಪ್ರತಿ ಪ್ರಾದೇಶಿಕ ಭಾಷೆಯ ಪ್ರತಿನಿಧಿಗೆ ಸದಸ್ಯತ್ವ ನೀಡಬೇಕು ಎಂದು ಆಗ್ರಹಿಸುವ ರಿಚರ್ಡ್ ಅವರಲ್ಲಿ ತುಳು ಸಿನಿಮಾದ ಕುರಿತಾಗಿ ನಡೆಸಿದ ಒಂದಿಷ್ಟು ಮಾತುಗಳು.

ಕೊಂಕಣಿ ಮಾತೃಭಾಷಿಕರಾದರೂ ನೀವು ತುಳುವಿನಲ್ಲಿ ಚಿತ್ರ ನಿರ್ಮಾಣ ಮಾಡಲು ಸ್ಫೂರ್ತಿಯೇನು?

ನಮ್ಮ ಮಾತೃಭಾಷೆ ಬೇರೆ ಇರಬಹುದು ಆದರೆ ಪರಶುರಾಮ ಸೃಷ್ಟಿಯ ತುಳುನಾಡಿನಲ್ಲಿದ್ದ ಕಾರಣ ನಾವೆಲ್ಲರೂ ತುಳುವರು. ಅದಲ್ಲದೆ ನಮ್ಮೆಲ್ಲರ ವ್ಯಾವಹಾರಿಕ ಭಾಷೆ ತುಳು. ತುಳುಚಿತ್ರ ನಿರ್ಮಾಣ ಮಾಡಿದ್ದೇನೆ ಎಂದ ಮಾತ್ರಕ್ಕೆ ಇದನ್ನು ನಾನು ಸೇವೆ, ಅಭಿಮಾನ ಎನ್ನುವುದಿಲ್ಲ. ನನ್ನ ಕರ್ತವ್ಯ ಅಂದುಕೊಳ್ಳುತ್ತೇನೆ.

ನಿಮ್ಮ ಸಿನಿಮಾಗಳಲ್ಲಿ ಆಯಾ ಕಾಲದ ಸಾಮಾಜಿಕ ಸಮಸ್ಯೆಯನ್ನೇ ಬಿಂಬಿಸಲು ಕಾರಣವೇನು?

ತುಳು ಭಾಷಿಕರು ಎಲ್ಲ ಭಾಷೆಯ ಸಿನಿಮಾವನ್ನು ನೋಡಬಹುದು. ಆದರೆ ತುಳು ಭಾಷೆಯ ಸಿನಿಮಾವನ್ನು ತುಳು ಭಾಷಿಕರೇ ನೋಡಬೇಕು. ಹಾಗಾಗಿ ನನ್ನ ತುಳು ಸಿನಿಮಾಗಳಲ್ಲಿ ತುಳುನಾಡಿನ ಸಮಸ್ಯೆಯನ್ನು ಬಿಂಬಿಸಲು ಪ್ರಯತ್ನಿಸಿದೆ.

'ಬಂಗಾರ್ ಪಟ್ಲೇರ್' ಸಿನಿಮಾದಲ್ಲಿ 'ಬಾಬು-ಕರ್ಗಿ'ಯ ಅಂತರ್ಜಾತಿ ವಿವಾಹವನ್ನು ಮಾಡಿಸಬಹುದಿತ್ತಲ್ಲವೇ?

ಚಿತ್ರದಲ್ಲಿ 'ಬಾಬು-ಕರ್ಗಿ'ಯನ್ನು ಬದುಕಿಸಿ ಅಂತರ್ಜಾತಿ ವಿವಾಹ ಮಾಡಿಸುವುದು ಕೆಲವೊಂದು ಕಾರಣಗಳಿಂದ ಆ ಕಾಲಕ್ಕೆ ಅಸಾಧ್ಯವಾಗಿತ್ತು. ಜೊತೆಗೆ ಇದರ ಮೂಲ 'ಸತ್ಯ ಬತ್ತಲೆ' ನಾಟಕವನ್ನು ಆಧರಿಸಿದ್ದರಿಂದ ಸಿನಿಮಾದಲ್ಲಿ ತಿದ್ದುವಿಕೆಯು ಸರಿ ಕಾಣಲಿಲ್ಲ. ಆದರೆ ಚಿತ್ರವನ್ನು ಮತ್ತೆ ಮತ್ತೆ ಕಂಡಾಗ ನನ್ನಲ್ಲಿಯೂ ಅವರನ್ನು ಬದುಕಿಸಿ, ಮದುವೆ ಮಾಡಿಸಿದ್ದರೆ ಚೆನ್ನಾಗಿರುತಿತ್ತು ಎಂದೆನಿಸುತಿತ್ತು.

'ಸಪ್ಟೆಂಬರ್ 8' ಸಿನಿಮಾವು ತುಳು ಸಿನಿಮಾವಾದರೂ ಹೆಚ್ಚಿನ ನಟರೆಲ್ಲರೂ ಕನ್ನಡದವರು ಇರಲು ಕಾರಣ?

ನನಗೆ ಒಂದು ನಿರ್ದಿಷ್ಟ ಕಾಲದ ಮಿತಿಯಲ್ಲಿ ಈ ಸಿನಿಮಾವನ್ನು ಮಾಡಬೇಕೆಂಬ ಆಸೆಯಿತ್ತು. ಕೇವಲ 24 ಗಂಟೆಯ ಒಳಗೆ ಈ ಸಿನಿಮಾ ನಿರ್ಮಾಣ ಮಾಡಬೇಕಾದುದರಿಂದ ನುರಿತ ಕಲಾವಿದರನ್ನು ಅವಲಂಬಿಸಬೇಕಿತ್ತು. ಹಾಗಾಗಿ ಕನ್ನಡ ಚಿತ್ರರಂಗದ ನಟರನ್ನು ಬಳಸಿಕೊಂಡೆ. ಈ ಸಿನಿಮಾಕ್ಕಾಗಿ ಆಗಿನ ಕಾಲದಲ್ಲಿಯೇ ಒಂಭತ್ತು ಕ್ಯಾಮೆರ ಬಳಸಿದ್ದೇನೆ.

ಇತ್ತೀಚಿನ ದಿನಗಳಲ್ಲಿ ತುಳು ಸಿನಿಮಾ ರಂಗ ಯಶಸ್ಸಿನ ಹಾದಿಯಲ್ಲಿ ಸಾಗುತ್ತಿರುವಾಗ ನೀವು ಅಥವಾ ನಿಮ್ಮ ಸಮಕಾಲೀನರು ಚಿತ್ರ ನಿರ್ಮಾಣಕ್ಕೆ ಮುಂದಾಗುತ್ತಿಲ್ಲ ಏಕೆ?

ಚಿತ್ರ ಮಾಡುವ ಹುಮ್ಮಸ್ಸು ನನ್ನಲ್ಲೂ ಈಗಲೂ ಇದೆ. ಆದರೆ ಅನಾರೋಗ್ಯದ ದೃಷ್ಟಿಯಿಂದ ಸುಮ್ಮನಿದ್ದೇನೆ. ಈಗ ಒಂದು ಸಿನಿಮಾ ಮಾಡಿ ಮತ್ತೊಂದು ಸಿನಿಮಾ ಮಾಡುವವರು ಬಹಳ ಕಡಿಮೆ. ಯಾರಾದರೂ ಹೊಸಬರು ಸಿನಿಮಾ ಮಾಡುವವರಿದ್ದರೆ ಪ್ರೋತ್ಸಾಹವನ್ನು ಖಂಡಿತ ನೀಡುತ್ತೇನೆ.

ಒಂದು ಸಿನಿಮಾ ನಿರ್ಮಾಣದಲ್ಲಿ ಅತಿ ಹೆಚ್ಚಿನ ವೆಚ್ಚವಾಗುವ ಕ್ಷೇತ್ರ ಯಾವುದು?

ಈಗ ಯಾವ ಕ್ಷೇತ್ರಕ್ಕೆ ಹೆಚ್ಚು ಖರ್ಚಾಗುತ್ತದೆ ಎಂದು ಹೇಳಲು ನನಗೆ ಕಷ್ಟ. ಆದರೆ ನಾನು ಸಿನಿಮಾ ಮಾಡುವ ಕಾಲದಲ್ಲಿ ಊಟ, ವಸತಿಗೆಯೇ ದೊಡ್ಡ ಖರ್ಚಾಗುತಿತ್ತು. ಅದಲ್ಲದೆ ಒಂದು ಚಿತ್ರದ ತಾಂತ್ರಿಕ ಕಾರ್ಯಗಳಿಗಾಗಿ ಮದ್ರಾಸ್, ಮುಂಬಯಿ, ಬೆಂಗಳೂರನ್ನು ಅವಲಂಬಿಸಬೇಕಿತ್ತು. ಕೆಲವೊಮ್ಮೆ ಸಿನಿಮಾದ ತಾಂತ್ರಿಕತೆಯ ಕಾರ್ಯಗಳಿಗೆ ಕೂಡ ಹೆಚ್ಚು ಖರ್ಚಾಗುತಿತ್ತು.

ಇಂದು 40–50 ಲಕ್ಷ ಬಜೆಟ್‌ನಲ್ಲಿ ಸಿನಿಮಾ ನಿರ್ಮಾಣವಾದರೂ ಗುಣಮಟ್ಟದ ಸಿನಿಮಾ ಏಕೆ ಬರುತ್ತಿಲ್ಲ?

ಹಿಂದೆ ಕಡಿಮೆ ಬಜೆಟ್‌ನಲ್ಲಿ ಒಳ್ಳೆಯ ಚಿತ್ರಗಳು ನಿರ್ಮಾಣವಾಗುತ್ತಿದ್ದವು. ನನ್ನ 'ಬಂಗಾರ್ ಪಟ್ಲೇರ್' ಸಿನಿಮಾಕ್ಕೆ 22 ಲಕ್ಷ ಹಾಗೂ ಬದಿ ಸಿನಿಮಾಕ್ಕೆ 20 ಲಕ್ಷ ಖರ್ಚಾಗಿತ್ತು. ಕೆಲವೊಮ್ಮೆ ಸಿನಿಮಾದ ಯಾವ ಕ್ಷೇತ್ರಕ್ಕೆ ಎಷ್ಟು ಹಣ ಹೂಡಬೇಕೆಂಬ ಯೋಜನೆಯಲ್ಲಿ ಹಲವಾರು ನಿರ್ಮಾಪಕರು ಸೋಲುತ್ತಾರೆ. ಹೀಗಾಗಿ ಸಿನಿಮಾ ಕೂಡಾ ಸೋಲುತ್ತದೆ.

ತುಳು ಸಿನಿಮಾಗಳಿಗೆ ಹೆಚ್ಚಿನ ಪ್ರಚಾರದ ಅಗತ್ಯ ಇದೆಯೇ?

ಸಿನಿಮಾಗಳಿಗೆ ಪ್ರಚಾರ ಬೇಕು. ಆದರೆ ಅನಗತ್ಯವಾಗಿ ಪ್ರಚಾರ ಮಾಡಿ ತೋರಿಸುವ ಕಾಲ ಇದು ಅಲ್ಲ. ಪ್ರಚಾರ ಅಥವಾ ಅಭಿಮಾನದ ಮೇಲೆ ಸಿನಿಮಾ ನೋಡಲು ಹೋದರೆ ಭಾಷೆ ಒಂದನ್ನು ಬಿಟ್ಟರೆ ಕೆಲವೊಂದು ಸಿನಿಮಾಗಳನ್ನು ಇದು ತುಳು ಸಿನಿಮಾವೇ? ಎಂದು ಪ್ರಶ್ನಿಸುವಂತಿದೆ.

ತುಳು ಸಿನಿಮಾ ರಂಗಕ್ಕೆ ಪ್ರತ್ಯೇಕವಾದ ಫಿಲಂ ಚೇಂಬರ್‌ನ ಅಗತ್ಯ ಇದೆಯಾ?

ಕರ್ನಾಟಕದಲ್ಲಿ ಚಲನಚಿತ್ರ ವಾಣಿಜ್ಯ ಮಂಡಳಿ, ನಿರ್ಮಾಪಕರ ಸಂಘ ಇದೆ. ಪ್ರತ್ಯೇಕವಾದ ಫಿಲಂ ಚೇಂಬರ್ ಮಾಡುವಷ್ಟು ಸಿನಿಮಾ ತುಳುವಿನಲ್ಲಿ ಇಲ್ಲ. ನಿರ್ಮಾಪಕರ ಸಂಘವನ್ನು ಕಟ್ಟಿಕೊಳ್ಳಬಹುದು.

ಕಾಸರಗೋಡು ಚಿನ್ನಾ

ಕರಾವಳಿಯ ಜನಪ್ರಿಯ ನಟ, ರಂಗಕರ್ಮಿ, ಸಿನಿಮಾ ನಿರ್ದೇಶಕ, ಸಂಘಟನಗಾರರಾದ ಕಾಸರಗೋಡಿನ ಕರಂದಕ್ಕಾಡುವಿನ ಕಾಸರಗೋಡು ಚಿನ್ನಾ ಅವರ ಮೂಲತಃ ಹೆಸರು ಶ್ರೀನಿವಾಸ ರಾವ್ ಎಸ್. ಎಂದು. ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ಡಿಪ್ಲೋಮ ಪದವಿಯನ್ನು ಚಿನ್ನದ ಪದಕದೊಂದಿಗೆ ಪಡೆದ ಇವರ ಕಲಾ ಜೀವನ ಸ್ಮರಣೀಯವಾದುದು.

1969ರಲ್ಲಿ 'ತಾಳಿ ಕಟ್ಟೋಕೆ ತಯಾರ್' ಅನ್ನುವ ಕನ್ನಡ ನಾಟಕದಲ್ಲಿ ಅಭಿನಯಿಸುವ ಮೂಲಕ ರಂಗಪ್ರವೇಶ ಮಾಡಿದ ಇವರು ಕನ್ನಡ, ತುಳು, ಮಲಯಾಳಂ, ಕೊಂಕಣಿ, ಇಂಗ್ಲಿಷ್ ಮುಂತಾದ ಭಾಷೆಗಳ 400ಕ್ಕೂ ಮಿಕ್ಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಹಲವಾರು ನಾಟಕಗಳನ್ನು ಭಾಷಾಂತರಿಸಿದ್ದಲ್ಲದೆ ನಿರ್ದೇಶಿಸಿದ್ದಾರೆ. ಇವರು ಓರ್ವ ನಟ ಮಾತ್ರ ಅಲ್ಲ ನಾಟಕಕಾರ, ನಿರೂಪಕಕಾರನಾಗಿಯೂ ಗುರುತಿಸಿಕೊಂಡಿರುತ್ತಾರೆ. ಅದಲ್ಲದೆ ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡಿರುವ ಇವರು ಅಕಾಡೆಮಿ, ಸಂಘಸಂಸೆಗಳ ಅಧ್ಯಕ್ಷರು, ಸದಸ್ಯರಾಗಿ ಕಾರ್ಯ ನಿರ್ವಹಿಸಿರುತ್ತಾರೆ.

ಫಣಿಯಮ್ಮ, ಪ್ರಾಯ ಪ್ರಾಯ, ಕೆಂಡದ ಮಳೆ, ರಾವಣ ರಾಜ್ಯ ಮುಂತಾದ 13 ಕನ್ನಡ ಚಿತ್ರಗಳಲ್ಲಿ ಅಭಿನಯಿಸಿದ ಅನುಭವ ಹೊಂದಿದ್ದು ತುಳುವಿನಲ್ಲಿ 'ಬಂಗಾರ್ ಪಟ್ಲೇರ್' ಸಿನಿಮಾದಲ್ಲಿ ನಾಯಕ ನಟನಾಗಿ ಅಭಿನಯಿಸಿರುತ್ತಾರೆ. ಹೆಚ್ಚು ತುಳು ಸಿನಿಮಾಗಳಲ್ಲಿ ನಟಿಸದಿದ್ದರೂ 'ಕೌನ್ಸಿಲರ್ ಕೊಗ್ಗಣ್ಣೆ, ಸೀಂಕ್ರನ ಕಿತಾಪತಿ, ಈ ಪ್ರಾಯೊಡ್ಲ ಬರವಾ?, ನಿನ್ನ ಮೋಕೆದಾ... ಮುಂತಾದ ನಾಟಕಗಳಲ್ಲಿ ನಟಿಸಿ ತುಳು ರಂಗಭೂಮಿಯ ಬಗ್ಗೆ ಅಪಾರ ಜ್ಞಾನ ಹೊಂದಿರುವ ಇವರಿಂದ ತುಳು ಸಿನಿಮಾದ ಕುರಿತಾಗಿ ಒಂದಿಷ್ಟು ಮಾತುಗಳು.

'ಉಜ್ವಾಡು' ಅಂತಹ ಅತ್ಯುತ್ತಮ ಪ್ರಾದೇಶಿಕ (ಕೊಂಕಣಿ) ಚಿತ್ರ ನಿರ್ಮಾಣ ಮಾಡಿದಂತಹ ನೀವು ತುಳುವಿನಲ್ಲಿ ಅಂತಹ ಮನಸ್ಸು ಮಾಡಿಲ್ಲ ಏಕೆ?

ಪ್ರಸ್ತುತ ಸಂದರ್ಭದಲ್ಲಿ ತುಳುವಿನಲ್ಲಿ ಹಲವಾರು ಸಿನಿಮಾಗಳು ನಿರ್ಮಾಣವಾಗುತ್ತಿವೆ. ಹಾಗಾಗಿ ಈ ಸ್ಪರ್ಧೆಯಲ್ಲಿ ಮನಸ್ಸಿಲ್ಲ. ಮುಂದೊಂದು ದಿನ ಗ್ರಾಮೀಣ ಸೊಗಡನ್ನು ಬಳಸಿಕೊಂಡು ತುಳು ಸಿನಿಮಾ ಮಾಡುವಂತಹ ಆಸೆ ಇದೆ.

ಸಾಮಾನ್ಯವಾಗಿ ಒಂದು ಮಾತಿದೆ. ತುಳು ನಾಟಕಗಳ ಜನಪ್ರಿಯತೆಯೇ ತುಳು ಸಿನಿಮಾಗಳ ನಿರ್ಮಾಣಕ್ಕೆ ಕಾರಣವಾಯಿತು. ಇದನ್ನು ಒಪ್ಪುವಿರಾ?

ಈ ಮಾತನ್ನು ನಾನು ಒಪ್ಪುವುದಿಲ್ಲ. ಏಕೆಂದರೆ ಇದು ಒಂದು ಕಾಲಕ್ಕೆ, ಒಂದು ಸಮಯಕ್ಕೆ ಸೀಮಿತವಾದ ಮಾತು. ಹಿಂದಿನ ಸ್ಥಿತಿಗೆ ಈ ಮಾತು ಸರಿ. ಆದರೆ ಪ್ರಸ್ತುತ ಕಾಲಘಟ್ಟದ ಸಿನಿಮಾಗಳಲ್ಲಿ ಹೊಸ ಪ್ರಯೋಗ, ಕಥಾವಸ್ತುಗಳನ್ನು ಕಂಡಾಗ ಈ ಮಾತನ್ನು ಒಪ್ಪಲು ಸಾಧ್ಯವಿಲ್ಲ.

ಪರಭಾಷಾ ಕಲಾವಿದರ ಜೊತೆ ನಿಮ್ಮ ಅನುಭವವೇನು?

ಸಿನಿಮಾಗಳಲ್ಲಿ ಪರಭಾಷಾ ಕಲಾವಿದರನ್ನು ಕರೆಸಿ ಅವರ ಜೊತೆ ಕಾರ್ಯ ನಿರ್ವಹಿಸುವುದು ಸ್ವಲ್ಪ ಕಷ್ಟವಾಗುತ್ತದೆ. ಡಬ್ಬಿಂಗ್ ಮಾಡುವಾಗ ಸಣ್ಣಪುಟ್ಟ ತೊಂದರೆಯು ಎದುರಾಗುತ್ತದೆ. ಆದರೆ ಈ ಕಲಾವಿದರ ಭಾವನೆಗಳಲ್ಲಿ ಪಕ್ವತೆಯಿತ್ತು. ಹೊಸ ಕಲಾವಿದರನ್ನು ಹಾಕಿ ಸಿನಿಮಾ ಮಾಡುವುದರಿಂದ ಸಿನಿಮಾದ ನಿರ್ಮಾಣದ ಸಮಯ ಹೆಚ್ಚಾಗುತ್ತದೆ. ಹಾಗಾಗಿ ಹೆಚ್ಚಿನವರು ಪರಭಾಷೆಯಲ್ಲಿನ ಅನುಭವಿ ನಟರನ್ನು ತಮ್ಮ ಸಿನಿಮಾದಲ್ಲಿ ಬಳಸಿಕೊಳ್ಳುತ್ತಾರೆ.

ತುಳು ಸಿನಿಮಾದ ಭಾಷೆ ತುಳು ಭಾಷೆಯನ್ನು ಮತ್ತು ಸಾಹಿತ್ಯವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆಯೇ?

ತುಳು ಭಾಷೆಯ ಅಭಿವೃದ್ಧಿಗೆ ಕೇವಲ ತುಳು ಸಿನಿಮಾದ ಭಾಷೆಯೇ ಕಾರಣವಲ್ಲ. ಪಾಡ್ದನ, ಯಕ್ಷಗಾನ, ನಾಟಕ ಹೀಗೆ ಎಲ್ಲಾ ಕಲಾ ಪ್ರಕಾರಗಳಿಂದಲೂ ತುಳು ಭಾಷೆಯು ಅಭಿವೃದ್ಧಿಯಾಗಿದೆ. ಆದರೆ ಈಗ ಜನಪ್ರಿಯ ಮಾಧ್ಯಮವಾದ 'ಸಿನಿಮಾ'ದ ಮೂಲಕ ತುಳು ಭಾಷೆಯನ್ನು ಬೆಳೆಸುವತ್ತ ಚಿಂತನೆ ಮಾಡಬೇಕು.

ತುಳು ಸಿನಿಮಾಗಳ ಸಂಖ್ಯೆ ನೂರರ ಹತ್ತಿರ ಹೋಗುತ್ತಿರುವ ಸಂದರ್ಭದಲ್ಲಿ ಮಕ್ಕಳ ಕುರಿತಾದ ಸಿನಿಮಾಗಳು ತುಳುವಿನಲ್ಲಿ ಏಕೆ ನಿರ್ಮಾಣವಾಗಿಲ್ಲ?

ಮಕ್ಕಳ ಕುರಿತಾಗಿ ಚಿತ್ರ ನಿರ್ಮಾಣ ಮಾಡಿದರೆ ಸರಕಾರದಿಂದ ಇಪ್ಪತ್ತೈದು ಲಕ್ಷ ಸಬ್ಸಿಡಿ ಸಿಗುತ್ತದೆ. ಆದರೂ ತುಳು ಚಿತ್ರರಂಗದಲ್ಲಿ ಈ ನೆಲೆಯಲ್ಲಿ ಯಾರೂ ಮುಂದೆ ಬಂದಿಲ್ಲ. ಅದಲ್ಲದೆ ಮಕ್ಕಳ ಸಿನಿಮಾಕ್ಕಾಗಿ ಒಳ್ಳೆಯ ಕಥಾವಸ್ತು ಸಿಗುವುದಿಲ್ಲ, ಸಿಕ್ಕಿದರೂ ಮಾಡುವವರಿಲ್ಲ. ಎಲ್ಲಾ ಚಿತ್ರಗಳಿಗೆ ಸಬ್ಸಿಡಿ ಸಿಗುವುದಿಲ್ಲ. ಅದಕ್ಕೊಂದು ಸಮಿತಿ ಇದೆ. ತುಳು ಸಿನಿಮಾ ಮಾಡಿದರೆಂದರೆ ಅದಕ್ಕೆ ಸಬ್ಸಿಡಿ ಸಿಗಲೇಬೇಕೆಂದಿಲ್ಲ.

ಇತ್ತೀಚಿನ ದಿನಗಳಲ್ಲಿ ಗುಣಮಟ್ಟವನ್ನು ಬದಿಗಿಟ್ಟು ಕೇವಲ ಮನರಂಜನೆಗೆ ಹಾಗೂ ವ್ಯಾಪಾರಕ್ಕಾಗಿ ತುಳು ಸಿನಿಮಾ ನಿರ್ಮಾಣ ಆಗುತ್ತಿದೆಯೇ?

ಸಿನಿಮಾ ಮಾಡುವುದು ದುಡ್ಡು ಮಾಡುವುದಕ್ಕೆ, ತುಳು ಭಾಷೆಯ ಉದ್ಧಾರಕ್ಕಾಗಿ ಅಲ್ಲ. ಇಂತಹ ಚಿಂತನೆ, ಉದ್ದೇಶ ಇದ್ದ ಕೆಲವರು ಸಿನಿಮಾ ರಂಗದಲ್ಲಿ ಇಂದು ಬೆಳೆಯುತ್ತಿದ್ದಾರೆ. ಏನಾದರೂ ಮಾಡಲಿ ಆದರೆ ಸಿನಿಮಾದ ಗುಣಮಟ್ಟದಲ್ಲಿ ರಾಜಿ ಮಾಡುವುದು ಬೇಡ. ನಿರ್ದೇಶಕರು ಕೂಡ ಹವ್ಯಾಸಿ ಆದರೂ ಅವರಲ್ಲಿ ವೃತ್ತಿಪರತೆ ಇರಬೇಕು.

93.5 ರೆಡ್ ಎಫ್ ಎಮ್ ತುಳು ಸಿನಿಮಾ ಪ್ರಶಸ್ತಿ–2014ರಲ್ಲಿ ತೀರ್ಪುಗಾರರಾಗಿದ್ದ ನೀವು ಮತ್ತು ವಸಂತ ಕದ್ರಿ ಅವರು 'ಒರಿಯರ್ದೊರಿ ಅಸಲ್' ಸಿನಿಮಾವನ್ನು ತುಳುವಿನ ಶ್ರೇಷ್ಠ ಚಿತ್ರ ಎಂದು ಆಯ್ಕೆ ಮಾಡಿದ್ದೀರಿ. ಇಲ್ಲಿ ನೀವು ಅನುಸರಿಸಿದ ಮಾನದಂಡಗಳೇನು?

ಒಂದು ಸಿನಿಮಾವನ್ನು ನಾವು ಕಥಾದೃಷ್ಟಿ, ತಂತ್ರಜ್ಞಾನ ದೃಷ್ಟಿ ಹೀಗೆ ಬೇರೆ ಬೇರೆ ಆಯಾಮಗಳಿಂದ ನೋಡುತ್ತೇವೆ. ಹಾಡುಗಳು, ತಂತ್ರಜ್ಞಾನ ಹಾಗೂ ಕಥಾವಸ್ತುವಿನ ನೆಲೆಯಲ್ಲಿ 'ಒರಿಯರ್ದೊರಿ ಅಸಲ್' ಎಲ್ಲಾ ತುಳು ಸಿನಿಮಾಗಳಿಗಿಂತ ಭಿನ್ನವಾಗಿ ನಿಲ್ಲುತ್ತದೆ. ಹಾಗಾಗಿ ನಾವು 'ಒರಿಯರ್ದೊರಿ ಅಸಲ್' ಸಿನಿಮಾವನ್ನು ತುಳುವಿನ ಶ್ರೇಷ್ಠ ಚಿತ್ರ ಎಂದು ಆಯ್ಕೆ ಮಾಡಿದ್ದೇವೆ. 'ರಿಕ್ಷಾ ಡ್ರೈವರ್' ಕೂಡಾ ತುಳುವಿನ ಒಂದು ಒಳ್ಳೆಯ ಸಿನಿಮಾ. ಆದರೆ ಆ ಚಿತ್ರ ತಂಡದವರು ಸ್ಪರ್ಧೆಯಿಂದ ಹಿಂದೆ ಸರಿದು ಬಿಟ್ಟರು.

ತುಳು ಸಿನಿಮಾದ ಯಶಸ್ಸಿನಲ್ಲಿ ಕೊಂಕಣಿ ಭಾಷಿಕರ ಕೊಡುಗೆಯ ಬಗ್ಗೆ ನಿಮ್ಮ ಅಭಿಪ್ರಾಯ.

ತುಳು ಸಿನಿಮಾಕ್ಕೆ ಕೊಂಕಣಿ ಭಾಷಿಕರ ಕೊಡುಗೆ ಅಪಾರವಿದೆ. ತುಳುವಿನ ಪ್ರಸಿದ್ಧ ಸಂಗೀತ ನಿರ್ದೇಶಕ ಚರಣ್ ಕುಮಾರ್, ನಿರ್ಮಾಪಕ ರಿಚರ್ಡ್ ಕ್ಯಾಸ್ಟಲಿನೊ, ಗಾಯಕರಾದ ಪುತ್ತೂರು ನರಸಿಂಹ ನಾಯಕ್, ರವೀಂದ್ರ ಪ್ರಭು ಇನ್ನೂ ಹಲವಾರು ಪ್ರತಿಭೆಗಳು ತುಳು ಸಿನಿಮಾ ರಂಗಕ್ಕೆ ಸೇವೆ ಸಲ್ಲಿಸಿದ್ದಾರೆ.

ಸಾಮಾನ್ಯವಾಗಿ ಹಿಂದೆ ತುಳು ಸಿನಿಮಾಗಳಲ್ಲಿ ನಟಿಸಿದ ಕಲಾವಿದರಿಗೆ ಸಂಭಾವನೆ ಕೊಟ್ಟರೂ ಅವರು ಪಡೆಯಿತ್ತಿರಲಿಲ್ಲವಂತೆ. ಇದು ಭಾಷಾಭಿಮಾನವೋ? ಪ್ರಚಾರವೋ?

ಪ್ರಚಾರ ಅಲ್ಲ ಅಭಿಮಾನ. ಆದರೂ ಕಲಾವಿದರಿಗೆ ಹಿಂದೆ ಸಂಭಾವನೆ ಕೊಡುತ್ತಿರಲಿಲ್ಲ. ಕೊಟ್ಟರೆ ತೆಗೆದುಕೊಳ್ಳಬೇಕು. ನಾನು ಕನ್ನಡದ 'ಪ್ರಾಯ ಪ್ರಾಯ' ಸಿನಿಮಾದ ನಟನೆಗಾಗಿ 500 ರೂಪಾಯಿ ಸಂಭಾವನೆ ಪಡೆದಿದ್ದೆ.

ತುಳುವಿನ ಯಶಸ್ವಿ ಚಿತ್ರ 'ಬಂಗಾರ್ ಪಟ್ಲೇರ್' ಚಿತ್ರದ ನಾಯಕ ನಟನಾಗಿ ನಿಮ್ಮ ಅನುಭವ ತಿಳಿಸಿ

ನಾನು 'ಬಂಗಾರ್ ಪಟ್ಲೇರ್' ಚಿತ್ರದಲ್ಲಿ ನಟಿಸುವ ಮೊದಲೇ ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ಚಿನ್ನದ ಪದಕ ಪಡೆದು ರಂಗಭೂಮಿಗೆ ಕಾಲಿಟ್ಟವ. ಅದಲ್ಲದೆ ನನ್ನ ಮೊದಲ ಸಿನಿಮಾ ಕನ್ನಡದ 'ಫಣಿಯಮ್ಮ'. ಮೊದಲೇ ಕನ್ನಡ ಚಿತ್ರರಂಗದಲ್ಲಿ ನಟಿಸಿ ಬಂದುದರಿಂದ ತುಳುವಿನ 'ಬಂಗಾರ್ ಪಟ್ಲೇರ್' ಸಿನಿಮಾದಲ್ಲಿ ಒಳ್ಳೆಯ ಅನುಭವ ಪಡೆದೆ.

ತುಳುನಾಡಿನ ಒಂದು ಭಾಗವಾದ ಕಾಸರಗೋಡಿನಲ್ಲಿ ತುಳು ಸಿನಿಮಾಕ್ಕೆ ಯಾವ ರೀತಿ ಪ್ರತಿಕ್ರಿಯೆ ಇದೆ?

ಇಲ್ಲಿ ತುಳು ಸಿನಿಮಾಕ್ಕೆ ಅಂತಹ ಒಳ್ಳೆಯ ಪ್ರತಿಕ್ರಿಯೆ ಇಲ್ಲ. 'ಕೃಷ್ಣ' ಥಿಯೇಟರ್‌ನಲ್ಲಿ 'ಒರಿಯರ್ದೊರಿ ಅಸಲ್' ಪ್ರದರ್ಶನ ಕಂಡದ್ದು ಬಿಟ್ಟರೆ ಮತ್ತೆ ಯಾವ ತುಳು ಸಿನಿಮಾಗಳು ಪ್ರದರ್ಶನ ಕಂಡದ್ದು ಕಡಿಮೆ.

ಮಾತು ಮುಗಿಸುವ ಮುನ್ನ ಚಿನ್ನಾ ಅವರು ಹೇಳಿದ ಮಾತು "ಹೆಸರಿಗಾಗಿ ಸಿನಿಮಾ ಮಾಡಬೇಡಿ, ಸಿನಿಮಾಕ್ಕಾಗಿ ಸಿನಿಮಾ ಮಾಡಬೇಡಿ" ಎಂದು.

ವಿ. ಜಿ. ಪಾಲ್

ರಂಗನಟ, ನಿರ್ದೇಶಕ, ಸಂಪನ್ಮೂಲ ವ್ಯಕ್ತಿ ಹಾಗೂ ಸಂಘಟನೆಯಲ್ಲಿ ತೊಡಗಿಸಿಕೊಂಡಂತಹ ವಿ.ಜಿ. ಪಾಲ್ 1960ರಲ್ಲಿ ವಿಶು ಕುಮಾರ್ ಅವರ 'ಕಲ್ಜಿಗದ ಕುರುಕ್ಷೇತ್ರ' ತುಳು ನಾಟಕದ ಮೂಲಕ ರಂಗ ಪ್ರವೇಶ ಮಾಡಿದರು. ಇವರ ಮೂಲ ಹೆಸರು ಗೋಪಾಲ್ ಟಿ. ಕೋಟ್ಯಾನ್. ದೆಹಲಿ, ಚೆನ್ನೈ, ಮುಂಬಯಿ, ನಾಸಿಕ್, ಪುಣೆ, ಬೆಂಗಳೂರು, ಮೈಸೂರು ಹಾಗೂ ವಿದೇಶಗಳಲ್ಲೂ ಪ್ರದರ್ಶನಗೊಂಡ ಹಲವಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಬಯ್ಯಮಲ್ಲಿಗೆ, ಭಾಗ್ಯವಂತೆದಿ, ಸತ್ಯ ಓಲುಂಡು, ತುಡರ್, ಮಾರಿಬಲೆ, ಬಂಗಾರ್ ಪಟ್ಲೇರ್ ಮುಂತಾದ ತುಳು ಸಿನಿಮಾಗಳಲ್ಲಿ ನಟಿಸಿದ ಇವರಿಗೆ ಸಂದಿರುವ ಪ್ರಶಸ್ತಿಗಳು ಹಲವಾರು. ಇತ್ತೀಚೆಗೆ ನಡೆದ 'ತುಳು ಸಿನೇಮೋತ್ಸವ-2016'ರ ವಿಶೇಷ ಗೌರವ ಪ್ರಶಸ್ತಿಗೂ ಭಾಜನರಾಗಿದ್ದಾರೆ. ತುಳು ಸಿನಿಮಾದ ಕುರಿತಾಗಿ ವಿ.ಜಿ. ಪಾಲ್ ಅವರ ಒಂದಿಷ್ಟು ಒಳನೋಟವನ್ನು ತಿಳಿಯೋಣ

ತುಳು ಸಿನಿಮಾ ತುಳುನಾಡಿನ ಸಂಸ್ಕೃತಿ ಮತ್ತು ಪರಂಪರೆಯನ್ನು ಬಿಂಬಿಸುತ್ತದೆ ಎಂಬ ಮಾತನ್ನು ಒಪ್ಪುವಿರಾ?

ತುಳು ಸಿನಿಮಾಗಳು ಜನಪದ ಸಂಸ್ಕೃತಿಯನ್ನು ಬಿಂಬಿಸಲಿ. ಆದರೆ ಅನಗತ್ಯವಾಗಿ ತುರುಕಿಸುವುದು ಬೇಡ. ಕತೆಗೆ ಪೂರಕವಾಗಿದ್ದರೆ ಒಳ್ಳೆಯದು. ಸಿನಿಮಾಗಳಲ್ಲಿ ತುಳು ಸಂಸ್ಕೃತಿಯ ವೈಭವೀಕರಣ ಮಾಡಿದರೂ ಪರವಾಗಿಲ್ಲ, ಆದರೆ ಅದನ್ನು ಹಾಳು ಮಾಡಬಾರದು.

ತುಳು ಸಿನಿಮಾದ ಪ್ರಚಾರ, ಅಬ್ಬರ ಇವುಗಳು ನಾಟಕರಂಗಕ್ಕೆ ಮಾರಕವಾಗುತ್ತಿದೆಯೇ?

ಇಂದು ನಗರ ಪ್ರದೇಶಗಳಲ್ಲಿ ನಾಟಕ ಪ್ರದರ್ಶನಗಳನ್ನು ಕಂಡಾಗ ಮಾರಕ ಆಗಿದೆ ಎನ್ನಬಹುದು. ಆದರೆ ಪತ್ರಿಕೆಯಲ್ಲಿ ಕಾಣುವ ಸಿನಿಮಾ ಪ್ರಚಾರಕ್ಕೂ ಚಿತ್ರಮಂದಿರದ ವಾಸ್ತವಕ್ಕೂ ಸಂಬಂಧವಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಇಂದು ಕೂಡಾ ತುಳು ನಾಟಕಗಳ ಯಶಸ್ವಿ ಪ್ರದರ್ಶನ ಕಂಡು ಬರುತ್ತಿದೆ.

ಇತ್ತೀಚೆಗೆ ತುಳು ಸಿನಿಮಾದಲ್ಲಿ ಪರಭಾಷಾ ಕಲಾವಿದರು ಹೆಚ್ಚುತ್ತಿದ್ದಾರೆ. ಈ ಕುರಿತಾಗಿ ನಿಮ್ಮ ಅಭಿಪ್ರಾಯವೇನು?

ಪರಭಾಷಾ ಕಲಾವಿದರ ಅನಿವಾರ್ಯತೆ ತುಳು ಸಿನಿಮಾಕ್ಕೆ ಇಲ್ಲ. ಆದರೆ ಇಂದು ಕೇವಲ ಪ್ರಚಾರಕ್ಕಾಗಿ ತರುತ್ತಿದ್ದಾರೆ. ಹಾಗಂತ ಪರಭಾಷೆಯ ಜನಪ್ರಿಯ ಕಲಾವಿದರು ನಟಿಸಿದ ಸಿನಿಮಾಗಳು ಗೆದ್ದಿವೆ ಎಂದು ಕೂಡಾ ಹೇಳಲಾಗದು. ನಮ್ಮ ತುಳು ರಂಗಭೂಮಿಯಲ್ಲಿಯೇ ಪಳಗಿದ ಅನೇಕ ಕಲಾವಿದರು ಇರುವಾಗ ಇಂತಹ ಪ್ರಯತ್ನಗಳಿಗೆ ಅರ್ಥವಿಲ್ಲ.

'ಗಗ್ಗರ', 'ದೇವೆರ್' ಇಂತಹ ಬೆರಳಣಿಕೆಯ ಸಿನಿಮಾಗಳನ್ನು ಬಿಟ್ಟು ಸಾಮಾಜಿಕ ಸಮಸ್ಯೆಗಳನ್ನು ಬಿಂಬಿಸುವಂತಹ ಸಿನಿಮಾಗಳು ತುಳುವಿನಲ್ಲಿ ಏಕೆ ನಿರ್ಮಾಣ ಆಗುತ್ತಿಲ್ಲ?

ಇವತ್ತು ಎಲ್ಲಾ ಸಿನಿಮಾಗಳು ವ್ಯಾಪಾರಕ್ಕೆ ಇಳಿದಿವೆ. ಹಣ ಹಾಕಿ ಹಣ ತೆಗೆಯುವುದೇ ಮಂತ್ರವಾಗಿದೆ. ಹಾಗಾಗಿ ಸಿನಿಮಾ ಎಷ್ಟು ಗಳಿಸುತ್ತವೆ? ಎಂಬ ಲೆಕ್ಕಚಾರ ನಡೆಯುತ್ತದೆಯೋ ವಿನಾಃ ಸಿನಿಮಾ ಸಮಾಜದ ಮೇಲೆ ಯಾವ ಪರಿಣಾಮ ಬೀರಿದೆ ಎಂಬ ವಿಚಾರಕ್ಕೆ ಯಾರೂ ಗಮನ ನೀಡುತ್ತಿಲ್ಲ.

ಕಳೆದ ಮೂರು ನಾಲ್ಕು ವರ್ಷಗಳಿಂದೀಚೆಗೆ ಒಮ್ಮೆಲೆ ತುಳು ಚಿತ್ರರಂಗದ ಬೆಳವಣಿಗೆಗೆ ಕಾರಣ?

ಕತೆಗೆ ಪೂರಕವಾದ ಚಿತ್ರಗಳು, ಒಳ್ಳೆಯ ಸಂದೇಶಗಳಿರುವ ಚಿತ್ರಗಳು ಬರುತ್ತಿವೆ. ಹಾಸ್ಯಕ್ಕೆ ಒತ್ತು ನೀಡಲಾಗುತ್ತಿದೆ. ಹಾಗೆಯೇ ಜನರಲ್ಲಿಯೂ ಸಿನಿಮಾದ ಬಗ್ಗೆ ಇದ್ದ ಮನಸ್ಥಿತಿಯೂ ಬದಲಾಗಿದೆ. ಈ ಎಲ್ಲಾ ಕಾರಣಗಳಿಂದ ತುಳು ಚಿತ್ರರಂಗವು ಇಂದು ಯಶಸ್ಸಿನತ್ತ ಸಾಗುತ್ತಿದೆ.

ತುಳು ಸಿನಿಮಾದ ಬೆಳವಣಿಗೆಯಲ್ಲಿ ತುಳು ಸಂಘಸಂಸ್ಥೆಗಳ ಪಾತ್ರ ಇದೆಯಾ?

ತುಳು ಸಿನಿಮಾದ ಬೆಳವಣಿಗೆಯಲ್ಲಿ ತುಳು ಸಂಘಸಂಸ್ಥೆಗಳ ಪಾತ್ರ ಇಲ್ಲ. ವೈಯಕ್ತಿಕವಾಗಿ ಸಿನಿಮಾ ರಂಗಕ್ಕೆ ಕೊಡುಗೆ ನೀಡಿದವರು ಇದ್ದಾರೆ. ಒಂದು ತುಳು ಸಿನಿಮಾಕ್ಕೆ ತುಳು ಸಂಘಟನೆಯಲ್ಲಿರುವ ಸದಸ್ಯರ ಮನೆಯವರೆಲ್ಲರೂ ಬಂದರೆ ಯಾವ ತುಳು ಸಿನಿಮಾ ಸೋಲುತ್ತದೆ? ಹಾಗೆಯೇ ವೇದಿಕೆಯಲ್ಲಿ ತುಳು ಭಾಷೆ, ಸಂಸ್ಕೃತಿಯ ಬಗ್ಗೆ ಮಾತನಾಡುವವರ ಮನೆಯಲ್ಲಿ ಮೊದಲು ತುಳು ಭಾಷೆ, ಸಂಸ್ಕೃತಿಯನ್ನು ಹುಡುಕಬೇಕಾಗುತ್ತದೆ.

ಒಬ್ಬ ಕಲಾವಿದನಾಗಿ ನೀವು ಸಿನಿಮಾದಲ್ಲಿ ಪಡೆದ ಅನುಭವಗಳೇನು?

ಬದುಕನ್ನು ಪ್ರೀತಿಸಬೇಕು ಎಂಬುವುದನ್ನು ನಾನು ಮೊದಲೇ ರಂಗಭೂಮಿಯಿಂದ ಕಲಿತವನು. ಜೊತೆಗೆ ಸಿನಿಮಾ ರಂಗಕ್ಕೆ ಬಂದ ಮೇಲೆ ಸಮಯಪ್ರಜ್ಞೆ, ಶಿಸ್ತನ್ನು ಕಲಿತೆ. ಹಿಂದೆ ನಮಗೆಲ್ಲಾ ಯಾವುದೇ ರೀತಿಯ ಸಂಭಾವನೆಯನ್ನು ನೀಡುತ್ತಿರಲಿಲ್ಲ. ಕಲಾವಿದ ಕೂಡ ಅದನ್ನು ನಿರೀಕ್ಷೆ ಮಾಡುತ್ತಿರಲಿಲ್ಲ. ಆಗಿನ ಕಾಲದಲ್ಲಿ ನಟನೆಗೆ ಬೇಕಾದ

ವೇಷಭೂಷಣವನ್ನು ನಾವೇ ಸಿದ್ಧತೆ ಮಾಡಿಕೊಳ್ಳಬೇಕಾಗಿತ್ತು. ಕಲಾವಿದರೆಲ್ಲಾ ಸೇರಿದರೆ ಮನೆಯು ವಾತಾವರಣವೇ ನಿರ್ಮಾಣವಾಗುತಿತ್ತು. ಒಂದೊಂದು ಕ್ಷಣವನ್ನು ಸಂತೋಷದಲ್ಲಿ ಕಳೆಯುತ್ತಿದ್ದೆವು.

'ತುಳು ಚಿತ್ರರಂಗದ ಭೀಷ್ಮ' ಎಂದು ಹೆಸರಾದ ಕೆ.ಎನ್. ಟೇಲರ್ ಅವರ ಜೊತೆ ನಿಮ್ಮ ಒಡನಾಟದ ಅನುಭವ ಹೇಗಿತ್ತು?

ಕಲಾವಿದರನ್ನು ಹೇಗೆ ಬಳಸಿಕೊಳ್ಳಬೇಕು ಎಂಬುವುದನ್ನು ಟೇಲರ್ ಅವರ ಬಳಿ ಕಲಿಯಬೇಕು. ಸಿನಿಮಾದ ತಾಂತ್ರಿಕ ವಿಚಾರದ ಕುರಿತಾಗಿ ನಾನು ಅವರಿಂದ ಬಹಳಷ್ಟು ಕಲಿತೆ. ಅವರ ಜೊತೆ ಹಲವಾರು ನಾಟಕ, ಸಿನಿಮಾಗಳಲ್ಲಿ ನಟಿಸಿದ್ದೇನೆ. ತುಳು ಸಿನಿಮಾ ರಂಗದಲ್ಲಿ ಅವರು ಕಷ್ಟ–ನಷ್ಟಗಳನ್ನು ಕಂಡರೂ, ಅಪಾರ ಶ್ರಮವಹಿಸಿದವರು. ಇಂದು ತುಳು ಸಿನಿಮಾ ಯಶಸ್ಸಿನತ್ತ ಸಾಗುತ್ತಿರುವುದರ ಹಿಂದೆ ಟೇಲರ್ ಅವರ ಪಾತ್ರ ಮರೆಯಲಾಗದು.



ವಿಜಯ್‌ಕುಮಾರ್ ಕೊಡಿಯಾಲ್‌ಬೈಲ್

ತುಳು ರಂಗಭೂಮಿಗೆ ಭದ್ರವಾದ ಅಡಿಪಾಯವನ್ನು ಹಾಕಿಕೊಟ್ಟವರಲ್ಲಿ ವಿಜಯ್‌ಕುಮಾರ್ ಕೊಡಿಯಾಲ್‌ಬೈಲ್ ಕೂಡ ಒಬ್ಬರು. ಅವರ 'ಒರಿಯರ್ದೊರಿ ಅಸಲ್' ಚಿತ್ರವೇ ತುಳು ಚಿತ್ರದ ಸುಗ್ಗಿಯ ಕಾಲಕ್ಕೆ ನಾಂದಿ ಹಾಡಿದ್ದು ಎನ್ನಬಹುದು. ಸದಾ ಗುಣಮಟ್ಟ, ಹೊಸತನಕ್ಕೆ, ಪ್ರಯೋಗಗಳಿಗೆ ಒತ್ತು ನೀಡುವ ಇವರಿಗೆ ಸಿನಿಮಾ ರಂಗ ಇನ್ನಷ್ಟು ಖ್ಯಾತಿಯನ್ನು ತಂದುಕೊಟ್ಟಿತು. ಇಂದು ತುಳು ಸಿನಿಮಾ ಯಶಸ್ಸಿನತ್ತ ಸಾಗುತ್ತಿರಲು ಹಾಗೂ ತುಳು ಚಿತ್ರರಂಗಕ್ಕೆ ಜನಪ್ರಿಯತೆಯ ಜೊತೆ ಮಹತ್ವವನ್ನು ತಂದುಕೊಟ್ಟವರೇ ವಿಜಯ್‌ಕುಮಾರ್ ಕೊಡಿಯಾಲ್‌ಬೈಲ್ ಅವರು.

ಒಂತೆ ಅಡ್ಜೆಸ್ಟ್ ಮಲ್ಪಿ, ಕಡಲ ಮಗೆ, ಒರಿಯರ್ದೊರಿ ಅಸಲ್ ಮುಂತಾದ ಚಿತ್ರಗಳಿಗೆ ಸಂಭಾಷಣೆ, ಗೀತಸಾಹಿತ್ಯ ಬರೆದ ವಿಜಯ್‌ಕುಮಾರ್ ಕೊಡಿಯಾಲ್‌ಬೈಲ್ ಓರ್ವ ತುಳು ನಾಟಕಕಾರ, ಚಲನಚಿತ್ರ ನಿರ್ಮಾಪಕ, ನಿರ್ದೇಶಕ ಹಾಗೂ ಹೋರಾಟಗಾರರು ಹೌದು. ಇವರ ಸಿನಿಮಾಗಳಲ್ಲಿ ಒಂದು ರೀತಿಯ ವಿಭಿನ್ನತೆಯಿದೆ. ಚಿತ್ರದ ಗುಣಮಟ್ಟಕೆ ಒತ್ತು ಕೊಡುವ ಇವರ ಎಲ್ಲಾ ನಾಟಕ, ಸಿನಿಮಾ, ಸಾಕ್ಷ್ಯಚಿತ್ರಗಳಲ್ಲಿ ತುಳುನಾಡಿನ ಬದುಕು-ಸಂಸ್ಕೃತಿಯ ಬಗ್ಗೆ ವಿಶೇಷವಾದ ಕಾಳಜಿ ಇರುವುದನ್ನು ಕಾಣುತ್ತೇವೆ. ಇವರ ಸಿನಿಮಾಗಳಲ್ಲಿ ಕಾಣುವ ತುಳುನಾಡಿನ ಬದುಕು, ಸಂಸ್ಕೃತಿಯ ಮೇಲೆ ಆಕ್ರಮಣ ಮಾಡುವವರ ವಿರುದ್ಧವಾಗಿ ನಡೆಯುವ ಹೋರಾಟ, ಪ್ರತಿಭಟನೆಯನ್ನು ನಿಜ ಜೀವನದಲ್ಲಿಯೂ ಅಳವಡಿಸಿಕೊಂಡವರು.

"ಚಿತ್ರ ಮಾಡಿ ನಷ್ಟ ಅನುಭವಿಸಿದರೂ ಯಾವ ನಿರ್ಮಾಪಕರು ಬಾಯಿ ಬಿಡುತ್ತಿಲ್ಲ. ಹಾಗಾಗಿ ಚಿತ್ರಗಳ ಸಂಖ್ಯೆ ಹೆಚ್ಚಾಗುತ್ತಿದೆ, ಗುಣಮಟ್ಟ ಕಡಿಮೆಯಾಗುತ್ತಿದೆ. ಅಲ್ಲದೆ ನಿರ್ದೇಶಕರ ಅನುಭವದ ಕೊರತೆಯು ಚಿತ್ರವನ್ನು ಸೋಲುವಂತೆ ಮಾಡುತ್ತದೆ. ಹಣ ಸಂಪಾದಿಸುವ ಚಿತ್ರಗಳು ಇಂದು ಹೆಚ್ಚಾಗುತ್ತಿವೆಯೇ ಹೊರತು ಸಿನಿಮಾಗಳಲ್ಲಿ ನಾಡು-ನುಡಿಯ ಬಗ್ಗೆಗಿನ ಪ್ರೀತಿ, ಅಭಿಮಾನಗಳು ದೂರವಾಗುತ್ತಿವೆ" ಎಂಬ ಬೇಸರವನ್ನು ಕೊಡಿಯಾಲ್‌ಬೈಲ್ ವ್ಯಕ್ತಪಡಿಸುತ್ತಾರೆ. ಇವರ ಜೊತೆ ನಡೆಸಿದ ತುಳು ಸಿನಿಮಾ ರಂಗದ ಕುರಿತಾದ ಒಂದಿಷ್ಟು ಮಾತುಕತೆ ಇಲ್ಲಿದೆ.

ವಿಜಯ್‌ಕುಮಾರ್ ಕೊಡಿಯಾಲ್‌ಬೈಲ್ ಎಂದರೆ 'ಹೊಸತನ' ಎಂದು ಒಪ್ಪಿಕೊಳ್ಳುವ ಪ್ರೇಕ್ಷಕನಿಂದ, ತುಳು ಸಿನಿಮಾ ರಂಗದಿಂದ ನೀವು ದೂರವಾದದ್ದು ಹೌದೆ?

ದೂರವಾಗಿಲ್ಲ, ದೂರವಾಗುವ ಮಾತು ಇಲ್ಲ. ಏಕೆಂದರೆ ತುಳುನಾಡಿನ ಜನತೆ ನನ್ನನ್ನು ಸದಾ ಕೈ ಹಿಡಿದು ಪ್ರೋತ್ಸಾಹಿಸಿದ್ದಾರೆ. 'ಒರಿಯರ್ದೊರಿ ಅಸಲ್' ನಂತರ 'ಮದಿಮೆ' ಎಂಬ ಒಳ್ಳೆಯ ಸಿನಿಮಾ ಮಾಡಿದೆ ಆದರೆ ಪ್ರೇಕ್ಷಕ ಅದನ್ನು ಒಪ್ಪಲಿಲ್ಲ ಎಂಬ ನೋವಿದೆ. ಹಾಗೆಯೇ ಕೆಲವೊಂದು ಕಾರಣಗಳಿಂದ ಸ್ವಲ್ಪ ಸಮಯದವರೆಗೆ ಬೇರೆ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದೇನೆ. ಕಾಲ ಕೂಡಿ ಬಂದಾಗ ಒಂದು ಒಳ್ಳೆಯ ತುಳು ಸಿನಿಮಾವನ್ನು ಪ್ರೇಕ್ಷಕನ ಮುಂದಿಡುತ್ತೇನೆ.

ತುಳುನಾಡಿನ ಪ್ರಸ್ತುತ ಸಮಸ್ಯೆಗಳನ್ನು ಬಿಂಬಿಸಲು ಸಿನಿಮಾವನ್ನು ಆಯ್ಕೆ ಮಾಡಲು ಕಾರಣ

ಸಿನಿಮಾ ಒಂದು ಪರಿಣಾಮಕಾರಿ ಹಾಗೂ ಜನಪ್ರಿಯ ಮಾಧ್ಯಮ. ಹಾಗಾಗಿ ನೀವೂ ಸಮಾಜಕ್ಕೆ ಏನು ಹೇಳಬೇಕೆಂದಿದ್ದೀರಿ ಅದನ್ನು ಸಿನಿಮಾದ ಮೂಲಕ ಸ್ಪಷ್ಟವಾಗಿ ಹೇಳಬಹುದು. ನಾನು ಅದನ್ನೇ ಮಾಡುತ್ತಿದ್ದೇನೆ. ಸಮಾಜದಲ್ಲಿ ಒಂದು ಒಳ್ಳೆಯ ಬದಲಾವಣೆಯಾಗಬಹುದು ಎಂಬ ಭರವಸೆಯಿಂದ ನಾಡು-ನುಡಿಯ ಬಗ್ಗೆ ನನ್ನಲ್ಲಿರುವ ಒಂದಿಷ್ಟು ಚಿಂತನೆಗಳನ್ನು ಸಿನಿಮಾಗಳಲ್ಲಿ ಅಳವಡಿಸಿದ್ದೇನೆ.

ಒಂದು ಚಿತ್ರ 100 ದಿನ 150 ದಿನ ಪ್ರದರ್ಶನ ಆಗುವುದನ್ನು ಒಪ್ಪಿಕೊಳ್ಳಬಹುದು. ಆದರೆ 400, 500 ದಿನ ಪ್ರದರ್ಶನವಾಗುತ್ತಿರುವುದರ ಹಿಂದೆ ನಿಜವಾಗಿಯೂ ತುಳು ಪ್ರೇಕ್ಷಕನಿದ್ದಾನೆಯೇ?

ಇದಕ್ಕೆ ಉತ್ತರ ನಾನು ಕೊಡುವುದಕ್ಕಿಂತ ನೀವೇ ಪ್ರೇಕ್ಷಕನಲ್ಲಿ ಕೇಳಿದಾಗ ತಿಳಿಯುತ್ತದೆ. ಹಾಗೆಯೇ ಒಂದು ಚಿತ್ರವು ದಿನದಲ್ಲಿ ಎಷ್ಟು ದೇಖಾವೆಗಳನ್ನು ಕಾಣುತ್ತದೆ ಎಂಬುವುದನ್ನು ಕೂಡ ನಾವಿಲ್ಲಿ ಗಮನಿಸಬೇಕು.

ಇತ್ತೀಚೆಗೆ ತುಳು ಸಿನಿಮಾಗಳು ಕಡಲಾಚೆಗೆ ದಾಟಿ ಪ್ರದರ್ಶನವಾಗುತ್ತಿವೆ. ಈ ನೆಲೆಯಲ್ಲಿ ಚಿತ್ರ ನಿರ್ಮಾಣ ಮಾಡುವಾಗ ಭಾಷೆಯ ಸಮಸ್ಯೆ ಎದುರಾಗುತ್ತದೆಯೇ?

ಸಾಮಾನ್ಯವಾಗಿ ಈ ರೀತಿಯ ಸಮಸ್ಯೆ ಎದುರಾಗಿಲ್ಲ. ಇದನ್ನು ಸಮಸ್ಯೆ ಎನ್ನುವುದಕ್ಕಿಂತಲೂ 'ವಿಶಿಷ್ಟತೆ' ಎನ್ನಬಹುದು. ಮಂಗಳೂರು ತುಳು, ಉಡುಪಿ ತುಳು, ಪುತ್ತೂರು ತುಳು ಹಾಗೂ ಕಾಸರಗೋಡು ತುಳುವಿನಲ್ಲಿ ಒಂದಿಷ್ಟು ಪ್ರಾದೇಶಿಕ ವ್ಯತ್ಯಾಸಗಳಿದ್ದರೂ ಅರ್ಥವಾಗುತ್ತದೆ. ಸಿನಿಮಾದಲ್ಲಿ ಬಳಕೆಯಾಗುವ ತುಳು ಭಾಷೆಯು ಸರಳವಾಗಿ ಅರ್ಥ ಮಾಡಿಕೊಳ್ಳುವಂತಿರುತ್ತದೆ.

ಒಬ್ಬ ಸಾಹಿತ್ಯಕಾರನಾಗಿ ನಿಮ್ಮ ಪ್ರಕಾರ ಇತ್ತೀಚಿನ ತುಳು ಸಿನಿಮಾದ ಹಾಡುಗಳು ಜನಮನದಲ್ಲಿ ನಿಲ್ಲದಿರಲು ಕಾರಣವೇನು?

ಇಂದಿನ ಸಿನಿಮಾದ ಸಾಹಿತ್ಯಕ್ಕೂ ಹಿಂದಿನ ಸಿನಿಮಾದ ಸಾಹಿತ್ಯಕ್ಕೂ ಅಂತಹ ವ್ಯತ್ಯಾಸವಿಲ್ಲ. ಹಿಂದೆ ವರ್ಷಕ್ಕೆ ಒಂದು ಚಿತ್ರ ಬಿಡುಗಡೆಯಾಗಿ ಅದರ ಹಾಡುಗಳನ್ನು ಜನ ಪದೇಪದೇ ಕೇಳಿ ಅದರ ಅರ್ಥವನ್ನು ತಿಳಿದು ಕಂಠಪಾಠ ಮಾಡುತ್ತಿದ್ದರು.

ಹಾಗೆಯೇ ಉತ್ತಮ ಸಂಗೀತ, ಅರ್ಥಪೂರ್ಣ ಸಾಹಿತ್ಯವೂ ಇತ್ತು. ಆದರೆ ಈಗ ಜನರ ಮುಂದೆ ತುಂಬಾ ಸಿನಿಮಾಗಳು ಇರುವುದರಿಂದ ಯಾವ ಹಾಡುಗಳು ಹೆಚ್ಚು ಸಮಯ ನಿಲ್ಲುವುದಿಲ್ಲ.

ಅಗತ್ಯ ಇಲ್ಲವೆಂದರೂ ತುಳು ಸಿನಿಮಾಗಳಲ್ಲಿ ಹಾಸ್ಯಪ್ರಜ್ಞೆಗೆ ಬಹಳ ಒತ್ತು ಕೊಡಲಾಗುತ್ತಿದೆ ಏಕೆ?

ತುಳು ಪ್ರೇಕ್ಷಕನು ಹಿಂದಿನಿಂದಲೇ ಹಾಸ್ಯಕ್ಕೆ ಬಹಳ ಒತ್ತು ಕೊಡುತ್ತಾ ಬಂದಿದ್ದಾನೆ. ಆದ್ದರಿಂದ ಸಿನಿಮಾ ನಿರ್ಮಾಣ ಮಾಡುವವರು ಅದನ್ನೇ ಬಂಡವಾಳ ಮಾಡಿಕೊಳ್ಳುವುದು ಸಹಜ. ಪ್ರೇಕ್ಷಕನು ಕೂಡ 'ಸಿನಿಮಾ'ದ ಕುರಿತಾಗಿರುವ ತನ್ನ ನೋಟವನ್ನು ಬದಲಾಯಿಸಿ ಹೊಸತನವನ್ನು ಒಪ್ಪಿಕೊಳ್ಳುವಂತವನಾಗಬೇಕು.

ನಿಮ್ಮ ಪ್ರಕಾರ ಒಂದು ಸಿನಿಮಾ ಅಂದರೆ ಏನು?

ಸಿನಿಮಾ ಅಂದರೆ ಹಣ, ಹೆಸರು, ಪ್ರಚಾರ ಗಳಿಸುವ ಮಾರ್ಗ ಅಲ್ಲ. ಕೇವಲ ನಾಯಕ, ನಾಯಕಿ ಕೇಂದ್ರಿತವಾಗಿದ್ದು ಪ್ರೀತಿ–ಪ್ರೇಮದ ಸುತ್ತ ತಿರುಗಿದರೆ ಮಾತ್ರಕ್ಕೆ ಸಿನಿಮವಾಗಲಾರದು. ಮನರಂಜನೆಯ ಜೊತೆಗೆ ಕಲಾತ್ಮಕತೆಯು ಕೂಡಿಕೊಂಡಿದ್ದು ಅಲ್ಲೊಂದು ಸಾಮಾಜಿಕ ಪ್ರಜ್ಞೆಯು ಕೆಲಸ ಮಾಡುವಂತಿರಬೇಕು.

ಇಂದಿನ ಯುವ ನಿರ್ದೇಶಕರಿಗೆ ನಿಮ್ಮ ಕಿವಿಮಾತೇನು?

ಇಂದು ತಿಂಗಳಿಗೆ ಮೂರು–ನಾಲ್ಕು ತುಳು ಸಿನಿಮಾಗಳು ಬಿಡುಗಡೆಯಾಗುತ್ತಿವೆ. ಇದಕ್ಕೆ ಕಾರಣ ಸಿನಿಮಾಕ್ಕೆ ಹಣ ಹಾಕುವ ನಿರ್ಮಾಪಕರುಗಳು ಹೆಚ್ಚಾಗುತ್ತಿದ್ದಾರೆ. ಆದರೆ ಸಿನಿಮಾಕ್ಕಾಗಿ ಸಿನಿಮಾ ಮಾಡದೇ ಕನ್ನಡದಲ್ಲಿ ಬಂದಂತಹ ರಂಗಿತರಂಗ, ಕರ್ವ, ಗೋಧಿ ಬಣ್ಣ ಸಾಧಾರಣ ಮೈಕಟ್ಟು, ಯೂಟರ್ನ್‌ನಂತಹ ಹೊಸತನವನ್ನು ನೀಡುವಂತಹ, ಸ್ಪಷ್ಟ ಉದ್ದೇಶ ಇರುವಂತಹ ಸಿನಿಮಾಗಳಿಗೆ ಯುವ ನಿರ್ದೇಶಕರು ಒತ್ತು ನೀಡಬೇಕು.

ಹೊಸ ತುಳು ಸಿನಿಮಾದ ಯೋಜನೆಯ ಇದೆಯಾ?

ಮರಾಠಿಗೆ ಭಾಷಾಂತರಗೊಂಡ ನನ್ನ 'ಮದಿಮೆ' ಸಿನಿಮಾವನ್ನು ಗುಜರಾತಿ ಹಾಗೂ ಬೋಜ್‌ಪುರಿ ಭಾಷೆಯಲ್ಲಿ ಮಾಡಬೇಕೆಂಬ ಪ್ರಯತ್ನದಲ್ಲಿದ್ದೇನೆ. ಅದಲ್ಲದೆ ಇತ್ತೀಚೆಗೆ ತುಳು ಸಿನಿಮಾಗಳು ಸಾಕಷ್ಟು ಬರುತ್ತಿವೆ. ಕಾಲ ಪರಿಪಕ್ವತೆಯಾದಾಗ ಖಂಡಿತವಾಗಿಯೂ ಒಂದು ಒಳ್ಳೆಯ ಸಿನಿಮಾ ಮಾಡುತ್ತೇನೆ.

ಇತ್ತೀಚೆಗೆ ತುಳು ಸಿನಿಮಾ ನಿರ್ಮಾಪಕರ ಸಂಘ ರಚನೆಯಾಯಿತು. ಈ ಕುರಿತಾಗಿ ನಿಮ್ಮ ಅಭಿಪ್ರಾಯವೇನು?

ತುಳು, ಕೊಂಕಣಿ, ಕೊಡವ, ಬ್ಯಾರಿ ಹೀಗೆ ಪ್ರಾದೇಶಿಕ ಭಾಷೆಗಳಿಗೆ ಪ್ರತ್ಯೇಕ ಸಂಘ ಕಟ್ಟಿಕೊಳ್ಳುವುದಕ್ಕಿಂತ ಎಲ್ಲಾ ಪ್ರಾದೇಶಿಕ ಭಾಷೆಗಳಿಗೆ ಒಂದು ಸಂಘವನ್ನು ಅಥವಾ ಮಂಡಳಿಯನ್ನು ರಚಿಸುವುದು ಒಳ್ಳೆಯದು ಎಂಬುವುದು ನನ್ನ ಅಭಿಪ್ರಾಯ.



ಸಾಯಿಕೃಷ್ಣ ಕುಡ್ಲ

ಮೂಲತಃ ರಂಗಭೂಮಿಯಿಂದ ಬಂದ ಸಾಯಿಕೃಷ್ಣ ಕುಡ್ಲ ಅವರು ಒಬ್ಬ ನಟ, ನಿರ್ದೇಶಕ ಹಾಗೂ ನಿರ್ಮಾಪಕರಾಗಿದ್ದಾರೆ. ತುಳು ನಾಟಕದ ಮೂಲಕ ಮೊದಲೇ ಚಿರಪರಿಚಿತರಾಗಿರುವ ಇವರು ಸುದ್ಧ, ತೆಲಿಕೆದ ಬೊಳ್ಳಿ, ಕಂಚಿಲ್ದ ಬಾಲೆ, ಒರಿಯನ್ ತೂಂಡ ಒರಿಯಗಾಪುಜಿ ಮುಂತಾದ ತುಳು ಸಿನಿಮಾಗಳಲ್ಲಿ ಬಣ್ಣ ಹಚ್ಚಿ ಪ್ರಸ್ತುತ ನಿರ್ದೇಶನದತ್ತ ಮುಖ ಮಾಡಿ ಯಶಸ್ವಿಯನ್ನು ಕಂಡಿದ್ದಾರೆ.

ಕನ್ನಡದ ಖ್ಯಾತ ನಿರ್ದೇಶಕರಾದ ಗಿರೀಶ್ ಕಾಸರವಳ್ಳಿಯವರಿಂದ ನಟನೆಯಲ್ಲಿ 'ಸೈ' ಎನಿಸಿಕೊಂಡು ಅವರ 'ಗುಲಾಬಿ ಟಾಕೀಸು' ಕನ್ನಡ ಸಿನಿಮಾದಲ್ಲೂ ನಟಿಸಿರುತ್ತಾರೆ. 'ಸೂಂಬೆ' ತುಳು ಸಿನಿಮಾವನ್ನು ನಿರ್ದೇಶಿಸಿದ ಇವರು 'ಕುಡ್ಲ ಕೆಫೆ' ಸಿನಿಮಾದ ಕ್ರಿಯೇಟಿವ್ ಪ್ರೊಡ್ಯುಸರ್. 'ಜೋಕುಲಾಟಿಕೆ' ಅನ್ನುವ ತುಳು ಟೆಲಿಫಿಲ್ಮ್‌ನ ಯಶಸ್ಸಿನಿಂದ ಮುಂದೆ ಕನ್ನಡದಲ್ಲಿ 'ಚೆಲ್ಲಾಪಿಲ್ಲಿ' ಸಿನಿಮಾವನ್ನು ನಿರ್ದೇಶಿಸಿ ಗಾಂಧಿನಗರಕ್ಕೂ ಕಾಲಿಟ್ಟರು.

ಮೂಲತಃ ಓರ್ವ ನಾಟಕ ಕಲಾವಿದನಾಗಿದ್ದ ನಿಮಗೆ ಸಿನಿಮಾದ ನಟನೆ ಭಿನ್ನವಾಗಿ ಕಂಡಿತೆ?

ತುಳು ಸಿನಿಮಾ ರಂಗದಲ್ಲಿ ಇರುವವರು ಹೆಚ್ಚಿನವರು ಎಲ್ಲರೂ ನಾಟಕ ರಂಗದಿಂದಲೇ ಬಂದಿರುವವರು. ನಾಟಕದ ಅಭಿನಯದಲ್ಲಿ ಸಿಕ್ಕಿದ ಅನುಭವಗಳು ಸಿನಿಮಾ ರಂಗದಲ್ಲಿ ಇನ್ನಷ್ಟು ಪ್ರಬುದ್ಧತೆಯ ಕಡೆಗೆ ಕೊಂಡೊಯ್ದಿದೆ ಎನ್ನಬಹುದು.

ನಟರಾಗಿದ್ದ ನೀವು ನಿರ್ದೇಶನದತ್ತ ಒಲವು ತೋರಲು ಕಾರಣ ಅಥವಾ ಸ್ಫೂರ್ತಿ

ಮುಂಬಯಿನಿಂದ 'ಸುದ್ಧ' ಸಿನಿಮಾಕ್ಕಾಗಿ ಕರೆ ಬಂತು. ಅದಲ್ಲದೆ 'ಗುಲಾಬಿ ಟಾಕೀಸ್'ಗೆ ಗಿರೀಶ್ ಕಾಸರವಳ್ಳಿಯಿಂದ ಕರೆ ಬಂದಿತು. ಹೀಗೆ ಸ್ವಲ್ಪ ಮಟ್ಟಿಗೆ ಬೆಂಗಳೂರು ಹಾಗೂ ಮಂಬಯಿಯ ಕಲಾವಿದರ, ನಿರ್ದೇಶಕರ ಸಂಪರ್ಕ ಬೆಳೆಯಿತು. ಅದಲ್ಲದೆ ನನ್ನ 'ಜೋಕುಲಾಟಿಕೆ' ತುಳು ಟೆಲಿಫಿಲ್ಮ್‌ನ ಯಶಸ್ಸೇ ಮುಂದೆ ನನ್ನನ್ನು ನಿರ್ದೇಶನದತ್ತ ಸೆಳೆಯಿತು.

ಯುವ ನಿರ್ದೇಶಕರಾದ ನೀವು ಯಾವ ರೀತಿಯ ಚಿತ್ರವನ್ನು ನಿರ್ದೇಶಿಸಲು ಬಯಸುತ್ತೀರಿ?

ಸಿನಿಮಾದಲ್ಲಿ ಅಂತಹ ಯಾವುದೇ ರೀತಿಯ 'ಮಿತಿ'ಯನ್ನು ನಾನು ಇಟ್ಟಕೊಂಡಿಲ್ಲ. ಎಲ್ಲಾ ಚಿತ್ರಗಳನ್ನು ನಿರ್ದೇಶಿಸುವ ಆಸೆ ನನಗೆ ಇದೆ. ಚಿತ್ರ ಯಾವುದೇ ಇರಬಹುದು. ಅದನ್ನು ಗೆಲ್ಲಿಸುವ ಶಕ್ತಿ ನಿರ್ದೇಶಕನಲ್ಲಿ ಇರಬೇಕು. ಆ ಭರವಸೆಯಲ್ಲಿಯೇ ನಾನು ಕಾರ್ಯ ನಿರ್ವಹಿಸುತ್ತಿದ್ದೇನೆ.

ನಿರ್ದೇಶಕನಾಗಿ ಸಿನಿಮಾ ಮಾಡುವಾಗ ನಿಮಗೆ ಹಿರಿಯ ಕಲಾವಿದರ ಜೊತೆ ಸಹಕಾರ ಸಿಗುತ್ತಿದೆಯೇ?

ನಾನು ಎಲ್ಲಾ ಕಲಾವಿದರ ಜೊತೆಗೆ ಬೆರೆಯುತ್ತೇನೆ. ಹಾಗೆಯೇ ಕಲಾವಿದರಲ್ಲಿ ಕೂಡ ಹಿರಿಯ-ಕಿರಿಯ ಎಂಬ ಭೇದವಿಲ್ಲ, ಇರಬಾರದು. ನಾನು ಕೂಡಾ ಸ್ವತಃ ಕಲಾವಿದ ಆದ ಕಾರಣ ಎಲ್ಲರ ಸಹಕಾರ ಸಹಜವಾಗಿ ಸಿಗುತ್ತದೆ.

ತುಳು ಸಿನಿಮಾ ರಂಗದಲ್ಲಿಕೊಂಡು ಕನ್ನಡ ಚಿತ್ರರಂಗಕ್ಕೆ ಹೋಗುವ ಅನಿವಾರ್ಯತೆ ನಿಮಗಿತ್ತೆ?

ತುಳು ಸಿನಿಮಾದಲ್ಲಿಯೇ ಅವಕಾಶಗಳು ಸಾಕಷ್ಟಿದ್ದವು. ಆದರೆ 'ಸುದ್ಧ' ಚಿತ್ರಕ್ಕೆ ಪ್ರಶಸ್ತಿ ಬಂದಾಗ ಕಾಸರವಳ್ಳಿ ಅವರ 'ನಾಯಿನೆರಳು' ಸಿನಿಮಾಕ್ಕೆ ಪ್ರಶಸ್ತಿ ಬರಲಿಲ್ಲ. ಬಳಿಕ ಅವರು 'ಸುದ್ಧ' ಚಿತ್ರವನ್ನು ಕಂಡು ನನ್ನ ಅಭಿನಯವನ್ನು ನೋಡಿ ಕನ್ನಡ ಚಿತ್ರದಲ್ಲಿ ನಟಿಸುವ ಅವಕಾಶ ನೀಡಿದರು. ಹೀಗೆ ಅನಿವಾರ್ಯವಾಗಿ ನಾನು ಕನ್ನಡ ಚಿತ್ರರಂಗಕ್ಕೆ ಹೋಗಬೇಕಾಯಿತು.

ನಿಮ್ಮ ಕನ್ನಡ ಸಿನಿಮಾ 'ಚೆಲ್ಲಾಪಿಲ್ಲಿ'ಯಲ್ಲಿ ಹೆಚ್ಚಿನ ಕಲಾವಿದರು ಕರಾವಳಿಗರು ಇದ್ದ ಕಾರಣ ಅದೊಂದು 'ಪ್ರಾದೇಶಿಕ ಭಾಷಾಚಿತ್ರ' ಎಂಬ ಟೀಕೆಗೆ ಒಳಗಾದ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?

ನಾನು ಬೆಂಗಳೂರಿನ ಸಂಪರ್ಕದಿಂದ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟದ್ದು. ಕನ್ನಡ ಚಿತ್ರವನ್ನು ನಿರ್ಮಿಸಬೇಕೆಂಬ ಆಸೆ ಮೊದಲಿನಿಂದಲೇ ಇತ್ತು. ಹಾಗೆಯೇ ಭರವಸೆಯೂ ಇತ್ತು. ಸಿನಿಮಾ ಅಂದ ಮೇಲೆ ಟೀಕೆಗಳು ಸಹಜ. ನನ್ನ 'ಚೆಲ್ಲಾಪಿಲ್ಲಿ' ಸಿನಿಮಾ ಗೆದ್ದಿದೆಯೋ? ಇಲ್ಲವೋ? ಗೊತ್ತಿಲ್ಲ. ಆದರೆ ಸೋತಿಲ್ಲ ಎಂದು ಮಾತ್ರ ವಿಶ್ವಾಸದಿಂದ ಹೇಳುತ್ತೇನೆ.

ತುಳು ಸಿನಿಮಾಗಳಿಗೆ ಚಿತ್ರಮಂದಿರದ ಕೊರತೆಯಿದೆ ಇದರ ಬಗ್ಗೆ ನಿಮ್ಮ ಅನಿಸಿಕೆ

ತುಳು ಸಿನಿಮಾಗಳಿಗೆ ಚಿತ್ರ ಮಂದಿರದ ಕೊರತೆ ಇಲ್ಲ. ಸಿನಿಮಾಗಳನ್ನು ಒಟ್ಟಿಗೆ ಬಿಡುಗಡೆ ಮಾಡಿ ಅಂದುಕೊಂಡಂತಹ ಚಿತ್ರಮಂದಿರ ಸಿಗದಿದ್ದಾಗ ಇಂತಹ ಅಪವಾದಗಳು ಕೇಳಿ ಬರುತ್ತಿದೆ ಅಷ್ಟೇ. ಪ್ರೇಕ್ಷಕನಿಗೆ ಒಳ್ಳೆಯ ಚಿತ್ರಮಂದಿರಕ್ಕಿಂತ ಒಳ್ಳೆಯ ಸಿನಿಮಾ ಮುಖ್ಯವಾಗುತ್ತದೆ.

ಏಕಕಾಲದಲ್ಲಿ ಎರಡು-ಮೂರು ತುಳು ಸಿನಿಮಾಗಳು ಬಿಡುಗಡೆಯಾಗುತ್ತಿರುವುದು ತುಳು ಸಿನಿಮಾರಂಗಕ್ಕೆ ಪೂರಕವೇ? ಮಾರಕವೇ?

ಏಕಕಾಲದಲ್ಲಿ ಸಿನಿಮಾ ಬಿಡುಗಡೆ ಮಾಡಬೇಕಾದ ಸ್ಪರ್ಧೆಗೆ ಯಾರೂ ಇಳಿಯುವುದಿಲ್ಲ ಅಂತಹ ಸಂದರ್ಭ ಕೆಲವೊಮ್ಮೆ ಅನಿವಾರ್ಯವಾಗಿ ಒದಗಿ ಬರುತ್ತದೆ. ಅದಲ್ಲದೆ ಒಳ್ಳೆಯ ಸಿನಿಮಾವೆಂದರೆ ಪ್ರೇಕ್ಷಕ ಖಂಡಿತ ನೋಡಿಯೇ ನೋಡುತ್ತಾನೆ. ಒಂದು ಸಿನಿಮಾದಿಂದ ಇನ್ನೊಂದು ಸಿನಿಮಾಕ್ಕೆ ಹಾನಿಯಾಯಿತು ಎಂಬುವುದು ತಪ್ಪು.

ತುಳುಚಿತ್ರಗಳಿಗೆ ಸರಕಾರದ ಸಹಾಯಧನದ ಕುರಿತಾಗಿ ಏನಂತೀರಿ?

ಪ್ರಾದೇಶಿಕ ಭಾಷಾ ಸಿನಿಮಾಗಳಿಗೆ ಸರಕಾರದ ಸಹಾಯಧನ ಸಿಗುತ್ತದೆ ಎಂಬ ಮಾತಿದೆ. ಆದರೆ ಇದು ತಪ್ಪು. ಪ್ರಾದೇಶಿಕ ಭಾಷೆಯಲ್ಲಿ ನಿರ್ಮಾಣವಾದ ಎಲ್ಲಾ ಚಿತ್ರಗಳಿಗೆ ಸಹಾಯಧನ ದೊರೆಯುವುದಿಲ್ಲ. ವರ್ಷದಲ್ಲಿ ಐದು ಪ್ರಾದೇಶಿಕ ಚಿತ್ರಗಳಿಗೆ ಮಾತ್ರ. ಅದಲ್ಲದೆ ಈ ಸಹಾಯಧನಕ್ಕಾಗಿ ಐದಾರು ವರ್ಷ ಕಾಯಬೇಕು. ಉದಾಹರಣೆಗೆ 2012ರಲ್ಲಿ ನಿರ್ಮಾಣವಾದ 'ಆಮೇಟ್ ಅಸಲ್ ಈಮೇಟ್ ಕುಸಲ್' ಚಿತ್ರಕ್ಕೆ ಸಹಾಯಧನ ದೊರೆತಿರುವುದು 2016ರಲ್ಲಿ.

ತುಳು ಸಿನಿಮಾ ರಂಗದಲ್ಲಿ ಆಗಬೇಕಾದ ತಕ್ಷಣ ಬದಲಾವಣೆ ಏನು?

ಹಾಸ್ಯ ಪ್ರಧಾನ ಚಿತ್ರಗಳ ಬದಲಾಗಿ ಒಳ್ಳೆಯ ಕಥಾವಸ್ತು ಇರುವ, ಹೊಸತನವಿರುವ ಚಿತ್ರಗಳು ಬರಬೇಕು. ಪ್ರೇಕ್ಷಕನು ಕೂಡಾ ಚಿತ್ರವನ್ನು ನೋಡುವ ದೃಷ್ಟಿಕೋನವನ್ನು ಬದಲಾಯಿಸಬೇಕು.

ಒಟ್ಟು ತುಳು ಚಿತ್ರರಂಗದ ಬಗ್ಗೆ ನಿಮ್ಮ ಕನಸೇನು?

ಚಿತ್ರರಂಗವನ್ನು ಅರ್ಥಪೂರ್ಣವಾಗಿ ಕಟ್ಟಬೇಕೆಂಬ ಆಸೆ ನನ್ನದು, ಕೇವಲ ಸ್ವಾರ್ಥ, ಪ್ರತಿಷ್ಠೆಗಾಗಿ ಸಿನಿಮಾ ಮಾಡುವುದು ಕಲೆಯ ವಿಚಾರದಲ್ಲಿ ಸರಿ ಅಲ್ಲ. ಜೊತೆಗೆ ನಾಟಕಕ್ಕೆ ಅಂಟಿಕೊಂಡಿದ್ದ ಪ್ರೇಕ್ಷಕನು ಇಂದು ಸಿನಿಮಾದಲ್ಲೂ ಹಾಸ್ಯವನ್ನೇ ಬಯಸುತ್ತಾನೆ. ಪ್ರೇಕ್ಷಕನು ಕೂಡಾ ತನ್ನನ್ನು ತಾನು ಹೊಸತನಕ್ಕೆ ತೆರೆದುಕೊಂಡರೆ ತುಳು ಚಿತ್ರರಂಗದಲ್ಲಿ ಬದಲಾವಣೆಯ ಗಾಳಿ ಬೀಸಬಹುದು.

ಸುಹಾನ್ ಪ್ರಸಾದ್

2012–13ರಲ್ಲಿ 'ರಾಮೋಜಿ ಫಿಲ್ಮ್ ಸಿಟಿ'ಯಲ್ಲಿ ಚಿತ್ರಕಥೆ ಹಾಗೂ ನಿರ್ದೇಶನ ವಿಷಯದಲ್ಲಿ ಸ್ನಾತಕೋತ್ತರ ಡಿಪ್ಲೋಮ ಪದವಿಯನ್ನು ಪಡೆದ ಸುಹಾನ್ ಪ್ರಸಾದ್ ಅವರು ತುಳು ಚಿತ್ರರಂಗದ ಓರ್ವ ಉದಯೋನ್ಮುಖ ಯುವ ನಿರ್ದೇಶಕರು. ಕನ್ನಡ ಸಿನಿಮಾ 'ಚೆಲ್ಲಾಪಿಲ್ಲಿ'ಯಲ್ಲಿ ಸಹ ನಿರ್ದೇಶಕನಾಗಿ ಸಿನಿಮಾ ರಂಗಕ್ಕೆ ಕಾಲಿಟ್ಟ ಇವರು ತುಳುವಿನ ಯಶಸ್ವಿ ಚಿತ್ರ 'ರಂಗ್'ನ ನಿರ್ದೇಶಕರು. ಕನ್ನಡದಲ್ಲಿ 'ಒಂದು ಮೊಟ್ಟೆಯ ಕತೆ' ಚಿತ್ರವನ್ನು ನಿರ್ಮಿಸುತ್ತಿರುವ ಇವರು ಚಿತ್ರರಂಗದ ಆಳವಾದ ಅಧ್ಯಯನಕ್ಕೆ ತನ್ನನ್ನು ತಾನು ತೊಡಗಿಸಿಕೊಂಡ ಒಬ್ಬ ಆಸಕ್ತ ವಿದ್ಯಾರ್ಥಿಯೂ ಹೌದು. ಅವರ ಅಧ್ಯಯನ ಹಾಗೂ ತುಳು ಸಿನಿಮಾವನ್ನು ಅರ್ಥೈಸಿಕೊಂಡ ರೀತಿಯನ್ನು ಅವರ ಮಾತುಗಳಿಂದಲೇ ತಿಳಿಯೋಣ.

ತುಳು ಸಿನಿಮಾ ಕಲೆ, ಸಂಸ್ಕೃತಿಯಿಂದ ದೂರವಾಗುತ್ತಿದೆಯೇ?

ತುಳು ಭಾಷೆ, ಕಲೆ, ಸಂಸ್ಕೃತಿಯಿಂದ ಇಂದು ತುಳು ಸಿನಿಮಾ ದೂರವಾಗುತ್ತಿದೆ ಎಂಬುವುದನ್ನು ಒಪ್ಪಿಕೊಳ್ಳಬೇಕು. ತುಳುನಾಡು ಜನಪದ ಕಲೆಗಳ ಆಗರ. ಆದರೆ ಸಿನಿಮಾಗಳಲ್ಲಿ ಇದನ್ನು ಸಾಂದರ್ಭಿಕವಾಗಿ, ಪ್ರಯೋಗಾತ್ಮಕವಾಗಿ ಬಳಸುವಲ್ಲಿ ನಾವು ಸೋತಿದ್ದೇವೆ. ಕೆಲವರು ಕೇವಲ ಕೋಲ, ಕಂಬಳವನ್ನೇ ನಮ್ಮ ಸಂಸ್ಕೃತಿ ಎಂದು ತಿಳಿದಿದ್ದಾರೆ. ಕಲೆ, ಸಂಸ್ಕೃತಿಯ ಬಗ್ಗೆ ಇರುವ ನಮ್ಮ ತಿಳಿವಳಿಕೆಯನ್ನು ಮೊದಲು ವಿಸ್ತರಿಸಿಕೊಳ್ಳಬೇಕು, ಗಟ್ಟಿಗೊಳಿಸಬೇಕು.

ತುಳು ಚಿತ್ರರಂಗದತ್ತ ನೀವು ಆಸಕ್ತಿ ತೋರಲು ಕಾರಣವೇನು?

ನಮ್ಮ ಊರು, ಜನ, ಭಾಷೆ ಎಂದಾಗ ಎಲ್ಲರಲ್ಲಿಯೂ ಒಂದು ರೀತಿಯ ಪ್ರೀತಿ, ಅಭಿಮಾನ ಇದ್ದೇ ಇರುತ್ತದೆ. ಹಾಗೆಯೇ ಇಲ್ಲಿ ಏನಾದರೂ ಸಾಧನೆ ಮಾಡಬೇಕೆಂಬ ಹಂಬಲವೂ ಸಹಜ. ಆ ನೆಲೆಯಲ್ಲಿ ನಾನು ತುಳು ಚಿತ್ರರಂಗದತ್ತ ಆಸಕ್ತಿ ತೋರಿದೆ.

ಒಂದು ತುಳು ಸಿನಿಮಾ ನಿರ್ಮಾಣಕ್ಕೆ ಕನಿಷ್ಟ ಎಷ್ಟು ದಿನಗಳು ಬೇಕಾಗುತ್ತದೆ?

ಸಾಮಾನ್ಯವಾಗಿ ಒಂದು ಸಿನಿಮಾಕ್ಕೆ ಕನಿಷ್ಠ ಅಂದರೆ 35 ದಿನಗಳು ಸಾಕು. ಅದಲ್ಲದೆ ಸಿನಿಮಾಗಳ ಆಯಾ ಬಜೆಟ್‌ಗೆ ತಕ್ಕುದಾಗಿ ದಿನಗಳು ಹೆಚ್ಚು ಅಥವಾ ಕಡಿಮೆ ಆಗಬಹುದು.

ತುಳು ಸಿನಿಮಾಗಳಲ್ಲಿ ಹಾಸ್ಯ ಸನ್ನಿವೇಶ, ಹಾಸ್ಯ ಪಾತ್ರಗಳು ಅಗತ್ಯಕ್ಕಿಂತ ಹೆಚ್ಚು ವಿಜೃಂಭಿಸುತ್ತಿವೆ. ಇದು ಒಟ್ಟು ಚಿತ್ರದ ನೆಲೆಯಲ್ಲಿ ಒಳ್ಳೆಯದೇ?

ಜನರ ನಿರೀಕ್ಷೆ ಇದೆ ಎನ್ನುವ ಕಾರಣಕ್ಕೆ ಹಾಸ್ಯ ಚಿತ್ರ ಮಾಡುವುದು ಅಥವಾ ಚಿತ್ರಗಳಲ್ಲಿ ಅವಶ್ಯಕ ಇಲ್ಲದಿದ್ದರೂ ಹಾಸ್ಯ ವಿಜೃಂಭಿಸುವುದು ಒಟ್ಟು ಚಿತ್ರದ ನೆಲೆಯಲ್ಲಿ ಒಳ್ಳೆಯದಲ್ಲ. ಕೆಲವೊಮ್ಮೆ ಹಾಸ್ಯವೇ ಪ್ರಧಾನವಾಗಿ ಚಿತ್ರದ ಮೂಲ ಆಶಯ ಮರೆಯಾಗಬಹುದು.

ಪರಭಾಷಾ ಕಲಾವಿದರನ್ನು ತುಳು ಸಿನಿಮಾಗಳಲ್ಲಿ ಆಮದು ಮಾಡಿಕೊಳ್ಳುವುದು ಸರಿಯೇ?

ಪರಭಾಷಾ ಕಲಾವಿದರನ್ನು ತುಳು ಸಿನಿಮಾಕ್ಕೆ ಆಮದು ಮಾಡಿಕೊಳ್ಳುವುದು ಮಾರುಕಟ್ಟೆ ಹಾಗೂ ಪ್ರಚಾರದ ನೆಲೆಯಲ್ಲಿ ಒಳ್ಳೆಯದು ಎಂಬ ಒಂದು ಅಭಿಪ್ರಾಯವಿದೆ. ಆದರೆ ಇದರಿಂದ ಸ್ಥಳಿಯ ಕಲಾವಿದರೂ ಅವಕಾಶ ವಂಚಿತರಾಗಬಾರದು.

ಒಂದು ಚಿತ್ರದ ಸೋಲು-ಗೆಲುವಿನಲ್ಲಿ ನಿರ್ದೇಶಕನ ಪಾತ್ರ ಮಹತ್ವವಹಿಸುತ್ತದೆ. ಈ ಮಾತನ್ನು ಒಪ್ಪುವಿರಾ?

ಒಂದು ಚಿತ್ರ ಗೆದ್ದಾಗ ಹಾಗೂ ಸೋತಾಗ ಎರಡಕ್ಕೂ ನಿರ್ದೇಶಕನನ್ನೇ ಹೊಣೆ ಮಾಡುವುದು ಸಹಜ. ಸಿನಿಮಾದಲ್ಲಿ ಪ್ರಧಾನ ಪಾತ್ರ ವಹಿಸುವವನು ನಿರ್ದೇಶಕ ಅನ್ನುವುದನ್ನು ಕೂಡಾ ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಸಿನಿಮಾದ ಯಶಸ್ಸಿಗೆ ಆತನೊಬ್ಬನ ಕೈಚಳಕ ಸಾಕಾಗದು. ಹಾಗೆಯೇ ಸಿನಿಮಾದ ಸೋಲು-ಗೆಲುವಿನಲ್ಲಿ ಎಲ್ಲರ ಪಾತ್ರವಿದೆ.

ಯುವ ನಿರ್ದೇಶಕನಾಗಿ ತುಳು ಚಿತ್ರರಂಗದ ಬೆಳವಣಿಗೆಯ ಬಗ್ಗೆ ನಿಮ್ಮ ನಿಲುವು ಏನು?

ತುಳು ಸಿನಿಮಾಗಳು ಕತೆಗಿಂತ ಆ ಕತೆಯನ್ನು ತೋರಿಸುವ ದೃಷ್ಟಿಯನ್ನು ಬದಲಾಯಿಸಬೇಕು. ನಮ್ಮ ಮಣ್ಣಿನ ಕತೆಯನ್ನೇ ಆಧರಿಸಿದ ಕನ್ನಡದ 'ರಂಗಿತರಂಗ' ಯಾವ ಯಶಸ್ಸನ್ನು ಗಳಿಸಿತು ಎಂಬುವುದನ್ನು ನಾವು ಕಾಣುತ್ತೇವೆ. ಹಾಗೆಯೇ ಹೊಸ ಪಾತ್ರಗಳ ಪರಿಚಯ ಆಗಬೇಕು. ಮಾತ್ರವಲ್ಲ ಆ ಹೊಸ ಪಾತ್ರಗಳು ಚಿತ್ರಕ್ಕೆ ನ್ಯಾಯ ಸಲ್ಲಿಸುವಂತಿರಬೇಕು.

ತುಳು ಪ್ರೇಕ್ಷಕನ ಕುರಿತಾಗಿ ಏನು ಹೇಳುವಿರಿ.

ತುಳು ಪ್ರೇಕ್ಷಕ ಬುದ್ಧಿವಂತ. ಆತನಿಗೆ ಒಳ್ಳೆಯ ಸಿನಿಮಾಗಳನ್ನು ನೋಡುವ ಆಯ್ಕೆ ಇದೆ. ಅದಲ್ಲದೆ ತುಳುನಾಡಿನಲ್ಲಂತೂ ನಾಲ್ಕೈದು ಭಾಷೆಗಳ ಸಿನಿಮಾಗಳು ಪ್ರದರ್ಶನವಾಗುವುದರಿಂದ ತನ್ನ ಭಾಷೆಯನ್ನು ಮೀರಿದ ಆಯ್ಕೆ ಮಾಡುವ ಸ್ವಾತಂತ್ರ್ಯ ಅವನಿಗಿದೆ. ಹಾಗಾಗಿ ಅಂತಹ ಬುದ್ಧಿವಂತ ಪ್ರೇಕ್ಷಕನನ್ನು ಸೆಳೆಯುವಂತಹ ಸಿನಿಮಾಗಳು ತುಳುವಿನಲ್ಲಿ ಬರಬೇಕು.

ಪ್ರಸ್ತುತ ಸಂದರ್ಭದಲ್ಲಿ ತುಳು ಸಿನಿಮಾದ ಸ್ಥಿತಿಗತಿ ಹೇಗಿದೆ?

ಪ್ರಸ್ತುತ ತುಳು ಸಿನಿಮಾಗಳಲ್ಲಿ ಹೊಸತನವಿಲ್ಲ. ಅಂತಹ ಛಾಪನ್ನು ಕೂಡಾ ಮೂಡಿಸುತ್ತಿಲ್ಲ. ತುಳು ಸಿನಿಮಾ ಯಶಸ್ಸು ಎನ್ನುವುದು ಕೂಡಾ ಅಷ್ಟೇ ಕಷ್ಟ. ಏಕೆಂದರೆ ಇದು ಬಹುಭಾಷಿಕರ ನೆಲೆಯಾದ್ದರಿಂದ ಇಲ್ಲಿ ತುಳು ಸಿನಿಮಾವನ್ನು ಗೆಲ್ಲಿಸುವುದು ಒಂದು ಸವಾಲು. ಹಾಗಾಗಿ ಚಿತ್ರಕ್ಕೆ ಹಾಕಿದ ಹಣ ವಾಪಾಸ್ಸು ಬರುತ್ತಿಲ್ಲ.

ಪ್ರಸ್ತುತ ಸಂದರ್ಭದಲ್ಲಿ ತುಳು ಸಿನಿಮಾದ ಸ್ಥಿತಿ-ಗತಿ

ಚಲಿಸುವ ಚಿತ್ರಗಳ ಮೂಲಕ ನಮ್ಮ ಕಣ್ಣು-ಕಿವಿಗೆ ವಿಶಿಷ್ಟ ಅನುಭವದೊಂದಿಗೆ ಒಂದು ಪ್ರಪಂಚವನ್ನೇ ಕಟ್ಟಿಕೊಡುವುದೇ 'ಸಿನಿಮಾ'. ಈ ಸಿನಿಮಾ ಎಂಬ ಪ್ರಪಂಚದಲ್ಲಿ ತುಳು ಚಿತ್ರರಂಗವು 1971ರಲ್ಲಿ ತನ್ನ ಪ್ರಥಮ ಹೆಜ್ಜೆಯನ್ನಿಟ್ಟಿತು. ಸಮೃದ್ಧವಾದ ತುಳು ರಂಗಭೂಮಿಯ ಯಶಸ್ಸೇ ಇದಕ್ಕೆ ಪ್ರೇರಣೆ ಎನ್ನಬಹುದು. ಹಂತಹಂತವಾಗಿ ಮೆಟ್ಟಿಲೇರುತ್ತಾ ಬರುವ ಸಂದರ್ಭದಲ್ಲಿ ಅನೇಕ ಏಳುಬೀಳುಗಳನ್ನು ಕಂಡಿವೆ. ಕೊಡವ, ಬ್ಯಾರಿ, ಕೊಂಕಣಿ, ಬಂಜಾರ ಮುಂತಾದ ಪ್ರಾದೇಶಿಕ ಭಾಷಾ ಚಿತ್ರಗಳ ನಡುವೆ 'ತುಳು ಸಿನಿಮಾ' ತನ್ನ ಅಸ್ತಿತ್ವವನ್ನು ಗಟ್ಟಿಯಾಗಿ ಅಭಿವ್ಯಕ್ತಿಸುತ್ತಿದೆ. ಅಚ್ಚರಿಯಾಗುವ ಮಟ್ಟಿಗೆ ತುಳು ಚಿತ್ರರಂಗ ವೇಗವಾಗಿ ಮುನ್ನುಗ್ಗುತ್ತಿರುವ ಈ ಸಂದರ್ಭದಲ್ಲಿ ತುಳು ಸಿನಿಮಾದ ಸ್ಥಿತಿ-ಗತಿ ಹೇಗಿದೆ ಎಂಬುವುದನ್ನು ತಿಳಿಯೋಣ.

ನಮ್ಮ ಸಮಾಜದಲ್ಲಿ ನಡೆದಂತಹ ಸಂಗತಿಗಳನ್ನು ಬಹುಬೇಗ ಜನರಿಗೆ ತಲುಪಿಸುವ ಕಾರ್ಯವನ್ನು ಇಂದು ಮಾಧ್ಯಮಗಳು ಮಾಡುತ್ತಿವೆ. ಅದರಲ್ಲೂ ದೃಶ್ಯ ಮಾಧ್ಯಮ, ಬರಹ ಮಾಧ್ಯಮಕ್ಕಿಂತ ವೇಗವಾದುದು ಶ್ರವ್ಯ ಮಾಧ್ಯಮ. ಆದರೆ ಬರಹ ಹಾಗೂ ಶ್ರವ್ಯ ಮಾಧ್ಯಮಕ್ಕಿಂತ ಜನಪ್ರಿಯವಾದುದು, ಆಕರ್ಷಕವಾದುದು ದೃಶ್ಯ ಮಾಧ್ಯಮ. ಇತ್ತೀಚೆಗೆ ಬರಹ ಮಾಧ್ಯಮವಾದ ಪತ್ರಿಕೆಗಳು, ಶ್ರವ್ಯ ಮಾಧ್ಯಮವಾದ ಎಫ್.ಎಂ. ರೇಡಿಯೊಗಳು ಮತ್ತು ದೃಶ್ಯ ಮಾಧ್ಯಮವಾದ ಟಿವಿ ಚಾನೆಲ್‌ಗಳು ಸಿನಿಮಾದ ಪ್ರಚಾರವನ್ನು ಮಾಡಿ ಪ್ರೇಕ್ಷಕನನ್ನು ಚಿತ್ರಮಂದಿರಕ್ಕೆ ಸೆಳೆದು ತರುವಷ್ಟು ಪ್ರಭಾವಶಾಲಿಯಾಗಿದೆ ಹಾಗೂ ಸಿನಿಮಾ ರಂಗವನ್ನು ಬೆಳೆಸುತ್ತಿದೆ. ಈಗ ಹಳ್ಳಿಹಳ್ಳಿಗಳಲ್ಲೂ ಸಿನಿಮಾ ಮಂದಿರಗಳಿವೆ. ಅಲ್ಲದೆ ಅಂತರ್ಜಾಲದಿಂದ ಕೂಡಾ ಸಿನಿಮಾಗಳು ಕೈಗೆಟಕುವ ಕಾಲ. ಒಂದು ವೇಳೆ ನಮ್ಮ ನಡುವೆ ಇರುವ ಯಾರಾದರೂ ಒರ್ವ ವ್ಯಕ್ತಿ ನಾನು ಸಿನಿಮಾ ನೋಡಿಯೇ ಇಲ್ಲ ಅಂದರೆ ಅದೊಂದು ವಿಶೇಷ ಸುದ್ದಿಯಾಗುವಷ್ಟು ಮಟ್ಟಿಗೆ ಸಿನಿಮಾ ರಂಗ ವ್ಯಾಪಿಸಿದೆ.

ಕಲೆಯಾಗಿ ರೂಪುಗೊಂಡ ಸಿನಿಮಾವು ಇಂದು ಉದ್ಯಮವಾಗಿ ಬೆಳೆದಿದೆ ಎಂಬುವುದನ್ನು ನಾವು ಒಪ್ಪಲೇಬೇಕು. ಸಿನಿಮಾ ಒಂದು ಉದ್ಯಮವಾಗಿದೆ. ಹಾಗಂತ ಅದನ್ನು ಸಂಸ್ಕೃತಿಯಲ್ಲ, ಸಂಸ್ಕೃತಿಯ ಭಾಗವಲ್ಲ ಎಂದು ಖಂಡಿತ ಹೇಳಲಾಗದು. ಆದರೆ ಇಂದಿನ ಸಿನಿಮಾಗಳು ಈ ಪರಂಪರೆ, ಸಂಸ್ಕೃತಿಯ ಬೇರಿನಿಂದ ಕಳಚಿಕೊಂಡು ಕೇವಲ ಮನರಂಜನೆಗೆ ಆದ್ಯತೆ ನೀಡುತ್ತಿದೆ. ಹಾಗಾಗಿ 70%ರಷ್ಟು ಜನರಿಗೆ ಲಾಂಗು-ಮಚ್ಚು, ಪ್ರೀತಿ-ಪ್ರೇಮ, ಪ್ರಿಯತಮೆಗಾಗಿ ಹೋರಾಟ ಇವುಗಳೇ ಚಲನಚಿತ್ರ ಆಗಿಬಿಟ್ಟಿದೆ. ನಿಜಜೀವನದಲ್ಲಿ ನಡೆಯಲಾಗದಂತಹ, ಊಹಿಸಲು ಅಸಾಧ್ಯವಾದಂತಹ ಹೊಡೆದಾಟಗಳು, ಪ್ರೇಮಕತೆಗಳು ಹೆಚ್ಚಿನ ಚಿತ್ರಗಳಲ್ಲಿ ನುಸುಳಿಕೊಂಡಿವೆ. ಇಂತಹ ಸಿನಿಮಾಗಳನ್ನು ಬುದ್ಧಿವಂತನಾದ ಪ್ರೇಕ್ಷಕನು ಅದೇಗೆ ಒಪ್ಪಿಕೊಳ್ಳುತ್ತಿದ್ದಾನೆ ಎಂಬುವುದು ಪ್ರಶ್ನಾರ್ಹ. "ನಾವು ಕೇವಲ ಮನರಂಜನೆಗೆಂದಷ್ಟೇ ಸಿನಿಮಾ ನೋಡದೆ ಮನರಂಜನೆ ಅದರ ಒಂದು ಭಾಗವೆಂದಷ್ಟೇ ಪರಿಗಣಿಸಬೇಕು" ಎಂಬ ಕನ್ನಡದ ಖ್ಯಾತ ಕತೆಗಾರ ಎಸ್. ದಿವಾಕರ್ ಅವರ ಮಾತುಗಳನ್ನು ನಾವಿಲ್ಲಿ ಗಮನಿಸಬೇಕು.

ಸೀಮಿತ ಮಾರುಕಟ್ಟೆಯಿದ್ದರೂ ತುಳುವಿನಲ್ಲಿ ಒಂದು ಚಿತ್ರ ತಯಾರಿಸಲು ಇಂದು ಕನಿಷ್ಠವೆಂದರೂ 40-50 ಲಕ್ಷ ರೂಪಾಯಿ ಬೇಕೆನ್ನುತ್ತಾರೆ. ಇದಕ್ಕೆ ಕಾರಣ ಚಿತ್ರದ ಬಜೆಟನ್ನು ಹೆಚ್ಚಿಸಿದಷ್ಟು ಚಿತ್ರ ಹಿಟ್ ಆಗುತ್ತದೆ ಎಂಬ ತಪ್ಪು ಕಲ್ಪನೆ. ಅಭಿಮಾನವೋ, ಪ್ರಚಾರವೋ, ಪ್ರತಿಷ್ಠೆಯೋ ಅಂತು ಸಿನಿಮಾಕ್ಕೆ ಹಣ ಹಾಕುವವರಿಗೆ ಇಂದು ಬರವಿಲ್ಲ. ಆದರೆ ಸಿನಿಮಾದ ಯಾವ ಕ್ಷೇತ್ರಕ್ಕೆ ಎಷ್ಟೆಷ್ಟು ವ್ಯಯ ಮಾಡಬೇಕೆಂಬ ಯೋಜನೆ ಇರುವುದಿಲ್ಲ. ಮೊದಲಾಗಿ ಸಿನಿಮಾದ ಹೆಚ್ಚಿನ ಹಣವನ್ನು ಇಂದು 'ಪುಕ್ಕಟೆ ಪ್ರಚಾರ'ವೇ ನುಂಗಿ ಬಿಡುತ್ತಿದೆ.

ಸಾಹಿತ್ಯಕ್ಕಿಂತಲೂ ಸಿನಿಮಾ ಒಂದು ಕಾಲಘಟ್ಟದ ಸಂಸ್ಕೃತಿಯನ್ನು, ಜೀವನ ಶೈಲಿಯನ್ನು ಯಥಾವತ್ತಾಗಿ ಹಾಗೂ ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತದೆ ಎಂಬುವುದು ಚಿತ್ರ ವಿಮರ್ಶಕರ ಮಾತು. ಒಂದು ಪರದೆಯೊಳಗೆ ನಮ್ಮೆಲ್ಲಾ ಏಕಾಗ್ರತೆಯನ್ನು ಒಂದು ಕ್ಷಣ ಸಿನಿಮಾ ಹಿಡಿದಿರಬಹುದು. ಆದರೆ ಪರದೆಯಿಂದ ದೂರವಾದ ನಂತರ ಆ ಸಿನಿಮಾ ನಮ್ಮನ್ನು ಎಷ್ಟರ ಮಟ್ಟಿಗೆ ಕಾಡುತ್ತದೆ ಎನ್ನುವುದೇ ಪ್ರಶ್ನೆ. ಸಿನಿಮಾದ ಪ್ರಚಾರದ ಅಬ್ಬರವನ್ನು ಕಂಡು ಸಿನಿಮಾ ಮಂದಿರದ ಒಳಹೊಕ್ಕ ಪ್ರೇಕ್ಷಕನಿಗೆ ತನ್ನ ಸಮಯ ಹಾಗೂ ಕೊಟ್ಟ ಹಣಕ್ಕೆ ನ್ಯಾಯ ಒದಗಿಸುವಂತಹ ಸಿನಿಮಾಗಳು ನಿರ್ಮಾಣವಾಗಲಿ.

ಒಂದು ಒಳ್ಳೆಯ ಸಮಾಜವನ್ನು ರೂಪಿಸಬೇಕಾದ ಸಿನಿಮಾವು ಇಂದು ಆ ಸಮಾಜವನ್ನೇ ದಾರಿ ತಪ್ಪಿಸುವಂತಿದೆ. ಚಿಂತನೆ ಮೂಡಿಸಬೇಕಾದ ಚಿತ್ರಗಳು ಪ್ರೇಕ್ಷಕರಲ್ಲಿ ಈ ಚಿತ್ರಕ್ಕೆ ಏಕೆ ಬಂದೆ? ಎಂಬ ಚಿಂತೆಯನ್ನು ಮೂಡಿಸುವಂತಿರಬಾರದು. ಒಂದು ಸಿನಿಮಾವನ್ನು ವೀಕ್ಷಿಸಿದ ನಂತರದ ಕೆಲವಾರು ದಿನಗಳವರೆಗೂ ನಮ್ಮನ್ನು ಕಾಡುವಂತಹ ಕಥಾವಸ್ತುವನ್ನು ಒಳಗೊಂಡಿರಬೇಕು. ಪ್ರಸ್ತುತ ಸಮಾಜಕ್ಕೆ ಸಂಬಂಧಿಸಿದ್ದಂತೆ, ಜೊತೆಗೆ ಜ್ವಲಂತ ಸಮಸ್ಯೆಗಳ ಅರಿವನ್ನು ಮೂಡಿಸುವಂತಿದ್ದು, ಸ್ಥಳೀಯ ಭಾಷೆ ಮತ್ತು ಸಂಸ್ಕೃತಿಯ ಕಾಳಜಿಯನ್ನು ಅಳವಡಿಸಿಕೊಳ್ಳುವಂತಿರಬೇಕು.

ಅನಾವಶ್ಯಕವಾದ ಗೊಂದಲಗಳಿಗೆ, ವಿವಾದಗಳಿಗೆ ತುಳು ಚಿತ್ರರಂಗದಲ್ಲಿ ಅವಕಾಶವನ್ನು ಕಲ್ಪಿಸಬಾರದು. ಇತ್ತೀಚಿನ ದಿನಗಳಲ್ಲಿ ತುಳು ಚಿತ್ರರಂಗ ಬೆಳೆದಂತೆಯೇ ಚಿತ್ರರಂಗದೊಳಗೆಯೇ ಬಿಡುಗಡೆ, ಚಿತ್ರದ ಹೆಸರು ಹಾಗೂ ಚಿತ್ರಮಂದಿರ ಮುಂತಾದ ಕೆಲವು ವಿಚಾರಗಳ ಕುರಿತಾಗಿ ವಾದ-ವಿವಾದಗಳನ್ನು ಕಂಡಾಗ ತುಳು ಚಿತ್ರರಂಗಕ್ಕೆ ತನ್ನದೇ ಆದ ಪ್ರತ್ಯೇಕ ಮಂಡಳಿ ಇದ್ದರೆ ಚೆನ್ನಾಗಿರುತಿತ್ತು ಎನ್ನುವಂತಿದೆ. ಒಂದು ನೆಲೆಯಲ್ಲಿ ಕಂಡಾಗ ನಾಯಕ ನಟರಿಗಿಂತ ಚಿತ್ರ ನಿರ್ಮಾಪಕರ ಪ್ರಭಾವ, ಹಿಡಿತ ತುಳು ಸಿನಿಮಾ ರಂಗದ ಮೇಲೆ ಹೆಚ್ಚಾಗುತ್ತಿದೆ. ಅಂದರೆ ನಟನೆ, ಕಲೆ ಇವೆಲ್ಲವುಗಳನ್ನು ಹಣ ನುಂಗಿ ಹಾಕುತ್ತಿದೆ.

ಸಿನಿಮಾಗಳಲ್ಲಿ ಕಥಾವಸ್ತುಕೇಂದ್ರಿತ, ಪಾತ್ರಕೇಂದ್ರಿತ, ಚಿಂತನಾಕೇಂದ್ರಿತ, ಸಾಹಿತ್ಯಕೇಂದ್ರಿತ ಎಂಬ ಅನೇಕ ಬಗೆಯ ಸಿನಿಮಾಗಳಿವೆ. ಭಾರತೀಯ ಚಿತ್ರರಂಗದ ಆರಂಭದ ಕಾಲದಲ್ಲಿ 'ಕಥಾಕೇಂದ್ರಿತ' ಸಿನಿಮಾಗಳೇ ಇರುತ್ತಿದ್ದವು. ಬರುಬರುತ್ತಾ 'ನಾಯಕ ಪ್ರಧಾನ ಚಿತ್ರ'ಕ್ಕೆ ಬದಲಾಯಿತು. ಇದರ ಛಾಯೆ ಇಂದಿನವರೆಗೂ ಚಿತ್ರರಂಗವನ್ನು ಆವರಿಸಿತ್ತು. ಆದರೆ ಕನ್ನಡ ಚಿತ್ರರಂಗವು ಕಳೆದ ಎರಡು ವರ್ಷಗಳಿಂದ ಕಥಾವಸ್ತುಕೇಂದ್ರಿತ ಚಿತ್ರಗಳಿಗೆ ಒತ್ತುಕೊಟ್ಟು ಯಶಸ್ವಿಯಾಯಿತು. ಆದರೆ ನಮ್ಮ ತುಳುಚಿತ್ರರಂಗ ಮಾತ್ರ ಹಾಸ್ಯ ಮತ್ತು ಪಾತ್ರಕೇಂದ್ರಿತ ಚಿತ್ರಗಳಲ್ಲಿಯೇ ಬಂಧಿಯಾಗಿರುವುದನ್ನು ಒಳ್ಳೆಯ ಬೆಳವಣಿಗೆ ಎನ್ನಲಾರದು.

ಸಾಹಿತ್ಯ ಹಾಗೂ ರಂಗಭೂಮಿಯಲ್ಲಿ ಮಹಿಳೆ ತನ್ನ ಅಸ್ಮಿತೆಯ ಹುಡುಕಾಟವನ್ನು ಕಂಡ ಬಳಿಕ ಸಿನಿಮಾ ಮಾಧ್ಯಮವನ್ನು ಕೂಡಾ ಪರಿಣಾಮಕಾರಿಯಾಗಿ ಬಳಸಿಕೊಂಡಳು. ಆದರೆ ಸಿನಿಮಾದಲ್ಲಿ ಆಕೆಯನ್ನು ಬಳಸಿಕೊಂಡ ರೀತಿ ಅಸಮರ್ಪಕ. ಸಿನಿಮಾದಲ್ಲಿ ಹೆಣ್ಣಿನ ಪ್ರದರ್ಶನ ಕೇವಲ ಪ್ರಚಾರಕ್ಕಾಗಿ, ಮಾರುಕಟ್ಟೆಗಾಗಿ ಬಳಕೆಯಾಗಬಾರದು. ಕತೆಗೆ ಪೂರಕವಲ್ಲದಿದ್ದರೂ ಆಕೆಯನ್ನು ಒದ್ದೆ ಅಥವಾ ತುಂಡುಬಟ್ಟೆಯಲ್ಲಿ ನಿಲ್ಲಿಸುವಂತಹ ಹಳೆ ತಂತ್ರಗಳನ್ನು ಹೊಸ ನಿರ್ದೇಶಕರು ಕೈ ಬಿಡಬೇಕು. ಬದಲಾಗಿ ಒಂದಿಷ್ಟು ಮಹಿಳಾ ಸಂವೇದನೆಗಳನ್ನು ಚಿತ್ರಿಸುವ ಸಿನಿಮಾದತ್ತ ತುಳು ಚಿತ್ರರಂಗ ಗಮನವಹಿಸಬೇಕಾಗಿದೆ. ಉದಾ: ದಲಿತ ಸಂವೇದನೆಗಳನ್ನು 'ದೇವೆರ್', 'ಗಗ್ಗರ' ಸಿನಿಮಾಗಳು ವ್ಯಕ್ತಪಡಿಸಿವೆ.

ತುಳು ಸಾಹಿತ್ಯ ಜಗತ್ತು ಕಟ್ಟಿಕೊಟ್ಟ ತುಳು ಸಮಾಜಕ್ಕೂ ಹಾಗೂ ತುಳು ಸಿನಿಮಾ ಜಗತ್ತು ಕಟ್ಟಿಕೊಟ್ಟ ತುಳು ಸಮಾಜಕ್ಕೂ ಬಹಳಷ್ಟು ಅಂತರಗಳಿವೆ, ಭಿನ್ನತೆಗಳಿವೆ. ಎಲ್ಲೋ ಸಿನಿಮಾಗಳು ಸಾಹಿತ್ಯವು ಹೇಗೆ ಜನರ ಜೀವನಕ್ಕೆ ಹತ್ತಿರವಾಗಿ ಇದ್ದವೋ ಅಷ್ಟು ಹತ್ತಿರವಾಗಲಿಲ್ಲ. ನೈಜ್ಯತೆ, ವಾಸ್ತವತೆಗಿಂತ ಕಾಲ್ಪನಿಕ ಜಗತ್ತಿನ ಮೂಲಕ ಮನರಂಜನೆಗಷ್ಟೇ ಆದ್ಯತೆ ನೀಡಲಾಯಿತು. ಹಾಗಾಗಿಯೇ ತುಳು ಸಿನಿಮಾಗಳು ನಾಡು-ನುಡಿಯ ಬಗ್ಗೆ ಅಭಿಮಾನವನ್ನು ಮೂಡಿಸುವಲ್ಲಿ ಕೂಡ ವಿಫಲವಾಗಿವೆ. ಏಕೆಂದರೆ ಪ್ರಸ್ತುತ ನಮ್ಮ ತುಳುನಾಡಿನ ಜೀವನದಿ 'ನೇತ್ರಾವತಿ'ಯ ಹೋರಾಟಕ್ಕೆ ಕೈ ಜೋಡಿಸಿದ, ಬೆಂಬಲಿಸಿದ ಜನರನ್ನು ಕಂಡಾಗ ಇದು ಸ್ಪಷ್ಟವಾಗುತ್ತದೆ.

80ರ ದಶಕದಲ್ಲಿ ಜೀತ ಪದ್ಧತಿ, ಅಸ್ಪೃಶ್ಯತೆ, ನಗರೀಕರಣ, ಭ್ರಷ್ಟಚಾರ, ಮಹಿಳೆಯರ ಶೋಷಣೆ ಮುಂತಾದ ಸಮಸ್ಯೆಗಳು ಸಿನಿಮಾ ರಂಗದಲ್ಲಿ ಬಯಲಾಯಿತು. ಕನ್ನಡದಲ್ಲಿ ಗಿರೀಶ್ ಕಾಸರವಳ್ಳಿ ಅವರ ಘಟಶ್ರಾದ್ಧ, ತಬರನ ಕಥೆ ಇತ್ಯಾದಿ ಸಿನಿಮಾಗಳಲ್ಲಿ ಈ ಅಂಶಗಳನ್ನು ಕಾಣುತ್ತೇವೆ. 1970ರಲ್ಲಿ ಬಿಡುಗಡೆಯಾದ 'ಸಂಸ್ಕಾರ' ಭಾರತೀಯ ಚಿತ್ರರಂಗ ಕನ್ನಡದ ಕಡೆಗೆ ತಿರುಗಿ ನೋಡುವಂತೆ ಪ್ರೇರೇಪಿಸಿತು ಹಾಗೂ ಕಲಾತ್ಮಕ ಸಿನಿಮಾಗಳು ವೈಚಾರಿಕ ಪ್ರಜ್ಞೆಗೆ ಹೇಗೆ ಆದ್ಯತೆ ನೀಡಿತು ಮುಂತಾದ ವಿಚಾರಗಳತ್ತ ತುಳು ಸಿನಿಮಾ ನಿರ್ದೇಶಕರು ಗಮನ ಹರಿಸಬೇಕು.

ಒಂದು ವರ್ಷಕ್ಕೆ ಇಂತಿಷ್ಟು ಚಿತ್ರಗಳು ನಿರ್ಮಾಣವಾಗಬೇಕು ಎಂಬ ನೀತಿಯನ್ನು ರೂಪಿಸುವುದು ಕಷ್ಟವಾದರೆ ಚಿತ್ರ ಬಿಡುಗಡೆಯ ವಿಚಾರದಲ್ಲಿ ಕಟ್ಟುನಿಟ್ಟಿನ ಕ್ರಮವನ್ನು ಜಾರಿಗೊಳಿಸಬೇಕು. ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿರುವ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳಲ್ಲಿ ಕನಿಷ್ಟ ಒಂದು ಪರದೆಯಲ್ಲಾದರೂ ತುಳುಚಿತ್ರದ ಕಡ್ಡಾಯ ಪ್ರದರ್ಶನ ಆಗಬೇಕು. ಹಾಗೂ ಟಿಕೆಟ್ ಶುಲ್ಕವನ್ನು ಜಿಲ್ಲೆ, ತಾಲೂಕು, ಗ್ರಾಮಾಂತರ ವಿಭಾಗಗಳಿಗೆ ಪ್ರತ್ಯೇಕಿಸಿ ಭಿನ್ನ ದರ ಜಾರಿಗೊಳಿಸಬೇಕು. ಈ ಮೂಲಕ ಇನ್ನಷ್ಟು ಪ್ರೇಕ್ಷಕರನ್ನು ಚಿತ್ರಮಂದಿರದತ್ತ ಸೆಳೆಯುವಂತಾಗಬೇಕು. ತುಳುವಿನಲ್ಲಿ ನಿರ್ಮಾಣವಾಗುವ ಗುಣಮಟ್ಟವಿರುವ ಎಲ್ಲಾ ಕಲಾತ್ಮಕ ಚಿತ್ರಗಳಿಗೆ ಸರಕಾರದಿಂದ ವಿಶೇಷ ಸಹಾಯಧನ ಸಿಗುವಂತೆ ಪ್ರಯತ್ನಿಸಬೇಕು.

ಕೇರಳದಲ್ಲಿ ಪರಭಾಷಾ ಚಿತ್ರಗಳ ಮೇಲೆ ಪ್ರತಿ ಟಿಕೆಟ್‌ನಲ್ಲಿ ರೂ.3ರಿಂದ 5.ರೂ ಹೆಚ್ಚುವರಿ ಶುಲ್ಕ ವಿಧಿಸಲಾಗುತ್ತದೆ. ಇದರಿಂದ ವರ್ಷಕ್ಕೆ ಸುಮಾರು 10 ಕೋಟಿ ರೂಪಾಯಿ ಸಂಗ್ರಹವಾಗುತ್ತಿದೆ. ಈ ಮೊತ್ತಕ್ಕೆ ರಾಜ್ಯ ಸರಕಾರ 10 ಕೋಟಿ ರೂಪಾಯಿ ನೀಡಿ ಆ ಮೊತ್ತವನ್ನು ಚಿತ್ರಮಂದಿರ ನಿರ್ಮಾಣ, ಸಹಾಯಧನಕ್ಕಾಗಿ ಬಳಸಲಾಗುತ್ತಿದೆ.

ಇದೇ ರೀತಿಯಲ್ಲಿ ಬಹುಭಾಷಾ ಚಿತ್ರಗಳನ್ನು ಒಪ್ಪಿಕೊಳ್ಳುವಂತಹ ಇಲ್ಲಿಯೂ ಅನ್ಯಭಾಷಾ ಸಿನಿಮಾಗಳ ಮೇಲೆ ಇದೇ ನಿಯಮವನ್ನು ಅನ್ವಯಿಸಿ ನಮ್ಮ ತುಳು ಚಿತ್ರರಂಗದ ಬೆಳವಣಿಗೆಯತ್ತ ಇಂತಹ ಯೋಜನೆಗಳನ್ನು ರೂಪಿಸಬೇಕು.

ತುಳು ವೃತ್ತಿ ರಂಗಭೂಮಿಯ ಕಲಾವಿದರನ್ನು ಒಳಗೊಂಡು ಬೆಳೆದ ತುಳು ಸಿನಿಮಾ ಜಗತ್ತು ಗಾಢವಾದ ಪ್ರಭಾವವನ್ನು ತುಳುವರ ಮೇಲೆ ಬೀರಿದೆ. ಹಾಗಂತ ಒಂದು ಸಿನಿಮಾ ಕೇವಲ ಕಲಾವಿದರನ್ನು ಅವಲಂಬಿಸಿ ಇರುವುದಿಲ್ಲ. ಅಭಿನಯದಷ್ಟೇ ಚಿತ್ರಕತೆ ಹಾಗೂ ಛಾಯಾಗ್ರಹಣ ಸಿನಿಮಾದಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಒಬ್ಬ ನಟನಿಂದ ಸಿನಿಮಾ ಗೆಲ್ಲುವ ಕಾಲ ಇದಲ್ಲ. ಒಟ್ಟು ಚಿತ್ರದ ಗುಣಮಟ್ಟಕ್ಕೆ ಒತ್ತು ನೀಡದಿದ್ದಲ್ಲಿ ಚಿತ್ರದಿಂದ ಪ್ರೇಕ್ಷಕ ದೂರ ನಿಲ್ಲಬಹುದು. ಇಂತಹ ಗುಣಮಟ್ಟವನ್ನೇ ಕಳೆದುಕೊಂಡಂತಹ ಕೆಲವೊಂದು ತುಳು ಸಿನಿಮಾಗಳನ್ನು ನಾವಿಂದು ಕಾಣಬಹುದು. ಅಲ್ಲಿರುವ ಅಸಂಬದ್ಧ ಕತೆಗಳು, ಅರ್ಥವಿಲ್ಲದ ಹಾಡುಗಳು, ನಗು ಬಾರದ ಹಾಸ್ಯಗಳು ಚಿತ್ರ ರಸಿಕರನ್ನು ನಿರಾಶರನ್ನಾಗಿಸುತ್ತದೆ. ಚಿತ್ರ ಸೋತ ನಂತರ ತುಳು ಸಿನಿಮಾಕ್ಕೆ ಪ್ರೇಕ್ಷಕರ ಕೊರತೆಯಿದೆ ಎಂದು ಹೇಳುವ ಬದಲು ಒಂದು ಒಳ್ಳೆಯ ಸಿನಿಮಾವನ್ನು ನಿರ್ಮಿಸುವತ್ತ ನಿರ್ದೇಶಕ, ನಿರ್ಮಾಪಕ ಪ್ರಯತ್ನಿಸಬೇಕು. ಲಾಭ ಅನ್ನುವುದು ಕೇವಲ ಸಿನಿಮಾಕ್ಕೆ ತೊಡಗಿಸುವ ಬಂಡವಾಳ ಹಿಂಬರುವುದು ಮಾತ್ರವಲ್ಲ; ಭಾಷೆ–ಸಂಸ್ಕೃತಿಯ ಮೇಲೆ ಆಗುವ ಪರಿಣಾಮದ ಅರಿವಿನ ಮೇಲೆ ಅವಲಂಬಿತವಾಗುತ್ತದೆ ಎಂಬುವುದನ್ನು ಕೂಡಾ ಗಮನಿಸಬೇಕು.

ಸಾಹಿತ್ಯ ಏಕವ್ಯಕ್ತಿ ನಿರ್ಮಾಣದ ಕಲೆಯಾದರೆ, ಸಿನಿಮಾ ಬಹುಮಂದಿ ವ್ಯವಸ್ಥೆಯ ಕಲೆ. ಹಾಗಾಗಿ ಎಲ್ಲೋ ಒಂದು ಸಣ್ಣ ತಪ್ಪಿನಿಂದಲೂ ಸಿನಿಮಾ ಸೋಲಬಹುದು ಅಥವಾ ಒಳ್ಳೆಯ ಸಿನಿಮಾವಾಗಿದ್ದು ಅದು ಜನರನ್ನು ಮುಟ್ಟುವಲ್ಲಿ ವಿಫಲವಾಗಬಹುದು. ಉದಾಹರಣೆಗೆ ತುಳುವಿನಲ್ಲಿ ಬಂದಂತಹ 'ದೇವೆರ್' ಉತ್ತಮ ಕಲಾತ್ಮಕ ಚಿತ್ರವಾದರೂ ಅದು ಅಂತಹ ಸದ್ದನ್ನೇ ಮಾಡಲೇ ಇಲ್ಲ. ಸಿನಿಮಾ ಚೆನ್ನಾಗಿಲ್ಲ ಅನ್ನುವ ಪ್ರೇಕ್ಷಕನು ಕೂಡಾ ಮೊದಲು ಸಿನಿಮಾದ ಬಗ್ಗೆ ಇರುವ 'ಆರಾಧನಾ ಪರಂಪರೆ'ಯನ್ನು ಬಿಟ್ಟು 'ಆಲೋಚನಾ ಪರಂಪರೆ'ಯನ್ನು ತಮ್ಮದಾಗಿಸಿಕೊಳ್ಳಬೇಕು. ಹೊಸತನವನ್ನು ಒಪ್ಪಿಕೊಳ್ಳಬೇಕು ಹಾಗಾದಲ್ಲಿ ತುಳುಭಾಷೆಯ ಎಲ್ಲಾ ಒಳ್ಳೆಯ ಚಿತ್ರಗಳಿಗೆ ಭವಿಷ್ಯವಿದೆ.

ಪ್ರಾದೇಶಿಕ ಸಿನಿಮಾಕ್ಕೆ ಸಿಗಬೇಕಾದ ಸ್ಥಾನಮಾನ ಸಿಗದ ಕಾರಣ ಇಷ್ಟು ಕಾಲ ತುಳು ಸಿನಿಮಾ ರಂಗ ಎಲೆಮರೆಯ ಕಾಯಿಯಂತಾಗಿತ್ತು. ಆದರೆ ಇಂದು ನಿರ್ದೇಶಕರ ಕೈಚಳಕ ಹಾಗೂ ಪ್ರೇಕ್ಷಕನ ಪ್ರೋತ್ಸಾಹದ ನೆಲೆಯಿಂದ ತುಳು ಚಿತ್ರರಂಗವು ತುಳುನಾಡಿನಲ್ಲಿ ಮಾತ್ರವಲ್ಲ, ಗಾಂಧಿ ನಗರವೂ ತಿರುಗಿ ನೋಡುವಂತೆ ಮಾಡಿದೆ ಎಂಬುವುದು ಅಭಿಮಾನದ ಸಂಗತಿ. ಹಾಗಾಗಿ ಗುಣಮಟ್ಟದ ಸಿನಿಮಾಕ್ಕೆ ಮುಂದಾಗಿ ಮುಂದೊಂದು ದಿನ ಅದು ಇತರ ಭಾಷೆಗಳಿಗೆ ಭಾಷಾಂತರವಾಗುವ ಸಂದರ್ಭ ತುಳು ಸಿನಿಮಾ ರಂಗಕ್ಕೆ ಬರಲಿ.

ತುಳು ಸಿನಿಮಾ ರಂಗದಲ್ಲಿ ಕೆಲವೊಂದು ಸಣ್ಣಮುಟ್ಟ ಕೊರೆತಗಳಿದ್ದರೂ, ಪ್ರಸ್ತುತ ಸಂದರ್ಭದಲ್ಲಿ ಹಿಂದಿ, ಕನ್ನಡ, ತಮಿಳು ಹಾಗೂ ಇನ್ನಿತರ ಪರಭಾಷಾ ಚಿತ್ರದ ಪಾರಮ್ಯದ ನಡುವೆಯೂ ತುಳು ಸಿನಿಮಾವು ತನ್ನ ವಿಶಿಷ್ಟ ಛಾಪನ್ನೂ ಮೂಡಿಸಿದೆ ಅನ್ನುವುದು ಅಷ್ಟೇ ಸತ್ಯ ಎಂಬುವುದನ್ನು ತಿಳಿದು ತುಳುವರು ಸಂತೋಷ ಪಡಬೇಕಾಗಿದೆ.

ಇಲ್ಲಿಯವರೆಗೆ ಬಿಡುಗೆಯಾದ ಚಿತ್ರಗಳು

ಕ್ರಸ	ಸಿನಿಮಾದ ಹೆಸರು	ವರ್ಷ	ನಿರ್ದೇಶಕರು	ನಿರ್ಮಾಪಕರು
1	ಎನ್ನ ತಂಗಡಿ	19.02.1971	ಎಸ್. ಆರ್. ರಾಜನ್	ಎಸ್. ಆರ್. ರಾಜನ್
2	ದಾರೆದ ಬುಡೆದಿ	26.03.1971	ಆರೂರು ಪಟ್ಟಾಭಿ	ಕೆ. ಎನ್. ಟೇಲರ್, ನಾರಾಯಣ ಪುತ್ರನ್
3	ಪಗೆತ ಪುಗೆ	31.03.1972	ಆರೂರು ಪಟ್ಟಾಭಿ	ಕಾಡುಮಠ ಮಹಾಬಲ ಶೆಟ್ಟಿ, ಆನಂದ ಶೇಖರ್
4	ಬಿಸತ್ತಿ ಬಾಬು	6.10.1972	ಆರೂರು ಪಟ್ಟಾಭಿ	ಎಂ. ವೈ. ಕೋಲ
5	ಉಡಲ್ದ ತುಡರ್	5.05.1973	ಪದ್ಮನಾಭನ್	ಶಮೀಮ್ ಮತ್ತು ಅನ್ವರ್ ಬೇಗ್
6	ಕೋಟಿ ಚೆನ್ನಯ್ಯ	15.061973	ವಿಶು ಕುಮಾರ್	ಕೆ. ಮುದ್ದು ಸುವರ್ಣ
7	ಯಾನ್ ಸನ್ಯಾಸಿ ಆಪೆ	1973	ಗೀತಪ್ರಿಯ	ಎ. ವಿಶ್ವನಾಥ ಅತ್ತಾವರ
8	ಕಾಸ್‌ದಾಯೆ ಕಂಡನೆ	1973	ಗೀತಪ್ರಿಯ	ಆನಂದ ಶೇಖರ್
9	ಏರ್ ಮಲ್ತಿನ ತಪ್ಪು?	15.02.1974	ಕೆ. ಎನ್. ಟೇಲರ್	ಕೆ. ಎನ್. ಟೇಲರ್
10	ಬಯ್ಯಮಲ್ಲಿಗೆ	18.10.1974	ಆರೂರು ಪಟ್ಟಾಭಿ	ಸಂಜೀವ ದಂಡೆಕೇರಿ
11	ಸಾವಿರಡೊರ್ತಿ ಸಾವಿತ್ರಿ	14.08.1976	ಗೀತಪ್ರಿಯ	ಕೆ. ಎನ್. ಟೇಲರ್
12	ತುಳು ನಾಡಸಿರಿ	1976	ಕೆ. ಎನ್. ಟೇಲರ್	ಕೆ. ದಯಾನಂದ
13	ಬೊಳ್ಳಿದೋಟ	1977	ಆರೂರು ಪಟ್ಟಾಭಿ	ಸಂಜೀವ ದಂಡೆಕೇರಿ
14	ನ್ಯಾಯೊಗಾದ್ ಜಿಂದಾಬಾದ್	22.09.1978	ಪಿ. ಎಸ್. ಮೂರ್ತಿ	ಕೆಮ್ತೂರು ದೊಡ್ಡಣ್ಣ ಶೆಟ್ಟಿ, ಬಿ. ಎಸ್. ರಾವ್
15	ಸಂಗಮಸಾಕ್ಷಿ	20.10.1978	ಸುಂದರ್‌ಕೃಷ್ಣ ಅರಸ್	ವಸಂತ ಬಂಗೇರ
16	ಕರಿಯಣೆ ಕಟ್ಟಂದಿ ಕಂಡನಿ	1978	ಆರೂರು ಪಟ್ಟಾಭಿ	ಆರೂರು ಭೀಮರಾವ್ ಆರೂರು ಪಟ್ಟಾಭಿ ಆರೂರು ಲಕ್ಷ್ಮೀ ನಾರಾಯಣ ರಾವ್
17	ನ್ಯಾಯೊಗಾದ್ ಎನ್ನ ಬದ್‌ಕ್	1979	ಚಂದ್ರಶೇಖರ್ ಕುಕ್ಕಿಕಟ್ಟೆ	ರಿಚರ್ಡ್ ಕ್ಯಾಸ್ಟಲಿನೊ
18	ಭಾಗ್ಯವಂತೆದಿ	23.10.1981	ಆರೂರು ಪಟ್ಟಾಭಿ	ಟಿ. ಎ. ಶ್ರೀನಿವಾಸ್
19	ಬದ್ಕೆರೆ ಬುಡ್ಲೆ	13.05.1983	ಆರೂರು ಪಟ್ಟಾಭಿ	ರಾಮ್ ಶೆಟ್ಟಿ
20	ದಾರೆದ ಸೀರೆ	13.04.1984	ರಾಮ್ ಶೆಟ್ಟಿ	ರಾಮ್ ಶೆಟ್ಟಿ
21	ಪೆಟ್ಟಾಯಿ ಪಿಲಿ	8.05.1987	ರವಿ ಎನ್. ಕಾಂಚನ್	ಎಸ್. ಎಸ್. ಪುತ್ರನ್
22	ಬದ್ಕೊಂಜಿ ಕಬಿತೆ	11.11.1988	ದಾಮೋದರ ಬಿ. ಬಂಗೇರ	ಶ್ರೀಕಾಂತ್ ಆಚಾರ್
23	ರಾತ್ರೆ ಪಗೆಲ್	4.01.1991	ಕೋಡ್ಲು ರಾಮಕೃಷ್ಣ	ಡಾ. ಚಂದ್ರಿಕಾ
24	ಸತ್ಯ ಓಲುಂಡು	23.08.1991	ಆರೂರು ಪಟ್ಟಾಭಿ	ಸದಾಶಿವ ಸಾಲಿಯಾನ್, ಎಸ್.ಎಸ್.ಪುತ್ರನ್, ಅದ್ದು ಹುಸೇನ್, ಧೀರಜ್ ಹುಸೇನ್
25	ಬಂಗಾರ್ ಪಟ್ಲೇರ್	23.04.1993	ರಿಚರ್ಡ್ ಕ್ಯಾಸ್ಟಲಿನೊ	ರಿಚರ್ಡ್ ಕ್ಯಾಸ್ಟಲಿನೊ
26	ಸಪ್ಟೆಂಬರ್ 8	7.05.1994	ರಿಚರ್ಡ್ ಕ್ಯಾಸ್ಟಲಿನೊ	ರಿಚರ್ಡ್ ಕ್ಯಾಸ್ಟಲಿನೊ
27	ಬದ್ಕ್‌ದ ಬಿಲೆ	20.10.1994	ಮಣಿ ಮುರುಗನ್	ಟಿ. ಎ. ಶ್ರೀನಿವಾಸ್
28	ಕಾಲ	14.03.1997	ರಾಜ್ ಬಲ್ಲಾಳ್	ವೈ.ಆರ್. ಅಶ್ವತ್ ನಾರಾಯಣ ರಾವ್
29	ಮಾರಿಬಲೆ	3.04.1998	ಕೃಷ್ಣಪ್ಪ ಉಪ್ಪೂರು	ಕುಂಬ್ರ ರಘುನಾಥ ರೈ

30	ಒಂತೆ ಅಡ್ಜಸ್ಟ್ ಮಲ್ಪಿ	4.12.1998	ಕುಂಜಾಡಿ ಪ್ರೇಮನಾಥ ರೈ	ಪ್ರಭಾಕರ್ ಜಿ. ಬಂಗೇರ, ಪ್ರಜ್ವಲ್ ಜಿ. ಬಂಗೇರ
31	ಅಂತಪುರ	2001	ಅನಂತ ಕೃಷ್ಣ	ರಮೇಶ್ ಜೈನ್
32	ತುಡರ್	4.05.2001	ಕೋಡ್ಲು ರಾಮಕೃಷ್ಣ	ಪ್ರಭಾತ್‌ರಾಜ್ ಶೆಟ್ಟಿ, ಪ್ರೇಮನಾಥ ಶೆಟ್ಟಿ
33	ಕೋಟಿ ಚೆನ್ನಯ್ಯ	5.05.2006	ಆನಂದ ಪಿ. ರಾಜು	ಆರ್. ಧನರಾಜ್
34	ಕಡಲ ಮಗೆ	8.09.2006	ಪ್ರವೀಣ್ ತೊಕ್ಕೊಟ್ಟು	ಸಾಧನಾ ಎನ್. ಶೆಟ್ಟಿ
35	ಬದಿ	14.09.2007	ರಿಚರ್ಡ್ ಕ್ಯಾಸ್ಟಲಿನೊ	ರಿಚರ್ಡ್ ಕ್ಯಾಸ್ಟಲಿನೊ, ರೇಮಂಡ್ ಕ್ವಾಡ್ರಸ್
36	ಬಿರ್ಸೆ	11.04.2008	ಶ್ರೀನಿವಾಸ್ ಕೌಶಿಕ್	ಎಂ. ವಿ. ಲೋಕೇಶ್
37	ಬದ್‌ಕ್	5.12.2008	ರಾಜೇಶ್ ಶೆಟ್ಟಿ ನಿಂಜೂರು	ರಾಜೇಶ್ ಶೆಟ್ಟಿ ನಿಂಜೂರು
38	ದೇವೆರ್	27.08.2010	ಸುಧಾಕರ್ ಬನ್ನಂಜೆ	ವಚನ್ ಶೆಟ್ಟಿ, ವಿ. ಕೆ. ಪ್ರಕಾಶ್, ಶ್ರೀಮತಿ ವೇದಾವತಿ ಶೆಟ್ಟಿ ಜಯಶೀಲ ಶೆಟ್ಟಿ
39	ಗಗ್ಗರ	4.03.2011	ಶಿವಧ್ವಜ್	ಗುರುದತ್ತ ಎಂ. ದುರ್ಗಾನಂದ
40	ಕಂಚಿಲ್ದ ಬಾಲೆ	25.03.2011	ಕುಂಬ್ರ ರಘುನಾಥ ರೈ	ಕುಂಬ್ರ ರಘುನಾಥ ರೈ
41	ಒರಿಯರ್ದೊರಿ ಅಸಲ್	27.05.2011	ಹ. ಸೂ. ರಾಜಶೇಖರ್	ರೂಪ ವಿಜಯ್‌ಕುಮಾರ್
42	ಬಂಗಾರ್ದ ಕುರಲ್	27.04.2012	ರಾಮ್ ಶೆಟ್ಟಿ	ರಾಮ್ ಶೆಟ್ಟಿ
43	ಆಮೇಟ್ ಅಸಲ್ ಈಮೇಟ್ ಕುಸಲ್	4.05.2012	ರಂಜನ್ ರಾಘು ಶೆಟ್ಟಿ	ಸೂರ್ಯ ಮೆನನ್, ರಂಜನ್ ರಾಘು ಶೆಟ್ಟಿ
44	ಸೋಂಪ	2012	ರಾಜನ್ ಲ್ಯಾಲಪುರಿ	ಗೀತಾ ಹೆಗ್ಡೆ, ನಮ್ರತಾ ಹೆಗ್ಡೆ
45	ತೆಲಿಕೆದ ಬೊಳ್ಳಿ	6.12.2012	ಪಿ. ಎಚ್. ವಿಶ್ವನಾಥ	ಸುಧೀರ್ ಕಾಮತ್
46	ರಿಕ್ಷಾ ಡ್ರೈವರ್	27.09.2013	ಹ. ಸೂ. ರಾಜಶೇಖರ್	ಪ್ರವೀಣ್ ಕೊಂಚಾಡಿ
47	ಪಕ್ಕಿಲು ಮೂಜಿ	24.01.2014	ಪ್ರಕಾಶ್ ಕಾಬೆಟ್ಟು	ಪ್ರಕಾಶ್ ಕಾಬೆಟ್ಟು
48	ಬರ್ಕೆ	14.02.2014	ಭರತ ಕೃಷ್ಣ	ಸುರೇಶ್ ಕೆ. ರೆಡ್ಡಿ
49	ನಿರೆಲ್	7.03.2014	ರಂಜಿತ್ ಬಜ್ಪೆ	ಶೋಧನ್ ಪ್ರಸಾದ್
50	ಬ್ರಹ್ಮ ಶ್ರೀ ನಾರಾಯಣ ಗುರು ಸ್ವಾಮಿ	2.05.2014	ರಾಜಶೇಖರ ಕೋಟ್ಯಾನ್	ರಾಜಶೇಖರ ಕೋಟ್ಯಾನ್
51	ರಂಗ್	8.08.2014	ಸುಹಾನ್ ಪ್ರಸಾದ್, ವಿಸ್ಮಯ ವಿನಾಯಕ್	ದೇವದಾಸ್ ಕುಮಾರ್ ಪಾಂಡೇಶ್ವರ
52	ಚಾಲಿಪೋಲಿಲು	31.10.2014	ವಿರೇಂದ್ರ ಶೆಟ್ಟಿ ಕಾವೂರು	ಪ್ರಕಾಶ್ ಪಾಂಡೇಶ್ವರ
53	ಮದಿಮೆ	20.11.2014	ವಿಜಯ್‌ಕುಮಾರ್ ಕೊಡಿಯಾಲ್‌ಬೈಲ್	ಮೇಗಿನ ಮಾಲಾಡಿ ಬಾಲಕೃಷ್ಣ ಶೆಟ್ಟಿ
54	ಸೂಂಬೆ	13.03.2015	ಸಾಯಿಕೃಷ್ಣ ಕುಡ್ಲ	ಕಿಶೋರ್ ಕೊಟ್ಟಾರಿ, ಶ್ವೇತಾ ಕೆ. ಕೊಟ್ಟಾರಿ

55	ಎಕ್ಕಸಕ್ಕ	1.05.2015	ಕೆ. ಸೂರಜ್ ಶೆಟ್ಟಿ	ಕಿಶೋರ್ ಡಿ. ಶೆಟ್ಟಿ
56	ಒರಿಯನ್ ತೂಂಡ ಒರಿಯಗಾಪುಜಿ	15.05.2015	ಹ. ಸೂ. ರಾಜಶೇಖರ್	ಬಿ. ಅಶೋಕ್ ಕುಮಾರ್ ಎ. ಗಂಗಾಧರ್ ಶೆಟ್ಟಿ
57	ದಂಡ್	29.05.2015	ರಂಜಿತ್ ಬಜ್ಪೆ	ಶೋಧನ್ ಪ್ರಸಾದ್
58	ಸೂಪರ್ ಮರ್ಮಾಯೆ	14.08.2015	ರಾಮ್ ಶೆಟ್ಟಿ	ಅಡ್ಯಾರ್ ಮಾಧವ ನ್ಯಾಕ್
59	ಚಂಡಿಕೋರಿ	25.09.2015	ದೇವದಾಸ್ ಕಾಪಿಕಾಡ್	ಶರ್ಮಿಳಾ ಡಿ. ಕಾಪಿಕಾಡ್ ಸಚಿನ್ ಎ. ಎಸ್.
60	ರೈಟ್ ಬೊಕ್ಕ ಲೆಫ್ಟ್	5.11.2015	ಯತೀಶ್ ಆಳ್ವ	ಚಂದ್ರಶೇಖರ ರೈ ಕಲ್ಲಡ್ಕ
61	ಐಸ್‌ಕ್ರೀಂ	20.11.2015	ವೇಣು ಗೋಪಾಲ್ ಶೆಟ್ಟಿ, ಪ್ರೀತಮ್ ಸಾಗರ್	ನವೀತಾ ಜೈನ್, ಪ್ರೀತಮ್ ಸಾಗರ್
62	ಏರೆಗ್ಲಾ ಪನೋಡ್ಚಿ	27.11.2015	ಕೋಡ್ಲು ರಾಮಕೃಷ್ಣ	ಬಿ.ಎಲ್. ಮುರಳಿ, ಎಸ್.ಕೆ. ಶೆಟ್ಟಿ
63	ಧನಿಕ್ಲೆನ ಜೋಕ್ಲು	25.12.2015	ವಿನು ಮಹೇಶ್	ರಮೇಶ್ ಪ್ರಜಾರಿ
64	ಜೈ ತುಳುನಾಡ್	15.01.2016	ಪ್ರವೀಣ್ ತೊಕ್ಕೊಟ್ಟು	ಫ್ರಾಂಕ್ ಫೆರ್ನಾಂಡಿಸ್
65	ರಂಬಾರೊಟ್ಟಿ	1.04.2016	ಪ್ರಜ್ವಲ್ ಕುಮಾರ್ ಅತ್ತಾವರ	ಪ್ರಕಾಶ್ ಕಾಬೆಟ್ಟು, ಶ್ರೀನಿವಾಸ್ ಉಜಿರೆ
66	ಪವಿತ್ರ	05.02.2016	ನಾಗವೆಂಕಟೇಶ್	ಅನಂತರಾಮ್ ರಾವ್ ಎರ್ಮಾಳ್
67	ಕುಡ್ಲ ಕೆಫೆ	12.02.2016	ಸೂರ್ಯ ಮೆನನ್	ರಂಜನ್ ಶೆಟ್ಟಿ
68	ಬೊಳ್ಳಿಲು	29.04.2016	ಶರತ್ ಕುಮಾರ್‌ಚಂದ್ರ ಕದ್ರಿ	ಮಿತ್ರ ಹೆರಾಜೆ
69	ಶಟರ್‌ದುಲಯಿ	10.06.2016	ಶಶಿಕಾಂತ್ ಗಟ್ಟಿ	ಪ್ರಕಾಶ್ ಕಾಬೆಟ್ಟು, ಶ್ರೀನಿವಾಸ್ ಉಜಿರೆ
70	ದಬಕ್‌ದಬ ಐಸ	05.08.2016	ಪ್ರಕಾಶ್ ಪಾಂಡೇಶ್ವರ	ಪ್ರಕಾಶ್ ಪಾಂಡೇಶ್ವರ
71	ದೊಂಬರಾಟ	15.09.2016	ರಂಜಿತ್ ಸುವರ್ಣ	ರಾಜೇಶ್ ಬ್ರಹ್ಮಾವರ
72	ಬರ್ಸ	13.10.2016	ದೇವದಾಸ ಕಾಪಿಕಾಡ್	ಶರ್ಮಿಳಾ ಕಾಪಿಕಾಡ್ ಮುಖೇಶ್ ಹೆಗ್ಡೆ, ಎಸ್. ಕಿಣಿ
73	ಪನೋಡಾ ಬೊಡ್ಚಾ	18.11.2016	ಶ್ರೀ ಮಧು ಸುರತ್ಕಲ್	ಚಂದ್ರಹಾಸ ಶೆಟ್ಟಿ ಮಾಣಿ ಗಣೇಶ್ ಶೆಟ್ಟಿ ಕಲ್ಲಡ್ಕ, ಹೆಚ್. ಕೆ. ನಯನಾಡು
74	ಪಿಲಿಬೈಲ್ ಯಮುನಕ್ಕ	9.12.2016	ಕೆ. ಸೂರಜ್ ಶೆಟ್ಟಿ	ರೋಹನ್ ಶೆಟ್ಟಿ

ಉಪಸಂಹಾರ

ಇಂದು ಇರುವ ಎಲ್ಲಾ ಕಲಾಪ್ರಕಾರಗಳಲ್ಲಿ ಸಿನಿಮಾ ಒಂದು ನೂತನ ಪ್ರಕಾರ. ಸುಮಾರು ಐದು ದಶಕಗಳ ಇತಿಹಾಸವಿರುವ ತುಳು ಸಿನಿಮಾ ರಂಗವು ಹಲವು ಏಳು-ಬೀಳುಗಳನ್ನು ಕಂಡಿದೆ. ಆದರೂ ಈ ನಡುವೆಯೂ ತುಳು ಸಿನಿಮಾ ಇಂದು ಉದ್ಯಮವಾಗಿ, ಕಲಾಪ್ರಕಾರವಾಗಿ ಬೆಳೆದು ನಿಂತಿದೆ. ತುಳು ಸಿನಿಮಾ ನಡೆದು ಬಂದ ಹಾದಿಯನ್ನು ಕಂಡಾಗ ನಿಜಕ್ಕೂ ಅಚ್ಚರಿಯಾಗುವುದು. ಒಂದು ಕಾಲಘಟ್ಟದಲ್ಲಿ ತುಳು ಸಿನಿಮಾಗಳಿಗೆ ಪ್ರೇಕ್ಷಕರಿಲ್ಲ, ಚಿತ್ರ ಮಂದಿರಗಳಿಲ್ಲ, ಮಾರುಕಟ್ಟೆ ಇಲ್ಲ ಎಂಬ ಟೀಕೆ-ಟಿಪ್ಪಣಿಗಳು ಕೇಳುತ್ತಿದ್ದವು. ಇಂದು ಕಾಲ ಬದಲಾಗಿದೆ ಸಾಲುಸಾಲಿನಲ್ಲಿ ಚಿತ್ರಗಳು ನಿರ್ಮಾಣವಾಗುತ್ತಿವೆ. ನಗರದ ಹೆಚ್ಚಿನ ಚಿತ್ರ ಮಂದಿರಗಳಲ್ಲಿ ತುಳು ಸಿನಿಮಾಗಳ ಪ್ರದರ್ಶನ ನಡೆಯುತ್ತಿದೆ. ಜನರು ಇತರ ಚಿತ್ರಗಳನ್ನು ಬದಿಗಿಟ್ಟು ತುಳು ಸಿನಿಮಾದತ್ತ ಹೆಜ್ಜೆ ಹಾಕುವುದನ್ನು ಕಂಡಾಗ ತುಳು ಸಿನಿಮಾದ ಜನಪ್ರಿಯತೆ, ಗುಣಮಟ್ಟದ ಅರಿವಾಗುತ್ತದೆ.

ಚಿತ್ರ ನಿರ್ಮಾಣಕ್ಕೆ ಹಿಂದೆ ಇದ್ದಂತಹ ಅಡ್ಡಿ ಆತಂಕ, ಭಯ ಇಂದು ದೂರವಾಗಿವೆ. ಯಶಸ್ಸಿನತ್ತ ಸಾಗುತ್ತಿರುವ ಈ ಸಂದರ್ಭದಲ್ಲಿ ತುಳು ಚಿತ್ರರಂಗ ತನ್ನ ಮಿತಿ, ಸಾಧ್ಯತೆ ಹಾಗೂ ದೌರ್ಬಲ್ಯಗಳನ್ನು ಮೊದಲು ಅರಿತುಕೊಳ್ಳುವಂತಾಗಬೇಕು. ಪ್ರಚಾರ, ಜನಪ್ರಿಯತೆಗಳ ನಡುವೆ ಮೌಲ್ಯಗಳ ಮರೆಮಾಚುವಿಕೆ ಸಿನಿಮಾಗಳಿಂದ ಆಗಬಾರದು. ಒಂದು ಸಿನಿಮಾ ತಯಾರಿಕೆಗೆ ಹಣ ಹೂಡಲಾಗಿದೆ ಅಂದರೆ ನಂತರ ಅದರ ಲಾಭ-ನಷ್ಟದ ಲೆಕ್ಕಚಾರದ ಮಾತು ಸಹಜವೇ ಎನ್ನಬೇಕು. ಕೇವಲ ಹಾಸ್ಯ ಪಾತ್ರಗಳು, ತಂತ್ರಜ್ಞಾನಗಳು ಹಾಗೂ ಸಂಗೀತದಿಂದ ಸಿನಿಮಾಗಳು ಗೆಲ್ಲುತ್ತವೆ ಎಂಬ ಭ್ರಮೆಯಿಂದ ಮೊದಲು ಹೊರಬರಬೇಕು. ಅದಲ್ಲದೆ ಸಾಧ್ಯವಾದಷ್ಟು ತುಳು ಚಿತ್ರಗಳು ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಅವಕಾಶ ನೀಡುವಂತಿರಬೇಕು.

ನಿರ್ಮಾಣವಾಗಲಿರುವ ತುಳು ಸಿನಿಮಾಗಳು ರಂಗಭೂಮಿಯ ಛಾಯೆಯಿಂದ ಹೊರ ಬಂದು ತನ್ನದೇ ಆದ 'ಸ್ವಂತಿಕೆ'ಯನ್ನು ಬೆಳೆಸಿಕೊಳ್ಳಲು ಪ್ರಯತ್ನಿಸಬೇಕು. ಹಾಗೆಯೇ ಸಿನಿಮಾದ ಹಣ ಗಳಿಸುವಿಕೆಯ, ಪ್ರಚಾರದ, ಪ್ರದರ್ಶನದ ಆಧಾರದಲ್ಲಿ ಒಂದು ಸಿನಿಮಾ ಚೆನ್ನಾಗಿದೆ ಅಥವಾ ಚೆನ್ನಾಗಿಲ್ಲ ಅನ್ನುವ ತಪ್ಪು ತಿಳುವಳಿಕೆಯಿಂದ ಜನರು ಹೊರಬರಬೇಕು. ತುಳು ಚಿತ್ರರಂಗದ ನಿರ್ಮಾಪಕ, ನಿರ್ದೇಶಕ, ತಂತ್ರಜ್ಞರ ಹಾಗೂ ಪ್ರೇಕ್ಷಕರ ನಡುವೆ ಸಂವಹನ ಏರ್ಪಡಬೇಕು.

ಸೃಜನಶೀಲತೆ, ಚಿಂತನಶೀಲತೆಗಿಂತ ಲಾಭಕ್ಕಾಗಿಯೇ ಹೆಚ್ಚು ಒತ್ತು ಕೊಟ್ಟಲ್ಲಿ ತುಳು ಚಿತ್ರರಂಗ ಕೇವಲ ಉದ್ಯಮವಾಗಬಹುದೇ ಹೊರತು ಅದನ್ನು ಕಲಾಪ್ರಕಾರವೆಂದು ಕರೆಯಲು ಸಾಧ್ಯವಾಗದು. ಮಾಧ್ಯಮಗಳು ಕೂಡ ಚಿತ್ರವನ್ನು ನೇರ ವಿಮರ್ಶೆ ಮಾಡುವ ಧೈರ್ಯಕ್ಕೆ ಕೈ ಹಾಕುತ್ತಿಲ್ಲ. ಬದಲಾಗಿ ಇವುಗಳು ಮಾಡುವ ಪ್ರಚಾರದ ಅಬ್ಬರಗಳು ಸಿನಿಮಾವನ್ನು ಚಿತ್ರಮಂದಿರದಲ್ಲಿ ಇನ್ನಷ್ಟು ದಿನ ಎಳೆದುಕೊಂಡು ಹೋದದ್ದು ಇದೆ. ಮಾಧ್ಯಮಗಳು ವಸ್ತುನಿಷ್ಠ ವಿಮರ್ಶೆಗೆ ಮುಂದಾಗಿ ತುಳು ಚಿತ್ರರಂಗದ ಬೆಳವಣಿಗೆಗೆ

ಸಹಕಾರಿಯಾಗಬೇಕು. ಹಾಗೆಯೇ ಪ್ರಸ್ತುತ ಸಂದರ್ಭದಲ್ಲಿ ಯಾವ ತರಹದ ಸಿನಿಮಾಗಳ ಅಗತ್ಯವಿದೆ? ಜನರ ನಿರೀಕ್ಷೆ ಏನು? ಎಂಬ ಅಂಶಗಳತ್ತ ತುಳು ಚಿತ್ರರಂಗ ಗಮನ ವಹಿಸಬೇಕು.

ತುಳು ಸಿನಿಮಾವನ್ನು ಪ್ರಾದೇಶಿಕ ಸಿನಿಮಾ ಎಂದರೂ, ಪ್ರಸ್ತುತ ಸಂದರ್ಭದಲ್ಲಿ ಅದು ಕೇವಲ ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ. ಅದು ಬೆಂಗಳೂರು, ಮುಂಬಯಿ ಹಾಗೂ ವಿದೇಶಗಳಲ್ಲೂ ಏಕಕಾಲದಲ್ಲಿ ಪ್ರದರ್ಶನಗೊಳ್ಳುವ ಸಾಮರ್ಥ್ಯವನ್ನು ಪಡೆದುಕೊಂಡಿದೆ. ಜೊತೆಗೆ ತನ್ನ ಮಾರುಕಟ್ಟೆಯನ್ನು ವಿಸ್ತರಿಸಿದೆ. ಅದಲ್ಲದೆ ಕಡಲಾಚೆಯ ದುಬೈ, ಶಾರ್ಜಾ, ಅಬುದಾಬಿ, ಕುವೈಟ್, ಬಹರೈನ್ ಮುಂತಾದ ಗಲ್ಫ್ ದೇಶಗಳಲ್ಲಿ ತುಳು ಸಂಘಟನೆಗಳು ತುಳು ಸಿನಿಮಾಕ್ಕೆ ನೀಡಿದ ಪ್ರೋತ್ಸಾಹವು ಸಿನಿಮಾ ನಿರ್ಮಾಪಕರಲ್ಲಿ ಹೊಸ ಚೈತನ್ಯವನ್ನು ತಂದಿದೆ.

ಇಂದು ಆಧುನಿಕ ತಂತ್ರಜ್ಞಾನಗಳ ಮೂಲಕ ಜಗತ್ತಿನ ಮೂಲೆಮೂಲೆಯಲ್ಲಿರುವ ತುಳುವನೂ ಚಿತ್ರಮಂದಿರದಲ್ಲಿಯೋ, ಅಂತರ್ಜಾಲದಲ್ಲಿಯೋ ಅಥವಾ ಸಿ.ಡಿ/ಡಿವಿಡಿಯ ಮೂಲಕ ತುಳು ಸಿನಿಮಾ ವೀಕ್ಷಣೆ ಮಾಡಬಹುದು. ಇದು ಒಂದು ನೆಲೆಯಲ್ಲಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಭಾಷೆ, ಸಂಸ್ಕೃತಿ ಬೆಳೆಸುವಲ್ಲಿ ಕೂಡ ಸಹಾಯಕವಾಗಬಹುದು.

ಸಾಮಾನ್ಯವಾಗಿ ಕಡಿಮೆ ವೆಚ್ಚವೆಂದರೂ ಈಗ ಒಂದು ತುಳು ಸಿನಿಮಾ ನಿರ್ಮಾಣಕ್ಕೆ ಸುಮಾರು 40 ರಿಂದ 60 ಲಕ್ಷ ಬೇಕೇ ಬೇಕು. ಹೆಚ್ಚಾಗಿ ನಿರ್ಮಾಣಕ್ಕೆ ತೊಡಗಿಸಿದ ಹಣವು ನಿರ್ಮಾಪಕರಿಗೆ ಮರಳಿ ಕೈ ಸೇರುತ್ತದೆಯೋ? ಇಲ್ಲವೋ? ಎಂಬ ಅನುಮಾನಗಳಿದ್ದರೂ ಇತ್ತೀಚೆಗೆ ನಿರ್ಮಾಣವಾದ ಸಾಲು ಸಾಲು ತುಳು ಚಿತ್ರಗಳನ್ನು ಕಂಡಾಗ ನಿರ್ಮಾಪಕರ ಧೈರ್ಯವನ್ನು ಮೆಚ್ಚಲೇಬೇಕು. ಜೊತೆಗೆ ತುಳು ಭಾಷೆ-ಸಂಸ್ಕೃತಿಯ ಮೇಲಿರುವ ಅಭಿಮಾನವೇ ಇದರ ಮೂಲವೆಂದುಕೊಳ್ಳೋಣ.

ಸಿನಿಮಾ ಒಂದು ಪರಿಪೂರ್ಣವಾದ, ಸ್ವತಂತ್ರವಾದ ಕಲಾ ಪ್ರಕಾರವಾಗಿ ಬೆಳೆಯಲಿ. ಎಲ್ಲಾ ವರ್ಗದ ಪ್ರೇಕ್ಷಕರಿಗೆ ಸಿನಿಮಾ ತಲುಪುವಂತಾಗಲಿ. ಕನ್ನಡ ಹಾಗೂ ಇತರ ಚಿತ್ರರಂಗವೂ ಅಚ್ಚರಿ ಪಡುವ ರೀತಿಯಲ್ಲಿ ತುಳು ಚಿತ್ರರಂಗವು ಸಾಗುವ ರೀತಿಯ ಕುರಿತು ಪ್ರತಿಯೊಬ್ಬ ತುಳುವ ಹೆಮ್ಮೆ ಪಡುವಂತಾಗಬೇಕು. ಎಲ್ಲಾ ವಯೋಮಾನದವರನ್ನು ಆಕರ್ಷಿಸುವ ಕಲಾ ಮಾಧ್ಯಮ ಮಾತ್ರವಲ್ಲ ಮನರಂಜನಾ ಮಾಧ್ಯಮವಾದ 'ಸಿನಿಮಾ'ವನ್ನು ಒಂದು ಅರ್ಥಪೂರ್ಣ ಮಾಧ್ಯಮವನ್ನಾಗಿ ಮಾಡುವತ್ತ ತುಳು ಚಿತ್ರರಂಗ ಸಾಗಬೇಕು. ತನ್ನದೇ ಆದ ಒಂದು 'ಸಿನಿಮಾ ಮಾದರಿ' ರೂಪುಗೊಳಿಸಬೇಕು ಮಾತ್ರವಲ್ಲ ತನ್ನ ಸಾಂಸ್ಕೃತಿಕ ಬೇರನ್ನು ಕಳೆದುಕೊಳ್ಳದೆ ಸ್ವಾಭಿಮಾನದ ಹೆಜ್ಜೆಯಲ್ಲಿ ಮುಂದೆ ಸಾಗಲಿ. ಇನ್ನಷ್ಟು ಚಿತ್ರಗಳು ಬೆಳಕಿಗೆ ಬರಲಿ, ಹೊಸ ಸಂದೇಶವ ನೀಡಲಿ ಹಾಗೂ ತುಳು ಮಣ್ಣಿನ ಪರಂಪರೆ-ಸಂಸ್ಕೃತಿಯ ತೇರನ್ನು ಎಳೆಯಲಿ ಎಂಬುವುದೇ ತುಳುವರ ಆಶಯ.

ಪರಾಮರ್ಶಿತ ಗ್ರಂಥಗಳು

1. ತುಳು ಸಾಹಿತ್ಯ ಚರಿತ್ರೆ
ಡಾ. ಬಿ. ಎ. ವಿವೇಕ ರೈ
ಪ್ರಧಾನ ಸಂಪಾದಕರು
ಪ್ರಸರಾಂಗ, ಕನ್ನಡ ವಿ ವಿ ಹಂಪಿ (2007)

2. ಕೊಡಿಪು
ಡಾ. ವಾಮನ ನಂದಾವರ
ಪ್ರಧಾನ ಸಂಪಾದಕರು
ವಿಶ್ವ ತುಳು ಸಮ್ಮೇಳನೊ (2009)

3. ಕದಿಕೆ
ಕೆ. ಲೀಲಾವತಿ, ಸಂಪಾದಕಿ
ವಿಶ್ವ ತುಳು ಸಮ್ಮೇಳನ, ನೆಂಪುದ ಸಂಚಿಕೆ
ಅಖಿಲ ಭಾರತ ತುಳು ಒಕ್ಕೂಟ (ರಿ) ಮಂಗಳೂರು

4. ತುಳು ಸಿನಿಮಾ ವಿಕಿಪೀಡಿಯ
–ಅಂತರ್ಜಾಲ

5. ತುಳು ಭಾಷೆಯ ಸುವರ್ಣ ಚಿತ್ರಗಳು
ತಮ್ಮ ಲಕ್ಷ್ಮಣ
ಕರ್ನಾಟಕ ಚಲನಚಿತ್ರ ಅಕಾಡೆಮಿ

6. ಸಿನಿಮಾ – ಒಂದು ಜನಪದ ಕಲೆ
ಬರಗೂರು ರಾಮಚಂದ್ರಪ್ಪ
ಅಂಕಿತ ಪುಸ್ತಕ ಪ್ರಕಾಶನ

7. ಚಲನಚಿತ್ರ ರಸಗ್ರಹಣ – ಒಂದು ಪ್ರಾಥಮಿಕ ಪರಿಚಯ
ಎಂ. ಅಬ್ದುಲ್ ರೆಹಮಾನ್ ಪಾಷಾ
ಕರ್ನಾಟಕ ಚಲನಚಿತ್ರ ಅಕಾಡೆಮಿ

8. ಕನ್ನಡ ಚಲನಚಿತ್ರ : ಭಾಷೆ
ಡಾ. ಪ್ರೇಮಪಲ್ಲವಿ ಸಿ. ಬಿ.
ಪ್ರಗತಿ ಗ್ರಾಫಿಕ್ಸ್, ಬೆಂಗಳೂರು

9. ಸ್ವಪ್ನ ಸಾದೃಶ್ಯ
ಈ ದಶಕದ ಸಿನೆಮಾ, ನಾವು ಕಂಡಂತೆ
ಸಂಪಾದಕ : ಕಿರಣ್ ಎಂ.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ತುಳು ಭವನ, ಉರ್ವಸ್ಟೋರ್, ಮಂಗಳೂರು – 6

ಅಧ್ಯಕ್ಷೆರ್

ಎಮ್. ಜಾನಕಿ ಬ್ರಹ್ಮಾವರ

ರಿಜಿಸ್ಟ್ರಾರ್

ಚಂದ್ರಹಾಸ ರೈ. ಬಿ.

ಅರ್ಥಸದಸ್ಯೆರ್

ಡಿ. ಎಮ್. ರವಿ ಕುಮಾರ್

ಅಕಾಡೆಮಿದ ಸದಸ್ಯೆರ್

ಪ್ರೊ. ಡಿ. ವೇದಾವತಿ
ಶ್ರೀ ಡಿ. ಎಂ. ಕುಲಾಲ್
ಶ್ರೀ ಸುಭಾಶ್ಚಂದ್ರ ಪಡಿವಾಳ್
ಶ್ರೀ ದುರ್ಗಾಪ್ರಸಾದ್ ರೈ ಕುಂಬ್ರ
ಶ್ರೀಮತಿ ಜಯಶೀಲ
ಶ್ರೀ ವಸಂತ ಶೆಟ್ಟಿ ಬೆಳ್ಳಾರೆ
ಶ್ರೀ ಕೃಷ್ಣಪ್ಪ ಉಪ್ಪೂರು
ಶ್ರೀ ರಘು ಇಡ್ಕಿದು
ಶ್ರೀ ಮೋಹನ್ ಕೊಪ್ಪಲ ಕದ್ರಿ
ಶ್ರೀಮತಿ ರೂಪಕಲಾ ಆಳ್ವ
ಶ್ರೀ ನವೀನ್ ಡಿ. ಪಡೀಲ್
ಶ್ರೀ ಕೆ. ಟಿ. ವಿಶ್ವನಾಥ
ಡಾ. ದಿವಾ ಕೊಕ್ಕಡ

ತುಳುವಿನಲ್ಲಿ ನಾಟಕ ಪ್ರಕಾರವು ತುಂಬ ಜನಪ್ರಿಯವಾಗಿದ್ದು ತುಳು ಭಾಷೆಯ ಉಳಿವು ಮತ್ತು ಬೆಳವಣಿಗೆಗೆ ವಿಶೇಷ ಕೊಡುಗೆಯನ್ನಿತ್ತಿದೆ. ತುಳು ಸಿನಿಮಾ ಆರಂಭವಾದುದೇ 1971ರ ಅವಧಿಯಲ್ಲಿ. ತುಳು ನಾಟಕರಂಗದಲ್ಲಿ ಮುಂಚೂಣಿಯಲ್ಲಿದ್ದವರೇ ತುಳು ಸಿನಿಮಾ ರಂಗದಲ್ಲಿ ತೊಡಗಿಸಿಕೊಂಡು, ತುಳು ನಾಟಕ ಆಧಾರಿತ ಚಿತ್ರಕಥೆಗಳನ್ನೇ ಸಿನಿಮಾದಲ್ಲಿ ಮೂಡಿಸಿದರು. ಆರಂಭದ ವರ್ಷಗಳಲ್ಲಿ ತುಳು ಸಿನಿಮಾ ರಂಗ ತ್ವರಿತಗತಿಯಲ್ಲಿ ಯಶಸ್ಸು ಕಾಣಲಿಲ್ಲ. ಆದರೆ ಇತ್ತೀಚಿನ ವರ್ಷಗಳಲ್ಲಿ ಬಹುಸಂಖ್ಯೆಯ ಸಿನಿಮಾಗಳು ಬಿಡುಗಡೆಗೊಳ್ಳುತ್ತಾ ಯಶಸ್ಸಿನ ಹಾದಿಯಲ್ಲಿ ಮುನ್ನಡೆಯುತ್ತಿವೆ. ಹೊಸ ಪ್ರಯೋಗಗಳಿಗೂ ಮುಂದಾಗುತ್ತಿವೆ.

ಎಮ್. ಜಾನಕಿ ಬ್ರಹ್ಮಾವರ
ಅಧ್ಯಕ್ಷೆರ್
ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ